
ವಿಷವೈದ್ಯಶಾಸ್ತ್ರ



ಲೇಖಕರು :

ಡಾ. ಎಂ. ಎಂ. ಭಟ್

ಕನ್ನಡ ಅಧ್ಯಯನ ಪೀಠ
ಪಠ್ಯ ಪುಸ್ತಕ ನಿರ್ದೇಶನಾಲಯ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

ಕನ್ನಡ ಅಧ್ಯಯನ ಪೀಠ
ಪಠ್ಯ ಪುಸ್ತಕ ನಿರ್ದೇಶನಾಲಯದ ಪ್ರಕಟಣೆ—174

ಪ್ರಧಾನ ಸಂಪಾದಕರು
ಡಾ. ಎಂ. ಎಸ್. ಸುಂಕಾಪುರ

ವಿಷವೈದ್ಯ ಶಾಸ್ತ್ರ

ವಿಷವೈದ್ಯ ಶಾಸ್ತ್ರ

ಲೇಖಕರು :

ಎಂ. ಎಂ. ಭಟ್

ಕನ್ನಡ ಅಧ್ಯಯನ ಪೀಠ
ಪಠ್ಯ ಪುಸ್ತಕ ನಿರ್ದೇಶನಾಲಯ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

INSTITUTE OF KANNADA STUDIES
TEXT BOOK DIRECTORATE
KARNATAK UNIVERSITY, DHARWAD—3

Dr. M. S. Sunkapur.
General Editor.

"Vishavaidya Shastra" by Dr. M. M. Bhat. Publication of the Text Book Directorate of the Institute of Kannada Studies; Published by the Director, Publications, And Extension Service Karnatak University, Dharwad —3

Published under the Centrally Sponsored scheme For the production of Books and Literature in Regional Languages, at the University Level, Government of India, Ministry of Education and Social Welfare (Department of Culture), New Delhi.

Dr. S. M. Vrushabhendra Swamy
Director, Text Book Directorate.

Publisher : Shri. C. S. Kanavi
Director, and Publications Extension Service
Karnatak University, Dharwad.

Half Calico Rs : 13
Ordinery : 10
First Edition ; 1977 Copies : 1000

Printers : M/s Modern Press
Javali peth
Dharwad

ಹಾರೈಕೆ

ಕರ್ನಾಟಕ ವಿಶ್ವವಿದ್ಯಾಲಯವು ಕರ್ನಾಟಕದ ಸರ್ವಾಂಗೀಣ ಪ್ರಗತಿಗಾಗಿ ದುಡಿಯುತ್ತಿದೆ. ವಿವಿಧ ವಿಜ್ಞಾನ, ಮಾನವಿಕ ಶಾಸ್ತ್ರ, ಭಾಷೆ, ಧರ್ಮ, ಸಂಸ್ಕೃತಿ, ಸಾಹಿತ್ಯ ಮುಂತಾದ ಎಲ್ಲ ಜ್ಞಾನ ಶಾಖೆಗಳಿಗೂ ಪ್ರೋತ್ಸಾಹ ನೀಡಿ, ವಿಶ್ವವಿದ್ಯಾಲಯ ನಿಜವಾದ ಅರ್ಥದಲ್ಲಿ ವಿಶ್ವವಿದ್ಯೆಯ ಆಲಯವೇ ಆಗಿದೆ. ಇನ್ನೂ ಹೆಚ್ಚಿನ ಗುರಿಯನ್ನಿಟ್ಟುಕೊಂಡು ಮುನ್ನಡೆಯುತ್ತಿದೆ.

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠ ವಿವಿಧ ಗ್ರಂಥಗಳನ್ನು ಪ್ರಕಟಿಸಿ, ತನ್ನ ಪಾಲಿನ ಕರ್ತವ್ಯವನ್ನು ಮಾಡುತ್ತ ಬಂದಿರುವುದು ಸಂತಸದ ವಿಷಯ. ಇಲ್ಲಿ ಸಂಶೋಧನೆ, ಸಂಪಾದನೆ, ಅನುವಾದ, ಪಠ್ಯ ಹಾಗೂ ಪಠ್ಯೇತರ ಕೃತಿಗಳನ್ನು ಪ್ರಕಟಿಸುವ ಭಿನ್ನ ಭಿನ್ನ ಶಾಖೆಗಳು ಭರದಿಂದ ಕಾರ್ಯ ನಿರತವಾಗಿವೆ ಹಲವಾರು ಉಪಯುಕ್ತ ಕೃತಿಗಳಿಂದ ಕನ್ನಡದ ಕಣಜವನ್ನು ತುಂಬಿವೆ.

ಪಠ್ಯಪುಸ್ತಕ ನಿರ್ದೇಶನಾಲಯ ವಿಭಾಗವು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಯೋಜನೆಯ ಅಂಗವಾಗಿ ಅಸ್ತಿತ್ವಕ್ಕೆ ಬಂದು ಕನ್ನಡದಲ್ಲಿ, ವಿಜ್ಞಾನ, ಕಲೆ, ಮಾನವಿಕ ವಿಜ್ಞಾನ, ಕಾಯ್ದೆ, ಎಂಜನೀಯರಿಂಗ, ಶಿಕ್ಷಣ, ವೈದ್ಯಕೀಯ ಮೊದಲಾದ ವಿವಿಧ ಶಾಖೆಗಳಿಗೆ ಸಂಬಂಧಿಸಿದಂತೆ ಪದವಿ ಹಾಗೂ ಸ್ನಾತಕೋತ್ತರ ವರ್ಗಗಳಿಗೆ ಆವಶ್ಯಕವಾದ ಪಠ್ಯ ಹಾಗೂ ಪೂರಕ ವಿಷಯಗಳನ್ನು ಕುರಿತು ನೂರಾರು ಗ್ರಂಥಗಳನ್ನು ಪ್ರಕಟಿಸಿರುವದು ಹೆಮ್ಮೆಯ ಸಂಗತಿ. ಕನ್ನಡವನ್ನು ವಿವಿಧ ಹಂತಗಳಲ್ಲಿ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಮಾಧ್ಯಮವನ್ನಾಗಿ ಪರಿವರ್ತಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಆಧುನಿಕ ಜ್ಞಾನ ಸಮಸ್ತವನ್ನು ಕನ್ನಡಿಗರಿಗೆ ನೀಡುವ ಉದ್ದೇಶದಿಂದ ಪಠ್ಯಪುಸ್ತಕ ನಿರ್ದೇಶನಾಲಯವು ಪಠ್ಯಪುಸ್ತಕ, ಪೂರಕ ಗ್ರಂಥ, ಜನಪ್ರಿಯ ಪುಸ್ತಕ, ಪಾರಿಭಾಷಿಕ ಪದಕೋಶಗಳೊಡನೆ ಅನುವಾದ ಗ್ರಂಥಗಳನ್ನೂ ಈಗಾಗಲೇ ಪ್ರಕಟಿಸಿದೆ. ಇವುಗಳನ್ನು ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಲ್ಲಿ ಕಾರ್ಯ ನಿರತರಾಗಿರುವ ಅನುಭವಿಕ ಪ್ರಾಧ್ಯಾಪಕರು ಹಾಗೂ ಇತರ ತಜ್ಞರು ರಚಿಸಿದ್ದಾರೆ.

ಈ ಪ್ರಕಟನೆಗಳು ಪ್ರಾಧ್ಯಾಪಕರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಲ್ಲದೆ ಜನಸಾಮಾನ್ಯರಿಗೂ ಬಹು ಉಪಯುಕ್ತವಾದ ಗ್ರಂಥಗಳಾಗಿವೆ. ತಾಯ್ನುಡಿಯಲ್ಲಿಯೇ ವಿವಿಧ ವಿಷಯಗಳನ್ನು ತಿಳಿದುಕೊಳ್ಳಲು ಬೋಧಿಸಲು ಮತ್ತು ಬರೆಯಲು ಈ ಕೃತಿಗಳು ಮಾರ್ಗದರ್ಶಕವಾದ ಸ್ಫೂರ್ತಿ ನೀಡುತ್ತಿವೆ. ಜನತೆಯಲ್ಲಿ ವಿದ್ಯಾಪ್ರಸಾರ ಮಾಡುವ ವಿಶ್ವವಿದ್ಯಾಲಯದ ಗುರಿ ಬಹುಮಟ್ಟಿಗೆ ಸಲ್ಲುತ್ತಿರುವದು, ತನ್ಮೂಲಕ ಜನತೆಯ ಸಂಪರ್ಕವನ್ನು ಬೆಳೆಸಿಕೊಂಡು, ಶ್ರೀ ಸಾಮಾನ್ಯರ ಋಣವನ್ನು ತೀರಿಸುತ್ತಿರುವುದು ಅಭಿಮಾನದ ಸಂಗತಿ. ಕನ್ನಡ ಅಧ್ಯಯನ ಪೀಠ ತನ್ನ ಪಠ್ಯಪುಸ್ತಕ ನಿರ್ದೇಶನಾಲಯದ ಮೂಲಕ ಈ ಪುಣ್ಯ ಕಾರ್ಯವನ್ನು ಅವ್ಯಾಹತವಾಗಿ ನೆರವೇರಿಸಲೆಂದು ಹಾರೈಸುತ್ತೇವೆ. ಕನ್ನಡವನ್ನು ಸಂಪದ್ಭರಿತವಾಗಿಸುವ ಈ ಪ್ರೀತಿಯ ಕಾಯಕದಲ್ಲಿ ನಿರತರಾದವರೆಲ್ಲ ಅಭಿನಂದನಾರ್ಹರು. ಅವರ ಸೇವೆ ಅವ್ಯಾಹತವಾಗಿ ನಡೆಯಲೆಂದು ಹಾರೈಸುತ್ತೇವೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಆರ್. ಸಿ. ಹಿರೇಮಠ
ಕುಲಪತಿಗಳು

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠ, ಕನ್ನಡಿಗರ ಆಶೋತ್ತರಗಳನ್ನು ನೆರವೇರಿಸುವ ಕಾರ್ಯದಲ್ಲಿ ನಿರತವಾಗಿದೆ. ಬೋಧನೆ, ಸಂಶೋಧನೆ ಹಾಗೂ ಪ್ರಕಟನೆ ಈ ಸಂಸ್ಥೆಯ ಮೂರು ಕಣ್ಣುಗಳು. ಈ ಎಲ್ಲ ವಿಭಾಗಗಳಲ್ಲಿ ವಿಶೇಷ ಕಾರ್ಯಗಳನ್ನು ಸಾಧಿಸಿದ ಕೀರ್ತಿ ಈ ಅಧ್ಯಯನ ಪೀಠಕ್ಕಿದೆ. ವಚನ ವಾಙ್ಮಯ, ಜೈನ ಹಾಗೂ ವೈಷ್ಣವ ಸಾಹಿತ್ಯ, ಜನಪದ ಹಾಗೂ ಭಾಷಾ ಶಾಸ್ತ್ರಗಳಿಗೆ ಸಂಬಂಧಿಸಿದ ಅಧ್ಯಯನ ಹಾಗೂ ಅಧ್ಯಾಪನದ ಜೊತೆಗೆ, ಕನ್ನಡ ಮಾಧ್ಯಮವನ್ನು ವಿಶ್ವವಿದ್ಯಾಲಯ ಮಟ್ಟದಲ್ಲಿ ಅಳವಡಿಸಲು ನೆರವಾಗುವ ಗ್ರಂಥಗಳನ್ನು ಬರೆಯಿಸಿ ಪ್ರಕಟಿಸುವ ಕಾರ್ಯಕ್ಕೆ ಮೀಸಲಾಗಿರುವ ಪಠ್ಯಪುಸ್ತಕ ನಿರ್ದೇಶನಾಲಯ ಈಗಾಗಲೇ ನೂರಾರು ಕೃತಿಗಳನ್ನು ನೀಡಿ ವಿಕ್ರಮ ಸಾಧಿಸಿದೆ. ವಿವಿಧ ಕಾಲೇಜುಗಳ ಹಾಗೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಮತ್ತು ಇತರ ತಜ್ಞರು ಈ ಕೃತಿಗಳನ್ನು ರಚಿಸಿದ್ದಾರೆ. ಈ ವಿಭಾಗವು ಮುಖ್ಯವಾಗಿ ಪಠ್ಯಪುಸ್ತಕ, ಪೂರಕ ಗ್ರಂಥ ಹಾಗೂ ಜನಪ್ರಿಯ ಪುಸ್ತಕಗಳನ್ನು ಪ್ರಕಟಿಸುವ ಕಾರ್ಯವನ್ನು ಹಮ್ಮಿಕೊಂಡಿದೆ. ಈ ಎಲ್ಲ ಉಪಕ್ರಮಗಳಿಂದ ಕನ್ನಡ ವಾಙ್ಮಯ ಆಧುನಿಕ ಜ್ಞಾನವಾಹಿನಿಯಾಗುವುದರಲ್ಲಿ ಸಂಶಯವಿಲ್ಲ. ಪ್ರೌಢ ವ್ಯಾಸಂಗ ಹಾಗೂ ಸಂಶೋಧನೆಯ ಪರಿಣಾಮಗಳನ್ನು ಕನ್ನಡ ಮಕ್ಕಳಿಗೆ ತಾಯ್ನುಡಿಯಲ್ಲಿ ನೀಡಲು, ಆಧುನಿಕ ಜ್ಞಾನವನ್ನು ಜನಸಾಮಾನ್ಯರತ್ತ ಹರಿಸಲು ನೆರವಾಗುತ್ತಿದೆ. ಕನ್ನಡ ಭಾಷೆಯೇ ಶಿಕ್ಷಣ ಮಾಧ್ಯಮವಾಗಿ, ಕನ್ನಡವೇ ಆಡಳಿತ ಭಾಷೆಯಾಗಿ, ನ್ಯಾಯಾಲಯಗಳ ಭಾಷೆಯಾಗಿ ಮಾನ್ಯವಾಗಿರುವ ಈ ಸನ್ನಿವೇಶದಲ್ಲಿ ಪಠ್ಯಪುಸ್ತಕ ನಿರ್ದೇಶನಾಲಯದ ಈ ಕಾರ್ಯ ಗಮನಾರ್ಹವಾದ ಸೇವೆಯಾಗಿದೆ. ಈ ಕಾರ್ಯ ಇನ್ನೂ ಭರದಿಂದ ಸಾಗಲೆಂದು ಆಶಿಸುತ್ತೇವೆ.

ಕನ್ನಡ ಅಧ್ಯಯನ ಪೀಠ

ಎಂ. ಎಸ್. ಸುಂಕಾಪುರ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಪೀಠಿಕೆ

ಪಠ್ಯಪುಸ್ತಕ ನಿರ್ದೇಶನಾಲಯವು ಹಮ್ಮಿಕೊಂಡಿರುವ ಪಠ್ಯಪುಸ್ತಕ ಪ್ರಕಟನೆಯ ಕಾರ್ಯ ಜನಪ್ರಿಯವಾಗಿರುವದು ಹೆಮ್ಮೆಯ ಸಂಗತಿ. ಕಾಲೇಜ ಶಿಕ್ಷಣದ ಎಲ್ಲ ಹಂತಗಳಲ್ಲಿ ಕನ್ನಡವೇ ಶಿಕ್ಷಣ ಮಾಧ್ಯಮವಾಗುವ ಕಾಲ ಬಹು ದೂರವಿಲ್ಲ. ಅದಕ್ಕಾಗಿ ಎಲ್ಲರೂ ಒಮ್ಮನಸ್ಸಿನಿಂದ ಕಾರ್ಯಪ್ರವೃತ್ತರಾಗಬೇಕಾಗಿದೆ. ಈ ದಿಸೆಯಲ್ಲಿ ನಡೆದುಬಂದ ದಾರಿಗಿಂತ ನಡೆಯಬೇಕಾದ ದಾರಿಯೆ ನಿಡಿದಾಗಿದೆ. ಪಠ್ಯಪುಸ್ತಕ ನಿರ್ದೇಶನಾಲಯದ ಎಲ್ಲ ಕಾರ್ಯಗಳಿಗೆ ಪ್ರೋತ್ಸಾಹ ನೀಡುತ್ತಿರುವ ಕುಲಪತಿ ಡಾ. ಆರ್. ಸಿ. ಹಿರೇಮಠ ಅವರಿಗೂ ಹಾಗೂ ಮಾರ್ಗದರ್ಶನ ನೀಡುತ್ತಿರುವ ಕುಲಸಚಿವ ಶ್ರೀ ಕೆ. ಪಿ. ಸುರೇಂದ್ರನಾಥ ಅವರಿಗೂ ಹಾಗೂ ವಿಶ್ವವಿದ್ಯಾಲಯದ ಪ್ರಕಟನಾ ವಿಭಾಗದವರಿಗೂ ನಮ್ಮ ಕೃತಜ್ಞತೆಗಳು.

ಡಾ. ಎಂ.ಎಂ. ಭಟ್ ವಿರಚಿತ "ವಿಷವೈದ್ಯಶಾಸ್ತ್ರ" ಇವು ವಿಷವೈದ್ಯಶಾಸ್ತ್ರದ ಮೂಲ ಅಂಶಗಳನ್ನು ತಿಳಿಯಲು ಈ ಕೃತಿ ನೆರವು ನೀಡುತ್ತದೆ.

ಭಾರತ ಸರಕಾರದ ಶಿಕ್ಷಣ ಮತ್ತು ಸಮಾಜ ಕಲ್ಯಾಣ ವಿಭಾಗವು ಪ್ರಾದೇಶಿಕ ಭಾಷೆಗಳಲ್ಲಿ ವಿಶ್ವವಿದ್ಯಾಲಯ ಮಟ್ಟದ ಗ್ರಂಥಗಳನ್ನು ಪ್ರಕಟಿಸುವ ಯೋಜನೆಗನುಗುಣವಾಗಿ ಕರ್ನಾಟಕ ವಿಶ್ವವಿದ್ಯಾಲಯದ ಪಠ್ಯಪುಸ್ತಕ ನಿರ್ದೇಶನಾಲಯವು ಈ ಗ್ರಂಥವನ್ನು ಪ್ರಕಟಿಸಿದೆ.

ಈ ಪ್ರಕಟನೆಯ ಕಾರ್ಯದಲ್ಲಿ ನೆರವಾದ ನಿರ್ದೇಶನಾಲಯದ ವಿಜ್ಞಾನ ವಿಭಾಗದ ಮೇಲ್ವಿಚಾರಕ ಅಧ್ಯಾಪಕರಾದ ಪ್ರೊ. ದೇವೇಂದ್ರಕುಮಾರ ಹಕಾರಿ ಅವರಿಗೂ ಸಂಶೋಧನ ಸಹಾಯಕರಾದ ಶ್ರೀ ಬಿ. ಆರ್. ಹೂಗಾರ ಅವರಿಗೂ ಹಾಗೂ ಮುದ್ರಣ ಕಾರ್ಯವನ್ನು ನಿಷ್ಠೆಯಿಂದ ನೆರವೇರಿಸಿದ ಮಾಡರ್ನ ಪ್ರಿಂಟಿಂಗ ಪ್ರೆಸ್ಸಿನವರಿಗೂ ನಮ್ಮ ವಂದನೆಗಳು.

ಕನ್ನಡ ಅಧ್ಯಯನ ಪೀಠ
ಪಠ್ಯಪುಸ್ತಕ ನಿರ್ದೇಶನಾಲಯ

ಎಸ್. ಎಂ. ವೃಷಭೇಂದ್ರಸ್ವಾಮಿ
ನಿರ್ದೇಶಕರು

ಲೇಖಕರ ನುಡಿ

ಹೇಳದೇ ಕೇಳದೇ ಬರುವ ಅತಿಥಿಗಳಂತೆ ವಿಷ ಅಪಘಾತಗಳು ಹೆಚ್ಚಾಗಿ ಪೂರ್ವ ಸೂಚನೆ ಇಲ್ಲದೇ ಸಂಭವಿಸುತ್ತವೆ. ಅನಿರೀಕ್ಷಿತ ಅತಿಥಿಗಳನ್ನು ಉಪಚರಿಸಿ ನಿಭಾಯಿಸಿಕೊಳ್ಳುವ ಉಪಾಯ ಜಾಣಳಾದ ಗೃಹಿಣಿಗೆ ತಿಳಿದಿರುತ್ತದೆ. ಆದರೆ ವಿಷ ಅಪಘಾತವೆಂದೊಡನೆಯೇ ಎಂಥವರಿಗೂ ಒಮ್ಮೆ ಕೈಕಾಲು ಬಿದ್ದುಹೋಗು ತ್ತವೆ. ಸರಿಯಾದ ವೈದ್ಯಕೀಯ ಸೌಲಭ್ಯ ದೊರಕದ ಗ್ರಾಮಾಂತರ ಪ್ರದೇಶ ಗಳಲ್ಲಿ, ಅಜ್ಞಾನ–ಮೂಢನಂಬಿಕೆಗಳು ಮನೆ ಮಾಡಿಕೊಂಡಿದ್ದಾಗಲಂತೂ, ಪರಿ ಣಾಮವು ಅತ್ಯಂತ ಕ್ಲೇಶದಾಯವಾಗಿ ಬಿಡುತ್ತದೆ.

ವಿಷ ಅಪಘಾತಗಳ ಸ್ಥೂಲ ಪರಿಚಯ, ಚಿಕಿತ್ಸಾ ವಿಧಾನಗಳ ಸಂಕ್ಷೇಪ ಮಾಹಿತಿ ಹಾಗೂ ಅಪಘಾತಗಳನ್ನು ತಡೆಗಟ್ಟುವ ವಿಧಾನಗಳು ಪ್ರತಿಯೊಬ್ಬರಿಗೂ ತಿಳಿದಿರಬೇಕು. ವಿದ್ಯಾವಂತರಲ್ಲಿಯೇ ಈ ಬಗೆಯ ತಿಳುವಳಿಕೆ ಕಮ್ಮಿ ಇರುವಾಗ ಉಳಿದವರ ಪಾಡೇನು ? ಪತ್ರಿಕೆಗಳಲ್ಲಿ ಆಗೊಮ್ಮೆ ಈಗೊಮ್ಮೆ ಬರುವ ಬಿಡಿ ಲೇಖನಗಳನ್ನು ಬಿಟ್ಟರೆ ಈ ದಿಸೆಯಲ್ಲಿ ಹೆಚ್ಚಿನ ಪ್ರಯತ್ನಗಳು ನಡೆದಂತೆಯೂ ಕಾಣಿಸುವುದಿಲ್ಲ. ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗುವಂತೆ ಉಪಯುಕ್ತ ಮಾಹಿತಿಗಳನ್ನು ಕ್ರಮಬದ್ಧವಾಗಿ ನೀಡುವ ಪ್ರಯತ್ನವನ್ನು ಈ ವಿಷವೈದ್ಯಶಾಸ್ತ್ರ ಗ್ರಂಥದಲ್ಲಿ ಮಾಡಲಾಗಿದೆ. ಮನೆಗಳಲ್ಲಿ ಹೆಣ್ಣುಮಕ್ಕಳಿಗೂ ಅಲ್ಪ ವಿದ್ಯಾಭ್ಯಾಸ ಪಡೆದ ಹಳ್ಳಿಯ ಜನರಿಗೂ ಕೂಡಾ ಉಪಯುಕ್ತವಾಗಬೇಕೆಂಬ ದೃಷ್ಟಿಯಿಂದ ನಡೆಸಿದ ಪ್ರಯತ್ನವಿದು. ಹಳ್ಳಿಯ ಶಾಲೆಗಳಲ್ಲಿ, ಗ್ರಾಮಚಾವಡಿ, ಗ್ರಾಮ ಸೇವಕರ ಹಾಗೂ ದಳಪತಿಗಳ ಕಾರ್ಯಾಲಯಗಳಲ್ಲಿ ಈ ಪುಸ್ತಕವು ಸುಲಭದಲ್ಲಿ ದೊರಕುವಂತಾದರೆ ವಿಷ ಅಪಘಾತದ ಸಂದರ್ಭಗಳಲ್ಲಿ ಹೆಚ್ಚಿನ ಸಹಾಯ ದೊರ ಕುವುದರಲ್ಲಿ ಸಂದೇಹವಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿರುವ ನೂರಾರು ಜನ ದೇಶೀಯ ವೈದ್ಯರೂ, ಸ್ಕೌಟದಳ, ಗೃಹರಕ್ಷಕಪಡೆ, ಗ್ರಾಮ ರಕ್ಷಕದಳ, ಯುವಕ ಮಂಡಳಿ, ಮಹಿಳಾಸಮಾಜ ಮೊದಲಾದ ಸ್ವಯಂಸೇವಾ ಸಂಸ್ಥೆಗಳ ಸದಸ್ಯರಿಗೂ ಈ ಪುಸ್ತಕವು ಉಪಯುಕ್ತವಾಗಿದೆ. ಇದರಲ್ಲಿ ಸೂಚಿಸಿರುವ ಚಿಕಿತ್ಸೆಯ ವಿವರಗಳು ಕೇವಲ ವಿಷಯ ಜ್ಞಾನವನ್ನು ನೀಡುವ ಉದ್ದೇಶಕ್ಕಷ್ಟೇ ಸೀಮಿತವಾಗಿದೆ ಎಂಬು ದನ್ನು ಎಲ್ಲರೂ ಗಮನದಲ್ಲಿ ಇರಿಸಿಕೊಳ್ಳಬೇಕು; ಈ ಮಾಹಿತಿಯು ಕೂಡಾ ಜನರಲ್ಲಿ

ಇರುವ ಅಜ್ಞಾನವನ್ನು ತೊಡೆದು ಹಾಕಲು ಸ್ವಲ್ಪಮಟ್ಟಿಗೆ ಸಹಾಯಕವಾಗುತ್ತದೆ ಎಂದು ನನ್ನ ನಂಬಿಕೆ.

ಕನ್ನಡದಲ್ಲಿ ವೈದ್ಯಕೀಯ ಗ್ರಂಥಗಳನ್ನು ರಚಿಸುವಾಗ ಎದುರಿಸುವ ಅನೇಕ ಸಮಸ್ಯೆಗಳಲ್ಲಿ ಪಾರಿಭಾಷಿಕ ಪದಗಳ ಗೊಂದಲ ದೊಡ್ಡದು. ಕನ್ನಡ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಪದಗಳು ಬಳಕೆಯಲ್ಲಿದ್ದು ಅವನ್ನೆಲ್ಲ ಒಂದೆಡೆ ಸಂಗ್ರಹಿಸಿ ನಿಖರಗೊಳಿಸುವ ಪ್ರಯತ್ನ ನಡೆಯಬೇಕಾಗಿದೆ. ಅಲ್ಲಿಯವರೆಗೆ ಬಹು ಪದಗಳ ಬಳಕೆಯ ಗೊಂದಲ ತಪ್ಪಿದ್ದಲ್ಲ. ಮಂಗಳೂರು ಮತ್ತು ಮೈಸೂರ್ ಭಾಗಗಳಲ್ಲಿ ಹೆಚ್ಚು ಪ್ರಚಾರದಲ್ಲಿ ಇದ್ದು ತರ್ಕ ಶುದ್ಧವೆನ್ನಿಸುವ ಕೆಲವು ಪದಗಳನ್ನು ನಾನು ಬಳಸಿಕೊಂಡಿದ್ದೇನೆ. ಈ ಭಾಗದಲ್ಲಿ ಅವುಗಳ ಪರಿಚಯವಾಗಲಿ ಎಂಬುದು ನನ್ನ ಉದ್ದೇಶ. ವಿಷಯ ಸಂಗ್ರಹಣಕ್ಕೆ ಇದು ಅಡ್ಡಿಯಾಗಲಾರದೆಂದು ಭಾವಿಸಿದ್ದೇನೆ.

ಈ ಪುಸ್ತಕವನ್ನು ಬರೆಯುವಂತೆ ಪ್ರೋತ್ಸಾಹ ನೀಡಿದ ಕರ್ನಾಟಕ ವಿಶ್ವವಿದ್ಯಾನಿಲಯದ ಪಠ್ಯ ಪುಸ್ತಕ ನಿರ್ದೇಶಕರಾದ ಡಾ. ಎಸ್. ಎಂ. ವೃಷಭೇಂದ್ರ ಸ್ವಾಮಿಯವರಿಗೂ, ಪ್ರಕಟಿಸುತ್ತಿರುವ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾದ ಡಾ.ಸುಂಕಾಪುರ ಅವರಿಗೂ ನನ್ನ ಕೃತಜ್ಞತೆಗಳು. ಸಾರಲೇಖ, ಹಸ್ತಪ್ರತಿಗಳ ಮೇಲೆ ಕಣ್ಣಾಡಿಸಿ ಸೂಕ್ತ ಮಾರ್ಪಾಡುಗಳನ್ನು ಸೂಚಿಸಿದ ಡಾ. ಪಿ. ಎಸ್. ಶಂಕರ್ ಹಾಗೂ ಡಾ. ವೆಂಕಟೇಶಮೂರ್ತಿಗಳಿಗೆ ನೆನಕೆಗಳು.

ಗ್ರಂಥದಲ್ಲಿರುವ ರೇಖಾ ಚಿತ್ರಗಳನ್ನು ಬರೆದುಕೊಟ್ಟ ಕಲಾವಿದರಾದ ಸರ್ವಶ್ರೀ ಕಮಲೇಶ್, ಚಂದ್ರನಾಥ, ಅಂದಾನಿ, ಮತ್ತು ಭಾಲಚಂದ್ರ ಇವರುಗಳಿಗೂ, ಮುದ್ರಾಲೇಖನದಲ್ಲಿ ಸಹಕರಿಸಿದ ಅಕ್ಷಂತಿ ದಂಪತಿಗಳಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ವಿಷವೈದ್ಯಕ್ಕೆ ಸಂಬಂಧಿಸಿದ ಕೆಲವು ಬಿಡಿ ಲೇಖನಗಳನ್ನು ಆಗಾಗ ಬರೆಯಿಸಿ ಪ್ರಕಟಿಸಿ ಪ್ರೋತ್ಸಾಹಿಸಿದ ಸುಧಾ ಮತ್ತು ಕನ್ನಡ ಪ್ರಭ ಪತ್ರಿಕೆಗಳ ಸಂಪಾದಕರಿಗೆ ವಂದನೆಗಳು.

ಚಿತ್ತಾಪುರ (ಗುಲಬರ್ಗಾ ಜಿಲ್ಲೆ) **ಡಾ. ಎಮ್. ಎಮ್. ಭಟ್** (ಮುರಕಿಣಿ)

ಪ ರಿ ವಿ ಡಿ

ಅಧ್ಯಾಯ - 1

ವಿಷವೈದ್ಯಶಾಸ್ತ್ರ ಪರಿಚಯು

(1) ವಿಷಚಿಕಿತ್ಸೆಯು ಕತೆ

ಮಂಗರಾಜನೆಂಬ ಕವಿ 14 ನೇ ಶತಮಾನದಲ್ಲಿ "ವಿಷಹಾರಕೋಪಾಯುಗಳನ್ನು ವಿವರಿಸುವ" ಒಂದು ಚಂಪೂಕಾವ್ಯವನ್ನು ರಚಿಸಿದ. "ಖಗೇಂದ್ರಮಣಿ ದರ್ಪಣ" ವೆಂದು ಅದು ಪ್ರಸಿದ್ಧವಾಗಿದೆ. ಪಕ್ಷಿಸಂಕುಲಕ್ಕೆ ಒಡೆಯನಾದ ಗರುಡನು ವಿಷಸರ್ಪಗಳ ಪರಮವೈರಿಯಾಗಿದ್ದು, "ಗರುಡಪಚ್ಚೆ"ಯು ಸ್ಪರ್ಶದಿಂದ ವಿಷ ಪರಿಹಾರವಾಗುವ ದೆಂಬ ನಂಬಿಕೆ ರೂಢಿಯಲ್ಲಿದೆ. ತನ್ನ ವಿಷಚಿಕಿತ್ಸಾಗ್ರಂಥಕ್ಕೆ, **ಖಗೇಂದ್ರಮಣಿ ದರ್ಪಣ**ವೆಂದು ಹೆಸರಿಟ್ಟು, ವಿಷಚಿಕಿತ್ಸೆಯು ಕೈಪಿಡಿ ಎಂಬುದಾಗಿ ತನ್ನ ಕೃತಿಯನ್ನು ಕವಿಯು ಬಹು ಮಾರ್ಮಿಕವಾಗಿ ಸಮರ್ಥಿಸಿಕೊಂಡಿದ್ದಾನೆ.

ವಿಷಚಿಕಿತ್ಸೆ-ಅಗದತಂತ್ರ :

ವಿಷಚಿಕಿತ್ಸೆಯೆಂದರೆ ಮುಖ್ಯವಾಗಿ ಹಾವು-ಚೇಳು ಮೊದಲಾದ ವಿಷಜಂತು ಗಳ ಕಡಿತದಿಂದ ಉಂಟಾಗುವ ತೊಂದರೆಯ ಪರಿಹಾರವೆಂಬ ಅರ್ಥ ನಮ್ಮಲ್ಲಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿತ್ತು. "ಕಾಶ್ಯಪಸಂಹಿತೆ" ಎಂಬ ವಿಷವೈದ್ಯಕ ಪ್ರಾಚೀನ ಸಂಸ್ಕೃತ ಗ್ರಂಥವು "ಗರುಡ ಪಂಚಾಕ್ಷರೀ ಕಲ್ಪ"ವೆಂದೇ ಪ್ರಸಿದ್ಧವಾಗಿದೆ. ಒಟ್ಟಿನಲ್ಲಿ ಸ್ಥಾವರವಿಷ, ಜಂಗಮವಿಷ, ಕೃತ್ರಿಮ ವಿಷ (ದೂಷಿ ವಿಷ– ಗರವಿಷ) ಹಾಗೂ ಗ್ರಹಜವಿಷ ಮತ್ತು ಶಂಕಾಜವಿಷ ಎಂಬುದಾಗಿ ವಿಷವೈದ್ಯವು ವಿಭಾಗಿಸಲ್ಪ ಟ್ಟಿದ್ದರೂ ವಿಷಜಂತುಗಳ ಕಡಿತದ ಚಿಕಿತ್ಸೆಗೆ ಹೆಚ್ಚಿನ ಪ್ರಾಧಾನ್ಯತೆ ಇತ್ತೆನ್ನಬಹುದು. ಆರ್ಯವೈದ್ಯರು ವಿಷಚಿಕಿತ್ಸಾ ವಿಭಾಗಕ್ಕೆ **ಅಗದತಂತ್ರ**ದೆಂದು ಹೆಸರಿಸಿದ್ದಾರೆ.

ಅಲೆಗ್ಝಾಂಡರ್ ಚಕ್ರವರ್ತಿ ದಂಡೆತ್ತಿ ಬಂದ ಕಾಲದಲ್ಲಿ ಪಂಜಾಬ ಪ್ರದೇಶದಲ್ಲಿ ಅವನ ಪ್ರಮುಖ ಸೇನಾಧಿಕಾರಿಯೊಬ್ಬನು ಹಾವಿನ ಕಡಿತಕ್ಕೆ ತುತ್ತಾದನಂತೆ. ಸೇನೆಯಲ್ಲಿದ್ದ ಗ್ರೀಕ್ ವೈದ್ಯರಿಗೆ ಅದರ ಚಿಕಿತ್ಸೆಯು ಬಗೆಹರಿಯದೇ ಹೋದಾಗ, ವೈರಿ ಸೇನೆಯ ಪ್ರಮುಖನಾಗಿದ್ದರೂ ಸರ್ಪದ ವಿಷಕ್ಕೆ ಬಲಿಯಾಗಿ ಪ್ರಾಣಾಪಾಯು

ಕೊಳ್ಳಗಾದವನನ್ನು ಬದುಕಿಸಲು ಭೂತದಯಾಪ್ರೇರಿತನಾದ ಅಲ್ಲಿನ ಹಿಂದೂ ಅರಸನು ತನ್ನ ಭಿಷಗ್ರತ್ನರನ್ನು ಕಳುಹಿಸಿಕೊಟ್ಟನಂತೆ...... ಭಾರತೀಯ ವಿಷವೈದ್ಯ ಪರಂಪರೆಯ ಪ್ರಶಂಸೆಯನ್ನು ಗ್ರೀಕ್ ದಾಖಲೆಗಳಲ್ಲಿ ಇಂದಿಗೂ ನೋಡಬಹುದು.

ನಮ್ಮ ಪುರಾತನ ವಿಷಚಿಕಿತ್ಸಾವಿಧಾನದಲ್ಲಿ ಔಷಧೋಪಚಾರಕ್ಕಷ್ಟೇ ಅಲ್ಲದೆ ಮಂತ್ರವಾದ, ತಾಯಿತ, ಮಣಿಬಂಧಗಳಿಗೂ ಪ್ರಾಧಾನ್ಯತೆ ಇತ್ತು. ವಮನ, ವಿರೇಚನ, ನಸ್ಯಕರ್ಮ ಮೊದಲಾದ ಚಿಕಿತ್ಸಾವಿಧಾನಗಳಿಂದಲೂ, ಸೂಕ್ತ ಪ್ರತ್ಯೌಷಧಗಳನ್ನು ನೀಡಿಯೂ ವಿಷಮುಕ್ತಿಯನ್ನು ಸಾಧಿಸುತ್ತಿದ್ದರು. "**ನಂಜು ಜೋಗಿ**"ಗಳೆಂಬ ಹೆಸರಿನಿಂದ ವಿಷವೈದ್ಯರನ್ನು ಪ್ರತ್ಯೇಕವಾಗಿ ಗುರುತಿಸಲಾಗುತ್ತಿತ್ತೆಂದೂ, ಗ್ರಾಮಾಂತರ ಪ್ರದೇಶಗಳಲ್ಲಿ ಅವರು ನೀಡುತ್ತಿದ್ದ ಉಚಿತ ಸೇವೆಗೆ ಪಾರಿತೋಷಕವು ರಾಜಬೊಕ್ಕಸದಿಂದ ಸಲ್ಲುತ್ತಿತ್ತು ಎಂಬುದಾಗಿಯೂ ತಿಳಿದು ಬರುತ್ತದೆ.

ಆಧುನಿಕ ವಿಷವೈದ್ಯ ಶಾಸ್ತ್ರ

ನಾನಾ ಬಗೆಯ ವಿಷಗಳು, ಅವುಗಳ ಹೆಸರು, ಸ್ವರೂಪ ಹಾಗೂ ಪ್ರಾಣಾಪಾಯದ ಸೇವನಾಪ್ರಮಾಣ ಮತ್ತು ವಿಷಪ್ರಯೋಗದ ಲಕ್ಷಣಗಳು, ಉಪದ್ರವಗಳು ಮೊದಲಾದ ವೃತ್ತಾಂತಗಳನ್ನು ತಿಳಿಸಿ ನಡೆಸಬೇಕಾದ ವಿಷಚಿಕಿತ್ಸೋಪಚಾರ ಹಾಗೂ ಶುಶ್ರೂಷೆಗಳನ್ನು ವಿವರಿಸುವ ಶಾಸ್ತ್ರಕ್ಕೆ **ವಿಷವೈದ್ಯ ಶಾಸ್ತ್ರ**ವೆಂದು ಹೆಸರು (Toxicology). ವೈದ್ಯಶಾಸ್ತ್ರದ ಉಪವಿಭಾಗವಾಗಿ ವಿಷಚಿಕಿತ್ಸೆಯನ್ನು ಪರಿಗಣಿಸುವುದು ರೂಢಿಯಲ್ಲಿದ್ದರೂ ಅದೊಂದು ಪ್ರತ್ಯೇಕ ಶಾಸ್ತ್ರವೇ ಎಂದು ಹೇಳುವಷ್ಟು ಮಟ್ಟಿಗೆ ವಿಸ್ತಾರವಾದ ಕ್ಷೇತ್ರದಲ್ಲಿ ಈಗ ಹಬ್ಬಿದೆ. ಪ್ಯಾರಿಸ್ಸಿನ ಪ್ರೊ. ಮಾತಿಯೋ ಜೋಶ್ ಬೊನವೆಂತುರಾ ಒರ್‌ಫಿಲಾ (1789-1853) ಎಂಬವರನ್ನು ಆಧುನಿಕ ವಿಷವೈದ್ಯಶಾಸ್ತ್ರದ ಜನಕರೆಂದು ಕರೆದರೆ, ಡಾ॥ ಜೈಸಿಂಗ್ ಪಿ. ಮೋದಿಯವರನ್ನು ಭಾರತದಲ್ಲಿ ಆಧುನಿಕ ವಿಷವೈದ್ಯಶಾಸ್ತ್ರದ ಆದ್ಯ ಪುರೋಹಿತರೆಂದು ಧಾರಾಳವಾಗಿ ಹೇಳಬಹುದು. 1843ರಲ್ಲಿ ಡಾ॥ ಮುಪಟ್ ಅವರು ವಿಷವಸ್ತುಗಳ ಶಾಸ್ತ್ರೀಯ ಅಭ್ಯಾಸವನ್ನು ಮಾಡಿ ಪ್ರಕಟಿಸಿದರು. 1870 ರಲ್ಲಿ ಡೇವರ್ ಅವರು ವಿಷಸಸ್ಯಗಳ ವಿಚಾರವಾಗಿ ಇಂಥದೇ ಪ್ರಯತ್ನ ನಡೆಸಿದುದನ್ನು ಮರೆಯುವಂತಿಲ್ಲ.

ವಿಷಪ್ರಯೋಗಕ್ಕೆ ತುತ್ತಾದೊಡನೆಯೇ ರೋಗಿಗೆ ತಕ್ಷಣ ಮೊದಲ ನೆರವನ್ನು ನೀಡಬೇಕು. ವೈದ್ಯಕೀಯ ಸಹಾಯವು ದೊರೆಯುವತನಕ ವಿಷಪ್ರಾಶನಕ್ಕೆ ಬಲಿಯಾದ ರೋಗಿಯ ಶರೀರದಲ್ಲಿ ವಿಷವು ಪ್ರಸಾರವಾಗುವುದನ್ನು ಸಾಧ್ಯವಾದಷ್ಟು ಮಟ್ಟಿಗೆ ತಡೆಗಟ್ಟಿ ರೋಗಿಯನ್ನು ಅಪಾಯದಿಂದ ಪಾರು

ಮಾಡಲು ಕೈಗೊಳ್ಳಬೇಕಾದ ತುರ್ತು ಉಪಚಾರಕ್ಕೆ **'ಪ್ರಥಮ ಚಿಕಿತ್ಸೆ'** ಎಂದು ಹೆಸರು. ಇದನ್ನು ಪ್ರಥಮೋಪಚಾರವೆಂದೂ ಕರೆಯುತ್ತಾರೆ. ಅನಂತರ ವೈದ್ಯರ ನೆರವನ್ನು ಪಡೆದು ಸೂಕ್ತ ಚಿಕಿತ್ಸೆ, ರೋಗೋಪಚಾರ, ಶುಶ್ರೂಷೆ ಹಾಗೂ ಅನುಪಾನಗಳನ್ನು ಕೈಗೊಳ್ಳಬೇಕು. ಸಂಶೋಧಕರು ಈಗ ಹೆಚ್ಚು ಹೆಚ್ಚಾಗಿ ಇತ್ತಕಡೆಗೆ ಗಮನ ಹರಿಸಿರುವುದರಿಂದ, ವಿಷಚಿಕಿತ್ಸೆಯ ಪ್ರತಿಯೊಂದು ಹಂತದಲ್ಲಿಯೂ ನಿರ್ದಿಷ್ಟ ವಿಧಿವಿಧಾನಗಳು ಕಂಡು ಹಿಡಿಯಲ್ಪಟ್ಟಿವೆ; ಹೊಸ ಹೊಸ ನಿರ್ದಿಷ್ಟ ಔಷಧಿ–ವಿಧಿಗಳೂ, ಪ್ರತ್ಯೌಷಧಿಗಳೂ ಆವಿಷ್ಕಾರಗೊಂಡಿವೆ. ಮಾತ್ರವಲ್ಲದೆ ವಿಷಅಪಘಾತಗಳು ಸಂಭವಿಸದಂತೆ ತಡೆಗಟ್ಟುವ ಪ್ರತಿಬಂಧಕೋಪಾಯಗಳನ್ನು ಸಹ ಬಹು ಸ್ಪಷ್ಟವಾಗಿ ರೂಪಿಸಲಾಗಿದೆ.

ಬಹುಬಗೆಯ ವಿಷಗಳು :

ಇಂದು ನಮ್ಮನ್ನು ಕಾಡುವ ವಿಷಗಳು ಅನೇಕ ಬಗೆಯವು. ಫಿನಾಯಲ್ಲ, ಡಿ.ಡಿ.ಟಿ, ಸೀಮೆಯೆಣ್ಣೆ, ಪೊಟಾಸಿಯಂ ಪರಮಾಂಗನೇಟ್ ಮೊದಲಾದ ನಿತ್ಯ ಬಳಕೆಯ ಅನೇಕ ವಸ್ತುಗಳು ಮೇಲುನೋಟಕ್ಕೆ ನಿರುಪದ್ರವೀ ದ್ರವ್ಯಗಳಂತೆ ಕಾಣಿಸಿದರೂ ದುರುಪಯೋಗದಿಂದ ಮಾರಕ ವಿಷವಾಗಿ ಪರಿಣಮಿಸುವವು. ನಾನಾ ಬಗೆಯ ರಾಸಾಯನಿಕ ದ್ರವ್ಯಗಳು, ಕೀಟನಾಶಕಗಳು, ಅನಿಲಗಳು, ಲೋಹಗಳು ಮಾತ್ರವಲ್ಲದೆ ಕೆಲವು ಗಿಡಮೂಲಿಕೆಗಳು ಕೂಡಾ ನಮ್ಮ ಆರೋಗ್ಯಕ್ಕೆ ಅಪಾಯವನ್ನು ಉಂಟುಮಾಡುತ್ತವೆ. ಔಷಧಿಗಳನ್ನು ಪ್ರಮಾಣ ತಪ್ಪಿಯಾಗಲಿ, ಅನಗತ್ಯವಾಗಿಯಾಗಲಿ ಸೇವಿಸಿದರೆ ಅಪಾಯ ಕಟ್ಟಿಟ್ಟದ್ದೇ ಸರಿ.

ವಿಷ : ಒಂದು ವಿವರಣೆ

ವಿಷವೆಂದರೆ ವಿಷಾದವನ್ನು ಉಂಟುಮಾಡುವ ಪದಾರ್ಥ. ಸಮುದ್ರಮಥನ ಕಾಲದಲ್ಲಿ ಅಮೃತದ ಆವಿಷ್ಕಾರವನ್ನು ಹಾರೈಸುತ್ತಿದ್ದ ದೇವಾಸುರರೆಲ್ಲರಿಗೆ ದಿಗ್ಭ್ರಮೆಯನ್ನು ಉಂಟುಮಾಡುತ್ತ ಭಯಂಕರವಾದ ವಿಕಾರರೂಪದ ವಿಷವು ಮೇಲಕ್ಕೆ ಬಂದು ಎಲ್ಲರನ್ನೂ ಪೀಡಿಸತೊಡಗಲು, ಲೋಕಕಲ್ಯಾಣಾರ್ಥವಾಗಿ ಜಗದ್ರಕ್ಷಕನಾದ ಪರಮೇಶ್ವರನು ಆ ವಿಷವನ್ನು ಹೀರಿ, ತನ್ನ ಗಂಟಲಲ್ಲಿ ಕಾಯ್ದಿಟ್ಟುಕೊಂಡು ನಂಜುಂಡೇಶ್ವರನೆನ್ನಿಸಿದ ಕತೆ ಪುರಾಣಪ್ರಸಿದ್ಧವಾಗಿದೆ. ಹಾವು, ಚೇಳು ಮೊದಲಾದ ಜಂತುಗಳು, ಮದುಗುಣಿಕೆ(ದತ್ತೂರ), ಕೋಳಿಕುಟುಮನಗಡ್ಡೆ(ಲಾಂಗಲಿ) ಮೊದಲಾದ ಗಿಡಮೂಲಿಕೆಗಳೂ, ಹರತಾಲ, ಶಂಖಪಾಷಾಣ ಮೊದಲಾದ ಧಾತುಗಳೂ ಈ ವಿಷದ ಅಂಶವನ್ನು ಹೀರಿಕೊಂಡು ವಿಷಸ್ವಭಾವವನ್ನು ರೂಢಿಸಿಕೊಂಡವೆಂದೂ ಹೇಳುತ್ತಾರೆ.

ವಿಷವು ಅಪಾಯಕರವಾದುದು. ಶರೀರಕ್ಕೆ ಬಾಧೆಯನ್ನೂ, ಅಂಗಾಂಗಗಳ ನ್ಯೂನತೆಯನ್ನೂ, ಚಟುವಟಿಕೆಗಳ ಅವ್ಯವಸ್ಥೆಯನ್ನೂ, ಮನಸ್ಸಿಗೆ ವೇದನೆಯನ್ನೂ, ಪ್ರಾಣಕ್ಕೆ ಸಂಚಕಾರವನ್ನೂ ತರಬಲ್ಲ ದುರ್ಗುಣಗಳಿಂದ ಕೂಡಿದ್ದು, ಸ್ವಾಸ್ಥ್ಯವನ್ನು ಕೆಡಿಸುತ್ತದೆ. ವಿಷವನ್ನು ಸೊಕ್ಕು (ಸೊರ್ಕು), ಮದ, ನಂಜು ಎಂಬುದಾಗಿ ಕವಿಗಳು ವರ್ಣಿಸಿದ್ದಾರೆ.

ದುರುಪಯೋಗದಿಂದ ಸಾವು:

ಸೇವನೆಯಿಂದ, ಸ್ಪರ್ಶದಿಂದ ಮತ್ತು ಆಘ್ರಾಣಿಸಿದಾಗ (ಮೂಸಿದಾಗ) ವಿಷವಾಗಿ ಪರಿಣಮಿಸುವ ನಾನಾ ಬಗೆಯ "ವಿಷದ್ರವ್ಯ"ಗಳಿವೆ; ಆಹಾರ ಪಾನೀಯಗಳಲ್ಲಿ, ಹೊಗೆ–ಹಬೆಗಳ ರೂಪದಲ್ಲಿ, ಚಿಮುಕಿಸುವ ಬಾಷ್ಪಗಳಾಗಿ, ಸೂಜಿಮದ್ದಿನ ಹಾಗೂ ಇತರ ಔಷಧರೂಪದಲ್ಲಿ ವಿಷವು ದುರುಪಯೋಗಿಸಲ್ಪಡುವುದುಂಟು. ಗುದದ್ವಾರದ ಹಾಗೂ ಸ್ತ್ರೀಜನನೇಂದ್ರಿಯದ ಮೂಲಕವೂ ವಿಷಪ್ರಯೋಗವಾಗುವ ಸಂಭವಗಳಿವೆ.

ಹಾವು-ಚೇಳಿನಂತಹ ವಿಷಜಂತುಗಳು ಕಡಿದ ತಕ್ಷಣ ವಿಷವೇರತೊಡಗಿದರೆ, ಮೂಷಿಕ ವಿಷವು(ವಾರ್ಫರಿನ್) ಅನೇಕ ಸಲ ಸೇವಿಸಲ್ಪಟ್ಟಾಗ ಪ್ರಾಣಾಪಾಯವನ್ನು ಉಂಟುಮಾಡಬಹುದು; ಹಗೇವುಗಳ (ಕಣಜಗಳ) ವಿಷವಾಯುವು ಕ್ಷಣಾರ್ಧದಲ್ಲಿ ಪ್ರಾಣಾಪಾಯವನ್ನು ತರಬಲ್ಲುದು! ಉಗುರುಬಣ್ಣ, ಬೂಟ್‌ಪಾಲಿಶ್, ಕಣ್ಣಿನ ಕಾಡಿಗೆ(ಸುರುಮಾ)ಮೊದಲಾದವುಗಳಲ್ಲಿರುವ ಅಲ್ಪ ಪ್ರಮಾಣದವಿಷವು ಚಿಕ್ಕಮಕ್ಕಳ ಬಾಯಿಯಲ್ಲಿ ಗಂಡಾಂತರಕಾರಿಯೇ ಸರಿ! ಅಣಬೆ, ಬಿದಿರುಕಳಲೆಗಳಂತಹ ವ್ಯಂಜನಗಳನ್ನು ಶುದ್ಧಮಾಡುವುದರಲ್ಲಿ ತುಸು ಹೆಚ್ಚು-ಕಮ್ಮಿಯಾದರೂ ತೀವ್ರವಾದ ವಿಷಾಪಘಾತ ಉಂಟಾಗಬಹುದು. ಕೇಸರಿಬೇಳೆಯಂತಹ ಕಲಬೆರಕೆಯ ವಸ್ತುಗಳನ್ನು ದೀರ್ಘಕಾಲ ತಿನ್ನುವದರಿಂದ ದೇಹಾಪಾಯ ಸಂಭವಿಸುವುದರಲ್ಲಿ ಸಂದೇಹವಿಲ್ಲ.

ಕಳ್ಳಭಟ್ಟಿ ಸೇವನೆ, ಮಿತಿಮೀರಿದ ಮದ್ಯಪಾನ, ಅಫು, ಬಂಗಿ, ಎಲ್.ಎಸ್.ಡಿ, ಕೋಕೇನ್‌ಗಳಂತಹ ಮಾದಕದ್ರವ್ಯಗಳ ಚಟಕ್ಕೆ ಬಲಿಯಾಗಿ ಜೀವನವನ್ನೇ ಹಾಳು ಮಾಡಿಕೊಳ್ಳುವವರ ಸಂಖ್ಯೆಗೆ ಲೆಕ್ಕವಿಲ್ಲ. ಹುಳಗಳ ಬಾಧೆಯಿಂದ ಬೆಳೆಗಳನ್ನು ರಕ್ಷಿಸಲು ರೈತರು ಬಳಸುವ ಪರಥಿಯಾನ್, ಮಲಥಿಯಾನ್, ಹೆಪ್ಟಾಕ್ಲೋರ್ ಮೊದಲಾದ ಕೀಟನಾಶಕಗಳು ಮನುಷ್ಯರ ಸೇವನೆಗೆ ಎಷ್ಟು ಭಯಂಕರ ವಿಷವೆಂಬ ಕಲ್ಪನೆಯಾದರೂ ಒಕ್ಕಲಿಗರಿಗೆ ಇದೆಯೋ ಇಲ್ಲವೊ! ಹೃದಯರೋಗ, ಸಂಧಿವಾತ ಮೊದಲಾದ ಕಾಯಿಲೆಗಳಿಂದ ಅತಿಶಯ ವೇದನೆಯನ್ನು ಅನುಭವಿಸಿ ನರಳುತ್ತಿರುವ

ರೋಗಿಗಳಿಗೆ ನಿದ್ರೆಬರಿಸುವ ಶಾಮಕ ಗುಳಿಗೆಗಳನ್ನು ವೈದ್ಯರು ಕೊಡುತ್ತಾರಷ್ಟೆ? ನಿರ್ದಿಷ್ಟ ಪ್ರಮಾಣದಲ್ಲಿ ಸೇವಿಸಿದಾಗ ವರಪ್ರಸಾದದಂತೆ ಕೆಲಸಮಾಡುವ ಈ ಔಷಧಿಗಳನ್ನು ಪ್ರಮಾಣತಪ್ಪಿ ನುಂಗಿದರೆ ಯಮನ ಆತಿಥ್ಯದ ತುರ್ತು ಕರೆ ಬಂತೆಂದೇ ತಿಳಿಯಬೇಕು. ನಾನಾ ಕೈಗಾರಿಕೆಗಳಲ್ಲಿ ಬಳಸುವ ಕ್ಷಾರ, ಆಮ್ಲ, ಲೋಹ, ಸ್ಫೋಟಕ-ದ್ರವ್ಯಾದಿಗಳ ದುರುಪಯೋಗದಿಂದ ಪ್ರಾಣಾಪಾಯ ಉಂಟಾಗಬಹುದು.

ಮುಂಜಾಗ್ರತೆ ಲೇಸು :

ವಿಷ ಅಪಘಾತಕ್ಕೆ ಬಲಿಯಾಗದೆ ಇರುವ ಏಕೈಕ ಮಾರ್ಗವೆಂದರೆ ಮುಂಜಾಗ್ರತೆ. ವಿಷವಸ್ತುಗಳು ಅರಿಯದವರ ಕೈಗೆ ಸಿಗದಂತೆ, ಪ್ರಮಾಣಮೀರಿ ಸೇವಿಸಲ್ಪಡದಂತೆ, ವಿಷದ ಸೋಂಕಿಗೂ, ಸಂಪರ್ಕಕ್ಕೂ ಬಲಿಯಾಗದಂತೆ ಸದಾ ಮುನ್ನೆಚ್ಚರಿಕೆ ವಹಿಸಬೇಕು. ಆಕಸ್ಮಾತ್ ಅನಾಹುತ ಸಂಭವಿಸಿದರೆ ಎದೆಗುಂದದೆ ಧೈರ್ಯಗೆಡದೆ, ಒಂದರೆಕ್ಷಣವೂ ವಿಳಂಬಿಸದೆ ತುರ್ತಾಗಿ ಪ್ರಥಮಚಿಕಿತ್ಸೆ ನೀಡಿ, ವೈದ್ಯಸಹಾಯ ಪಡೆದು ಸೂಕ್ತ ಔಷಧೋಪಚಾರ ನಡೆಸುವುದರಿಂದ ದುರ್ಮರಣಕ್ಕೆ ಬಲಿಯಾಗುವ ಎಷ್ಟೋ ಜೀವಗಳನ್ನು ಉಳಿಸಿಕೊಳ್ಳಬಹುದು. ಮಂಗರಾಜ ಕವಿಯ ಹೇಳಿಕೆಯಂತೆ "ವಿಷ ಚಿಕಿತ್ಸೆ ಮಾಳ್ಪವಂ ತಾಂ ದೇವಂ ಧರಾಚಕ್ರದೊಳ್" !

(2) ವಿಷಚಿಕಿತ್ಸೆಯ ಮೂಲಸೂತ್ರಗಳು

ವಿಷಅಪಘಾತ ಸಂಭವಿಸಿದಾಗ ಮಾಡಬೇಕಾದ ಮೊದಲ ಕೆಲಸ ರೋಗಿಗೆ ಅಭಯಪ್ರಧಾನ. ಟಿಕ್‌ಟ್ವೆಂಟಿ ಕುಡಿದದ್ದಿರಲಿ, ನಾಗರಹಾವು ಕಡಿದದ್ದಿರಲಿ ಅಥವಾ ನಿದ್ದೆಗೋಲಿ ನುಂಗಿದ್ದಿರಲಿ ಆತಂಕ, ಗಲಿಬಿಲಿ, ಕಳವಳತುಂಬಿದ ಆ ಭಯಾನಕ ಸನ್ನಿವೇಶಗಳಲ್ಲಿ ಆಸೆಯ ಬೆಳಕನ್ನು ಮೂಡಿಸುವುದು ಪ್ರಪ್ರಥಮ ಕರ್ತವ್ಯ. ರೋಗಿಗಳಿಗಷ್ಟೇ ಅಲ್ಲದೆ ಗಾಬರಿಯಿಂದ ಕೈಕಾಲು ಬಿದ್ದುಹೋಗಿ ದಿಙ್ಮೂಢರಾಗಿ ತಲೆಯಮೇಲೆ ಕೈಹೊತ್ತುಕೊಂಡು ಕುಳಿತ ಬಂಧು-ಬಾಂಧವರ ಭಯ ನಿವಾರಣೆಗೆ ಮೊದಲು ಪ್ರಯತ್ನಿಸಬೇಕು- ಅದರಲ್ಲಿಯೂ ಮೂಢನಂಬಿಕೆಗಳ ಅವಿದ್ಯಾವಂತ ಜನರ ಬಗೆಗೆ ಇನ್ನಷ್ಟು ಹೆಚ್ಚು ಕಾಳಜಿ ತೆಗೆದುಕೊಳ್ಳುವುದು ಅಗತ್ಯ. "ಧೈರ್ಯಂ ಸರ್ವತ್ರ ಸಾಧನಂ" ಎಂಬಂತೆ ಭಯ ಭೀತಿಗಳಿಗೆ ಎಡೆಗೊಡದೆ ಕಾರ್ಯತತ್ಪರರಾಗ ಬೇಕಾದುದು ಮುಖ್ಯ.

ದಿಢೀರ್ ಸಹಾಯ :

ವಿಷಚಿಕಿತ್ಸೆಯ ಎರಡನೇ ಸೂತ್ರ " ಆಲಸ್ಯಮಮೃತಂ ವಿಷಂ " ಎಂಬುದು. ಸಕಾಲದಲ್ಲಿ ನೀಡದೇ ಹೋದ ಅಲ್ಪ ಸಹಾಯವೇ ರೋಗಿಯ

ಪ್ರಾಣಹರಣಕ್ಕೆ ಕಾರಣವಾಗಬಹುದು. ವಿಷವು ಬಹುತೀವ್ರವಾಗಿ ಪಸರಿಸಿ ಕಾರ್ಯ ಮಾಡುವುದರಿಂದ ವಿಷಪ್ರತೀಕಾರವೂ ಅಷ್ಟೇ ತೀವ್ರಗತಿಯಿಂದ ನಡೆಯಬೇಕು.ಒಂದು ನಿಮಿಷವೂ ವ್ಯರ್ಥ ಕಳೆಯದೆ, ಕಾಲ ವಿಳಂಬ ಮಾಡದೆ, ನಿರ್ದಿಷ್ಟ ಚಿಕಿತ್ಸಾಸಾಧನ ಗಳನ್ನು ಅರಸುತ್ತ ಕುಳಿತಿರದೆ, ಮಿಂಚಿನವೇಗದಿಂದ ಪ್ರಥಮೋಪಚಾರ ನೀಡಬೇಕು. ರೋಗಿಯನ್ನು ಆಸ್ಪತ್ರೆಗೆ ಸಾಗಿಸಲು ಸೂಕ್ತ ವ್ಯವಸ್ಥೆ ಮಾಡುತ್ತಿದ್ದಾಗಲೂ ಕೂಡ ಸಾಧ್ಯವಾದಷ್ಟು ಮಟ್ಟಿಗೆ ಪ್ರಥಮಚಿಕಿತ್ಸೆಯನ್ನು ಕೈಗೊಳ್ಳಲು ಹಿಂದೆ ಮುಂದೆ ನೋಡಬಾರದು.

ವಿಷಪರಿಹಾರಕೋಪಾಯಗಳಲ್ಲಿ ಪ್ರಥಮಚಿಕಿತ್ಸೆ, ಸ್ಥಿರಚಿಕಿತ್ಸೆ (ತಜ್ಞಚಿಕಿತ್ಸೆ) ಎಂಬುದಾಗಿ ಕಟ್ಟುನಿಟ್ಟಾದ ವಿಂಗಡಣೆಯನ್ನು ಮಾಡುವುದು ಸಾಧ್ಯವಿಲ್ಲ. ರೋಗಿಯ ಹಿತವನ್ನು ಗಮನದಲ್ಲಿರಿಸಿಕೊಂಡು ಸಾಧ್ಯವಾದುದನ್ನೆಲ್ಲ ನಡೆಸಬೇಕು– ಅದು ಮುಖ್ಯ. ಅನ್ನಕೋಶವನ್ನು ಸೇರಿದ ವಿಷವು ಶರೀರಕ್ಕೆ ಅಪಾಯಕರವಾದ ಪ್ರಮಾಣದಲ್ಲಿ ಅಂಗಾಂಗಳಿಗೆ ತಲುಪದಂತೆ (ಅಂಗಾಂಗಗಳಿಂದ ವಿಷವು ಹೀರಲ್ಪಡ ದಂತೆ) ತಡೆಗಟ್ಟಲು ವಿಷಸ್ತಂಭೇನ ಮಾಡಬೇಕು, ಅನಂತರ ಅನ್ನಕೋಶವನ್ನು ಸೇರಿ ಕೊಂಡ ವಿಷವನ್ನು ವಿವಿಧ ಯುಕ್ತಿಗಳಿಂದ ಹೊರಕ್ಕೆ ಹಾಕಿ ನಿರ್ವಿಷಗೊಳಿಸುವ ಪ್ರಯತ್ನವನ್ನು ಮಾಡಬೇಕು; ಪ್ರತ್ಯೌಷಧ ನೀಡಿಕೆ, ವೈದ್ಯಕೀಯ ಚಿಕಿತ್ಸೋಪಚಾ- ರಾದಿಗಳಿಂದ, ಪ್ರಾಶನವಾದ ವಿಷದ ದುಷ್ಪರಿಣಾಮವಾಗಿ ದೇಹದಲ್ಲಿ ಉಂಟಾಗುವ ಬಾಧೆಗಳನ್ನು ಪರಿಹರಿಸಿ ವಿಷಮುಕ್ತಿಗೊಳಿಸಬೇಕು.

ಕ್ಷಿಪ್ರ ತಪಾಸಣೆ ಮತ್ತು ವಿಷನಿಶ್ಚಯ :

ವಿಷಪ್ರಯೋಗಕ್ಕೆ ತುತ್ತಾದ ರೋಗಿಯನ್ನು ವಿಷದ ಪರಿಸರದಿಂದ ಬೇರ್ಪಡಿಸಿ ದೂರ ಸಾಗಿಸಬೇಕು. ಚೆನ್ನಾಗಿ ಗಾಳಿ ಬೆಳಕಿರುವ ಕೊಠಡಿಯಲ್ಲಿ ಮಲಗಿಸುವುದು ಅನುಕೂಲ. ರೋಗಿಯ ದೈಹಿಕ ಸ್ಥಿತಿಗತಿಯನ್ನು ಕೂಲಂಕಶವಾಗಿ ಪರೀಕ್ಷಿಸಿ ನೋಡ ಬೇಕು. ಮುಖ್ಯವಾಗಿ ಬಾಯಿ, ತುಟಿ, ಮೋರೆಯ ಚಹರೆ ಮತ್ತು ಕಣ್ಣುಬೊಂಬೆ ಗಳನ್ನು ಗಮನಿಸಬೇಕು. (ಪೊಟಾಸಿಯಂ ಪರಮಾಂಗನೇಟ್ ಅಥವಾ ಟಿಂಕ್ಚರ್ ಆಯೋಡಿನ್ ಮೊದಲಾದವುಗಳನ್ನು ಸೇವಿಸಿದ್ದಲ್ಲಿ ಬಾಯಿ–ತುಟಿಗಳಲ್ಲಿ ಅವುಗಳ ಬಣ್ಣ ಅಂಟಿರುತ್ತದೆ; ತೀಕ್ಷ್ಣವಾದ ಆಮ್ಲ ವಿಷವನ್ನು ಸೇವಿಸಿದ್ದಲ್ಲಿ ಬಾಯಲ್ಲಿ ಸುಟ್ಟ ಗಾಯ-ವ್ರಣ ಉಂಟಾಗಿರುತ್ತದೆ. ಕರ್ಪೂರ, ಗಂಧಕ, ಫಿನಾಯಿಲ್ ಮೊದಲಾದವು ಗಳ ಸೇವನೆಯಾಗಿದ್ದ ಪಕ್ಷದಲ್ಲಿ ಬಾಯಲ್ಲಿ ಆಯಾ ವಸ್ತುಗಳ ವಾಸನೆ ಇರುತ್ತದೆ. ಬಂಗಿ, ಅಫೀಮು ಸೇವಿಸಿದ ರೋಗಿಯ ಕಣ್ಣು ಬೊಂಬೆ ಕಿರಿದಾಗಿದ್ದರೆ-ಎಟ್ರೋಪಿನ್,

ಧತ್ತೂರದ ಬೀಜಗಳನ್ನು ಸೇವಿಸಿದಾಗ ಕಣ್ಣುಬೊಂಬೆ ಅರಳಿರುತ್ತದೆ ಇತ್ಯಾದಿ.)ಉಸಿರಾಟ, ನಾಡಿ, ರಕ್ತದ ಒತ್ತಡ, ಚರ್ಮದ ಬಣ್ಣ, ಸ್ಪರ್ಶಜ್ಞಾನಗಳನ್ನೂ ಅದಿರುವಾಯು, ಕಂಪನ, ಆಘಾತ, ವಾಂತಿ–ಭೇದಿ,ಮೂತ್ರವಿಕಾರ, ತೂಕಡಿಕೆ, ಬಡಬಡಿಸುವದು;ಸುಷುಪ್ತಿ ಮೊದಲಾದ ವಿಕಾರಗಳಿವೆಯೋ ಎಂಬುದನ್ನು ಕೂಡಾ ಗಮನಿಸಬೇಕು.

ಅನಂತರ ರೋಗಿಯು ಸೇವಿಸಿದ ವಿಷವು ಯಾವುದೆಂಬುದನ್ನು ಕಂಡುಕೊಳ್ಳಲು ಪ್ರಯತ್ನಿಸಬೇಕು. ಸುತ್ತಮುತ್ತ ಚೆಲ್ಲಿರಬಹುದಾದ ಅಥವಾ ಸೀಸೆಯ ತಳದಲ್ಲಿ ಉಳಿದಿರಬಹುದಾದ ವಿಷಾಂಶವನ್ನು ಪರೀಕ್ಷಿಸಬೇಕು.ಬಾಟಲಿಯ ಮೇಲಿನ ಲೇಬಲ್, ವಿಕ್ರಯದ ಬಿಲ್, ಡಾಕ್ಟರರ ಪ್ರಿಸ್ಕ್ರಿಪ್‌ಶನ್ ಮೊದಲಾದ ವಿಶೇಷ ಮಾಹಿತಿ-ಗಳನ್ನು ಸಂಗ್ರಹಿಸಬೇಕು. ರೋಗಿಯ ಮನೆಯವರನ್ನು, ಅಕ್ಕಪಕ್ಕದವರನ್ನು, ಗೆಳೆಯರು ಮತ್ತು ಆಳುಕಾಳುಗಳು ಮೊದಲಾದವರನ್ನು ಪ್ರಶ್ನಿಸಿ ಆದಷ್ಟು ಮಟ್ಟಿಗೆ ವಿಷಯ ಸಂಗ್ರಹಿಸಬೇಕು. ರೋಗಿಯು ಸೇವಿಸಿದ ವಿಷ, ವಿಷದ ಪ್ರಮಾಣ ಮತ್ತು ಕಾಲಾವಧಿ ಮೊದಲಾದ ವಿವರಗಳನ್ನು ತಿಳಿದುಕೊಳ್ಳುವುದು ಅತ್ಯಗತ್ಯ. ಪ್ರಾಣಾಪಾಯದ ಪ್ರಮಾಣಕ್ಕಿಂತ ಕಡಿಮೆ ಪ್ರಮಾಣದಲ್ಲಿ ಸೇವಿಸಿದ ವಿಷದಿಂದ ಮರಣ ಭಯವಿಲ್ಲ. ಅಷ್ಟು ಮಾತ್ರವಲ್ಲದೆ ಸೇವನೆಯಾದ ವಿಷದಲ್ಲಿ ಎಷ್ಟು ಅಂಶ ದೇಹದಲ್ಲಿ ಉಳಿದಿದೆ ಎಂಬುದು ಚಿಕಿತ್ಸಾದೃಷ್ಟಿಯಿಂದ ಗಮನಾರ್ಹ.

ಟಿಪ್ಪಣಿ :

ಇಲ್ಲಿ ಇನ್ನೂ ಒಂದು ಮಾತನ್ನು ಜ್ಞಾಪಕದಲ್ಲಿಟ್ಟಿರಬೇಕು: ರೋಗಿಯಲ್ಲಿ ಕಾಣಿಸುವ ವಿಷಲಕ್ಷಣಗಳು ಮತ್ತು ಉಪದ್ರವಗಳು ಪುಸ್ತಕದಲ್ಲಿ ವಿವರಿಸಿದ ರೀತಿಯಲ್ಲಿ ಯಥಾವತ್ತಾಗಿ ಕಾಣಿಸದೆ ಭಿನ್ನವಾಗಿರಬಹುದು. ಒಂದಕ್ಕಿಂತ ಹೆಚ್ಚು ವಿಷ ಸೇವಿಸಲ್ಪಟ್ಟಿದ್ದಲ್ಲಿ ಮಿಶ್ರ ವಿಷ ಲಕ್ಷಣಗಳು ಅತ್ಯಂತ ವಿಚಿತ್ರವಾಗಿ ಉಂಟಾಗಿರಬಹುದು. ಹಸಿದ ಹೊಟ್ಟೆಯಲ್ಲಿ ವಿಷ ಸೇವನೆಯಾದರೆ ಕಾಣಿಸುವಷ್ಟು ತೀಕ್ಷ್ಣ ಪ್ರತಿಕ್ರಿಯೆ, ಹೊಟ್ಟೆತುಂಬಾ ಉಂಡನಂತರ ವಿಷಸೇವನೆಯಾದ ರೋಗಿಯಲ್ಲಿ ಕಂಡುಬರಲಿಕ್ಕಿಲ್ಲ. ಅಂಜುಬುರುಕರು, ಆಯಾಸಗೊಂಡು ಬಳಲಿದವರು, ದುರ್ಬಲರು, ವಯೋವೃದ್ಧರು, ಬೇರೆ ಬೇರೆ ರೋಗಗಳಿಂದ ನರಳುವವರು ಮತ್ತು ನಾಜೂಕು ಪ್ರಕೃತಿಯ ಜನರು ವಿಷಪ್ರಯೋಗಕ್ಕೆ ತುತ್ತಾದಾಗ ವಿರೂಪಗೊಂಡ ಅವಲಕ್ಷಣಗಳನ್ನು ಪ್ರದರ್ಶಿಸುತ್ತಾರೆ ಎಂಬುದನ್ನು ಮರೆಯಬಾರದು.

ಮುಂಜಾಗ್ರತೆ ಲೇಸು :


ತುಸು ಅಜಾಗ್ರತೆಯಿಂದಾಗಿ ಪ್ರತಿನಿತ್ಯ ಅದೆಷ್ಟು ವಿಷಪ್ರಾಶನ ಪ್ರಸಂಗಗಳು ಸಂಭವಿಸುತ್ತವೆಯೋ ಲೆಕ್ಕವಿಲ್ಲ. ವಿಷ ವಸ್ತುಗಳು ಮಕ್ಕಳ ಕೈಗೆ ಸಿಗದಂತೆ ತೆಗೆದಿ

ರಿಸದೆ ಅಸಡ್ಡೆಯಿಂದ ಸಿಕ್ಕಲ್ಲಿ ಚೆಲ್ಲಿಬಿಟ್ಟರೆ ಮಕ್ಕಳು ಅದನ್ನು ತಿಂಡಿ ತಿನಿಸೆಂದೋ ಅಥವಾ ಬಾಲ್ಯ ಸಹಜ ಕುತೂಹಲದಿಂದಲೋ ಎತ್ತಿ ಬಾಯಿ ಗಿರಿಸಿಕೊಳ್ಳುತ್ತಾರೆ. ಆಡಾಡುತ್ತ ಗೇರುಕಾಯಿಯನ್ನೋ, ಹರಳು (ಔಡಲ) ಬೀಜವನ್ನೋ ನುಂಗುವ ಮಕ್ಕಳಿಗೆ ಅವು ವಿಷವಸ್ತುಗಳೆಂಬ ಕಲ್ಪನೆಯೇ ಇರುವುದಿಲ್ಲ. ಎಂದೋ ತಂದಿರಿಸಿದ್ದ ಇಲಿಪಾಷಾಣದ ಪುಡಿ ತುಸುವೇ ಉಳಿದಿರುವುದರಿಂದ ಇನ್ನು ಕೆಲಸಕ್ಕೆ ಬರುವುದಿಲ್ಲವೆಂದು ಮೂಲೆಗೆಸೆದುದನ್ನು ಕುತೂಹಲದಿಂದ ಮಕ್ಕಳು ರುಚಿನೋಡಿ ಕಠಿಣ ಪ್ರಸಂಗಗಳನ್ನು ಮೈಮೇಲೆ ತಂದುಕೊಂಡ ಸಂದರ್ಭಗಳು ಪ್ರತಿನಿತ್ಯವೆಂಬಂತೆ ಪುನರಾವರ್ತನೆಯಾಗುತ್ತವೆ. ಬಾಗಿಲು ಕಿಟಕಿಗಳಿಗೆ ಬಳಿದು ಅಲ್ಲಿಯೇ ಬಿಟ್ಟುಹೋದ ವಾರ್ನಿಸ್ ಡಬ್ಬಿಯಿಂದ ಒಂದಿಷ್ಟು ಕುಡಿಯಲೆಳಸಿದರೆ ಆ ತಪ್ಪು ಮಕ್ಕಳದೆನ್ನಲಾದೀತೇ? ಹೆಚ್ಚಿನವುಟ್ಟಿಗೆ ಮಕ್ಕಳಲ್ಲಿ ವಿಷಪ್ರಾಶನಗಳು ಅಜಾಗ್ರತೆಯಿಂದ ಇರಿಸಿದ, ಅನಾಯಾಸವಾಗಿ ದೊರಕುವ ವಿಷದ್ರವ್ಯಗಳಿಂದಲೇ ಸಂಭವಿಸುತ್ತವೆ.

ಔಷಧಿ ಸೀಸೆಗಳನ್ನು ನಸುಕತ್ತಲ ಕೋಣೆಯ ಗೂಡಿನಲ್ಲಿ ಇರಿಸುವ ಪದ್ಧತಿ ಇದೆ. ಮಂದಬೆಳಕಿನಲ್ಲಿ ಸರಿಯಾಗಿ ನೋಡದೆ ಕೈತಪ್ಪಿ ವಿಷದ ಸೀಸೆಯನ್ನು ಬಗ್ಗಿಸಿಕೊಂಡರೆ ಎಂತಹ ಅನಾಹುತವಾಗಲಿಕ್ಕಿಲ್ಲ? ಈ ಬಗೆಯ ಅನಾಹುತಗಳನ್ನು ತಪ್ಪಿಸಲು ಹೆಸರು ಬರೆದ ಚೀಟಿಯನ್ನು ಪ್ರತಿಯೊಂದು ಬಾಟಲಿಗೂ ಅಂಟಿಸಬೇಕು. ವಿಷವನ್ನೂ, ಔಷಧಿಯನ್ನೂ ಪ್ರತ್ಯೇಕ ಬೀರುವಿನಲ್ಲಿ ಅಥವಾ ಪೆಟ್ಟಿಗೆಯಲ್ಲಿ ಇರಿಸಿ ಬೀಗಹಾಕಿಡುವುದು ಸೂಕ್ತವಾದ ಕ್ರಮವಾಗಿದೆ. ಆಹಾರಪದಾರ್ಥ, ತಿಂಡಿ ತಿನಿಸು ಮತ್ತು ಪಾನೀಯಗಳನ್ನು ಇಡುವಲ್ಲಿ ವಿಷವಸ್ತುಗಳನ್ನು ಅಪ್ಪಿತಪ್ಪಿಯೂ ಇರಿಸ ಬಾರದು. ಔಷಧಿಯ ಖಾಲಿ ಸೀಸೆಯನ್ನೂ, ಪೊಟ್ಟಣ-ಡಬ್ಬಗಳನ್ನೂ ಅಲ್ಲಲ್ಲೇ ಎಸೆದು ಬಿಡಬಾರದು. ಅವು ಉಪಯೋಗಕ್ಕೆ ಬರುವ ಪದಾರ್ಥಗಳಾಗಿದ್ದರೆ ತೊಳೆದ ತೆಗೆದಿರಿಸಬೇಕು- ಇಲ್ಲವಾದರೆ ನಾಶಪಡಿಸಬೇಕು; ಕೊನೆಯಪಕ್ಷ ಗೋಣಿಚೀಲ ದಲ್ಲಿಯೋ ದೇವದಾರು ಪೆಟ್ಟಿಗೆಯಲ್ಲಿಯೋ ತುಂಬಿಸಿ ಎತ್ತರದಲ್ಲಿ ಇರಿಸಬೇಕು.

ಮಕ್ಕಳಿಗೆ ಔಷಧಿ ಕುಡಿಸುವಾಗ ಇದು ಚಾಕಲೇಟು, ಪೆಪ್ಪರ್‌ಮೆಂಟು, ಜೇನುತುಪ್ಪ ಎಂದು ಮುಂತಾಗಿ ಹೇಳಬಾರದು; ಸವಿಮಾತಿನಿಂದ ರಮಿಸಿ ಕುಡಿಸ ಬೇಕು—ಇಲ್ಲವಾದರೆ ಸಿಹಿ ಗೋಲಿಯನ್ನು **(Sugar coated Tablet)** ನ್ನು ತಿಂದ ಮಗುವು ನಿಮ್ಮ ಕಣ್ಣುಮರೆಯಲ್ಲಿ ಸೀಸೆಯ ಗೋಲಿಗಳನ್ನೆಲ್ಲ ಒಂದೇಬಾರಿಗೆ ಬಾಯಲ್ಲಿ ತುರುಕಿಕೊಳ್ಳಬಹುದು. ಪ್ರಮಾಣ ಮೀರಿ ಸೇವಿಸಿದ ಔಷಧಕ್ಕಿಂತ ಮಿಗಿಲಾದ ವಿಷವು ಬೇರೆ ಯಾವುದಿದೆ?

ಕೊನೆಯಲ್ಲಿ ಇಷ್ಟು ಹೇಳಬಹುದು. ವಿಷಚಿಕಿತ್ಸೆಯ ಮೂಲಸೂತ್ರಗಳಲ್ಲಿ ಅತೀ ಪ್ರಾಮುಖ್ಯವಾದುದು ಮುಂಜಾಗ್ರತೆ



ದೇಹದ ಮುಂಡಭಾಗ

ವಮನಾದಿ ಚಿಕಿತ್ಸೆಗಳು :

ಬಾಯಿಯ ಮೂಲಕ ದೇಹವನ್ನು ಪ್ರವೇಶಿಸಿದ ವಿಷವು ಅಂಗಾಂಗಗಳನ್ನು ತಲುಪುವ ಮುನ್ನವೇ ವಿಷದ ವಿರುದ್ಧ ರೋಗಿಯ ಜೀವರಕ್ಷಣೆಯ ಪ್ರಯತ್ನವನ್ನು ಪ್ರಥಮ ಚಿಕಿತ್ಸೆಯ ರೂಪದಲ್ಲಿ, ವೈದ್ಯ ಚಿಕಿತ್ಸೆಯ ಮಟ್ಟದಲ್ಲಿ (ತಜ್ಞಚಿಕಿತ್ಸೆ) ಅಥವಾ ಶುಶ್ರೂಷೆಯ ವಿಧಾನದಲ್ಲಿ ಮಾಡಬೇಕು. ವಿಷಪ್ರಯೋಗವಾದ ಮೇಲೆ ದೇಹದಲ್ಲಿ ವಿಷ ಪ್ರಸಾರವಾಗುವುದಕ್ಕೆ ಮುನ್ನ ಇರುವ ಅಲ್ಪಾವಧಿಯಲ್ಲಿಯೇ ಈ ಪ್ರಯತ್ನಗಳನ್ನು ನಡೆಸಬೇಕು. ಕ್ಷಿಪ್ರವಾಗಿ ಪ್ರಾರಂಭಿಸಿದಷ್ಟೂ ಸತ್ಪರಿಣಾಮ ದೊರಕುತ್ತದೆ.


ವಿಷಪ್ರಾಶನವಾದ ರೋಗಿಯ ಮೈಕೈಗಳಲ್ಲಿ ತಗಲಿರುವ ಅಥವಾ ಬಾಯಿಯಲ್ಲಿರುವ ವಿಷವನ್ನು ಹೊರಚೆಲ್ಲಿ ನೀರಿನಿಂದ ತೊಳೆಯಬೇಕು. ಇದು ಮೊದಲ ಕೆಲಸ. ಅನ್ನಕೋಶವನ್ನು ಸೇರಿದ ವಿಷವು ಕರುಳಿನಲ್ಲಿ ಸಂಚಾರ ಹೊರಡುವದಕ್ಕೆ ತೊಡಗದಂತೆ ತಡೆಗಟ್ಟಬೇಕು; ಯಾತ್ರೆ ಮುಂದುವರಿಯುವುದಕ್ಕೆ ಮುನ್ನವೇ ವಿಷದ ರೆಕ್ಕೆ-ಪುಕ್ಕಗಳನ್ನು ಕತ್ತರಿಸಿ ಶಕ್ತಿಗುಂದಿಸಬೇಕಲ್ಲದೆ ಹೆಜ್ಜೆ ಹೆಜ್ಜೆಗೂ ಅಡ್ಡಿ ಆತಂಕಗಳನ್ನೊಡ್ಡಿ ಪ್ರಯಾಣವು ನಿರರ್ಥಕವಾಗುವಂತೆ ಮಾಡಬೇಕು; ಮತ್ತು ವಿಷವನ್ನು ನಾನಾ ವಿಧಾನಗಳಿಂದ ದೇಹದಿಂದ ಹೊರಕ್ಕೆ ಹಾಕಲು ಉಪಕ್ರಮಿಸಬೇಕು.

ಲಂಬನ ಚಿಕಿತ್ಸೆ:


ಸೇವಿಸಿದ ವಿಷವು ಸುಮಾರು 2 ತಾಸುಗಳಷ್ಟು ಹೊತ್ತು ಅನ್ನಕೋಶ (ಆಮಾಶಯ)ದಲ್ಲಿದ್ದು ,ಅನಂತರ ಸಣ್ಣ ಕರುಳಿನತ್ತ ಧಾವಿಸುತ್ತದೆ. ಅನ್ನಕೋಶದಿಂದ ನೇರವಾಗಿ ದೇಹವು ಹೀರಿಕೊಳ್ಳುವ ವಿಷದ ಅಂಶವು ಅತ್ಯಲ್ಪ. ಆದರೆ ಅದೇ ವಿಷವು ಒಮ್ಮೆ ಸಣ್ಣಕರಳನ್ನು ಸೇರಿಕೊಂಡಿತೆಂದರೆ ಮುಗಿಯಿತು. ಗಂಭೀರ ಅಪಾಯ ಪರಿಸ್ಥಿತಿ ನಿರ್ಮಾಣವಾಗಿ ಬಿಡುತ್ತದೆ. ಆದ್ದರಿಂದ ಅನ್ನಕೋಶದಲ್ಲಿಯೇ ವಿಷವನ್ನು ತಡೆ ಹಿಡಿದು, ಆದರ ತೀಕ್ಷ್ಣತೆಯುನ್ನು ಕುಗ್ಗಿಸಿ, ದೇಹಾಪಾಯದ ಪ್ರಮಾಣವನ್ನು ತಗ್ಗಿಸುವ ವಿಷಲಂಬನ ಮಾಡಬೇಕು.

ಸಲಕರಣೆಗಳು ವಿಧಾನ :

ರೋಗಿಗೆ ಒಂದು ಲೋಟ ಹಾಲನ್ನು (ಸುಮಾರು 120-ಮಿಲಿ ಲೀಟರ್) ಅಥವಾ 4–6 ಕೋಳಿ ತತ್ತಿಗಳ ಬಿಳಿಯ ಲೋಳೆಯುನ್ನು ಕುಡಿಸಬೇಕು; ಅಥವಾ



ಹೊಟ್ಟೆ ತೊಳೆಯುಲು ಉಪಯೋಗಿಸುವ ರಬ್ಬರ ನಲಿಕೆ



ಮಕ್ಕಳ ಮೂಗಿನ ಮೂಲಕ ಹಾಕುವ ರಬ್ಬರ ನಲಿಕೆ

ಸಬ್ಬಕ್ಕಿಯ (ಸಾಬೂದಾಣಿಯ) ಪಾಯಸ, ಅನ್ನದ ಗಂಜಿ ಇಂಥ ಯಾವುದಾದರೊಂದು ಪಿಚ್ಚಿಲದ್ರವ್ಯವನ್ನು ಕೊಡಬಹುದು. ಬೇಯಿಸಿದ ನಾಲ್ಕಾರು ಬಟಾಟೆಗಳನ್ನು ನುಣ್ಣಗೆ ಅರೆದು ನೀರಲ್ಲಿ ಕಿವುಚಿ ಕುಡಿಸಬಹುದು; ಅಥವಾ ಅರಳುಹಿಟ್ಟಿನ ರಾಡಿಯನ್ನಾದರೂ ಕೊಡಬಹುದು. ಸಂದರ್ಭಾನುಸಾರ ಎಣ್ಣೆ, ಬೆಣ್ಣೆ, ತುಪ್ಪಗಳಂತಹ ಜಿಡ್ಡಿನ ಪದಾರ್ಥಗಳನ್ನು ಉಪಯೋಗಿಸಬಹುದು. ಇವುಗಳಲ್ಲಿ ಒಂದನ್ನು ತಕ್ಷಣ ಸೇವಿಸುವುದರಿಂದ ವಿಷದ ಉಗ್ರತೆ ತೀಕ್ಷ್ಣತೆಗಳು ಮಂದಸ್ವರೂಪಕ್ಕೆ ತಿರುಗುವವಲ್ಲದೆ, ಅನ್ನಕೋಶದ ಉರಿ–ಊತಗಳೂ ಉಪಶಮನಗೊಂಡು, ಕೆರಳಿದ ಅನ್ನಕೋಶವು ತಂಪಾಗಲು ಸಹಾಯವಾಗುವುದು. ಮೇಲೆ ಹೇಳಿದ **ಯಾವುದೇ ದ್ರವ್ಯವೂ ಸಿಗದಿದ್ದಾಗ** ಕಾಲ ವಿಳಂಬ ಮಾಡದೇ **ಎರಡು ಲೋಟ ತಣ್ಣೀರನ್ನು ಕುಡಿಸಬೇಕು.** ಔಷಧ ದ್ರವ್ಯಗಳ ಪ್ರತಿಕ್ರಿಯೆಗಿಂತ ನೀರಿನ ಪರಿಣಾಮವು ತುಸು ಕಮ್ಮಿಯಾದರೂ ಅನಿವಾರ್ಯ ಸಂದರ್ಭದಲ್ಲಿ ನೀರನ್ನಾದರೂ ಕುಡಿಸಿ ವಿಷಲಂಬನದ ಪ್ರಯತ್ನವನ್ನು ಕೈಗೊಳ್ಳಬೇಕು.

ಇಲ್ಲಿ ಒಂದು ಮಾತನ್ನು ಸದಾ ನೆನಪಿನಲ್ಲಿ ಇರಿಸಿಕೊಳ್ಳಬೇಕು "ಅತೀ ಸರ್ವತ್ರ ವರ್ಜಯೇತ್" ಕ್ಷಿಪ್ರಗುಣ ಪಡೆಯಬೇಕೆನ್ನುವ ಅತಿಯಾಸೆಯಿಂದ ಅವಸರಿಸಿ ಮಿತಿ ಮೀರಿದ ಪ್ರಮಾಣದಲ್ಲಿ ಈ ದ್ರವ್ಯಗಳನ್ನು ನೀಡಬಾರದು. ಅನ್ನಕೋಶದಲ್ಲಿ ಹಿಡಿಸಲಾರದಷ್ಟು ಅದಿಕ ಪ್ರಮಾಣದ ದ್ರವವನ್ನು ಸೇವಿಸಿದರೆ ಅನ್ನಕೋಶವು ತನ್ನಲ್ಲಿ ಸಂಚಿತವಾದ ವಿಷ ವಸ್ತುಗಳನ್ನು ಮುಂದೆ ತಳ್ಳುತ್ತಲೇ ಕರುಳಿನತ್ತ ಅವು ಸಾಗ ತೊಡಗುತ್ತವೆ. ಹಾಗೂ ಮುಂದಿನ ಪರಿಣಾಮವು ತೀರ ಕ್ಲೇಶದಾಯಕವಾಗಿ ಬಿಡುತ್ತದೆ.

ಪ್ರತ್ಯೌಷಧ :

ವಿಷದ ಶಕ್ತಿಯನ್ನು ಕುಂದಿಸಿ ದುಷ್ಪರಿಣಾಮಗಳು ಉಂಟಾಗದಂತೆ ತಡೆಗಟ್ಟಲು ರೋಗಿಗಳಿಗೆ ಪ್ರತ್ಯೌಷಧಗಳನ್ನು ಕುಡಿಸಬೇಕು. ವಿಷದ ದುರ್ಗುಣಗಳನ್ನು ಮರ್ದಿಸುವ ಪ್ರತ್ಯೌಷಧಗಳನ್ನು ಎಷ್ಟು ತೀವ್ರ ನೀಡುವದು ಸಾಧ್ಯವಾದರೆ ಅಷ್ಟು ಅಧಿಕ ಫಲ ದೊರೆಯುತ್ತದೆ. ಸೇವಿಸಿದ ವಿಷವು ಯಾವ ವರ್ಗಕ್ಕೆ ಸೇರಿದ್ದೆಂಬುದನ್ನು ತಿಳಿದುಕೊಂಡು ಅದಕ್ಕೆ ಸೂಕ್ತವಾದ ಪ್ರತ್ಯೌಷಧ (ಪಿರಿಮದ್ದು, ಪ್ರತಿವಿಷವೆಂದೂ ಹೇಳುತ್ತಾರೆ) ವನ್ನು ನೀಡಬೇಕು. ಕೆಲವು ಪ್ರತ್ಯೌಷಧಗಳು ಸೂಜಿಮದ್ದಿನ ರೂಪದಲ್ಲಿಯೂ ಸಿಗುತ್ತವೆ. ಕೆಲವೊಂದು ವಿಷವಸ್ತುಗಳಿಗೆ ನಿರ್ದಿಷ್ಟ ಪ್ರತ್ಯಾಷಧಗಳಿಲ್ಲ. ಕೆಲವೊಮ್ಮೆ ಸೇವನೆಯಾದ ವಿಷವು ಇಂತಹದೇ ಎಂದು ನಿಖರವಾಗಿ ತಿಳಿಯದಿರ

ಬಹುದು. ಇಂತಹ ಸಂದರ್ಭಗಳಲ್ಲಿ ಸರ್ವಸಾಮಾನ್ಯ ಪ್ರತ್ಯೌಷಧವನ್ನು ಕೊಡ ಬೇಕು. ಒಂದು ಕಪ್ (4 ಔಂಸ ಅಥವಾ ಸುಮಾರು 120 ಮಿಲಿ ಲೀಟರ) ಸ್ಟ್ರಾಂಗ್ ಚಹಾದಲ್ಲಿ 4 ಔಂಸ ಮಿಲ್ಕ ಆಫ್ ಮೆಗ್ನೇಸಿಯಾ ಹಾಗೂ ಬ್ರೆಡ್ ಸುಟ್ಟ ಕರಿ 8 ಔಂಸ ಸೇರಿಸಿ ಕಲಸಿ ಸರ್ವಮಾನ್ಯ ಪ್ರತ್ಯೌಷಧವನ್ನು ಸಿದ್ಧಪಡಿಸಬಹುದು. ನಿರ್ದಿಷ್ಟ ಪ್ರತ್ಯೌಷಧಗಳು ಸಿಕ್ಕಿದಾಗ ಕಾಲ ವಿಳಂಬ ಮಾಡದೆ ರೋಗಿಗಳಿಗೆ ನೀಡಬೇಕು.

ವಮನ ಚಿಕಿತ್ಸೆ :

ದೇಹಕ್ಕೆ ಅಹಿತಕರವಾದ ವಿಷವು ಬಾಯಿಗೂ ಅಹಿತಕರ ವಾಗಿಯೇ ಇರುತ್ತ ದೆಂದೂ ಹೇಳಬಹುದು. ಹೆಚ್ಚಿನ ವಿಷದ್ರವ್ಯಗಳು ಅರೋಚಕವೂ ಸ್ವಾದಿಷ್ಟ ರಹಿತವೂ ಆಗಿದ್ದು ಕಹಿ ಅಥವಾ ಒಗರು ರುಚಿಯಿಂದಲೂ ಉಗ್ರವಾಸನೆ ಮತ್ತು ದುರ್ನಾತದಿಂದಲೂ ಕೂಡಿದ್ದು ನಾಲಿಗೆಗೆ ಒಗ್ಗುವುದಿಲ್ಲ. ಅವನ್ನು ಸ್ವೀಕರಿಸಬೇಕಾಗಿ ಬಂದ ವಾಕರಿಕೆ — ವಾಂತಿಯ ಮೂಲಕ ಹೊಟ್ಟೆಯು (ಅನ್ನ ಕೋಶವು) ತನ್ನ ಹಿತಕ್ಕೆ ಕಂಟಕಪ್ರಾಯವಾಗಿ ಬಂದು ಸೇರಿಕೊಂಡ ಆಗಂತುಕ ದ್ರವ್ಯವನ್ನು ಹೊರಕ್ಕೆ ತಳ್ಳಲು ಪ್ರಯತ್ನಿಸುತ್ತದೆ. ವಿವಿಧೋಪಾಯಗಳಿಂದ ಈ ವಿಷ ದ್ರವ್ಯಗಳನ್ನು ಕೃತಕವಾಗಿ ಕಾರಿಕೊಳ್ಳುವಂತೆ ಮಾಡಿ ವಿಷವನ್ನು ಕ್ಷಿಪ್ರವಾಗಿ ಹೊರಕ್ಕೆ ಹಾಕುವಂತೆ ಮಾಡುವ ವಿಧಾನಕ್ಕೆ **ವಮನ ಚಿಕಿತ್ಸೆ** ಎಂದು ಹೆಸರು. ವಿಷಪ್ರಾಶನವಾದ ಒಂದೆರಡು ತಾಸುಗಳೊಳಗಾಗಿ ವಮನ ಚಿಕಿತ್ಸಾ ವಿಧಾನದಿಂದ, ಅನ್ನಕೋಶವನ್ನು ಸೇರಿದ ವಿಷವನ್ನು ಹೊರಕ್ಕೆ ಹಾಕುವುದು ಸಾಧ್ಯವಾದರೆ ತೃಪ್ತಿಕರವಾದ ಪರಿಣಾಮವು ದೊರಕುತ್ತದೆ.

ಸಲಕರಣೆಗಳು :

ವಮನ ಮಾಡಿಸಲು ಉಪ್ಪುನೀರು, ಸಾಸಿವೆ ಕಾಳಿನ ಪುಡಿ ಬೆರೆತ ನಸು ಬೆಚ್ಚ ಗಿನ ನೀರು, ಮಗ್ಗಾರೆಕಾಯಿ ಅಥವಾ ಲೋಧ್ರ ಚಕ್ಕೆಯ ಕಷಾಯಗಳಲ್ಲೊಂದು ಉಪಯುಕ್ತವಾಗಿದೆ. ಕಹಿ ಸೋರೆ ಅಥವಾ ಹಾಗಲಕಾಯಿಯ ರಸವನ್ನು ಸಹ ಬಳಸಬಹುದು. ಟಿಂಕ್ಚರ್ ಅಯೋಡಿನ್ ಅತಿ ದುರ್ಬಲ ದ್ರಾವಣ, ಇಪೆಕಾಕಿನ ಚಿಕ್ಕೆಯ ಕಷಾಯ ಅಥವಾ ಅರ್ಕಸಾರಗಳಲ್ಲಿ ಒಂದನ್ನು ಕೊಡುವುದೂ ಉಂಟು. ವೈದ್ಯರು 'ಅಪಾಮಾರ್ಫಿನ್' ಸೂಜಿಮದ್ದು ಕೊಡುತ್ತಾರೆ.

ಇವು ಯಾವುವೂ ದೊರಕದಿದ್ದಲ್ಲಿ ರೋಗಿಗೆ ನಸುಬೆಚ್ಚಗಿನ ನೀರನ್ನು ಕುಡಿಸಿ ಬಾಯಿ ತೆರೆದು ಗಂಟಲೊಳಗೆ ಬೆರಳು ತೂರಿ ಅಲ್ಲಾಡಿಸುವಂತೆ ಹೇಳಿ ವಾಂತಿ ಮಾಡಿಸಬಹುದು.

ವಮನ ಸಿದ್ಧತೆ-ವಿಧಾನ:

ವಾಂತಿ ಮಾಡಿಸಬೇಕಾದ ರೋಗಿಯನ್ನು ನೆಲದ ಮೇಲೆ ಅಥವಾ ಒಂದು ಕಾಲು ಮಣೆಯ ಮೇಲೆ ಇಲ್ಲವೇ ತುಸು ಎತ್ತರವಾದ ಕಟ್ಟೆಯ ಮೇಲೆ ಕುಳ್ಳಿರಿಸ ಬೇಕು. ರೋಗಿಯ ಭುಜಗಳನ್ನು ಇನ್ನೊಬ್ಬರು ಆಧರಿಸಿ ಹಿಡಿದುಕೊಂಡಿರುವುದು ಒಳ್ಳೆಯದು. ವಾಂತಿಯನ್ನು ಸಂಗ್ರಹಿಸಲು ರೋಗಿಯ ಎದುರಲ್ಲಿ ಬಟ್ಟಲು ಬೋಗುಣಿ ಅಥವಾ ಬಕೆಟ್ಟಿನಂತಹ ಒಂದು ಪಾತ್ರೆಯನ್ನು ಸಿದ್ಧವಿಟ್ಟಿರಬೇಕು. ಅನಂತರ ಔಷಧ ಕುಡಿಸಿ ವಾಂತಿ ಮಾಡಿಕೊಳ್ಳುವಂತೆ ರೋಗಿಯನ್ನು ಪ್ರೇರೇಪಿಸ ಬೇಕು.

ಒಂದು ಲೋಟ ಉಗುರು ಬೆಚ್ಚಗಿನ ನೀರಿಗೆ ನಾಲ್ಕು ಚಾಚಮಚೆಯಷ್ಟು ಔಷಧ ಸೇರಿಸಿ ಕಲಗಿಸಿ ಕುಡಿಸಬೇಕು; ಅಥವಾ ಹಿಂದೆ ಹೇಳಿದ ಯಾವುದಾದರೊಂದು ಔಷಧಿ ಸೇವನೆ ಮಾಡಿಸಬೇಕು. ನಾಲ್ಕೈದು ಬಾರಿ ಅಥವಾ ಅದಕ್ಕಿಂತಲೂ ಹೆಚ್ಚು ಸಲ ವಾಂತಿಯಾದ ನಂತರ ವಾಂತಿಯಲ್ಲಿ ಕುಡಿಸಿದ ದ್ರವ್ಯವು ಮಾತ್ರವೇ ಹಿಂದೆಬರುವು ದಕ್ಕೆ ತೊಡಗಿದ್ದಾಗ ಉಪಕ್ರಮವನ್ನು ನಿಲ್ಲಿಸಬಹುದು. ಆತ್ಮಹತ್ಯೆ ಅಥವಾ ಕೊಲೆಯ ಉದ್ದೇಶದಿಂದ ವಿಷಪ್ರಯೋಗವಾದ ಸಂದೇಹ ಇದ್ದಾಗ ಮೊದಲು ಬರಿಯ ಬಿಸಿನೀರನ್ನು ಕುಡಿಸಿ ವಾಂತಿಮಾಡಿಸಿ ಅದನ್ನು ಒಂದು ಗಾಜಿನ ಪಾತ್ರೆಯಲ್ಲಿ ಅಥವಾ ನಳಿಕೆಯಲ್ಲಿ ತೆಗೆದಿರಿಸಿ ರಾಸಾಯನಿಕ ವಿಶ್ಲೇಷಣೆಗಾಗಿ ಕಳುಹಿಸಿಕೊಡುವ ವ್ಯವಸ್ಥೆಯನ್ನು ಮಾಡಬೇಕು; ಹಾಗೂ ಪೋಲಿಸರಿಗೆ ಈ ಬಗ್ಗೆ ಸುದ್ದಿಯನ್ನು ಮುಟ್ಟಿಸುವುದು ಸೂಕ್ತವಾಗಿದೆ.

ವಮನಕ್ಕೆ ಅನರ್ಹತೆ:

ಸಣ್ಣ ವಯಸ್ಸಿನ ಮಕ್ಕಳು ವಿಷವನ್ನು ಸೇವಿಸಿದರೆ ಅವರಿಗೆ ವಾಂತಿ ಮಾಡಿಸು ವುದು ಕಷ್ಟಸಾಧ್ಯವಾದ ಕೆಲಸ. ಏಕೆಂದರೆ ಅವರು ಕಾರಿಕೊಳ್ಳುವಾಗ ಆ ಉಚ್ಚಿಷ್ಟ ವನ್ನು ಪುತ್ತೆ ನುಂಗಿ ಬಿಡುವುದುಂಟು. ಹಾಗೆ ನುಂಗುವಾಗ ಅದು ಶ್ವಾಸಕೋಶ ವನ್ನು ಸೇರಿ ಇನ್ನೂ ಹೆಚ್ಚಿನ ಬಿಕ್ಕಟ್ಟನ್ನು ಉಂಟುಮಾಡುವ ಸಂಭವವಿರುತ್ತದೆ. ಗರ್ಭಿಣಿಯರು, ಅದಿರುವಾಯು ಬೇನೆಯಿಂದ ನರಳುವವರು, ಪ್ರಜ್ಞಾಹೀನಸ್ಥಿತಿ ಯಲ್ಲಿರುವ ರೋಗಿಗಳು, ಕ್ಷಯ ಮೊದಲಾದ ಶ್ವಾಸಕೋಶದ ನಾನಾ ಕಾಯಿಲೆಯಿಂದ ನರಳುವವರ ಹಾಗೂ ವಾಂತಿಕಾರಕ ಔಷಧಿಗಳನ್ನು ಸೇವಿಸಲು ಸಮ್ಮತಿಸದ ಅಸಹ ಕಾರಿ ಧೋರಣೆಯ ಮೊಂಡು ರೋಗಿಗಳೂ ವಮನ ಚಿಕಿತ್ಸೆಗೆ ಅನರ್ಹರು.

ಪೆಟ್ರೋಲ್, ಸೀಮೆಎಣ್ಣೆ, ಗಂಧಕಾಮ್ಲದಂತಹ ತೀಕ್ಷ್ಣ ದ್ರಾವಕಗಳನ್ನು ಸೇವಿಸಿದ ರೋಗಿಗಳಿಗೆ ವಮನಚಿಕಿತ್ಸೆ ನೀಡುವಾಗ ಹೆಚ್ಚು ಮುತುವರ್ಜಿ ವಹಿಸಬೇಕು. ತೀವ್ರವಾದ ಉರಿ, ಬಾವು ಮತ್ತು ವ್ರಣಗಳನ್ನು ಅನ್ನನಾಳದುದ್ದಕ್ಕೂ, ಅನ್ನಕೋಶದಲ್ಲಿಯೂ ಉಂಟುಮಾಡುವ ಈ ಬಗೆಯ ತೀಕ್ಷ್ಣ ವಿಷವನ್ನು ವಾಂತಿ ಮಾಡಿಸುವ ಪ್ರಯತ್ನದಲ್ಲಿ ಅವು ಅಕಸ್ಮಾತ್ ಹಾದಿತಪ್ಪಿ ಶ್ವಾಸನಾಳದ ಮೂಲಕ ಶ್ವಾಸಕೋಶವನ್ನು ಸೇರಿದಾಗ ಅಥವಾ ತಮ್ಮ ತೀಕ್ಷ್ಣತೆಯಿಂದ ಅನ್ನಕೋಶದಲ್ಲಿ ಬಿರುಕು, ವ್ರಣ ಮೊದಲಾದ ಉಪದ್ರವಗಳನ್ನು ಉಂಟುಮಾಡಿದ ಸಂದರ್ಭಗಳಲ್ಲಿ ವಮನ ಪ್ರಯತ್ನ ನಡೆಸುವಾಗ ರೋಗವು ತೀವ್ರ ರಕ್ತಸ್ರಾವ ಮೊದಲಾದ ಅನಿಷ್ಟ ಪರಿಣಾಮಗಳೂ ಅನಿರೀಕ್ಷಿತ ಅಪಾಯವೂ ಉಂಟಾಗಬಹುದು. ತಾತ್ಪರ್ಯವಿಷ್ಟೇ : ಅಂತಹ ಎಲ್ಲಾ ಸಂದರ್ಭಗಳಲ್ಲಿ ಹೆಚ್ಚಿನ ಎಚ್ಚರಿಕೆ ವಹಿಸಬೇಕು; ಹಾಗೂ ತಜ್ಞರ ಅಥವಾ ಅನುಭವಸ್ಥರ ಸಹಾಯವನ್ನು ತೆಗೆದುಕೊಳ್ಳಬೇಕು.

ಹೊಟ್ಟೆ ತೊಳೆಯುವುದು :

ವಿಷಪ್ರಾಶನವಾದ ರೋಗಿಗೆ ನೀಡುವ ಚಿಕಿತ್ಸೆಯಲ್ಲಿ ಮುಂದಿನ ಹೆಜ್ಜೆ 'ಆಮಾಶಯ ಪ್ರಕ್ಷಾಳನ ವಿಧಿ'. ಎಂದರೆ ಅನ್ನಕೋಶವನ್ನು ಸೇರಿದ ವಿಷವನ್ನು ತೊಳೆದು ಹೊರಕ್ಕೆ ಹಾಕುವದು. ಈ ಚಿಕಿತ್ಸೆಯನ್ನು ದವಾಖಾನೆಗಳಲ್ಲಿಯೇ ನಿರ್ವಹಿಸುವುದು ಉತ್ತಮ. (ಅನುಭವಸ್ಥರ ಸಹಾಯದಿಂದ ಮನೆಯಲ್ಲಿ ಕೂಡಾ ನಡೆಸಬಹುದು.) ವೈದ್ಯರ ಸಹಾಯವು ವಿಷಪ್ರಾಶನವಾದ ಒಂದೆರಡು ತಾಸುಗಳೊಳಗಾಗಿ ದೊರೆತು, **ಹೊಟ್ಟೆ ತೊಳೆಯುವುದು** ಸಾಧ್ಯವಾದರೆ ಉತ್ತಮ ಪ್ರತಿಫಲ ಸಿಗುತ್ತದೆ. ಈ ಚಿಕಿತ್ಸೆಯನ್ನು ಕೈಗೊಳ್ಳಲು ಹೆಚ್ಚೆಂದರೆ ನಾಲ್ಕು ತಾಸು ಮೀರಿರಬಾರದು.

ಆದರೆ ವಿಷಪ್ರಾಶನ ಮಾಡಿದ ರೋಗಿಯು ಪ್ರಜ್ಞಾಶೂನ್ಯನಾಗಿದ್ದರೆ ಅಥವಾ ಅಘಾತಕ್ಕೊಳಗಾಗಿದ್ದರೆ ಅಂತಹ ಸಂದರ್ಭಗಳಲ್ಲಿ ವಿಷದ ಸಂಚಾರವು ನಿಧಾನಿಸುವುದರಿಂದ ತಕ್ಕಷ್ಟು ಕಾಲ ವಿಳಂಬವಾದರೂ ಕೂಡಾ ಹೊಟ್ಟೆ ತೊಳೆಯುವುದರಿಂದ ಪ್ರಯೋಜನ ದೊರಕಬಹುದು. ಎಚ್ಚರ ತಪ್ಪಿದ, ಕ್ಷೋಬೆಗೊಳಗಾದ ಅಥವಾ ಆತಂಕದಿಂದ ನರಳುವ ರೋಗಿಗಳ ಮಟ್ಟಿಗೆ ಹೊಟ್ಟೆ ತೊಳೆಯುವ ಚಿಕಿತ್ಸೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ ಎನ್ನಬಹುದು.

ಸಾಧನ ಸಲಕರಣೆಗಳು :

ಹೊಟ್ಟೆತೊಳೆಯುವ ಚಿಕಿತ್ಸೆಗಾಗಿ ರಬ್ಬರ್ ನಳಿಕೆ, (20–30 ನಂಬರಿನವು), ಪಿಚಕಾರಿ, ಮೆಟಲೆ ಸಿರೇಂಜ್, ಬಾಯಿ ತೆರೆದಿರುವಂತೆ ಮಾಡುವ 'ಮೌತ್‌ಗಾಗ್,

ಮೃದುವಾದ ರಬ್ಬರ್ ನಳಿಕೆ, ಲಾಳಿಕೆ ಮೊದಲಾದ ಸಾಧನಗಳನ್ನು ಬಿಸಿನೀರಿನಲ್ಲಿ ಚೆನ್ನಾಗಿ ಕುದಿಸಿ ಶುದ್ಧಮಾಡಿ ಇಟ್ಟುಕೊಳ್ಳಬೇಕು. ರೋಗಿಯನ್ನು ಕುಳ್ಳಿರಿಸಲು ಕುರ್ಚಿ, ಮಲಗಿಸಲು ಬೆಂಚು ಅಥವಾ ಮಂಚ (ಪಲ್ಲಂಗ), ನಾಲ್ಕಾರು ಲೀಟರ್ ನೀರು, ಡಬ್ಬಿ, ಹಾಲು, ಹಣ್ಣಿನ ರಸ, ಸುಣ್ಣದ ತಿಳಿನೀರು ಮೊದಲಾದವನ್ನು ಸಂದರ್ಭಾನುಸಾರ ಬಳಸಲು ಸಿದ್ಧವಿಟ್ಟಿರಬೇಕು.

ರೋಗಿಯು ಸೇವಿಸಿದ ವಿಷವು ಅಮ್ಲರೂಪದ್ದಾಗಿದ್ದರೆ ಸೋಡಿಯಂ ಬೈಕಾರ್ಬೊನೇಟ್ ಮಿಶ್ರಣ, ಸುಣ್ಣದ ತಿಳಿನೀರು, ಸೀಮೆಸುಣ್ಣ ಕಲಸಿದ ದ್ರಾವಣ ಇವುಗಳ ಪೈಕಿ ಯಾವುದಾದರೊಂದು ಕ್ಷಾರವನ್ನು ಹೊಟ್ಟೆತೊಳೆಯಲು ಉಪಯೋಗಿಸಬೇಕು. ಕ್ಷಾರರೂಪದ ವಿಷಪ್ರಾಶನವಾದ ಸಂದರ್ಭದಲ್ಲಿ ಲಿಂಬೆಹಣ್ಣಿನ ರಸ, ಹುಣಸೆ ಹಣ್ಣು ಕಿವುಚಿದ ಗೊಜ್ಜು, ಮೋಸಂಬಿ ರಸ, ವಿನೆಗರ್, ಡಬ್ಬಿಶೇಖರಣೆಯ ಹಣ್ಣಿನ ಪಾನಕ ಮೊದಲಾದ ಅಮ್ಲ ಗುಣಧರ್ಮವುಳ್ಳ ದ್ರವ್ಯವನ್ನು ಬಳಸಬೇಕು. ಜೋಗುಣಿ, ಬಕೆಟ್, ಹರಳೆಣ್ಣೆ (ಔಡಲ ಎಣ್ಣೆ), ಗ್ಲಿಸರಿನ್‌ದಂತಹ ಜಿಡ್ಡು ಪದಾರ್ಥ ಮತ್ತು ಯಥೇಚ್ಛ ನೀರನ್ನು ಸಿದ್ಧಪಡಿಸಿ ಕೊಳ್ಳಬೇಕು.

ಸಿದ್ಧತೆ—ವಿಧಾನ:

ಹೊಟ್ಟೆತೊಳೆಯುವ ಚಿಕಿತ್ಸೆಯನ್ನು ಪ್ರಾರಂಭಿಸುವ ಮುನ್ನ ರೋಗಿಯನ್ನು ಕುರ್ಚಿಯ ಮೇಲೆ ಕುಳ್ಳಿರಿಸಲು, ಅವನ ಬಾಯಲ್ಲಿ ಸಿಕ್ಕಿಹಾಕಿಕೊಂಡಿರಬಹುದಾದ ವಸ್ತುಗಳೇನಾದರೂ ಇದ್ದರೆ ಅವುಗಳನ್ನೂ, ಕೃತಕ ದಂತಪಂಕ್ತಿಗಳಿದ್ದರೆ ಅವನ್ನೂ ತೆಗೆಯಬೇಕು. ಅನಂತರ ತುಸು ನೀರನ್ನು ಕುಡಿಸಿ, ರಬ್ಬರ್ ನಳಿಕೆಯ ತುದಿಗೆ ಜಿಡ್ಡು ಸವರಿ ಅನ್ನಕೋಶಕ್ಕೆ ತಲುಪಲು ಎಷ್ಟು ಉದ್ದಬೇಕೋ ಅಷ್ಟನ್ನು ಗುರುತು ಮಾಡಿಕೊಂಡ ಮೇಲೆ ರೋಗಿಯ ಬಾಯಿಯೊಳಕ್ಕೆ ನಳಿಕೆಯನ್ನು ತುರುಕಿಸಿ ನಿಧಾನವಾಗಿ ಅನ್ನನಾಳದ ಮಾರ್ಗವಾಗಿ ಅನ್ನಕೋಶಕ್ಕೆ ತಳ್ಳಬೇಕು. ನಳಿಕೆಯು ಅನ್ನನಾಳದ ಮಾರ್ಗದಲ್ಲಿಯೇ ಇದ್ದು ಅನ್ನಕೋಶವನ್ನು ಸೇರಿದೆಯೇ ಎಂಬುದನ್ನು ಖಾತ್ರಿ ಮಾಡಿಕೊಳ್ಳಬೇಕು. (ರೋಗಿಗೆ ಬಿಕ್ಕಳಿಕೆ ಅಥವಾ ಕೆಮ್ಮು ಪ್ರಾರಂಭವಾದ ಪಕ್ಷದಲ್ಲಿ ನಳಿಕೆಯು ಹಾದಿ ತಪ್ಪಿ ಶ್ವಾಸಕೋಶದ ದಾರಿ ಹಿಡಿದಿದೆ ಎಂದು ತಿಳಿದುಕೊಂಡು ತಕ್ಷಣ ಅದನ್ನು ಹಿಂದಕ್ಕೆ ಎಳೆದು ತೆಗೆದು, ತುಸು ಹೊತ್ತಿನ ತರುವಾಯ ಮತ್ತೊಮ್ಮೆ ಪ್ರಯತ್ನಿಸಬೇಕು.)

ರಬ್ಬರ ನಳಿಗೆಯು ತುದಿಯು ಅನ್ನಕೋಶವನ್ನು ತಲುಪಿದ್ದು ಖಚಿತವಾದ ಮೇಲೆ ನಳಿಕೆಯ ಇನ್ನೊಂದು ತುದಿಯಲ್ಲಿರುವ ಅಗಲ ಬಾಯಿಯ ಲಾಳಿಕೆಯ

ಮೂಲಕ ಒಂದು ಲೋಟ (ಸುಮಾರು 120 ಮಿಲಿ ಲೀಟರ್‌ನಷ್ಟು) ದ್ರವವನ್ನು ನಿಧಾನವಾಗಿ ಸುರಿಯಬೇಕು. ಅನಂತರ ರೋಗಿಯ ಎದೆ ಮಟ್ಟವನ್ನು ತಗ್ಗಿಸಿ, ಅಥವಾ ಮಂಚದ ಮೇಲೆ ಮಗ್ಗುಲಿಗೆ ಮಲಗಿಸಿ ಕುಡಿದ ದ್ರವವೆಲ್ಲ ಹೊರಕ್ಕೆ ಬರುವಂತೆ ಮಾಡಬೇಕು. ಮೊದಲ ಸಲ ಹೊರಕ್ಕೆ ಬಂದುದನ್ನು ರಾಸಾಯನಿಕ ಪರೀಕ್ಷೆಗೆ (ವಿಶ್ಲೇಷಣೆ) ಕಳುಹಿಸುವ ಅಗತ್ಯವಿದ್ದರೆ ಪ್ರತ್ಯೇಕವಾಗಿ ತೆಗೆದಿರಿಸಬೇಕು. ಅನಂತರ ನಿರ್ದಿಷ್ಟವಾದ ದ್ರವ್ಯ (ಪ್ರತ್ಯೌಷಧ, ತತ್ತಿಯ ಲೋಳೆ, ಹಾಲು ಇತ್ಯಾದಿ ಯಾವುದಾದರೊಂದನ್ನು) ಸುರಿದು ಪುತ್ತೆ ಹೊರಕ್ಕೆ ಬರುವಂತೆ ಮಾಡಬೇಕು. ಇದೇ ರೀತಿ ಸುಮಾರು 15–20 ಬಾರಿ ನಡೆಸಿದಾಗ ಅನ್ನಕೋಶದಲ್ಲಿ ಇರುವ ವಿಷಾಂಶವು ಹೊರಬೀಳುತ್ತದೆ. ನಾಳಿಕೆಯ ಮೂಲಕ ನೀಡಿದ ದ್ರವ್ಯವೇ ಹೊರ ಬರಲು ತೊಡಗುವತನಕ ಈ ಚಿಕಿತ್ಸೆಯನ್ನು ಪುನರಾವರ್ತಿಸಬೇಕು. ಕೊನೆಯ ಸಲ ತುಸು ಪ್ರತ್ಯೌಷಧವನ್ನು ಕುಡಿಸಿ ಅದು ಅಲ್ಲೇ ಉಳಿಯುವಂತೆ ಬಿಟ್ಟು, ನಳಿಕೆಯನ್ನು ಹೊರ ತೆಗೆಯಬೇಕು.


ಟಿಪ್ಪಣಿ :

ತೀಕ್ಷ್ಣವಾದ ಕ್ಷಾರ ಅಥವಾ ಆಮ್ಲಸೇವನೆಯಾದ ಪಕ್ಷದಲ್ಲಿ ಸೇವಿಸಿದ ಅರ್ಧ ತಾಸಿನೊಳಗಾಗಿ ಹೊಟ್ಟೆ ತೊಳೆಯಬೇಕು. ವಿಳಂಬವಾದರೆ ನಿರರ್ಥಕ ಮಾತ್ರವಲ್ಲದೆ ಇಂತಹ ಸಂದರ್ಭಗಳಲ್ಲಿ ಹೆಚ್ಚಿನ ಮುತುವರ್ಜಿ ವಹಿಸಬೇಕಾದುದು ಅತ್ಯಗತ್ಯ. ಏಕೆಂದರೆ ತೀಕ್ಷ್ಣ ಕ್ಷೋಭಕ ವಿಷಗಳಿಂದಾಗಿ ಊದಿಕೊಂಡ ಅನ್ನಕೋಶದಲ್ಲಿ ವ್ರಣ, ಬಿರುಕು ಮೊದಲಾದ ಉಪದ್ರವಗಳು ಉಂಟಾಗುವುವಲ್ಲದೆ ನಳಿಕೆಯ ಸ್ಪರ್ಶದಿಂದಲೇ ವ್ರಣವು ಒಡೆದು ಅಥವಾ ತೂತುಬಿದ್ದು ರಕ್ತಸ್ರಾವ ಮೊದಲಾದ ನಾನಾ ಅನಾಹುತಗಳು ಸಂಭವಿಸಬಹುದು. ರೋಗಿಗಳು ಬಾಲಕರಾಗಿದ್ದರಂತೂ ಎಷ್ಟು ಎಚ್ಚರಿಕೆ ವಹಿಸಿದರೂ ಸಾಲದೆಂದು ಪ್ರತ್ಯೇಕ ಹೇಳಬೇಕಿಲ್ಲವಷ್ಟೇ

ಕೃತಕ ಉಸಿರಾಟ :

ವಿಷವಾಯು ಸೇವನೆ, ನೀರಲ್ಲಿ ಮುಳುಗುವುದು, ಹಗೇವು (ಧಾನ್ಯದ ಕಣಜ) ಮೊದಲಾದ ನೆಲ ಮಾಳಿಗೆಗಳಲ್ಲಿ ಸಿಕ್ಕಿ ಹಾಕಿಕೊಳ್ಳುವದು ಮುಂತಾದ ಸಂದರ್ಭಗಳಲ್ಲಿ ಉಸಿರಾಟ ಕ್ರಿಯೆಗೆ ಆತಂಕವುಂಟಾಗಿ ಪ್ರಾಣಾಪಾಯ ಸಂಭವಿಸಬಹುದು.

ನಿದ್ದೆಗೋಲಿಯಂತಹ ಕೆಲವೊಂದು ಔಷಧಿಯನ್ನು ಮಿತಿಮೀರಿ ಸೇವಿಸಿದಾಗಲೂ ಉಸಿರಾಟದ ತೊಂದರೆಯುಂಟಾಗುತ್ತದೆ. ಈ ಎಲ್ಲ ಸಂದರ್ಭಗಳಲ್ಲಿ ರೋಗಿಗೆ ತುರ್ತಾಗಿ ಆಮ್ಲಜನಕ ಪೂರೈಕೆ ಮಾಡುವುದು ಅಗತ್ಯ. ಅದಕ್ಕೂ ಮುನ್ನ ಅವನ ಶ್ವಾಸಕೋಶಗಳಲ್ಲಿ ತುಂಬಿಕೊಂಡಿರುವ ಮಲೀನ ವಾಯುವನ್ನು ಹೊರ ಹಾಕುವಂತೆ ಪ್ರಯತ್ನ ಮಾಡಬೇಕು. ಈ ಪ್ರಯತ್ನವನ್ನೇ ಕೃತಕ ಉಸಿರಾಟವೆಂದು ಕರೆಯುತ್ತಾರೆ. 'ಬಾಯಿಗೆ ಬಾಯಿ ಹಚ್ಚಿ ನೇರವಾಗಿ ಉಸಿರು ನೀಡುವ ವಿಧಾನ.' 'ಸಿಲ್ವೆಸ್ಟರ್ ವಿಧಾನ,' 'ಹೋಲ್ಗರ್ ನೈಲ್ಸನ್ ವಿಧಾನ' ಇವು ಹೆಚ್ಚಾಗಿ ಬಳಕೆಯಲ್ಲಿರುವ ಕೃತಕ ಉಸಿರಾಟದ ಪದ್ಧತಿಗಳು.



ನೇರ ಉಸಿರಾಟ

ನೇರ ಉಸಿರು ನೀಡುವಿಕೆಯ ವಿಧಾನ :

ರೋಗಿಯನ್ನು ಮೊದಲು ಅಂಗಾತ ಮಲಗಿಸಬೇಕು. ಅವನ ಬಿಗಿಯುಡಿಗೆಗಳನ್ನು ಸಡಲಿಸಿ, ಬಾಯಲ್ಲಿರಬಹುದಾದ ಕಲ್ಲು, ಮಣ್ಣು, ಆಹಾರದ ಅಂಶ ಮೊದ

ಲಾದ ಯಾವುದೇ ವಸ್ತುಗಳನ್ನು ತೆಗೆದು. ಸರಾಗವಾಗಿ ಉಸಿರಾಡಲು ಅಡ್ಡಿಯುಂಟಾ ಗದಂತೆ ಮಾಡಬೇಕು. ಅನಂತರ ನಿಮ್ಮ ಎಡಗೈ ಹೆಬ್ಬೆರಳನ್ನು ತುರುಕಿ ರೋಗಿಯ ಬಾಯನ್ನು ಅಗಲಿಸಬೇಕು. ರೋಗಿಯ ಮೂಗಿನ ಹೊಳ್ಳೆಗಳನ್ನು ಬಲಗೈ ಬೆರಳು ಗಳಿಂದ ಅಮುಕಿ ಹಿಡಿದುಕೊಂಡು ದೀರ್ಘವಾಗಿ ಉಸಿರೆಳೆದು ತಕ್ಷಣ ರೋಗಿಯ ಬಾಯೊಳಕ್ಕೆ ಬಾಯಿಹಚ್ಚಿ ನೇರವಾಗಿ ಜೋರಾಗಿ ಉಸಿರು ಬಿಡಬೇಕು. (ತೆಳ್ಳನೆಯ ಬಟ್ಟೆಯನ್ನು ರೋಗಿಯ ಬಾಯಿಮೇಲೆ ಹರಡುವುದೂ ಇದೆ) ಪ್ರತಿ ನಾಲ್ಕು ಕ್ಷಣ ಗಳಿಗೊಮ್ಮೆ ಈ ರೀತಿ ಪುನರಾವರ್ತಿಸಬೇಕು. ರೋಗಿಯು ಚಿಕ್ಕ ಮಗುವಾಗಿದ್ದ ಸಂದರ್ಭದಲ್ಲಿ ಇದು ಹೆಚ್ಚು ಉಪಯುಕ್ತವಾಗಿದೆ.




ಸಿಲ್ವೇಸ್ಟರ್ ವಿಧಾನ:

ರೋಗಿಯನ್ನು ಅಂಗಾತ ಮಲಗಿಸಿ ಅವನ ಮೇಲುಡಿಗೆಯನ್ನು ಕಳಚಿ, ಬಾಯೊಳಗೆ ಸಿಕ್ಕಿಕೊಂಡಿರಬಹುದಾದ ವಸ್ತುಗಳನ್ನೆಲ್ಲ ತೆಗೆದು, ಅವನ ಭುಜದ ಕೆಳಗೆ ಒಂದು ಸಣ್ಣ ತೆಕ್ಕೆ (ತಲೆದಿಂಬು) ಅಥವಾ ಸುರುಳಿಯನ್ನಿರಿಸಿ, ತಲೆಯನ್ನು ಹಿಂದಕ್ಕೆ



ರೋಕಿಂಗ ವಿಧಾನ ಉಸಿರಾಟದ ಮಾರ್ಗದಲ್ಲಿ ಇರಬಹುದಾದ
ತಡೆಗಳನ್ನು ನಿವಾರಿಸಲು ಸಹಕಾರಿ.

ಬಾಗಿಸಬೇಕು. ಅನಂತರ ರೋಗಿಯ ತಲೆದೆಸೆಯಲ್ಲಿ ಎದುರಾಗಿ ಮಂಡಿಯೂರಿ ಕುಳಿತು ಅವನ ಎರಡೂ ಕೈಗಳ ಮೊಣಗಂಟುಗಳನ್ನು ಅವನ ಎದೆಯ ಮೇಲೆ ಮಡಿಸಿ ಊರಬೇಕು; ಮತ್ತು ಅವನ ಕೈಗಳನ್ನು ಎತ್ತಿ ಗಾಳಿಯು ಎದೆಯಿಂದ ಹೊರಕ್ಕೆ ಬರುವಂತೆ ಪಕ್ಕಗಳಿಗೆ ನಿಧಾನವಾಗಿ ಸರಿಸಬೇಕು.



ಕೃತಕ ಉಸಿರಾಟ : ಸಿಲ್ವೆಸ್ಟರ ವಿಧಾನ

ಹೋಲ್ಗರ್ ನೈಲ್ಸನ್ ವಿಧಾನ:

ರೋಗಿಯ ಬೆನ್ನಿನ ಮೇಲೆ ಒತ್ತಡ ಹಾಕಿ ತೋಳುಗಳನ್ನೆತ್ತಿ ಉಸಿರಾಟ ಪ್ರಾರಂಭಿಸುವ ಹೋಲ್ಗರ್ ನೈಲ್ಸನ್ ವಿಧಾನವು ತುಂಬ ಜನಪ್ರಿಯವಾಗಿದೆ.



ಕೃತಕ ಉಸಿರಾಟ ಹೋಲ್ಗರ್ ನೈಲ್ಸನ್ ವಿಧಾನ

ರೋಗಿಯನ್ನು ಬೋರಲಾಗಿ (ಹೊಟ್ಟೆ ಕೆಳಗಾಗಿ) ಮಲಗಿಸಬೇಕು. (ಮೈಮೇಲಿನ ಅಂಗಿ ಮೊದಲಾದ ಬಿಗಿ ಉಡುಪನ್ನು ಕಳಚಬೇಕು). ನಂತರ ಅವನ ಮೊಳಕೈ ಗಂಟಿನಲ್ಲಿ ಮಡಚಿ ಎರಡೂ ಕೈಗಳನ್ನು ಒಂದರ ಮೇಲೊಂದು ಇರಿಸಬೇಕು. ರೋಗಿಯ ತಲೆಯ ಹಿಂಬದಿಯಲ್ಲಿ ಮೊಣ ಕಾಲೂರಿ ಕುಳಿತು ನಿಮ್ಮ ಕೈಗಳನ್ನು ಹೆಬ್ಬೆರಳು ಒಂದಕ್ಕೊಂದು ತಾಗುವಂತೆ ರೋಗಿಯ ಬೆನ್ನಿನ ಮೇಲೆ ಭುಜಗಳ ಸಮೀಪ ಇರಿಸಬೇಕು. ಅನಂತರ ಸುಮಾರಾಗಿ ಶಕ್ತಿಹಾಕಿ ರೋಗಿಯ ಬೆನ್ನ ಮೇಲೆ ಇರಿಸಿದ ನಿಮ್ಮ ಕೈಗಳನ್ನು ಮೆಲ್ಲಗೆ ಕೆಳಗೆ ಜಾರಿಸುತ್ತ ಬರಬೇಕು— ಇದರ ಪರಿಣಾಮವಾಗಿ ಶ್ವಾಸಕೋಶದಲ್ಲಿ ತುಂಬಿರುವ ಮಲಿನ ವಾಯುವು ಹೊರಕ್ಕೆ ಬರುತ್ತದೆ. ಬೆನ್ನ ಮೇಲಿನ ಭಾರವನ್ನು ನಿಧಾನವಾಗಿ ಬಿಡುತ್ತ ರೋಗಿಯ ಮೊಣಕೈಗಳನ್ನು ಹಿಡಿದು ಕೊಂಡು ಅನಂತರ ರೋಗಿಯನ್ನು ಮೇಲಕ್ಕೆ ನಿಮ್ಮ ಕಡೆಗೆ ಎತ್ತಿ ನಿಧಾನವಾಗಿ ನೆಲದ ಮೇಲೆ ಮಲಗಿಸಬೇಕು— ರೋಗಿಯ ಮೊಣಕೈಗಳನ್ನು ಎತ್ತುವ ಬದಲು ಅವನ ಟೊಂಕವನ್ನು ಹಿಡಿದು ಎತ್ತುವುದೂ ಉಂಟು.





ಶೋಧನ ಚಿಕಿತ್ಸೆ:

ಈ ಎಲ್ಲ ಚಿಕಿತ್ಸೆಗಳಿಗೂ ಬಗ್ಗದೆ ಅಲ್ಪಾಂಶ ವಿಷವು ಕರುಳನ್ನು ಸೇರಿಕೊಂಡ ಸಂದರ್ಭದಲ್ಲಿ ಮಲಮೂತ್ರ ದ್ವಾರಗಳಿಂದ ವಿಷವನ್ನು ಹೊರ ಹಾಕುವ ವಿಧಾನಕ್ಕೆ ಶೋಧನ ಚಿಕಿತ್ಸೆ ಎಂದು ಹೆಸರು. ವಿಷವಷ್ಟೇ ಅಲ್ಲದೇ ವಿಷ ಪ್ರಾಶನದ ದುಷ್ಪರಿಣಾಮವಾಗಿ ದೇಹದ ನಾನಾ ಅಂಗಗಳಲ್ಲಿ ಉತ್ಪನ್ನವಾಗುವ 'ಮಲಸ್ರಾವ'ಗಳನ್ನು ಹೊರತಳ್ಳಿ ದೇಹ ಶುದ್ಧಿ ಮಾಡಿದಂತೆಯೂ ಆಗುವುದು. ಶೋಧನ ಚಿಕಿತ್ಸೆಯ ವಿಶೇಷ ಪ್ರಯೋಜನವಿದೆ ಎನ್ನಬಹುದು.

ವಿರೇಚನ ಚಿಕಿತ್ಸೆ:

ಸೋಡಿಯಂ ಸಲ್ಫೇಟ್ ಅಥವಾ ಮೆಗ್ನೇಶಿಯಂ ಸಲ್ಫೆಕೆಟ (ಬೇಧಿ ಉಪ್ಪು) ಉತ್ತಮ ವಿರೇಚಕ ದ್ರವ್ಯ. ಪ್ರಮಾಣ: 1 ಲೋಟಿ ನೀರಿನಲ್ಲಿ ಒಂದು ಔಂಸ ಉಪ್ಪನ್ನು ಕರಗಿಸಿ ಕುಡಿಸುವದು. ಔಡಲ ಎಣ್ಣೆ (ಹರಳೆಣ್ಣೆ), ಲಿಕ್ವಿಡ್ ಪ್ಯಾರಾಫಿನ್ ಮಿಲ್ಕ್ ಆಫ್ ಮೆಗ್ನೇಶಿಯಾ ಇವುಗಳನ್ನು ಸಂದರ್ಭಾನುಸಾರ ಬಳಸಬಹುದು. ಆಯುರ್ವೇದ ವೈದ್ಯರು ಸೋನಾಮುಖಿ ಎಲೆಯ ಕಷಾಯ, ತಿಗಡೆ ಬೇರು, ಕಕ್ಕೆ ಕಾಯಿ ಮೊದಲಾದ ವನಸ್ಪತಿಗಳನ್ನು ನೀಡುತ್ತಾರೆ. ಇವು ಸುಲಭವಾಗಿ ಹಳ್ಳಿಗಳಲ್ಲಿ ದೊರಕುವುದರಿಂದ ಬಳಸಬಹುದು.

ಬಾರ್ಬಿಟರೇಟ್ ಮೊದಲಾದ ಕೆಲವು ಔಷಧಿಗಳು ಮೂತ್ರದ ಮೂಲಕ ಹೊರ ಹಾಕಲ್ಪಡುವುದರಿಂದ ಅವುಗಳ ವಿಷ ಪ್ರಾಶನವಾದ ಸಂದರ್ಭದಲ್ಲಿ ಮೂತ್ರವಿಸರ್ಜನೆಯು ಸರಿಯಾಗಿ, ಸಾಕಷ್ಟು ಪ್ರಮಾಣದಲ್ಲಿ ಆಗುವಂತೆ ಉಪಚಾರ ನಡೆಸಬೇಕು. ಬಾರ್ಲಿನೀರು, ಗ್ಲೂಕೋಸ್ ಪಾನಕ, ನಿಂಬೆಹಣ್ಣಿನ ಶರಬತ್ತು, ಎಳನೀರು, ಕಬ್ಬಿನ ರಸ– ಇವು ಯಾವುದೂ ಸಿಕ್ಕದಾಗ ಅಥವಾ ಪೂರಕವಾಗಿ ಧಾರಾಳವಾಗಿ ತಣ್ಣೀರು ಕುಡಿಸಬೇಕು. ಪುನರ್ನವ, ನೆಗ್ಗಿಲುಮುಳ್ಳು ಮೊದಲಾದ ಮೂತ್ರಲ ದ್ರವ್ಯಗಳ ಕಷಾಯವೂ,ಸೋಡಿಯಂ ಬೈ ಕಾರ್ಬೋನೇಟ್ ಮಿಶ್ರಣವು ಉಪಯುಕ್ತವಾಗಿದೆ. ಕೆಲವೊಮ್ಮೆ ಮೂತ್ರೋತ್ತೇಜಕ ಔಷಧಿಗಳನ್ನು ಸಹ ಕೊಡಬೇಕಾಗುತ್ತದೆ. ದೇಹದಲ್ಲಿ ದ್ರವಾಂಶವು ಕಡಿಮೆಯಾದಾಗ ಗ್ಲೂಕೋಸ್ ಪೂರಣೆ ಅಗತ್ಯ.

ಅಧ್ಯಾಯ—2

ನಿತ್ಯಬಳಕೆಯ ವಿಷದ್ರವ್ಯಗಳು

(1) ಪೆಟ್ರೋಲಿಯಂ, ಡಿಸೆಲ್ ಮತ್ತು ಸೀಮೆಎಣ್ಣೆ :

ಪರಿಚಯ : ಓಡುವ ಮೋಟರ್ ಕಾರುಗಳಿಂದ ತೊಡಗಿ ಉರಿಸುವ ಕಂದೀಲಿನ ತನಕ ನಾವು ಇಂಧನತೈಲಗಳನ್ನು ಬಳಸುತ್ತೇವೆ. ಭೂಗರ್ಭದಲ್ಲಿ ಶೇಖರಣೆಯಾಗಿರುವ ಕಲ್ಲೆಣ್ಣೆಯನ್ನು ಎಣ್ಣೆಭಾವಿಗಳಿಂದ ಮೇಲೆತ್ತಿ ಶುದ್ಧಮಾಡಿ ಪೆಟ್ರೋಲ್ ಡಿಸೆಲ್, ಸೀಮೆಎಣ್ಣೆ ಮೊದಲಾದವುಗಳನ್ನು ಸಿದ್ಧಮಾಡಿ ಬಳಸುತ್ತೇವೆ.

ಈ ಇಂಧನ ತೈಲಗಳಿಗೆ ಒಂದು ಬಗೆಯ ಗಾಟು ವಾಸನೆ ಇರುವುದರಿಂದ ಮಕ್ಕಳು ಸಹ ಮೂಸಿ ಮುಖ ಸಿಂಡರಿಸಿಕೊಳ್ಳುತ್ತವೆ. ದ್ರವರೂಪದ ಕಲ್ಲೆಣ್ಣೆ ಸೇವನೆ, ಸ್ಪರ್ಶ ಹಾಗೂ ಅಘ್ರಾಣ ವಿಷ; ಮೈಮೇಲೆ ಚೆಲ್ಲಿ ಬೆಂಕಿ ಹತ್ತಿಕೊಂಡರಂತೂ ತೀರ ದುರದೃಷ್ಟಕರ ಘಟನೆ ಸಂಭವಿಸುತ್ತದೆ; ಬೆಂಕಿಸ್ಪರ್ಶವಾದರೆ ಬಗ್ಗನೇ ಉರಿಹತ್ತಿಕೊಳ್ಳುವದು ಕಲ್ಲೆಣ್ಣೆಯ ಸ್ವಭಾವ.

ಪ್ರಾಣಾಪಾಯದ ಪ್ರಮಾಣ (ಸೆವನೆ) :

ಪೆಟ್ರೋಲ್ 100 ರಿಂದ 120 ಮಿಲಿ ಲೀಟರ್; ಮಕ್ಕಳಿಗೆ 15–30 ಮಿಲಿ ಲೀಟರ್. ಇತರ ಇಂಧನದ್ರವ್ಯಗಳ ಸುಮಾರು ಇದೇ ಪ್ರಮಾಣದ ಸೇವನೆಯೂ ವಿಷ.

ದೀರ್ಘಕಾಲಾವಧಿಯ ವಿಷ ಲಕ್ಷಣಗಳು (ಆಘ್ರಾಣ ವಿಷ) :

ಪೆಟ್ರೋಲ್ ಮಾರುವ ಅಂಗಡಿಗಳಲ್ಲಿ ಕೆಲಸ ಮಾಡುವವರು ಹಾಗೂ ಅದರ ಸಾಗಾಣಿಕೆ, ಶುದ್ಧೀಕರಣ ಕೆಲಸಗಳಲ್ಲಿ ನಿರತರಾಗಿರುವ ಕಾರ್ಮಿಕರು ಪೆಟ್ರೋಲಿನ ವಾಸನೆಯನ್ನು ಸದಾ ಆಘ್ರಾಣಿಸುತ್ತಾರೆ. ಕಾಲಾಂತರದಲ್ಲಿ ಇದರಿಂದ ಅಪಾಯವುಂಟಾಗಬಹುದು. ತಲೆತಿರುಗುವುದು, ವಾಕರಿಕೆ, ನಿರಾಳ ಉಸಿರಾಟಕ್ಕೆ ಮುಜುಗರ ಮೊದಲಾದ ಉಪದ್ರವಗಳು ಉಂಟಾಗುತ್ತವೆ. ಕ್ರಮೇಣ ಅವರು ದುರ್ಬಲರೂ

ಆಲಸಿಗರೂ ಆಗುತ್ತಾರೆ. ಕೈಕಾಲು ಸಂದುಗಳಲ್ಲಿ ಮಂದವಾದ ವೇದನೆ, ಅಗ್ನಿ ಮಾಂದ್ಯ, ಅರುಚಿ ಮೊದಲಾದ ತೊಂದರೆಗಳು ಕಾಣಿಸುತ್ತವೆ. ಇಂತಹ ರೋಗಿಗಳನ್ನು ವಿಷದ ಪರಿಸರದಿಂದ ಬೇರ್ಪಡಿಸಿ ಸ್ವಚ್ಛ ಹವೆಗೆ ಸ್ಥಳಾಂತರಿಸಬೇಕು; ಮತ್ತು ಮುಂದೆ ಅವರು ಇಂಧನತೈಲದ ಸಂಪರ್ಕ ಇರಿಸಿಕೊಳ್ಳದಂತೆ ನೋಡಿಕೊಳ್ಳಬೇಕು. ಸೀಮೆಎಣ್ಣೆಯನ್ನು ಅಳೆದು ಕೊಡುವ ಚಿಲ್ಲರೆ ಅಂಗಡಿಗಳಲ್ಲಿ ಕೈಗೆಲಸ ಮಾಡುವವರೇ ಮೊದಲಾದ ಅನೇಕರು ಸ್ಪರ್ಶ ವಿಷದಿಂದಲೂ ನರಳುವದುಂಟು. ಕೈಬೆರಳ ಸಂದುಗಳಲ್ಲಿ, ಅಂಗೈ ಮುಂಗೈಗಳಲ್ಲಿ ಚರ್ಮ ಸುಲಿಯುವುದು, ನವೆ, ತುರಿಕೆಗಳು ಉಂಟಾಗುತ್ತವೆ. ಇಂತಹವರನ್ನು ಕೂಡಾ ಇಂಧನ ತೈಲದ ಸ್ಪರ್ಶದಿಂದ ದೂರವಿರಿಸಬೇಕು.

ವಿಷಪ್ರಾಶನದ ಲಕ್ಷಣಗಳು :

ಪೆಟ್ರೋಲ್ ಅಥವಾ ಸೀಮೆಎಣ್ಣೆಯನ್ನು ಆಕಸ್ಮಿಕವಾಗಿ ಸೇವಿಸಿದರೆ ಗಂಟಲು ಉರಿ, ಕೆಮ್ಮು, ಬಿಕ್ಕಳಿಕೆ ಮತ್ತು ನೀರಡಿಕೆ ಕಾಣಿಸಿಕೊಳ್ಳುವುವು. ಬಾಯಿಯಲ್ಲಿ ಪೆಟ್ರೋಲ್ ಅಥವಾ ಸೀಮೆಎಣ್ಣೆಯ ವಾಸನೆ ಗೋಚರಿಸುತ್ತದೆ. ತಲೆತಿರುಗುವುದು, ವಾಕರಿಕೆ, ಎದೆ ಉರಿ, ಗಂಟಲು, ನಾಲಿಗೆ ಕೆರೆತ, ಹಾಗೂ ವಾಂತಿ ಉಂಟಾಗುತ್ತದೆ. ಹೊಟ್ಟೆನೋವು, ಭೇದಿ, ತಲೆ ಭಾರ, ಮುಖ ಬಿಳಿಚಿಕೊಳ್ಳುವದು ಮತ್ತು ಮೇಲುಬ್ಬಸತೊಡಗುವವು; ತೂಕಡಿಕೆ ಅಥವಾ ನಿದ್ರೆಯು ಆವರಿಸುತ್ತದೆ. ರೋಗಿಯ ಉಸಿರಿನಲ್ಲಿಯೂ, ಕಾರಿಕೊಂಡದ್ದರಲ್ಲಿಯೂ, ಮಲ ಮೂತ್ರಗಳಲ್ಲಿಯೂ ಪೆಟ್ರೋಲಿನ ಅಥವಾ ಸೀಮೆಎಣ್ಣೆಯ ವಾಸನೆ ಇರುತ್ತದೆ. ರೋಗಿಗೆ ಜ್ವರ ಮತ್ತು ಫುಪ್ಪುಸ ಊತ ಪ್ರಾರಂಭಿಸುವವು, ಉಸಿರಾಟದ ಗತಿಯು ಮಂದವಾಗುತ್ತದೆ. ರೋಗಿಯ ಕಣ್ಣುಬೊಂಬೆ ಮೊದಲು ಕಿರಿದಾಗುತ್ತದೆ. ಮುಂದೆ ಸ್ಮೃತಿ ತಪ್ಪಿದ ಅವಸ್ಥೆಯುಂಟಾಗುವುದು. ಹಲವು ಸಂದರ್ಭಗಳಲ್ಲಿ ಅದಿರುವಾಯು ಏಳಬಹುದು.

ಚಿಕಿತ್ಸೆ ಮತ್ತು ಉಪಚಾರ:

ಇಂಧನ ತೈಲ ವಿಷಪ್ರಾಶನವಾದ ಸಂದರ್ಭದಲ್ಲಿ ತುರ್ತಾಗಿ ವೈದ್ಯರ ಸಹಾಯವನ್ನು ಪಡೆಯಬೇಕು. ವಾಂತಿಮಾಡಿಸುವದು, ಪ್ರತ್ಯೌಷಧ ನೀಡುವುದು ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆಗಳನ್ನು ನಡೆಸದೆ ಬಿಸಿನೀರಿನಲ್ಲಿ ಸೋಡಿಯಂ ಬೈ ಕಾರ್ಬೋನೇಟ್ ಪುಡಿಯನ್ನು ಕರಗಿಸಿ ಬಹಳ ಮುತುವರ್ಜಿಯಿಂದ ಹೊಟ್ಟೆ ತೊಳೆಯಬೇಕು. ರೋಗಿಯು ಎಳೆ ವಯಸ್ಸಿನ ಬಾಲಕನಾಗಿದ್ದರೆ ಹೊಟ್ಟೆ ತೊಳೆಯುವಾಗ ಹೆಚ್ಚಿನ ಜಾಗ್ರತೆ ವಹಿಸಬೇಕು. ಹೊಟ್ಟೆ ತೊಳೆದು ಹೊರತೆಗೆದ ವಿಷದ ಅಲ್ಪಾಂಶವನ್ನು

ಮಕ್ಕಳು ಪುನಃ ನುಂಗಿ ದುರದುಷ್ಟವಶಾತ್ ಶ್ವಾಸಕೋಶವನ್ನು ಸೇರಿ ಇನ್ನಷ್ಟು ಅಪಾಯ ಉಂಟಾಗದಂತೆ ಮುಂಜಾಗ್ರತೆ ವಹಿಸಬೇಕು.

ತತ್ತಿಯ ಲೋಳೆ ಅಥವಾ ಅನ್ನ ಬಸಿದ ಗಂಜಿಯನ್ನು ಕುಡಿಸಬಹುದು. ಭೇದಿ ಉಪ್ಪನ್ನಾಗಲಿ ಅಥವಾ ಲಿಕ್ವಿಡ್‌ಪಾರಾಫಿನನ್ನಾಗಲಿ ಕುಡಿಸಿ ಮಲವಿಸರ್ಜನೆ ಮಾಡಿಸಬೇಕು. ಅಗತ್ಯಬಿದ್ದರೆ ರೋಗಿಗೆ ಕೃತಕಉಸಿರಾಟ ಹಾಗೂ ಆಮ್ಲಜನಕ ನೀಡಿಕೆಗಳಿಗೆ ಸಿದ್ಧತೆ ಮಾಡಿಕೊಳ್ಳಬೇಕು. ರೊಗಿಯು ಪ್ರಾಣಾಪಾಯದಿಂದ ಕೂಡಲೇ ಪಾರಾದರೂ ಪುಪ್ಪುಸವಿಕಾರ,ಪ್ಲೀಹವಿಕಾರ ಮೊದಲಾದ ಉಪದ್ರವಗಳಿಂದ ನರಳಬಹುದು. ಅವುಗಳಿಗೆ ಸೂಕ್ತ ಚಿಕಿತ್ಸೆ ಮಾಡಬೇಕು. ಗ್ಲೂಕೋಸ್, ಶರ್ಕರಪಿಷ್ಟ ಭರಿತವಾದ ಆಹಾರ, ಬಿ. ಕಾಂಪ್ಲೆಕ್ಸ್, ಜೀವಾತುಗಳ ಸೇವನೆಯೂ ಸಂಪೂರ್ಣ ವಿಶ್ರಾಂತಿಯೂ ಅಗತ್ಯ.

ಆಘ್ರಾಣ ವಿಷ ಲಕ್ಷಣಗಳು ಮತ್ತು ಚಿಕಿತ್ಸೆ:

ಪೆಟ್ರೋಲಿನ ಆವಿಯನ್ನು ಆಘ್ರಾಣಿಸಿದರೆ ತಕ್ಷಣ ತಲೆತಿರುಗುವದು ಪ್ರಾರಂಭವಾಗುತ್ತದೆ. ಅಂಗಾಂಗಗಳ ಸಮತೋಲನೆಯೂ ಚಲನೆಯ ಹತೋಟಿಯೂ ತಪ್ಪುತ್ತವೆ. ಬುದ್ಧಿ ಮಂಕಾಗುತ್ತದೆ– ಕೆಲವೊಮ್ಮೆ ಬುದ್ಧಿ ಭ್ರಮಣೆಯೂ ಉಂಟಾಗಬಹುದು. ವಾಂತಿ, ವಾಕರಿಕೆ, ಕೆಮ್ಮು ಮತ್ತು ಎದೆಉರಿ ಕಾಣಿಸಿಕೊಳ್ಳುವವು; ಪುಪ್ಪುಸ ಊತ, ಸ್ಪರ್ಶಜ್ಞಾನದ ನ್ಯೂನತೆ ಸಹ ಉಂಟಾಗುವದು. ಸೆಳವು (ಅದಿರು ವಾಯು) ಪ್ರಾರಂಭವಾಗಬಹುದು. ಕ್ರಮೇಣ ಹೃದಯ ಕ್ರಿಯೆಗೂ ಉಸಿರಾಟಕ್ಕೂ ಅಡ್ಡಿಯುಂಟಾಗಿ ಸಾವು ಸಂಭವಿಸುತ್ತದೆ.

ತೀಕ್ಷ್ಣ ಅಪಾಯದಲ್ಲಿರುವ ಇಂತಹ ರೋಗಿಯನ್ನು ಮೊದಲು ಸ್ವಚ್ಛ ಹವೆ ಇರುವಲ್ಲಿಗೆ ಸಾಗಿಸಬೇಕು. ಅವನ ಬಿಗಿ ಉಡುಗೆಗಳನ್ನು ಸಡಿಲಗೊಳಿಸಿ ಕೃತಕ ಉಸಿರಾಟ- ಆಮ್ಲಜನಕ ನೀಡಿಕೆಗಳನ್ನು ಒದಗಿಸಬೇಕು. ದೇಹವನ್ನು ಬೆಚ್ಚಗಿರಿಸಲು ಕಂಬಳಿ ಹೊಚ್ಚುವುದು, ಬಿಸಿನೀರು ತುಂಬಿದ ಸೀಸೆಗಳನ್ನು ಪಕ್ಕದಲ್ಲಿ ಇರಿಸಿ ಕಂಬಳಿ ಸುತ್ತುವದು ಮೊದಲಾದ ಉಪಾಯಗಳನ್ನು ಕೈಗೊಳ್ಳಬೇಕು. ಇತರ ಉಪದ್ರವಗಳಿಗೆ ಸೂಕ್ತ ಚಿಕಿತ್ಸೆ ನಡೆಸಬೇಕು.

ಟಿಪ್ಪಣಿ:

ಪೆಟ್ರೋಲ್ ಅಥವಾ ಸೀಮೆಎಣ್ಣೆ ಡಬ್ಬ ಮಕ್ಕಳ ಕೈಗೆ ಸಿಗುವಂತೆ ಇರಿಸಿದಾಗ ರುಚಿ ನೋಡಲೆಳಸಿ ಮಕ್ಕಳು ಅಪಾಯವನ್ನು ತಂದುಕೊಂಡ ಘಟನೆಗಳು ಅನೇಕ

ಸಂಭವಿಸಿವೆ. ಭಟ್ಟಿಸೆರೆ (ಕಂಟ್ರಿಲಿಕ್ಕರ್) ಎಂದು ಭ್ರಮಿಸಿ ಇಂಧನತೈಲ ಸೇವಿಸಿ ಅಪಾಯಕ್ಕೊಳಗಾದ ಪ್ರಸಂಗಗಳೂ ವರದಿಯಾಗಿವೆ.

ಕಾರ್ಬಾಲಿಕ್ ಆ್ಯಸಿಡ್, ಫಿನಾಯಿಲ್ ಮತ್ತು ಡಾಂಬರ್ :

ಪರಿಚಯ : ಸುಲಭ ಬೆಲೆಗೆ ದೊರಕುವ ಫಿನಾಯಿಲ್ ನಿತ್ಯ ಬಳಕೆಯ ಒಂದು ಕ್ರಿಮಿನಾಶಕ ನಂಜುನಿರೋಧಕ ದ್ರವ್ಯ. ಮನೆ ಮಠಗಳ ನೆಲವನ್ನೂ, ಕಕ್ಕಸು (ಸಂಡಾಸ) ಬಚ್ಚಲುಗಳನ್ನೂ ತೊಳೆಯುವಾಗ ಇದನ್ನು ಉಪಯೋಗಿಸುವರು. ರಸ್ತೆಗಳಿಗೆ ಕಾಂಕ್ರೀಟ್ ಮಾಡಲೂ ಮರಮುಟ್ಟುಗಳ, ಮುಖ್ಯವಾಗಿ ಜಂತಿಗಳ, ದೀರ್ಘ ಬಾಳಿಕೆಗೂ ಲೇಪಿಸುವ ಕರ್‍ರಗಿನ ಡಾಂಬರನ್ನು ನೋಡದವರು ಯಾರೂ ಇಲ್ಲ. ಈ ವಿಷ ದ್ರವ್ಯಗಳಿಗೆ ಘಾಟು ವಾಸನೆ ಇದೆ.

ಪಾದಗಳಲ್ಲಿ ಹಾಗೂ ಬೆರಳ ಸಂದಿನಲ್ಲಿ ಬೆಳೆಯುವ ಆಣಿಗಳನ್ನು ಚಾಕುವಿನಿಂದ ಕಿತ್ತು ತೆಗೆದ ಮೇಲೆ ಆ ಗಾಯವನ್ನು ಸುಡಲು ಕಾರ್ಬಾಲಿಕ್ ಆ್ಯಸಿಡ್ಡಿನ ಒಂದೆರಡು ಹನಿಗಳನ್ನು ಅನೇಕರು ಲೇಪಿಸುತ್ತಾರೆ. ರೋಗಿಗಳ ಮೈಕೈಗಳನ್ನು ಸ್ವಚ್ಛ ಮಾಡಲು ತೀರ ಅಲ್ಪ ಪ್ರಮಾಣದ ದುರ್ಬಲ ದ್ರಾವಣವಾಗಿ ಕಾರ್ಬಾಲಿಕ್ ಆ್ಯಸಿಡ್‌ನ್ನು ಬಳಸುತ್ತಾರೆ. ಹೆಚ್ಚಿನ ಸಾಂದ್ರತೆಯಲ್ಲಿ (ತೀಕ್ಷ್ಣ ದ್ರಾವಣರೂಪದಲ್ಲಿ) ಇದು ಚರ್ಮವನ್ನು ಸುಟ್ಟು ಹಾಕುತ್ತದೆ. ಒಂದೇ ವರ್ಗಕ್ಕೆ ಸೇರಿದ ಈ ಕಾರ್ಬಾಲಿಕ್ ಆ್ಯಸಿಡ್, ಫಿನಾಯಿಲ್ ಮತ್ತು ಡಾಂಬರ ಇವುಗಳ ದುರುಪಯೋಗದಿಂದ ಪ್ರತಿ ವರ್ಷ ಕನಿಷ್ಟ ಪಕ್ಷ ನೂರಾರು ಸಾವುಗಳು ಸಂಭವಿಸುತ್ತವೆ.

ಪ್ರಾಣಾಪಾಯದ ಪ್ರಮಾಣ (ಸೇವನೆ) :

ಶುದ್ಧ ಕಾರ್ಬಾಲಿಕ್ ಆ್ಯಸಿಡ್ 0.3 ರಿಂದ 0.45 ಮಿಲಿ ಗ್ರಾಂ ಡಾಂಬರ 2–4ಮಿಲಿ ಮೀಟರ; ಫಿನಾಯಿಲ್ 2 ಮಿಲಿ ಲೀಟರ್;(ಅಥವಾ ಎರಡು ಗ್ರಾಮ್ಸ್) ಕ್ರಿಸೋಲ್ಸ್; 10 ಮಿಲಿ ಲೀಟರ; ಗ್ಯೆಯ್ಯಾಕಾಲ್; 2 ಮಿಲಿ ಲೀಟರ್; ಕ್ರಿಯೋಸೋಟ್ (ಮರದ ಡಾಂಬರ) 5 ಮಿಲಿ ಲೀಟರ್; ಹೆಕ್ಸಾಕ್ಲೋರೋಫೆನ್; 2 ಮಿಲಿ ಲೀಟರ್.

ಸ್ಪರ್ಶವಿಷ ಲಕ್ಷಣಗಳು :

ಡಾಂಬರ್ ಮತ್ತು ಫಿನಾಯಿಲ್ ದೀರ್ಘಕಾಲ ಮೈ ಕೈಗಳಿಗೆ ಸ್ಪರ್ಶವಾಗುವುದರಿಂದ ಅನೇಕ ತೊಂದರೆಗಳು ಉಂಟಾಗಬಹುದು. ಡಾಂಬರ್ ಹತ್ತಿದ ಭಾಗದಲ್ಲಿ

ಚರ್ಮ ಬೆಳ್ಳಗಾಗಿ, ನೋವಿಲ್ಲದ ಗುಳ್ಳೆಗಳೇಳುತ್ತವೆ. ಬೆರಳ ತುದಿ, ಸಂದಿನಲ್ಲಿ ಬಾವು, ಚರ್ಮದ ಊತ ಕಾಣಿಸಿಕೊಂಡು ನೀರು ತುಂಬಿದ ಗುಳ್ಳೆಗಳು ಎದ್ದು, ಅವು ಒಡೆದು ಹುಣ್ಣಾಗುತ್ತವೆ; ಚರ್ಮವು ಕಿತ್ತು ಬರುತ್ತದೆ. ಡಾಂಬರ್ ಸ್ಪರ್ಶವಾದ ಅಂಗಾಂಗಗಳ ಚರ್ಮವು ವಿವರ್ಣವಾಗುತ್ತದೆ.

ತೀಕ್ಷ್ಣ ಸಾಂದ್ರತೆಯ ಕಾರ್ಬಾಲಿಕ್ ಆಸಿಡ್ ಸ್ಪರ್ಶವಾದರೆ ತನ್ನ ವಿಶೇಷವಾದ ಇಂಗುವ ಗುಣದಿಂದ ಅದು ಚರ್ಮವನ್ನು ಅತ್ಯಲ್ಪ ಕಾಲದಲ್ಲಿಯೇ ಹೆಚ್ಚಿನ ಅನಾಹುತಕ್ಕೆ ಒಳಗಾಗಿಸುತ್ತದೆ. ಚರ್ಮದ ಉರಿತ, ಜೋಮು ಹಿಡಿಯುವುದು. ಜಡವಾಗುವುದು ಮತ್ತು ಸ್ಪರ್ಶಜ್ಞಾನ ಶೂನ್ಯವಾಗುವುದು-—ಇವು ಮುಖ್ಯವಾದ ಉಪದ್ರವಗಳು. ಆಳವಾದ ಸುಟ್ಟಗಾಯ ಮತ್ತು ವ್ರಣಗಳು ಉಂಟಾಗುತ್ತವೆ.

ಸ್ಪರ್ಶವಿಷಕ್ಕೆ ಪ್ರತ್ಯೌಷಧವೆಂದರೆ ಔಡಲ ಎಣ್ಣೆ (ಹರಳೆಣ್ಣೆ). ವಿಷ ತಗುಲಿದ ಭಾಗವನ್ನು ತಣ್ಣೀರಿನಿಂದ ಚೆನ್ನಾಗಿ ತೊಳೆದು, ಒರಸಿ ಔಡಲ ಎಣ್ಣೆಯನ್ನು ಸವರಿ ಸಡಿಲವಾದ ಬಟ್ಟೆಯ ಪಟ್ಟಿ ಬಿಗಿಯಬೇಕು. ಇಪ್ಪೆಎಣ್ಣೆ ಅಥವಾ ಶೇಕಡಾ 10ರ ಮಿಥೈಲ್ ಆಲ್ಕೋಹಾಲ್ ಹಚ್ಚಬಹುದು. ವ್ರಣ ಶೋಧಕ ಮಲಾಮು ಹಚ್ಚಿ ಪಟ್ಟಿ ಹಚ್ಚಬೇಕು.

ವಿಷಪ್ರಾಶನದ ಲಕ್ಷಣಗಳು :

ಪ್ರಾಣಾಪಾಯದ ಪ್ರಮಾಣದಲ್ಲಿ ಡಾಂಬರ್, ಫಿನಾಯಿಲ್ ಅಥವಾ ಕಾರ್ಬಾಲಿಕ್ ಆ್ಯಸಿಡ್ ಸೇವಿಸಿದರೆ ಮೊದಲಿಗೆ ರೋಗಿಯ ತುಟಿ, ನಾಲಿಗೆ, ಬಾಯಿ ಹಾಗೂ ಗಂಟಲು ಸುಡುತ್ತದೆ; ಹೊಟ್ಟೆ ಉರಿ ಮತ್ತು ನೋವು ಕಾಣಿಸುತ್ತದೆ. ವಾಕರಿಕೆಯೂ ನೊರೆ ಅಥವಾ ಶ್ಲೇಷ್ಮ ಮಿಶ್ರಿತವಾದ ವಾಂತಿಯೂ ಪ್ರಾರಂಭವಾಗುವುದು. ತುಟಿ ಮತ್ತು ಬಾಯಿಯ ಒಳ ಪದರು ಬಿಳಿಚಿಕೊಂಡು ಗಟ್ಟಿಯಾಗುತ್ತದೆ; ಭೇದಿ ಪ್ರಾರಂಭವಾಗುತ್ತದೆ. ಮುಖ ಕಳೆಗುಂದಿ ಕಣ್ಣುಗೊಂಬೆಗಳು ಸಂಕೋಚಗೊಳ್ಳುತ್ತವೆ; ಮೈ ತಣ್ಣಗಾಗಿ, ಚರ್ಮವು ಬಿರುಸಾಗಿ ಬೆವರು ಸುರಿಯತೊಡಗುವುದು. ಮಂದವಾದ ನಾಡಿಯೂ, ಮಂದವಾದ ಉಸಿರಾಟವೂ ಪ್ರಾರಂಭವಾಗುತ್ತದೆ. ಕೆಲವೊಮ್ಮೆ ಉಸಿರಾಟವು ತ್ರಾಸದಾಯಕವಾಗುತ್ತದೆ; ದವಡೆಗಳು ಬಿಗಿದುಕೊಳ್ಳಬಹುದು (ಹಲಗಚ್ಚು ಬೀಳಬಹುದು). ರೋಗಿಯ ಉಸಿರಿನಲ್ಲಿ ಕಾರ್ಬಾಲಿಕ್ ಆ್ಯಸಿಡ್ಡಿನ ಸ್ಪಷ್ಟವಾಸನೆ ಬೆರೆತಿರುತ್ತದೆ. ತಲೆತಿರುಗುವುದು, ಕಂಪನ, ಅದಿರು ವಾಯು ಮತ್ತು ದೀರ್ಘಸುಪ್ತಿಗಳಿಂದ ರೋಗಿಯು ನರಳುವದು. ಇದಕ್ಕೂ ಮುಂಚೆ ಮನೋಭ್ರಮಣೆ ಮತ್ತು ಭಯವಿಹ್ವಲತೆ ಹಾಗೂ ವಿಕೃತ

ದೈಹಿಕ ಚಟುವಟಿಕೆಗಳು ಕಾಣಿಸಿಕೊಳ್ಳುವುವು. ರಕ್ತದಒತ್ತಡ ತೀರ ಇಳಿಮುಖ ವಾಗಿರುತ್ತದೆ.

ರೋಗಿಯ ಮೂತ್ರವಿಸರ್ಜನೆಯು ಬಹು ಅಲ್ಪಪ್ರಮಾಣದಲ್ಲಿ ಆಗುತ್ತಿದ್ದು ಕೆಲವೊಮ್ಮೆ ಸಂಪೂರ್ಣ ಲೋಪವಾಗಬಹುದು. ಮೂತ್ರವನ್ನು ಪರೀಕ್ಷಿಸಿದಾಗ ನಸುಹಳದಿ ಅಥವಾ ಹಸಿರು ಬಣ್ಣಕ್ಕಿದ್ದು, ಮಾಮೂಲಾಗಿ ಕಂಡರೂ ಗಾಳಿ ಸ್ಪರ್ಶ ಮಾದೊಡನೆಯೇ, ಕಡುಹಸಿರು ಅಥವಾ ಕಪ್ಪು ಬಣ್ಣಕ್ಕೆ ತಿರುಗುವುದು. ಮೂತ್ರ ದಲ್ಲಿ ಅಲ್ಬುಮಿನ್ ಮತ್ತು ರಕ್ತದ ಕೆಂಪುಕಣಗಳು ಇರುತ್ತವೆ. ಪ್ರಾಣಾಪಾಯ ದಿಂದ ಪಾರಾದ ರೋಗಿಗಳು ಕೂಡಾ ಪಾಂಡುರೋಗ, ಹಾಗೂ ಅರಿಶಿನಮುಂಡಿಗೆ ರೋಗದ ಉಪದ್ರವಗಳಿಂದ ನರಳುವ ಸಂಭವವಿದೆ.

ಪ್ರತ್ಯೌಷಧ :

ಔಡಲಎಣ್ಣೆ, (ಹರಳೆಣ್ಣೆ). ಪ್ರಮಾಣ 120 ರಿಂದ 180 ಮಿಲಿಲೀಟರ(ಔಡಲ ಎಣ್ಣೆಯಲ್ಲಿ ಫಿನಾಯಿಲ್ ಸತ್ವವು ಕರಗುವದರಿಂದ ನಿರ್ವಿಷಗೊಳಿಸಲು ತಕ್ಷಣ 4 ಔಂಸ ಔಡಲ ಎಣ್ಣೆಯನ್ನು ರೋಗಿಗೆ ಕುಡಿಸಬೇಕು.)

ಚಿಕಿತ್ಸೆ ಮತ್ತು ಉಪಚಾರ :

ಹೊಟ್ಟೆತೊಳೆಯುವದು,ಭೇದಿ ಉಪ್ಪಿನಿಂದ ವಿರೇಚನ ಮಾಡಿಸುವುದು ಮತ್ತು ಸೋಡಿಯಂ ಬೈ ಕಾರ್ಬೊನೇಟ್ ಮಿಶ್ರಣದ ಸೇವನೆಗಳು ಉಪಯುಕ್ತ ಚಿಕಿತ್ಸಾ ವಿಧಾನಗಳಾಗಿವೆ. ಮೂತ್ರ ವಿಸರ್ಜನೆಯಲ್ಲಿ ಏರುಪೇರಾಗದಂತೆ ನೋಡಿಕೊಳ್ಳುವುದು ಅತ್ಯಗತ್ಯ. ಇದಕ್ಕಾಗಿ ಸಾಕಷ್ಟು ಪ್ರಮಾಣದ ಬಾರ್ಲಿನೀರು, ಎಳನೀರು, ಗ್ಲುಕೋಸ್ ಪಾನಕ ಮತ್ತು ಧಾರಾಳ ತಣ್ಣೀರನ್ನು ಕುಡಿಸಬೇಕು. ಅವಶ್ಯವಾದರೆ 'ರಿಂಗರ್ ಸೊಲ್ಯೂಶನ್'ನ್ನು (ರಕ್ತನಾಳದ ಮೂಲಕ) ಕೊಡಬಹುದು.

ಟಿಪ್ಪಣಿ :

ಫಿನಾಯಿಲ್ ವರ್ಗದ ವಿಷ ಪ್ರಯೋಗವಾದ ರೋಗಿಗಳಲ್ಲಿ ಮೂತ್ರ ದೋಷ ಗಳಿಂದ ಹೆಚ್ಚಿನ ಅಪಾಯ ಸಂಭವಿಸಬಹುದು. ಆದ್ದರಿಂದ ಆ ಬಗ್ಗೆ ಸೂಕ್ತ ಚಿಕಿತ್ಸೆ ಮತ್ತು ಹೆಚ್ಚಿನ ಗಮನ ಅಗತ್ಯ. ರೋಗಿಯಲ್ಲಿ ಯಕೃತ್ ವಿಕಾರ ಹಾಗೂ ಅಶಕ್ತತೆ ಉಂಟಾಗುವುದರಿಂದ ಅವುಗಳಿಗೂ ಸೂಕ್ತ ಉಪಚಾರ ನಡೆಸಬೇಕು.

ನೆಫ್ತಲೀನ್ ಡಾಂಬರುಗೋಲಿ

ಪರಿಚಯ : ಬಟ್ಟೆ ಬರೆಗಳನ್ನು ಇರುವೆ ಇದ್ದಲು ಹಾಗೂ ಜಿರಳೆಗಳ ಬಾಧೆ ಯಿಂದ ರಕ್ಷಿಸಲು ಬಳಸುವ ಮಿರಿಮಿರಿ ಮಿಂಚುವ ಪೆಪ್ಪರಮಿಂಟಿನಂತಿರುವ ಚಿಕ್ಕ ಬಿಳಿಯ ಡಾಂಬರಗೋಲಿಗಳಿಗೆ ಜಿರಳೆಕಾಯಿ ನುಸಿಬಿಲ್ಲೆ, ಎಕ್ಕಳೆ ಮಾತ್ರೆ ಎಂದು ಮುಂತಾಗಿ ಕರೆಯುತ್ತಾರೆ. ಗಾಟು ವಾಸನೆ ಇರುವ ಈ ನೆಫ್ತಲೀನ್ ಗೋಲಿಗಳನ್ನು ಇದ್ದಲು ಡಾಂಬರಿನಿಂದ ಸಿದ್ಧಪಡಿಸುತ್ತಾರೆ. ಮೊನು ಕೈಗಾರಿಕೆಯಲ್ಲಿಯೂ ಅನೇಕ ಬಗೆಯ ಬಣ್ಣದ ಉದ್ಯಮದಲ್ಲಿಯೂ ನೇಫ್ತಲೀನ್‌ನ್ನು ಬಳಸುತ್ತಾರೆ.

ಪ್ರಾಣಾಪಾಯದ ಪ್ರಮಾಣ (ಸೇವನೆ) :

5–15 ಗ್ರಾಂ (ದೊಡ್ಡವರಿಗೆ); 2-2.6 ಗ್ರಾಂ (ಮಕ್ಕಳಿಗೆ) ನೆಫ್ತಲೀನ ಸೇವನೆ, ಸ್ಪರ್ಶ ಹಾಗೂ ಆಘ್ರಾಣ ವಿಷ.

ಆಘ್ರಾಣ ವಿಷ ಮತ್ತು ಸ್ಪರ್ಶವಿಷ ಲಕ್ಷಣಗಳು :

ನೇಫ್ತಲೀನ್ ಗೋಲಿಗಳನ್ನು ಬೇಯಿಸುವಾಗ ಹೊರಡುವ ಗಾಟು ವಾಸನೆಯ ಆವಿಯು (ಉಗಿಯು) ತೀಕ್ಷ್ಣವಾದ ಆಘ್ರಾಣ ವಿಷ. ಇದನ್ನು ಮೂಸಿದ ರೋಗಿ ಯಲ್ಲಿ ತಲೆ ತಿರುಗುವುದು ವಾಕರಿಕೆ ಮುಂತಾದ ಪ್ರಾರಂಭಿಕ ಲಕ್ಷಣಗಳೂ ದೃಷ್ಟಿ ದೋಷ ಹಾಗೂ ಬುದ್ಧಿಭ್ರಮಣೆ ಮೊದಲಾದ ಅನೇಕ ಅನಿಷ್ಟಗಳೂ ಉಂಟಾಗು ತ್ತವೆ. ನೆಫ್ತಲೀನ ಗೋಲಿಗಳನ್ನು ದೀರ್ಘಕಾಲ ಮೂಸುವದರಿಂದಲೂ ಈ ಬಗೆಯ ದುಷ್ಪರಿಣಾಮಗಳು ತುಸು ಮಟ್ಟಿಗೆ ಉಂಟಾಗಬಹುದು. ಇಂತಹ ರೋಗಿ ಗಳನ್ನು ತಕ್ಷಣ ಸ್ವಚ್ಛ ಹವೆ ಇರುವಲ್ಲಿಗೆ ಸ್ಥಳಾಂತರಿಸಿ, ವಿಷ ಸ್ಪರ್ಶವನ್ನು ತಪ್ಪಿಸ ಬೇಕು. ಇತರ ಉಪದ್ರವಗಳಿಗೆ ಸೂಕ್ತ ಉಪಚಾರ ನಡೆಸಬೇಕು.

ನೆಫ್ತಲೀನ ಗೋಲಿಗಳನ್ನು ಸ್ಪರ್ಶಿಸಿದಾಗ ಕೆಲವರಿಗೆ ಮೈ ಕೈ ನವೆ, ತುರಿಕೆ ಮತ್ತು ನೀರು ಸೋರುವ ಸಣ್ಣ ಸಣ್ಣ ವ್ರಣಗಳು ಉಂಟಾಗಬಹುದು. ಕಣ್ಣಿಗೆ ಸ್ಪರ್ಶವಾದರೆ ಕಣ್ಣು ಕೆಂಪಾಗುವುದು, ಕಣ್ಣೀರು ಸುರಿಯುವುದು, ದೃಷ್ಟಿ ಮಂಜಾ ಗುವುದು. ಮೊದಲಾದ ಉಪದ್ರವಗಳು ಕಾಣಿಸಬಹುದು. ಇಂತಹ ಪ್ರಸಂಗಗಳಲ್ಲಿ ಕಣ್ಣುಗಳನ್ನು ಕೂಡಲೇ ತಣ್ಣೀರಿನಿಂದ ಚೆನ್ನಾಗಿ ತೊಳೆಯಬೇಕು. ಮೈ ಕೈಗಳಿಗೆ ತಗಲಿದಾಗ ಸಾಬೂನು ಹಚ್ಚಿ ತಣ್ಣೀರಿನಿಂದ ತೊಳೆಯಬೇಕು. ಹುಣ್ಣುಗಳಾದರೆ ಸೂಕ್ತ ಉಪಚಾರ ನಡೆಸಬೇಕು.

ವಿಷ ಪ್ರಾಶನದ ಲಕ್ಷಣಗಳು :

ನೆಫ್ತಲೀನ ವಿಷವನ್ನು ಸೇವಿಸಿದ ರೋಗಿಯ ಬಾಯಲ್ಲಿ ಘಾಟು ವಾಸನೆ ಗೋಚರಿಸುತ್ತದೆ. ವಾಕರಿಕೆ, ವಾಂತಿ ಮತ್ತು ಭೇದಿ ಪ್ರಾರಂಭವಾಗುತ್ತದೆ. ಅವನ ಮನಸ್ಸಿನಲ್ಲಿ ಅತಿಶಯವಾದ ಭಯ ಭೀತಿಗಳು ಮೂಡಿ ಉದ್ವೇಗ, ಚಿತ್ತಚಾಂಚಲ್ಯ ಗಳು ಕಾಣುತ್ತವೆ. ಮೂತ್ರವಿಸರ್ಜನೆಯಾಗುವಾಗ ಹೆಚ್ಚಿನ ವೇದನೆ ಉಂಟಾಗು ವುದು ಒಮ್ಮೊಮ್ಮೆ ಮೂತ್ರ ಲೋಪವಾಗುವುದೂ ಉಂಟು. ಕಾಮಿಲಾರೋಗದ ಲಕ್ಷಣಗಳು, ಆದಿರುವಾಯುವು ಉಂಟಾಗಬಹುದು ಮತ್ತು ಸ್ಮೃತಿ ತಪ್ಪಬಹುದು.

ಚಿಕಿತ್ಸೆ ಮತ್ತು ಉಪಚಾರ :

ವಮನ, ಹೊಟ್ಟೆತೊಳೆಯುವದು ಮತ್ತುವಿರೇಚನ ಚಿಕಿತ್ಸೆಗಳನ್ನು ನಡೆಸ ಬೇಕು. ಈ ವಿಷವು ಬಹು ನಿಧಾನವಾಗಿ ರಕ್ತಗತವಾಗುವ ಕಾರಣ ಕಾಲವಿಳಂಬ ವಾದರೂ ಎದೆಗೆಡದೆ ಸರಿಯಾದ ಚಿಕಿತ್ಸೆ ನಡೆಸಿದರೆ ಉತ್ತಮ ಪರಿಣಾಮ ಖಚಿತ. ಸೋಡಿಯಂ ಬೈ ಕಾರ್ಬೋನೇಟ ಮಿಶ್ರಣ, ಬಾರ್ಲಿ ನೀರು, ಗ್ಲೂಕೋಸ್ ಪಾನಕ ಗಳನ್ನೂ, ಹೆಚ್ಚಿನ ಪ್ರಮಾಣದಲ್ಲಿ ತಣ್ಣೀರನ್ನೂ ರೋಗಿಗೆ ಕುಡಿಸಬೇಕು.

ಟಿಪ್ಪಣಿ:

ಹಾಲು, ಕೊಬ್ಬು–ತೈಲಾಂಶಗಳುಳ್ಳ ಯಾವ ಪದಾರ್ಥಗಳನ್ನೂ ನೆಫ್ತಲೀನ ವಿಷ ಪ್ರಾಷನವಾದ ರೋಗಿಗೆ ಕುಡಿಸಬಾರದು ಏಕೆಂದರೆ ಕೊಬ್ಬಿನಲ್ಲಿ ನೆಫ್ತಲೀನ ಸತ್ವವು ಕರಗುವದರಿಂದ ವಿಷ ಪ್ರಸಾರಕ್ಕೆ ಉತ್ತೇಜನ ನೀಡಿದಂತೆ ಆಗುತ್ತದೆ. (ಭೇದಿ ಉಪ್ಪನ್ನು ನೀಡಿ ಭೇದಿ ಮಾಡಿಸಬಹುದು).

ನೆಫ್ತಲೀನ ಬಾಲಕರಿಗೆ ಮಾರಕ ವಿಷ. ವರುಷದಲ್ಲಿ ಕನಿಷ್ಟಪಕ್ಷ 10 ಸಾವುಗಳು ಸಂಭವಿಸುತ್ತವೆ. ಪ್ರಾಣಾಪಾಯದ ಕಾಲಾವಧಿ 48 ತಾಸು. ಸ್ಪರ್ಶವಿಷದ ಉಪ ದ್ರವಗಳು ಗುಣಹೊಂದಲು 4–6 ತಿಂಗಳು ಹಿಡಿಯುತ್ತವೆ. ಮನೆಗಳಲ್ಲಿ ಮಕ್ಕಳ ಕೈಗೆ ಈ ಮಾರಕ ಗೋಲಿಗಳು ಸಿಗದಂತೆ ಮುನ್ನೆಚ್ಚರಿಕೆ ವಹಿಸಬೇಕು.

ಬೋರಿಕ ಪೌಡರ.

(ಬೋರಿಕ್ ಆಸಿಡ್, ಸೋಡಿಯಂ ಬೋರೆಟ ಮತ್ತು ಸೊಡಿಯಂ ಪರ್ ಬೋರೆಟ)

ಪರಿಚಯ : ಮುಖಕ್ಕೆ ಹಚ್ಚುವ ಸುವಾಸನೆಯ ಪೌಡರ್‌ನಲ್ಲಿರುವ ಕ್ರಿಮಿನಾಶಕ, ನಂಜುರೋಧಕ ದ್ರವ್ಯ ಬೋರಿಕ್ ಆಸಿಡ್. ಆಹಾರ

ವಸ್ತುಗಳನ್ನು ಕೆಡದಂತೆ ದೀರ್ಘಕಾಲ ಜೋಪಾನ ಮಾಡುವಾಗಲೂ (ಡಬ್ಬ ಶೇಖ ರಣೆಯಲ್ಲಿಯೂ) ಬೋರಿಕ ಆಸಿಡ್‌ನ್ನು ಸೇರಿಸುತ್ತಾರೆ. ಒಸಡುಬಾವು ಬಾಯಿ ಹುಣ್ಣುಗಳಿರುವವರು ಬೋರಿಕ್ ಪೌಡರ ಕಲಸಿದ ಬಿಸಿನೀರಿನಿಂದ ಬಾಯಿ ಮುಕ್ಕ ಳಿಸುತ್ತಾರೆ. ನಂಜು ಹುಣ್ಣುಗಳಿಗೆ ಹಚ್ಚುವ ಮುಲಾಮುಗಳ ಪೈಕಿ ಕೆಲವು ಬೋರಿಕ್ ಪುಡಿಯಿಂದ ತಯಾರಾದವು.

ಪ್ರಾಣಾಪಾಯದ ಪ್ರಮಾಣ: (ಸೇವನೆ) 1; ಗ್ರಾಂ. ಈ ವಿಷದ್ರವ್ಯದ ದುರುಪಯೋಗದಿಂದ ಪ್ರತಿ ವರ್ಷ ಸುಮಾರು 15 ಸಾವುಗಳು ಸಂಭವಿಸುತ್ತವೆ.

ದೀರ್ಘಕಾಲ ವಿಷ ಲಕ್ಷಣಗಳು :

ತೀಕ್ಷ್ಣದ್ರಾವಕದಿಂದ ಬಾಯಿಮುಕ್ಕುಳಿಸಿದರೆ ಬಾಯಿ ಮತ್ತು ದಂತಗಳಲ್ಲಿ ಸುಟ್ಟ ಗಾಯಗಳು ಮತ್ತು ಒಸಡು ಊತ–ವ್ರಣ ಕಾಣಿಸಿಕೊಳ್ಳುತ್ತವೆ. ಅಂತಹ ರೋಗಿಯು ತಣ್ಣೀರಿನಿಂದ ಚೆನ್ನಾಗಿ ಬಾಯಿ ತೊಳೆಯಬೇಕು, ಮತ್ತು ತುಪ್ಪ ಬೆಣ್ಣೆ ಮೊದಲಾದ ಜಿಡ್ಡು ಪದಾರ್ಥಗಳನ್ನು ಸವರಬೇಕು. ಚರ್ಮಕ್ಕೆ ಸ್ಪರ್ಶವಾಗಿದ್ದರೆ ಸಾಬೂನು ಹಚ್ಚಿ ಚೆನ್ನಾಗಿ ತೊಳೆಯಬೇಕು. ಬೋರಿಕ್ ಪೌಡರನ್ನು ದೀರ್ಘಕಾಲ ಅಲ್ಪಪ್ರಮಾಣದಲ್ಲಿ ಸೇವಿಸುತ್ತಿದ್ದರೆ ಅಗ್ನಿಮಾಂದ್ಯ, ಅಪಚನ ಮೊದಲಾದ ಉಪ ದ್ರವಗಳು ಉಂಟಾಗುವವು; ಮತ್ತು ಅಂತಹ ರೋಗಿಗಳ ಶರೀರದ ತೂಕವು ಕಮ್ಮಿ ಯಾಗಿ, ಶಕ್ತಿಗುಂದಿ ಆಯಾಸ, ದೌರ್ಬಲ್ಯಗಳೂ ಭೇದಿಯೂ ಪ್ರಾರಂಭಿಸುವವು.

ವಿಷ ಪ್ರಾಶನದ ಲಕ್ಷಣಗಳು :

ಪ್ರಾಣಾಪಾಯದ ಪ್ರಮಾಣದಲ್ಲಿ ಬೋರಿಕ್ ಆಸಿಡ್‌ನ್ನು ಸೇವಿಸಿದ ರೋಗಿ ಗಳಲ್ಲಿ ಆಲಸ್ಯವು ತಲೆದೋರಿ ವಾಂತಿ ಮತ್ತು ರಕ್ತಮಿಶ್ರಿತ ಭೇದಿಯಾಗುತ್ತವೆ. ಅಂತಹ ರೋಗಿಗಳಲ್ಲಿ ಮಾಂಸಖಂಡದ ಸೆಳತವು ಜ್ವರವೂ ಪ್ರಾರಂಭವಾಗಿ ಮೋರೆಯು ಬಣ್ಣ ನೀಲಿ ಛಾಯೆಗೆ ತಿರುಗುತ್ತದೆ; ರಕ್ತದ ಒತ್ತಡ ಇಳಿಮುಖವಾಗುತ್ತದೆ. ಮೂರ್ಛೆ, ಸೆಳೆತ ಹಾಗೂ ಕಾಮಿಲಾರೋಗದ ಲಕ್ಷಣಗಳು ಕಾಣಿಸಿಕೊಂಡು ಮರಣ ಸಂಭವಿಸಬಹುದು. ರೋಗಿಯ ಮೂತ್ರದಲ್ಲಿ ಆಲ್ಬುಮಿನ್, ರಕ್ತದ ಕೆಂಪುಕಣ ಮತ್ತು ಎಪಿಥೀಲಿಯಲ್ ಕಾಸ್ಟ್‌ಗಳು ಇರುತ್ತವೆ.

ಚಿಕಿತ್ಸೆ ಮತ್ತು ಉಪಚಾರ :

ವಿಷ ಪ್ರಾಶನವಾದ ರೋಗಿಗೆ ಹಾಲು–ತತ್ತಿಯ ಲೋಳೆಗಳನ್ನು ಕುಡಿಸಿ, ಸರ್ವಮಾನ್ಯಪ್ರತ್ಯೌಷಧ ನೀಡುವುದು ಹೊಟ್ಟೆ ತೊಳೆಯುವುದು ವಾಂತಿಮಾಡಿಸುವುದು

ಮತ್ತು ವಿರೇಚನೆ ಚಿಕಿತ್ಸೆ ನಡೆಸಬೇಕು. ಅಗತ್ಯಬಿದ್ದರೆ ಗ್ಲೂಕೋಸ್–ಉಪ್ಪು ನೀರುಗಳನ್ನು ರಕ್ತನಾಳದಮೂಲಕ ನೀಡಬೇಕು. ಸೆಳವು ನಿವಾರಣೆಗೂ ರಕ್ತಹೀನ–ತೆಗೂ ಸೂಕ್ತ ಚಿಕಿತ್ಸೆ ನಡೆಸಬೇಕು.

ಟಿಪ್ಪಣಿ :

ಬೋರಿಕ್ ಆಸಿಡ್ ವಿಷಪ್ರಾಶನವಾದ ಮಕ್ಕಳಲ್ಲಿ ಶೇಕಡಾ 50 ಬಾಲಕರು ಸಾವಿಗೀಡಾಗುತ್ತಾರೆ. ಆದ್ದರಿಂದ ಮಕ್ಕಳ ಕೈಗೆ ಸಿಗದಂತೆ ಮುಂಜಾಗ್ರತೆ ವಹಿಸಬೇಕು. ಚಿಕ್ಕ ಮಕ್ಕಳಿಗೆ ಹಾಲು ಕುಡಿಸುವ ಮೊಲೆತೊಟ್ಟಿನಂತಿರುವ ಬಾಟಲಿಯ ರಬ್ಬರು ಚೂಚುಕಕ್ಕೆ ಬೋರಿಕ್ ಪೌಡರನಿಂದ ತಯಾರಿಸಿದ ಕ್ರಿಮಿನಾಶಕ ಮುಲಾಮನ್ನು ಸವರುವ ಪದ್ಧತಿಯನ್ನುಕೈಬಿಡಬೇಕು. ಕೆಲವು ಮಕ್ಕಳು ಬೋರಿಕ್ ಆಸಿಡ್ ಮಿಶ್ರಿತ ಪೌಡರನ್ನು ತಿನ್ನುವ ಅಭ್ಯಾಸ ಇರಿಸಿಕೊಂಡಿರುತ್ತವೆ. ಅದನ್ನು ತಪ್ಪಿಸಬೇಕು.

ಪೊಟ್ಯಾಸಿಯಂ ಪರಮಾಂಗನೇಟ್

ಪರಿಚಯ :

ಹಳ್ಳಿಗಳಲ್ಲಿ ಕುಡಿಯುವ ಬಾವಿಯ ನೀರು ಕೆಟ್ಟಾಗ ಸುಣ್ಣದ ಪುಡಿ ಚೆಲ್ಲಿ ಶುದ್ಧ ಮಾಡುತ್ತಾರಷ್ಟೇ? ಕೆಲವೊಮ್ಮೆ ನೇರಳೆ ಬಣ್ಣದ ಹರಳನ್ನುರಾಡಿ ಮಾಡಿ ಬಾವಿಗೆ ಸುರಿದು ಒಂದೆರಡು ದಿನಗಳ ನಂತರ ಆ ಬಾವಿಯ ನೀರನ್ನು ಬಳಸಲು ಪ್ರಾರಂಭಿಸುವದೂ ಉಂಟು—ಈ ಔಷಧಿ ಹರಳಿಗೆ ಪೊಟ್ಯಾಸಿಯಂ ಪರಮಾಂಗನೇಟ್ ಎಂದು ಹೆಸರು. 1: 1000 ಪ್ರಮಾಣದ ಸಾಂದ್ರತೆಯಲ್ಲಿ ಪೊಟ್ಯಾಸಿಯಂ ಪರಮಾಂಗನೇಟ್ ಉತ್ತಮ ನಂಜು ನಿರೋಧಕ ಕ್ರಿಮಿನಾಶಕವಾದರೂ ಅಧಿಕಸಾಂದ್ರತೆಯಲ್ಲಿ ಸ್ಪರ್ಶ ಹಾಗೂ ಸೇವನಾ ವಿಷ.

ಪ್ರಾಣಾಪಾಯ ಪ್ರಮಾಣ :

5 ರಿಂದ 10 ಗ್ರಾಂ, ದಪ್ಪ ರಾಡಿ ಮಾಡಿ ಮೈ ಕೈಗಳ ಮೇಲೆ ಹೆಚ್ಚಿದರೆ ಸುಟ್ಟಗಾಯದಂತೆ ವ್ರಣಗಳು ಉಂಟಾಗುತ್ತವೆ. ವಿಷಪ್ರಾಶನವಾದ ಅರ್ಧತಾಸಿನೊಳಗೆ ಅಥವಾ ಒಂದೆರಡು ದಿನಗಳ ನಂತರವೂ ಪ್ರಾಣಾಪಾಯ ಸಂಭವಿಸಬಹುದು.

ಸ್ಪರ್ಶ ವಿಷದ ಲಕ್ಷಣ—ಚಿಕಿತ್ಸೆ :

ಗರ್ಭಪಾತದ ದುರುದ್ದೇಶದಿಂದ ಪೊಟ್ಯಾಶಿಯಂ ಪರಮಾಂಗನೇಟಿನ ತೀಕ್ಷ್ಣವಾದ ಗಟ್ಟಿ ಮುಲಾಮನ್ನು ಗರ್ಭಕೋಶದ ಬಾಯಿಗೆ ಲೇಪಿಸುವುದುಂಟು. ಇದು

ಅತ್ಯಂತ ಅಪಾಯಕಾರಿ. ಸ್ಥಾನಿಕವಾಗಿ ಉರಿ, ನೋವು, ರಕ್ತಸ್ರಾವ ಹಾಗೂ ಜನನೇಂದ್ರಿಯ ವ್ರಣ, ಬಿರುಕು ಮೊದಲಾದ ಉಪದ್ರವಗಳುಂಟಾಗಿ ಪ್ರಾಣಾಪಾಯ ಸಹ ಸಂಭವಿಸಬಹುದು. ಇಂತಹ ಸಂದರ್ಭಗಳಲ್ಲಿ ವಿಷಲೇಪನವನ್ನು ತಕ್ಷಣ ತಣ್ಣೀರಿನಿಂದ ಚೆನ್ನಾಗಿ ತೊಳೆದು ತೆಗೆದು, ವೇದನಾಶಾಮಕ ಚಿಕಿತ್ಸೆ ನಡೆಸಬೇಕು; ಮತ್ತು ವ್ರಣಗಳಿಗೆ ಸೂಕ್ತ ಚಿಕಿತ್ಸೆ–ಅಗತ್ಯ ಬಿದ್ದರೆ ಶಸ್ತ್ರಚಿಕಿತ್ಸೆಯನ್ನು ಸಹ ನಡೆಸಬೇಕು.

ವಿಷಪ್ರಾಶನದ ಲಕ್ಷಣಗಳು :

ಪೊಟ್ಯಾಶಿಯಂ ಪರಮಾಂಗನೇಟ್ ವಿಷಪ್ರಾಶನದ ಪ್ರಥಮ ಲಕ್ಷಣವೆಂದರೆ ರೋಗಿಯ ನಾಲಿಗೆ ತುಟಿ, ಗಂಟಲು ಮತ್ತು ಬಾಯಲ್ಲಿ ಕಾಣಿಸುವ ನೇರಳೆ ಬಣ್ಣದ ಛಾಪು. ಗಂಟಲುಊತ ಮತ್ತು ಕೆಮ್ಮು ಕ್ರಮೇಣ ಪ್ರಾರಂಭಿಸಿ ರೋಗಿಯ ನಾಡಿಯು ಮಂದವಾಗತೊಡಗುತ್ತದೆ; ಮತ್ತು ರಕ್ತದ ಒತ್ತಡ ಇಳಿಮುಖವಾಗುತ್ತದೆ. ಮೂತ್ರಲೋಪ, ಆಘಾತ ಹಾಗೂ ಅರಿಶಿಣಮುಂಡಿಗೆ ರೋಗದ ಲಕ್ಷಣಗಳು ಕಾಣಿಸಿಕೊಂಡು ಸಾವು ಸಂಭವಿಸಬಹುದು.

ಚಿಕಿತ್ಸೆ :

ಪೊಟ್ಯಾಶಿಯಂ ಪರಮಾಂಗನೇಟ್ ವಿಷಸೇವನೆ ಮಾಡಿದ ರೋಗಿಗೆ ತಕ್ಷಣ ನಾಲ್ಕಾರು ಲೋಟ ಹಾಲು ಕುಡಿಸಬೇಕು. ವಮನ ಮಾಡಿಸುವುದು ಸರ್ವಮಾನ್ಯ ಪ್ರತ್ಯೌಷಧಿ ನೀಡುವುದು, ಹೊಟ್ಟೆ ತೊಳೆಯುವುದು ಮತ್ತು ವಿರೇಚನ ಮಾಡಿಸುವುದು ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆಗಳನ್ನು ನಡೆಸಬೇಕು. ತತ್ತಿಯ ಲೋಳೆಯನ್ನು ಹಾಲಿನಲ್ಲಿ ಕಲಸಿ ಮೇಲಿಂದ ಮೇಲೆ ಎರಡು ಮೂರು ಬಾರಿ ಪ್ರಥಮತ ನೀಡುವುದು ತುಂಬ ಹಿತಕರವೆಂದು ಕಂಡುಬಂದಿದೆ. ಇತರ ಉಪದ್ರವಗಳಿಗೆ ಸಂದರ್ಭಾನುಸಾರ ಸೂಕ್ತ ಚಿಕಿತ್ಸೆ ಮಾಡಬೇಕು.

ಅಯೋಡಿನ್

(ಟಿಂಕ್ಚರ್ ಅಯೋಡಿನ, ಅಯೋಡೋಫಾರಂ, ಅಯೋಡೋಕ್ಲೊರಿಡೋಕ್ವಿನೇಕ್ವಿನ್ ಮತ್ತು ಅಯೋಡೈಡುಗಳು)

ಪರಿಚಯ : ಗಾಯಗಳಲ್ಲಿ ಆಗುವ ರಕ್ತಸ್ರಾವವನ್ನು ಹೆಪ್ಪುಗಟ್ಟಿಸಲು ಹಚ್ಚುವ ಟಿಂಕ್ಚರ ಅಯೋಡಿನ್‌ನ್ನು ಗುರುತಿಸಿದವರಿಲ್ಲ. ಗೂರಲುಕೆಮ್ಮು(ಅಸ್ಥಮಾ) ಚಿಕಿತ್ಸೆಗೂ ದೇಹ ಬೆಳವಣಿಗೆಯ ಸಮತೋಲನೆಗೂ ಅಯೋಡಿನ್ ಬೇಕೇಬೇಕು.

ಅಲ್ಪ ಪ್ರಮಾಣದ ಟಿಂಕ್ಚರ್ ಅಯೋಡಿನ್ ದ್ರಾವಣವನ್ನು ಕೃತಕವಾಂತಿಮಾಡಿಸಲು ಉಪಯೋಗಿಸುತ್ತಾರೆ (ಒಂದು ಲೋಟ ನೀರಿಗೆ 8-10 ಹನಿ ಪ್ರಮಾಣ). ಒಗ್ಗದವರಲ್ಲಿ ಅಯೋಡಿನ್‌ನ್ನು ಮುಟ್ಟಿದರೆ ಅಥವಾ ಮೂಸಿದರೆ ತೀರಾ ಅನಿರೀಕ್ಷಿತವಾಗಿ ದುಷ್ಪರಿಣಾಮಗಳು ಉಂಟಾಗಿ ರೋಗಿಯು ಮೂರ್ಛೆ ತಪ್ಪಬಹುದು. ಒಗ್ಗದವರು ಅಯೋಡಿನ್‌ನ್ನು ಸೇವಿಸಿದರಂತೂ ಮೇಲುಸಿರು ಮುಖವಿವರ್ಣತೆ ಕಂಪನ ಮೊದಲಾದ ತೊಂದರೆಗಳು ಉದ್ಭವಿಸಿ ರಕ್ತದ ಒತ್ತಡ ಇಳಿಮುಖವಾಗಿ ಹಟಾತ್ತನೆ ರೋಗಿಯು ಕುಸಿದು ಬಿದ್ದು ಪ್ರಾಣಾಂತಿಕ ಅಪಾಯವು ಸಂಭವಿಸಬಹುದು.

ಪ್ರಾಣಾಪಾಯದ ಪ್ರಮಾಣ (ಸೇವನೆ) :

2 ಗ್ರಾಂ. ಕಣ್ಣಿಗೆ ನಾಲ್ಕಾರು ಹನಿ ಟಿಂಕ್ಚರ ಅಯೋಡಿನ್ ಬಿದ್ದರೆ ಕಣ್ಣು ಕುರುಡು ಆಗುವಷ್ಟು ತೀವ್ರ ದುಷ್ಪರಿ ಣಾಮ ಉಂಟಾಗಬಹುದು. ಟಿಂಕ್ಚರ ಅಯೋಡಿನ 1-2 ಗ್ರಾಂ. ಸೇದಿಸಿದರೆಸಾವು ಸಂಭವಿಸುವುದು; ಆದರೆ 6 ಔಂಸುಗಳಷ್ಟು ಟಿಂಕ್ಚರ್ ಅಯೋಡಿನ್ ಕುಡಿದರೂ ಸಕಾಲದ ಸೂಕ್ತ ಚಿಕಿತ್ಸೆಯಿಂದ ಗುಣವಾದ ನಿದರ್ಶನವಿದೆ. ಪ್ರಾಣಾಪಾಯದ ಕಾಲಾವಧಿ 24-48 ತಾಸು.

ದೀರ್ಘಕಾಲ ವಿಷಸೇವನೆಯ ಲಕ್ಷಣಗಳು :

ಔಷಧಿ ರೂಪದಲ್ಲಿ ದೀರ್ಘಕಾಲ ಅಥವಾ ಪ್ರಮಾಣ ತಪ್ಪಿ ಅಯೋಡಿನ ದ್ರವ್ಯವನ್ನು ಯಾವುದೇ ರೂಪದಿಂದ ಸೇವಿಸಿದರೂ ರೋಗಿಗೆ ಬಾಯಿಹುಣ್ಣು, ಮೂಗು ಸೋರಿಕೆ, ಅರುಚಿ, ಅಗ್ನಿಮಾಂದ್ಯ ಮೊದಲಾದ ಉಪದ್ರವಗಳು ತಲೆದೋರುತ್ತವೆ. ನಿದ್ರೆ ಕಮ್ಮಿಯಾಗಿ ಮೈ ಕೈಗಳ ಮೇಲೆ ಪಿತ್ತಗಂಡೆಗಳೂ ಮೊಡವೆಗಳೂ ಎದ್ದು ಕಣ್ಣುನೋವು ಸಹ ಉಂಟಾಗುತ್ತವೆ. (ಇದಕ್ಕೆ ಅಯೋಡಿಸಂ ಎಂದು ಹೆಸರು). ನರದೌರ್ಬಲ್ಯ, ಚಂಚಲ ಚಿತ್ತವೃತ್ತಿಗಳು ಕಾಣಿಸಿಕೊಂಡು ರೋಗಿಗೆ ತಾನು ಅಸುಖಿ ಎಂಬ ಭಾವನೆ ಬೆಳೆದು ಆತ್ಮಕನಿಕರದಿಂದ ಅವನು ನರಳುತ್ತಾನೆ. ವಾಕರಿಕೆ, ವಾಂತಿ ಭೇದಿಗಳಿಂದಲೂ ತೊಂದರೆಗಳು ಉಂಟಾಗಿ ಅವನ ದೇಹವು ಸೊರಗುವುದು. ಸ್ತ್ರೀಯರ ಮೊಲೆಗಳೂ ಪುರುಷರ ವೃಷಣಗಳೂ ಜೋಲುಬೀಳುವುವು. ಈ ಲಕ್ಷಣಗಳು ಕಾಣಿಸತೊಡಗಿದ ಕೂಡಲೇ ಯಾವದೇ ರೀತಿಯಲ್ಲೂ ಅಯೋಡಿನ್ ಬಳಕೆಯನ್ನು ರೋಗಿಯು ಮಾಡದಂತೆ ನೋಡಿಕೊಳ್ಳಬೇಕು. ಅವನಿಗೆ ಅನ್ನ ಆಹಾರಗಳಲ್ಲಿ ತುಸು ಹೆಚ್ಚು ಉಪ್ಪು ಸೇವಿಸುವಂತೆ ಹೇಳಬೇಕು. 'ಸ್ಟಿರಾಯಿಡ್' ಮಾತ್ರೆಗಳು ಉಪಯುಕ್ತವಾಗಿವೆ.

ವಿಷ ಪ್ರಾಶನದ ಲಕ್ಷಣಗಳು :

ಅಯೋಡಿನ್ ವಿಷವನ್ನು ಸೇವಿಸಿದ ರೋಗಿಯ ನಾಲಗೆ ಮತ್ತು ಬಾಯಿಯಲ್ಲಿ ಕಂದು ಮಿಶ್ರಿತ ಛಾಯೆಯು ಕಾಣಿಸಿಕೊಂಡು ಲೋಹದ ರುಚಿಯು ಉಂಟಾಗುತ್ತದೆ. ಅಂತಹ ರೋಗಿಗಳಲ್ಲಿ ವಾಂತಿ, ಭೇದಿ, ಹೊಟ್ಟೆನುಲಿತ ಹೊಟ್ಟೆನೋವು, ನೀರಡಿಕೆ ಮತ್ತು ಜ್ವರ ಪ್ರಾರಂಭಿಸುತ್ತವೆ. ಮೂತ್ರವಿಸರ್ಜನೆಯು ಲೋಪವಾಗುವುದು, ಬಡಬಡಿಕೆ, ಮೂರ್ಛೆ ಮತ್ತು ಸಾವು ಸಂಭವಿಸಬಹುದು.

ಚಿಕಿತ್ಸೆ ಮತ್ತು ಉಪಚಾರ :

ಅಯೋಡಿನ್ ವಿಷ ಪ್ರಾಶನವಾದ ರೋಗಿಗೆ ನಾಲ್ಕಾರು ಲೋಟ ಹಾಲನ್ನು ತಕ್ಷಣ ಕುಡಿಸಬೇಕು. ತತ್ತಿಯ ಲೋಳೆ ಅಥವಾ ಗೋಧಿ ಹಿಟ್ಟಿನ ರಾಡಿಯನ್ನೂ ಕುಡಿಸಬಹುದು. ವಾಂತಿ ಮಾಡಿಸುವುದು ಮತ್ತು ಹೊಟ್ಟೆತೊಳೆಯುವದು ಮತ್ತು ಭೇದಿ ಉಪ್ಪು ನೀಡಿ ವಿರೇಚನ ಮಾಡಿಸುವುದು ಮತ್ತು ಸೋಡಿಯಂ ಥಿಯೋ ಸಲ್ಫೇಟ್ ದ್ರಾವಣ ಸೇವನೆ ತುಂಬಾ ಉಪಯುಕ್ತವಾಗಿವೆ. 'ಬೆನೆಡ್ರಿಲ್', 'ಹೈಡ್ರೋ ಕಾರ್ಟಿ ಸೋನ್' ಅಥವಾ ಬೆಟ್ನಸಾಲ್ ಸೂಜಿಮದ್ದು, ಕೃತಕ ಉಸಿರಾಟ ಮತ್ತು ಅಗತ್ಯ ಬಿದ್ದರೆ ಆಮ್ಲ ಜನಕ ನೀಡಿಕೆಗಳನ್ನು ಒದಗಿಸಬೇಕು. ರೋಗಿಯಲ್ಲಿ ಮೂತ್ರ ಲೋಪವನ್ನು ತಡೆಗಟ್ಟಲು ಧಾರಾಳ ಪ್ರಮಾಣದಲ್ಲಿ ಹಾಲು, ಬಾರ್ಲಿನೀರು, ಗ್ಲೂಕೋಸ್ ಪಾನಕ, ಎಳನೀರುಗಳನ್ನು ಕುಡಿಸಬೇಕು. ಸಾಕಷ್ಟು ನೀರನ್ನು ಸಹ ನೀಡಬೇಕು. ಗಂಟಲು-ಬಾಯಿಗಳ ವ್ರಣಕ್ಕೆ ವ್ರಣರೋಪಣಚಿಕಿತ್ಸೆ ನಡೆಸಬೇಕು.

ಟಿಪ್ಪಣಿ :

ಟಿಂಕ್ಚರ ಅಯೋಡಿನ್‌ನ ಬಣ್ಣ, ಸಾಮಾನ್ಯವಾಗಿ ಕಣ್ಣುನೋವುಗಳಿಗೆ ಉಪ ಯೋಗಿಸುವ ದ್ರಾವಕದ ಬಣ್ಣದಲ್ಲಿರುವದರಿಂದ ಕೈತಪ್ಪಿ ಅದನ್ನು ಕಣ್ಣಿಗೆ ಹಾಕಿ ಅಪಾಯ ಸಂಭವಿಸಿದ ಪ್ರಸಂಗಗಳಿವೆ; ಎಚ್ಚರಿಕೆ. ಮಕ್ಕಳ ಕೈಗೆ ಸಿಗದಂತೆ ಟಿಂಕ್ಚರ್ ಅಯೋಡಿನ್‌ನ್ನು ಎತ್ತರದಲ್ಲಿ ಇರಿಸಬೇಕಾದ್ದು ಅತ್ಯಗತ್ಯ.

ಕರ್ಪೂರ

ಪರಿಚಯ :

ನಮ್ಮ ಧಾರ್ಮಿಕ ವಿಧಿಗಳಲ್ಲಿ–ಮುಖ್ಯವಾಗಿ ಆರತಿಗೆ ಬಳಸುವ ಕರ್ಪೂರವನ್ನು ಕರ್ಪೂರ ಗಿಡದಿಂದ ನಿರ್ಯಾಸಮಾಡಿ ಸಂಗ್ರಹಿಸುತ್ತಾರೆ. ಆರತಿ ಕರ್ಪೂರ, ಪಚ್ಚೆಕರ್ಪೂರ ಎಂಬ ಎರಡು ಬಗೆಯ ಕರ್ಪೂರಗಳಲ್ಲದೆ ಟರ್ಪೆಂಟ್ಯಾನ್ ಮತ್ತು ಹೈಡ್ರೋಕ್ಲೋರಿಕ್ ಆಮ್ಲಗಳ ಸಂಯೋಜನೆಯಿಂದ ಕೃತಕವಾಗಿ ರಾಸಾಯ

ನಿಕಕರ್ಪೂರವನ್ನು ಸಹ ತಯಾರಿಸುತ್ತಾರೆ. ಕರ್ಪೂರಕ್ಕೆ ತೀಕ್ಷ್ಣವಾದ ವಾಸನೆ, ಕಹಿಯಾದ ರುಚಿ ಇದ್ದು ಉರಿಹಚ್ಚಿ ನೀರಿನ ಮೇಲೆ ತೇಲ ಬಿಟ್ಟರೆ ಕೂಡಾ ಅದು ಆರುವದಿಲ್ಲ. ಆಯುರ್ವೇದಲ್ಲಿಯೂ, ಆಧುನಿಕ ಔಷಧಶಾಸ್ತ್ರದಲ್ಲಿಯೂ ಕರ್ಪೂರ ವನ್ನು ಉತ್ತೇಜಕ, ಕಫಹರ, ವೇದನಾಶಾಮಕ ಔಷಧಿಗಳಲ್ಲಿಯೂ, ಕ್ರಿಮಿನಾಶಕ ವಾಗಿಯೂ ಬಳಸುತ್ತಾರೆ. ಕರ್ಪೂರವು ಕ್ಷೋಭಕ ವಿಷವಾಗಿರುವುದರಿಂದ ಸ್ಪರ್ಶವಾದ ಭಾಗದಲ್ಲಿ ಉರಿ ವೇದನೆಗಳುಂಟಾಗಿ ಚರ್ಮವು ಕೆಂಪಾಗುತ್ತದೆ. ಕರ್ಪೂರವು ಸೇವನಾವಿಷ.

ಪ್ರಾಣಾಪಾಯದ ಪ್ರಮಾಣ (ಸೇವನೆ) : 1 ಗ್ರಾಂ.

ವಿಷ ಪ್ರಾಶನದ ಲಕ್ಷಣಗಳು : ಕರ್ಪೂರ ವಿಷ ಸೇವಿಸಿದ ರೋಗಿಯ ಬಾಯಲ್ಲಿ ಕರ್ಪೂರದ ವಾಸನೆ ಉರಿ ಮತ್ತು ನೋವು ಕಾಣಿಸಿಕೊಂಡು ನೀರಡಿಕೆ,

ಕೆ, ತಲೆತಿರುಗುವುದು, ವಾಂತಿ, ಉದ್ವೇಗ ಮತ್ತು ದೃಷ್ಟಿದೋಷಗಳಿಂದ ಅವನು ನರಳುತ್ತಾನೆ. ಅವನ ಕಣ್ಣುಗೊಂಬೆ ವಿಸ್ತಾರಗೊಂಡು, ನಾಡಿಯು ತೀವ್ರ ವಾಗಿ ಹಾಗೂ ಉಸಿರಾಟವು ಮಂದವಾಗಿ ಬಿಡುತ್ತದೆ. ಮೈಸೆಟೆತ, ಬಡಬಡಿಕೆ ಕಂಪನ ಮೊದಲಾದ ಉಪದ್ರವಗಳು ಉಂಟಾಗುತ್ತವೆ. ಮುಂದೆ ಸ್ಮೃತಿ ತಪ್ಪಿ ರೋಗಿಯು ಮರಣಕ್ಕೆ ತುತ್ತಾಗಬಹುದು. ರೋಗಿಯ ಮಲ, ಮೂತ್ರ, ವಾಂತಿ ಹಾಗೂ ಉಸಿರುಗಳಲ್ಲಿ ಕರ್ಪೂರದ ವಾಸನೆ ಗೋಚರಿಸುತ್ತದೆ.

ಚಿಕಿತ್ಸೆ ಮತ್ತು ಉಪಚಾರ :

ಉಪ್ಪುನೀರಿನ ದ್ರಾವಕದಿಂದ ರೋಗಿಯ ಹೊಟ್ಟೆ ತೊಳೆಯುವುದು, ವಮನ ಮಾಡಿಸುವುದು, ಭೇದಿ ಉಪ್ಪಿನಿಂದ ವಿರೇಚನ ಮಾಡಿಸುವುದು ಮೊದಲಾದ ಚಿಕಿತ್ಸೆ ನಡೆಸಬೇಕು. ಸೆಳವು ನಿವಾರಣಾರ್ಥ ಶಾಮಕ ಔಷಧಿ ಮತ್ತು ಉಪಚಾರ ನಡೆಸಬೇಕು. ಅಗತ್ಯಬಿದ್ದರೆ ಆಮ್ಲಜನಕ ನೀಡಿಕೆಯನ್ನು ಒದಗಿಸಬೇಕು.

ಪ್ರಾಣಾಪಾಯದ ಕಾಲಾವಧಿ 24 ತಾಸು. ಪ್ರತಿವರ್ಷ 12 ಸಾವುಗಳು ಸಂಭವಿಸುತ್ತವೆ.

ಟರ್ಪೆಂಟೈನ್, ವಾರ್ನಿಷ್ ಮತ್ತು ಫ್ರೆಂಚ್ ಪಾಲಿಸ್ :

ಪರಿಚಯ :

ಕುರ್ಚಿ ಮೇಜುಗಳು ಮಿರಿ ಮಿರಿ ಮಿಂಚುವಂತೆ ಬಡಗಿಗಳು ಸವರುವ ಎಣ್ಣೆಯನ್ನು ನೋಡಿಲ್ಲವೇ ? ಆ ಮೆರುಗು ಎಣ್ಣೆ ವಾರ್ನಿಷ್ ಇಲ್ಲವೆ ಫ್ರೆಂಚಪಾಲಿಷ್. ಕಟ್ಟಿಗೆಯ ಬಾಗಿಲು ಕಿಟಕಿಗಳು ಗಾಳಿ ಮಳೆ ಬಿಸಿಲುಗಳ ಹೊಡೆತ

ವನ್ನು ತಾಳಿಕೊಂಡು, ಹೆಚ್ಚು ಬಾಳಿಕೆ ಬರಲು ವಾರ್ನಿಷ್ ನೆರವಾಗುತ್ತದೆ. ಇದೇ ವರ್ಗಕ್ಕೆ ಸೇರಿದ ಇನ್ನೊಂದು ಎಣ್ಣೆ ಟರ್ಪೈಂಟೈನ್. ಒಂದು ಬಗೆಯ ಹುಳಗಳು ಮರಗಳಲ್ಲಿ ಸಿದ್ಧಗೊಳಿಸಿ ಸ್ರವಿಸುವ ಅಂಟುರಾಳವನ್ನು ಸಂಗ್ರಹಿಸಿ ಸಂಸ್ಕರಿಸಿ ಮಧ್ಯಸಾರದಲ್ಲಿ ಬೆರೆಸಿ ಟರ್ಪೈಂಟೈನ್, ವಾರ್ನಿಷ್, ಮತ್ತು ಫ್ರೆಂಚ್ ಪಾಲಿಷ್‌ಗಳನ್ನು ತಯಾರಿಸುತ್ತಾರೆ. ಬಣ್ಣದ ಕೈಗಾರಿಕೆಯಲ್ಲಿ ವಾರ್ನಿಷ್ ಒಂದು ಅಗತ್ಯ ವಸ್ತು. ಈ ದ್ರವ್ಯಗಳು ಸೇವನಾವಿಷ, ಆಘ್ರಾಣ ವಿಷ ಹಾಗೂ ಸ್ಪರ್ಶ ವಿಷ.

ಪ್ರಾಣಾಪಾಯದ ಪ್ರಮಾಣ : (ಸೇವನೆ) 15 ಗ್ರಾಮ್ ಅಥವಾ ಅರ್ಧ ಔಂಸ.

ಆಘ್ರಾಣವಿಷ ಲಕ್ಷಣಗಳು ಮತ್ತು ಚಿಕಿತ್ಸೆ :

ವಿವಿಧ ಕೈಗಾರಿಕೆಗಳಲ್ಲಿ ಟರ್ಪೈಂಟೈನನ್ನು ಬೇಯಿಸುತ್ತಿರುವಾಗ ಆ ವಾಸನೆಯನ್ನು ಮೂಸುವುದು ಮತ್ತು ಅದರ ಆವಿಯನ್ನು (ಹೊಗೆಯನ್ನು) ಆಘ್ರಾಣಿಸುವದು ತೀರಾ ಅಪಾಯಕಾರಿ. ಅಂತಹ ರೋಗಿಗಳ ಕಣ್ಣು ಮೂಗುಗಳಲ್ಲಿ ತಕ್ಷಣನವೆ, ತುರಿಕೆ. ಪ್ರಾರಂಭವಾಗಿ ಉಸಿರು ಕಟ್ಟಿದಂತಾಗುವದು. ಎದೆಉರಿ, ಕಾಣಿಸಿಕೊಂಡು ಕಣ್ಣುಕತ್ತಲುಬಂದು ಮೂರ್ಛೆ ತಪ್ಪಬಹುದು. ಉಸಿರಾಟ ಹಾಗೂ ನಾಡಿಯ ಬಡಿತಗಳಲ್ಲಿ ಅನಿರೀಕ್ಷಿತ ಏರುಪೇರುಗಳುಂಟಾಗಬಹುದು. ಸೆಳವು ಹಾಗೂ ದೀರ್ಘಸುಪ್ತಿಗೆ ರೋಗಿಯು ತುತ್ತಾಗುವ ಸಂಭವವಿರುತ್ತದೆ. ಇಂತಹ ಅಪಾಯಕ್ಕೊಳಗಾದ ರೋಗಿಯನ್ನು ತಕ್ಷಣ ವಿಷ ಪರಿಸರದಿಂದ ಹೊರಕ್ಕೆ ಸಾಗಿಸಿ ಸ್ವಚ್ಛ ಹವೆಯಿರುವಲ್ಲಿಗೆ ಸ್ಥಳಾಂತರಿಸಬೇಕು. ಅವನನ್ನು ಅಂಗಾತ ಮಲಗಿಸಿ ಬಿಗಿ ಉಡುಗೆಗಳನ್ನು ಸಡಲಿಸಿ, ಎದೆ ಮತ್ತು ಮೊಲೆಯ ಮೇಲೆ ತುಸು ತಣ್ಣೀರನ್ನು ಚಿಮುಕಿಸಬೇಕು. ಅಗತ್ಯಬಿದ್ದರೆ ಕೃತಕ ಉಸಿರಾಟವನ್ನೂ, ಆಮ್ಲಜನಕ ನೀಡಿಕೆಯನ್ನೂ ಒದಗಿಸಬೇಕು.

ವಿಷ ಪ್ರಾಶನದ ಲಕ್ಷಣಗಳು :

ಟರ್ಪೈಂಟೈನ್, ವಾರ್ನಿಷ್ ಮತ್ತು ಫ್ರೆಂಚಪಾಲಿಷ್ ವಿಷವನ್ನು ಸೇವಿಸಿದ ರೋಗಿಯ ನಾಲಗೆ, ಗಂಟಲುಗಳಲ್ಲಿ ಉರಿ, ನವೆ ಮತ್ತು ಕಿರೆತಗಳುಂಟಾಗಿ ವಾಂತಿ, ವಾಕರಿಕೆ ಮತ್ತು ಭೇದಿ ಪ್ರಾರಂಭವಾಗುತ್ತದೆ. ಆ ರೋಗಿಯು ಹೊಟ್ಟೆಉರಿ, ಹೊಟ್ಟೆಶೂಲೆ ಮತ್ತು ಮೂತ್ರವಿಸರ್ಜನೆಯ ವೇದನೆಗಳಿಂದ ನರಳುತ್ತಾನೆ. ಉಸಿರಾಟ ಮತ್ತು ನಾಡಿಯ ಬಡಿತದಲ್ಲಿ ಏರುಪೇರು, ಮುಖಚಹರೆಯ ವಿವರ್ಣತೆ ಮತ್ತು ಅದಿರುವಾಯು ಮೂರ್ಛೆ ಸಂಭವಿಸಬಹುದು. ರೋಗಿಯ ಮೂತ್ರದಲ್ಲಿ ಅಲ್ಬಮಿನ್, ಹೆಮೊಗ್ಲೋಬಿನ್ ಮತ್ತು ರಕ್ತಕ ಕೆಂಪು ಕಣಗಳು ಇರುತ್ತವೆ.

ಚಿಕಿತ್ಸೆ ಮತ್ತು ಉಪಚಾರ:

ಹೊಟ್ಟೆ ತೊಳೆಯುವದು, ವಮನ ಮಾಡಿಸುವದು, ವಿರೇಚನ ಮಾಡಿಸುವದು ಮೊದಲಾದ ಲಾಕ್ಷಣಿಕ ಚಿಕಿತ್ಸೆಗಳನ್ನು ನಡೆಸಬೇಕು. ರೋಗಿಯಲ್ಲಿ ಹೃದಯದ ಊತ ಕಾಣಿಸಿಕೊಂಡರೆ ಅಥವಾ ಮೂತ್ರಲೋಪ ಉಂಟಾದರೆ ಸೂಕ್ತ ಚಿಕಿತ್ಸೆ ಕೈಗೊಳ್ಳಬೇಕು. ರೋಗಿಗೆ ಸಾಕಷ್ಟು ಬಾರ್ಲಿನೀರು, ಗ್ಲೂಕೋಸಪಾನಕ, ಎಳನೀರು ಮತ್ತು ತಣ್ಣೀರುಗಳನ್ನು ಕೊಡಬೇಕು.

ಪ್ರಾಣಾಪಾಯದ ಕಾಲಾವಧಿ 24 ತಾಸು.

ಅಧ್ಯಾಯ—3

ಲೋಹ ವಿಷಗಳು

ಪಾದರಸ

ಪರಿಚಯ :

ಜ್ವರವನ್ನು ಅಳೆಯುವ ಥರ್ಮಾಮೀಟರಿನ ಗಾಜಿನ ಕೊಳವೆಯ ಕೆಳ ತುದಿಯಲ್ಲಿ ಸಂಚಿತವಾಗಿರುವ ಬೆಳ್ಳಗಿನ ಚಂಚಲ ದ್ರವ್ಯವನ್ನು ನೋಡಿಲ್ಲವೇ ? ಅದು ಪಾದರಸ. ಅನೇಕ ಉಪಕರಣಗಳಲ್ಲಿ, ವಿದ್ಯುತ್ ಸಲಕರಣೆಗಳಲ್ಲಿ, ಬಣ್ಣ, ಬ್ಯಾಟರಿ ಉದ್ಯಮಗಳಲ್ಲಿ, ಸ್ಫೋಟಕವಸ್ತುಗಳ ತಯಾರಿಕೆಯಲ್ಲಿ ಮತ್ತು ಕೀಟನಾಶಕ ಔಷಧಿಗಳಲ್ಲಿ ಪಾದರಸವನ್ನು ಬಳಸುತ್ತಾರೆ. ಆಧುನಿಕ ವೈದ್ಯಶಾಸ್ತ್ರದಲ್ಲಿಯೂ ಆಯುರ್ವೇದದಲ್ಲಿಯೂ ಅನೇಕ ರೋಗಗಳ ಚಿಕಿತ್ಸೆಗಾಗಿ ಪಾದರಸ ಬಳಸಲ್ಪಡುತ್ತದೆ. ಭೂಗರ್ಭದಿಂದ ಸಂಗ್ರಹಿಸುವ ಹೊಳೆಯುವ ಈ ಲೋಹವು ಚಂಚಲವಾದ, ಭಾರವಾದ ಲೋಹವಾಗಿದ್ದು ನೆಲಕ್ಕೆ ಬಿದ್ದರೆ ಸಿಡಿದು ಕಣಕಣವಾಗಿ ಹರಿದಾಡುತ್ತ ಚದುರಿ ಹೋಗುತ್ತದೆ. ರಸ, ಪಾದರಸ, ಪಾರಾ, ಪಾರಜ ಎಂದು ಅನೇಕ ಹೆಸರುಗಳಿಂದ ಪಾದರಸವನ್ನು ಕರೆಯುತ್ತಾರೆ. ಈ ಲೋಹವನ್ನು ಹಸಿಯಾಗಿ ಸೇವಿಸಿದರೆ ದೇಹಕ್ಕೆ ಅಪಾಯವಿಲ್ಲ. ರೂಪಾಂತರ ಹೊಂದಿದ ಸಿದ್ಧವಸ್ತುಗಳಾಗಿ ದೊರಕುವ ಪಾದರಸದ ದುರುಪಯೋಗದಿಂದ ಮಾರಕ ದುಷ್ಪರಿಣಾಮಗಳು ಉಂಟಾಗಬಹುದು. ಪ್ರಮಾಣತಪ್ಪಿ ಸೇವಿಸಿದಾಗ ಇದು ಮಾರಕ ವಿಷವಾಗಿ ಪರಿಣಮಿಸುತ್ತದೆ.

ಪ್ರಾಣಾಪಾಯದ ಪ್ರಮಾಣ (ಸೇವನೆ) :

ಪಾದರಸ ಸಾಲ್ಟ್ 0.2 ರಿಂದ 1 ಗ್ರಾಂ ಪಾದರಸದ ಸೈನೈಡ್ : 0·6–1.3 ಗ್ರಾಂ. ಪ್ರಾಣಾಪಾಯದ ಕಾಲಾವಧಿ 3–5 ದಿವಸ (ಆದರೆ ವಿಷಪ್ರಾಶನವಾದ ಅರ್ಧ ತಾಸಿನಲ್ಲಿಯೇ ಸಾವು ಸಂಭವಿಸಿದ ಘಟನೆಯೂ ವರದಿಯಾಗಿದೆ). ಪಾದರಸವು ಸೇವನೆ, ಸ್ಪರ್ಶ ಹಾಗೂ ಆಘ್ರಾಣ ವಿಷ.

ಆಘ್ರಾಣವಿಷ ಲಕ್ಷಣಗಳು :

ಕೈಗಾರಿಕೆಗಳಲ್ಲಿ ಪಾದರಸವನ್ನು ಬಳಸುವ ಕಾರ್ಖಾನೆಗಳ ಕಾರ್ಮಿಕರು ಪಾದರಸದ ಹೊಗೆ ಮತ್ತು ಸೂಕ್ಷ್ಮವಾದ ಹುಡಿಯನ್ನು ಸ್ಪರ್ಶಿಸುವುದರಿಂದ ಹಾಗೂ

ಆಘ್ರಾಣಿಸುವುದರಿಂದ ನಾನಾ ಬಗೆಯ ಉಪದ್ರವಗಳಿಗೆ ತುತ್ತಾಗುತ್ತಾರೆ. ಕ್ರಿಮಿನಾಶಕ ಉದ್ದೇಶಗಳಿಗಾಗಿ (ಬೀಜೋಪಚಾರ ಇತ್ಯಾದಿ) ಪಾದರಸದ ಹೊಗೆ ಹಾಕುವವರು ಆಕಸ್ಮಿಕವಾಗಿ ಆಘ್ರಾಣವಿಷಕ್ಕೆ ತುತ್ತಾಗಬಹುದು. ಇದರ ವಿಷ ಅನಿಲವನ್ನು ಆಘ್ರಾಣಿಸಿದ 24 ತಾಸಿನೊಳಗಾಗಿ ಜೊಲ್ಲು ಸುರಿಯುವುದು, ಬಾಯಿಹುಣ್ಣು ಮತ್ತು ಬಾಯಲ್ಲಿ ಲೋಹದ ವಾಸನೆ ಕಾಣಿಸುವುದು, ತಲೆ ತಿರುಗುವುದು, ತಲೆಶೂಲೆ, ಆತಂಕ, ತೊದಲುಮಾತು, ಭೇದಿ, ಬುದ್ಧಿಮಾಂದ್ಯತೆ, ಮೂತ್ರಲೋಪ ಮತ್ತು ದೇಹದತೂಕ ಕಮ್ಮಿಯಾಗುವುದು ಮೊದಲಾದ ಲಕ್ಷಣಗಳು ಕಾಣಿಸುವವು. ಒಮ್ಮೊಮ್ಮೆ ಅದಿರುವಾಯು ಕಾಣಿಸಬಹುದು.

ಪ್ರತ್ಯೌಷಧ :

ಬಿ.ಎ.ಎಲ್. ಸೂಜಿಮದ್ದು ಪಾದರಸ ವಿಷಕ್ಕೆ ವಿಶಿಷ್ಟ ಪ್ರತ್ಯೌಷಧ.

ಪಾದರಸ ವಿಷದ ಸ್ಪರ್ಶ ಅಥವಾ ಆಘ್ರಾಣ ಅಪಘಾತಕ್ಕೆ ತುತ್ತಾದ ರೋಗಿಯನ್ನು ವಿಷದ ಪರಿಸರದಿಂದ ತಕ್ಷಣ ದೂರಸಾಗಿಸಿ ವಿಷಸಂಪರ್ಕವನ್ನು ತಪ್ಪಿಸಬೇಕು. ಅವನನ್ನು ಸ್ವಚ್ಛವಾದ ಗಾಳಿ ಬೆಳಕಿರುವ ಸ್ಥಳದಲ್ಲಿ ಮಲಗಿಸಿ ಸಾಕಷ್ಟು ಹಾಲನ್ನು ಕುಡಿಸಬೇಕು. ಭೇದಿಉಪ್ಪಿನ ವಿರೇಚನ, ರಕ್ತನಾಳದ ಮೂಲಕ ಸೋಡಿಯಂ ಥಿಯೋಸಲ್ಫೇಟ್ ಸೂಜಿ ಮದ್ದು. ಬಿ.ಎ.ಎಲ್. ಸೂಜಿಮದ್ದುಗಳನ್ನು ನೀಡುವುದಲ್ಲದೆ ಅದಿರುವಾಯು ನಿರೋಧಕ ಉಪಚಾರ ನಡೆಸಬೇಕು. ರೋಗಿಯ ಹಲ್ಲಿನ ಶುಚಿತ್ವಕ್ಕೂ ಮೂತ್ರವಿಕಾರವನ್ನು ತಡೆಗಟ್ಟುವುದಕ್ಕೂ ವಿಶೇಷ ಗಮನ ನೀಡಬೇಕು. ಪಾದರಸ ವಿಷಪ್ರಯೋಗಕ್ಕೆ ತುತ್ತಾದ ರೋಗಿಗಳಿಗೆ ಮನೋವಿಕಾರ ಉಂಟಾಗಬಹುದಾದ್ದರಿಂದ ಹೆಚ್ಚಿನ ಸಹಾನುಭೂತಿಯಿಂದ ನಡೆದು ಕೊಳ್ಳುವುದು ಮುಖ್ಯ.

ದೀರ್ಘ ಕಾಲ ವಿಷ ಪ್ರಾಶನ— ಲಕ್ಷಣಗಳು ಮತ್ತು ಚಿಕಿತ್ಸೆ :

ತಿಳಿದೋ ತಿಳಿಯದೇಯೋ ಅನೇಕರು ಪಾದರಸವನ್ನು ದೀರ್ಘಕಾಲ ಅಲ್ಪ ಪ್ರಮಾಣದಲ್ಲಿ ಸೇವಿಸಿ ವಿಷಪ್ರಾಶನಕ್ಕೆ ತುತ್ತಾಗುವರು. ಪಾದರಸದಿಂದ ಸಿದ್ಧವಾದ ಔಷಧಿಗಳನ್ನು ಅಳತೆಮೀರಿ ಅಥವಾ ಯದ್ವಾತದ್ವಾ ಉಪಯೋಗಿಸುವುದರಿಂದ ಅಪಾಯವು ಖಚಿತ. ಪಾದರಸದ ಕ್ಲೋರೈಡ್ ಬಹು ಭಯಂಕರ ವಿಷ. ದೀರ್ಘ ಕಾಲ ಪಾದರಸ ವಿಷಕ್ಕೆ ತುತ್ತಾದ ರೋಗಿಗಳಲ್ಲಿ ವಿಷ ಲಕ್ಷಣಗಳು ಸ್ಪಷ್ಟವಾಗಿ ಗೋಚರಿಸಿದ ತಿಂಗಳು ಕಳೆದ ಮೇಲೆ ಕೂಡಾ ಮರಣ ಸಂಭವಿಸಿದ ಉದಾಹರಣೆಗಳಿವೆ. 'ಕೆಲ್‌ಮಲ್' ಎಂಬ ಭೇದಿ ಔಷಧಿ ಪುಡಿಯನ್ನು' ಹೆಚ್ಚಾಗಿ ಮಕ್ಕಳಿಗೆ ವಿರೇ

ಚನ ಮಾಡಿಸಲು ಕೊಡುವುದುಂಟು. ಆದರೆ ಮೇಲಿಂದ ಮೇಲೆ ಅಥವಾ ಪ್ರಮಾಣ ಮೀರಿ ಕೊಡುವುದರಿಂದ ಮಕ್ಕಳು ಅಪಾಯಕ್ಕೆ ತುತ್ತಾಗಬಹುದು. ಮೂತ್ರಲ ದ್ರವ್ಯವಾಗಿ ಪಾದರಸದ ತಯಾರಿಕೆಗಳ ಸೂಜಿಮದ್ದು—ಗುಳಿಗೆಗಳನ್ನು ನೀಡುವು ದುಂಟು. ವೈದ್ಯರ ಅನುಮತಿಯ ವಿನಾ ಮನಬಂದಂತೆ ಉಪಯೋಗಿಸಿದರೆ ಅಪಾಯ ಖಚಿತ.

ದೀರ್ಘಕಾಲ ಪಾದರಸವನ್ನು ಸೇವಿಸಿದರೆ ರೋಗಿಯಲ್ಲಿ ಬಾಯಿಹುಣ್ಣು, ಕೈಕಾಲುನೋವು ಹಾಗೂ ವಿಚಿತ್ರವಾದ ಭೇದಿ ಕಾಣಿಸುತ್ತದೆ. ಅವನ ಅಂಗೈ–ಅಂಗಾ ಲುಗಳು ಗುಲಾಬಿ ಬಣ್ಣಕ್ಕೆ ತಿರುಗುವುವು. (ಈ ಲಕ್ಷಣಗಳಿಗೆ 'ಪಿಂಕ್ ಡಿಸೀಸ್' ಎಂದು ಹೆಸರು). ರೋಗಿಯ ಬಾಯಿಯಲ್ಲಿ ಜೊಲ್ಲು ಸುರಿಯುವುದು. ಅಜೀರ್ಣ, ಹೊಟ್ಟೆನುಲಿತ, ಹೊಟ್ಟೆಶೂಲೆ, ಉಸಿರಿನಲ್ಲಿ ಲೋಹದ ವಾಸನೆ, ಹಲ್ಲು ಅಲ್ಲಾ ಡುವುದು, ಹಲ್ಲಿನ ಬುಡದಲ್ಲಿ ನೀಲಿಗೆರೆ ಕಾಣಿಸುವುದು ಇವೇ ಮೊದಲಾದ ಲಕ್ಷಣ ಗಳು ಉಂಟಾಗುತ್ತವೆ. ಮೂತ್ರಪಿಂಡದ ವಿಕಾರಗಳಿಂದಲೂ ರೋಗಿಯು ನರಳುವ ಸಂಭವವಿರುತ್ತದೆ. ಇಂತಹ ರೋಗಿಯನ್ನು ಪಾದರಸ ವಿಷದ ಸಂಪರ್ಕದಿಂದ ತಕ್ಷಣ ದೂರಮಾಡಿ ಬಿ. ಎ. ಎಲ್. ಸೂಜಿಮದ್ದು, ವಿಶ್ರಾಂತಿ, ಸತ್ವಯುತ ಆಹಾರ ನೀಡು ವದು ಹಾಗೂ ಸಹಾನುಭೂತಿ ಪರಿವರ್ತನೆಗಳಿಂದ ಉಪಚರಿಸಬೇಕು.

ವಿಷಪ್ರಾಶನದ ಲಕ್ಷಣಗಳು :

ಪಾದರಸ ವಿಷ ಸೇವನೆಯಾದ 30 ನಿಮಿಷಗಳೊಳಗಾಗಿ (ಕೆಲವೊಮ್ಮೆ ಒಂದೂ ವರೆ ತಾಸಿನ ಮೇಲೆ) ರೋಗಿಯ ಬಾಯಲ್ಲಿ ಲೋಹದ ವಾಸನೆ ಕಾಣಿಸಿಕೊಂಡು, ಗಂಟಲು ಬಿಗಿದಂತಾಗಿ, ಸ್ವರ ವಿಕಾರವೂ ಉಸಿರಾಟಕ್ಕೆ ತೊಂದರೆಯೂ ಕಾಣಿಸಿ ಕೊಳ್ಳುವವು. ಅವನ ನಾಲಿಗೆ, ಬಾಯಿ ಮತ್ತು ಗಂಟಲಿನ ಹಿಂಭಾಗದ ಊತ ಉಂಟಾಗಿ ಆ ಭಾಗಗಳು ಸುಟ್ಟು ಹೋದಂತೆ ಕಾಣಿಸುತ್ತವೆ. ನಾಲಿಗೆಯ ಮೇಲೆ ಹಳದಿ ಬಣ್ಣದ ಕೊಳಕು ಪದರು ಕಾಣಿಸುವುದು. ರೋಗಿಯು ತೀವ್ರವಾದ ಒಸಡು ನೋವು, ಹೊಟ್ಟೆನೋವು, ವಾಕರಿಕೆ ಹಾಗೂ ಶ್ಲೇಷ್ಮ ರಕ್ತ ಮಿಶ್ರಿತ ವಾಂತಿ ಭೇದಿ ಗಳಿಂದಲೂ ಗುದಸಂಕೋಚದಿಂದಲೂ ನರಳುವನು. ಮೂತ್ರವಿಸರ್ಜನೆ ಅಲ್ಪವಾಗು ವುದು ಅಥವಾ ಸಂಪೂರ್ಣ ಲೋಪವಾಗಬಹುದು. ಅಸ್ತವ್ಯಸ್ತಗೊಂಡ ತೀವ್ರ ಗತಿಯ ಮೃದುನಾಡಿಯು ಕಾಣಿಸುವುದಲ್ಲದೆ ಅದಿರುವಾಯು, ಕಂಪನಗಳು ತೊಡಗಿ ರೋಗಿಯು ಸ್ಮೃತಿತಪ್ಪಿ ಬೀಳಬಹುದು.

ಚಿಕಿತ್ಸೆ ಮತ್ತು ಉಪಚಾರ :

ಬಿ.ಎ.ಎಲ್. ಸೂಜಿಮದ್ದು ಪಾದರಸ ವಿಷಕ್ಕೆ ಸಿದ್ಧ ಪ್ರತ್ಯೌಷಧ. ಹೊಟ್ಟೆ ತೊಳೆಯುವುದು ವಮನ, ವಿರೇಚನ ಚಿಕಿತ್ಸೆಗಳನ್ನು ನಡೆಸಬೇಕು. ತತ್ತಿಯ ಲೋಳೆ ಹೆಚ್ಚಿನ ಪ್ರಮಾಣದ ಹಾಲು, ಶರಕಾರಿಯ ಮೃದುವಾದ ಗೊಜ್ಜು ಮೊದಲಾದ ವನ್ನು ಕುಡಿಸುವದು ಹಿತಕರವಾಗಿದೆ. ಮೂತ್ರಲೋಪ ಅಥವಾ ಅದಿರುವಾಯು ಉಪದ್ರವಗಳಿಗೆ ಲಕ್ಷಣಾನುಸಾರ ಚಿಕಿತ್ಸೆ ನಡೆಸಬೇಕು.

ಶಂಖಪಾಷಾಣ

ಪರಿಚಯು :

ಇಲಿ-ಹೆಗ್ಗಣಗಳನ್ನು ಕೊಲ್ಲಲಿಕ್ಕೂ ಇರುವೆ, ಹುಳಹುಪ್ಪಡಿಗಳ ನಾಶಕ್ಕೂ ಬಣ್ಣದ ಉದ್ಯಮ ಹಾಗೂ ಅಲಂಕಾರವಸ್ತುಗಳ ತಯಾರಿಕೆಗಳಲ್ಲಿಯೂ ಬಳಸುವ ಶಂಖಪಾಷಾಣವು ಒಂದು ವಿಷಲೋಹ. ಮಾರುಕಟ್ಟೆಯಲ್ಲಿ ಇದು ತೀರ ಸುಲಭ ವಾಗಿ ಹಾಗೂ ಅಗ್ಗದ ಬೆಲೆಗೆ ದೊರಕುವದರಿಂದ ದುರುಪಯೋಗವಾಗುವ ಸಂಭವ ತೀರಾ ಹೆಚ್ಚಾಗಿರುತ್ತದೆ. ಆಯುರ್ವೇದ ವೈದ್ಯರು ಶಂಖಪಾಷಾಣವನ್ನು ಶುದ್ಧ ಮಾಡಿ ಅನೇಕ ಭಸ್ಮಗಳನ್ನು ತಯಾರಿಸಿ ಉಪಯೋಗಿಸಿದರೆ ಆಧುನಿಕ ವೈದ್ಯಕೀಯಂ ದಲ್ಲಿಯೂ ಶಂಖಪಾಷಾಣದಿಂದ ಸಿದ್ಧಪಡಿಸಿದ ಸಾಲ್ವರ್ಸನ್, ಎನ್.ಎ.ಬಿ ಎಸಿಟೈಲ್ ಆರ್ಸೆನಿಕ್ ಇತ್ಯಾದಿ ತಯಾರಿಕೆಗಳು ಮಾರುಕಟ್ಟೆಯಲ್ಲಿ ದೊರಕುತ್ತವೆ. ಶಂಖ ಪಾಷಾಣವನ್ನು ಗೌರೀ ಪಾಷಾಣವೆಂದು ಕರೆಯುತ್ತಾರೆ.

ಒಂದು ಚಿಟಿಕೆ ಶಂಖಪಾಷಾಣವು 15 ಗ್ರೇನ್‌ಗಳಷ್ಟು ತೂಕವಿರುತ್ತದೆ. ಶಂಖ ಪಾಷಾಣವು ನೀರಲ್ಲಿ ಕರಗುವದಿಲ್ಲ. ಮುಳುಗುವುದಿಲ್ಲ (ತೇಲಿ ಹರಡಿಕೊಳ್ಳುತ್ತದೆ). ಗ್ಲಿಸರಿನ್‌ನಲ್ಲಿ ಸುಮಾರಾಗಿಯೂ. ಮದ್ಯದಲ್ಲಿ ಚೆನ್ನಾಗಿಯೂ ಇದು ಕರಗುತ್ತದೆ. ಬಿಳಿಯ ಉಪ್ಪಿನ ಪುಡಿ, ಅಡಿಗೆಯ ಸೋಡ ಅಥವಾ ಪುಡಿಸಕ್ಕರೆ ಎಂದು ತಪ್ಪು ತಿಳಿದು ಶಂಖಪಾಷಾಣವನ್ನು ಸೇವಿಸಿ ಪ್ರಾಣಾಪಾಯಕ್ಕೆ ತುತ್ತಾದ ಪ್ರಸಂಗಗಳು ಹೇರಳವಾಗಿವೆ. ಒಂದು ಚಮಚದಷ್ಟು ಶಂಖಪಾಷಾಣವು 50 ಜನರನ್ನು ಕೊಲ್ಲ ಬಲ್ಲದು. ಶಂಖಪಾಷಾಣವು ಸೇವನಾವಿಷ ಹಾಗೂ ಅದರ ಹೊಗೆ ಆಘ್ರಾಣ ವಿಷ.

ಪ್ರಾಣಾಪಾಯದ ಪ್ರಮಾಣ (ಸೇವನೆ) : 0.12 ಗ್ರಾಂ (2 ಗ್ರೇನ್ಸ್) (ಆರ್ಸಲಿಕ್ ಟ್ರೈ ಆಕ್ಸೈಡ್)

ಆಘ್ರಾಣದ ವಿಷದ ಲಕ್ಷಣಗಳು :

ಇಲಿ ವಿಷವಾಗಿ ಶಂಖಪಾಷಾಣದ ಹೊಗೆಯನ್ನು ಬಳಸುವದೇ ಮೊದಲಾದ ಸಂದರ್ಭಗಳಲ್ಲಿ ಆಘ್ರಾಣಿಸಿದ ರೋಗಿಗೆ ಗಂಟಲು ಶೋಥವೂ, ಪುಪ್ಪುಸ ರಕ್ತಸ್ರಾವವೂ ಉಂಟಾಗುತ್ತವೆ. ಮೂತ್ರಪಿಂಡದ ವಿಕಾರ, ಕಾಮಿಲಾರೋಗದ ಉಪದ್ರವಗಳಿಂದ ಮತ್ತು ಯಕೃತ್ ವಿಕಾರಗಳಿಂದ ಅವನು ನರಳುತ್ತಾನೆ. ರೋಗಿಯ ದೇಹದಲ್ಲಿ ದ್ರವಾಂಶದ ಕೊರತೆಯೂ, ರಕ್ತಹೀನತೆಯೂ ಉಂಟಾಗುತ್ತವೆ.

ದೀರ್ಘಕಾಲ ವಿಷ ಲಕ್ಷಣಗಳು :

ಇಲಿ ಹೆಗ್ಗಣಗಳನ್ನು ಕೊಲ್ಲಲು ಶಂಖಪಾಷಾಣವನ್ನು ಬಳಸುವ ವೃತ್ತಿನಿರತರೂ, ಶಂಖಪಾಷಾಣದ ಉದ್ಯಮಗಳನ್ನು ನಡೆಸುವ ಕಾರ್ಖಾನೆಗಳ ಕಾರ್ಮಿಕರಿಗೂ ಕಳೆನಾಶಕ್ಕಾಗಿ ಶಂಖಪಾಷಾಣವನ್ನು ಬಳಸುವ ಕೃಷಿಕರೂ ದೀರ್ಘಕಾಲದ ವಿಷಪ್ರಾಶನಕ್ಕೆ ತುತ್ತಾಗುತ್ತಾರೆ. ಶಂಖಪಾಷಾಣವು ಕಾಮೋತ್ತೇಜಕ 'ಮದನಮಂಜರಿ' ಎಂಬ ಭ್ರಮೆಯಿಂದ ದೀರ್ಘಕಾಲ ಅಲ್ಪ ಪ್ರಮಾಣದಲ್ಲಿ ಪಾನ ಬೀಡಾಗಳಲ್ಲಿ ಸೇರಿಸಿ ನುಂಗುವವರೂ ಇದ್ದಾರೆ. ಇಂತಹ ರೋಗಿಗಳು ದೀರ್ಘಕಾಲಾವಧಿಯ ವಿಷಪ್ರಾಶನಕ್ಕೆ ತುತ್ತಾಗಿ ಹಂತ ಹಂತವಾಗಿ ಈ ಕೆಳಗಿನ ಲಕ್ಷಣಗಳನ್ನು ಕಾಣಿಸುವರು.

1. ಅಕಾರಣವಾಗಿ ರೋಗಿಯ ದೇಹದ ತೂಕವು ಕಮ್ಮಿಯಾಗುತ್ತ ಬಂದು ನಿರುತ್ಸಾಹ ಉಂಟಾಗುವುದು. ಅವನಲ್ಲಿ ಅನ್ನಾಹಾರಗಳ ಇಚ್ಛೆಯು ಕಮ್ಮಿಯಾಗಿ, ಬಾಯಲ್ಲಿ ಸದಾ ಜೊಲ್ಲು ಸುರಿಯುತ್ತದೆ. ಹೊಟ್ಟೆಕಡಿತ, ಕೆಲವೊಮ್ಮೆ ಮಲಬದ್ಧತೆ ಕೆಲವೊಮ್ಮೆ ಅತಿಭೇದಿ ಕಾಣಿಸುತ್ತದಲ್ಲವೆ ಪಿತ್ತರೂಪದ ವಾಂತಿಯೂ ಉಂಟಾಗುತ್ತದೆ. ಹಲ್ಲುನೋವು, ಒಸಡುನೋವುಗಳಿಂದ ರೋಗಿಯು ನರಳುತ್ತಾನೆ, ಮತ್ತು ಅವನ ಒಸಡು ಕೆಂಪಾಗುತ್ತವೆ; ಮೆತ್ತಗಾಗುತ್ತವೆ. ನಾಲಿಗೆಯ ಮೇಲೆ ಬಿಳಿಯ ಮಲವು ಪರೆಕಟ್ಟಿಕೊಂಡಿರುತ್ತದೆ. ನಾಡಿಯು ತೀವ್ರವಾಗಿ, ಜ್ವರವು 38.5°C–39.5°C ತನಕ ವಿರಬಹುದು.

2. ಎರಡನೆಯ ಹಂತದಲ್ಲಿ ರೋಗಿಗೆ ನಾಲಗೆ-ಗಂಟಲು ಕೆರೆತ, ಬಾಯಿ ಒಣಗುವುದು, ಸ್ವರವಿಕಾರ ಮತ್ತು ಬಾಯಿ ತುರಿಕೆ ಪ್ರಾರಂಭವಾತ್ತದೆ. ಅಲ್ಲಲ್ಲಿ ಸಣ್ಣ ಸಣ್ಣ ಗಂದೆಗಳು ಏಳುತ್ತವೆ–ಕ್ರಮೇಣ ಇವು ಮೋರೆಯ ಮೇಲೂ ಪಸರಿಸುತ್ತವೆ. ರೋಗಿಯ ಕಣ್ಣು ರೆಪ್ಪೆಯು ಸದಾ ಮುಚ್ಚಿಕೊಂಡಂತೆ ಕಾಣಿಸುತ್ತದೆ. ಮೂಗಿನಿಂದ ಸಿಂಬಳ ಸುರಿಯುವುದು, ಕೆಮ್ಮು, ನೆಗಡಿ, ರಕ್ತಮಿಶ್ರಿತ ಕಫ ಮೊದಲಾದ

ಉಪದ್ರವಗಳೂ ಪ್ಲೀಹವೃದ್ಧಿಯೂ ಮೂತ್ರಪಿಂಡ ವಿಕಾರವು ಕಾಣಿಸುವವು. ಬಟ್ಟೆಯಿಂದ ಮುಚ್ಚಿಕೊಂಡಿರುವ ಹೊಟ್ಟೆ, ತೊಡೆ, ಬೆನ್ನು ಮೊದಲಾದ ಅಂಗಗಳಲ್ಲಿ ಚುಕ್ಕಿಗಳಂತೆ ಕಾಳಿಸುವ ಚಿಕ್ಕ ಚಿಕ್ಕ ಕೆಂಪು ಗಂದೆಗಳು ಏಳುವವು. ಉಗುರು ಸೀಳೆ ತೊಡಗಿ ವಕ್ರ ವಕ್ರವಾಗಿ ಕಾಣಿಸುವದು. ತಲೆಗೂದಲು ಒಣಗುತ್ತ ಬರುವದಲ್ಲದೆ ಉದುರಲು ಸಹ ಪ್ರಾರಂಭವಾಗುತ್ತದೆ. ತಲೆ ಮತ್ತು ಕತ್ತಿನಲ್ಲಿ ತದ್ದಿನಂತಹ ಚರ್ಮ ರೋಗವು ಮೂಗಿನ ಮೃದ್ವಸ್ಥಿ(ಮೆತ್ತಗಿನ ದಂಡೆ) ವ್ರಣವು ಉಂಟಾಗುವವು.

3 ಮೂರನೆಯ ಅವಸ್ಥೆಯಲ್ಲಿ ತಲೆಶೂಲೆ, ಕೈಕಾಲು ಗುಂಜುವುದು ಮತ್ತು ಮಾಂಸಖಂಡಗಳಲ್ಲಿ ನೋವು ಉಂಟಾಗಿ ರೋಗಿಗೆ ಸ್ಪರ್ಶಜ್ಞಾನವು ಕಮ್ಮಿಯಾಗ ತೊಡಗುತ್ತದೆ. ಎಲುವು ಹಾಗೂ ಕೀಲುಗಳ ಊತದಿಂದ ಅವನು ನರಳುತ್ತಾನೆ. ಬಹುಪಾಲು ರೋಗಿಗಳಲ್ಲಿ ಈ ಸ್ಥಿತಿಯಲ್ಲಿ ಕಾಮಾಸಕ್ತಿಯು ನಿರ್ನಾಮವಾಗಿರುತ್ತದೆ.

4 ನಾಲ್ಕನೆಯ ಹಂತದಲ್ಲಿ ರೋಗಿಯ ಅಂಗಾಂಗಗಳ ಚಲನವಲನಗಳು ಕುಂಠಿತವಾಗುತ್ತವೆ. ಮಾಂಸಖಂಡಗಳು ಚೈತನ್ಯಶೂನ್ಯವಾಗುತ್ತವೆ; ಹಾಗೂ ಕೈಕಾಲು ಸೊಟ್ಟಗಾಗುತ್ತವೆ. ದೇಹಕ್ಷೀಣತೆ, ರಕ್ತಹೀನತೆ, ಮನಸ್ಸಿನ ಗಲಿಬಿಲಿ ಮೊದಲಾದ ತೊಂದರೆಗಳು ಉದ್ಭವಿಸುತ್ತವೆ. ಕೆಲವೊಮ್ಮೆ ಅರೆಹುಚ್ಚು ಕೂಡಾ ಕಾಣಿಸಬಹುದು. ರೋಗಿಯು ಕ್ರಮೇಣ ಸಾವಿನತ್ತ ಹೆಜ್ಜೆ ಹಾಕುತ್ತಿರುತ್ತಾನೆ ಎನ್ನಬಹುದು.

ವಿಷಪ್ರಯೋಗದ ಈ ಯಾವುದೇ ಹಂತದ ದೀರ್ಘಕಾಲೀನ ಲಕ್ಷಣಗಳು ಕಾಣಿಸಿಕೊಂಡರೂ ತಕ್ಷಣ ರೋಗಿಯನ್ನು ಶಂಖ ಪಾಷಾಣ ಸಂಪರ್ಕ ತಪ್ಪಿಸಬೇಕು. ಬಿI,ಬಿಕಾಂಪ್ಲೆಕ್ಸ್ ಜೀವಾತುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ರೋಗಿಗೆ ನೀಡಬೇಕು. ಅವನ ಮಲ ಮೂತ್ರಗಳು ಸರಿಯಾಗಿ ವಿಸರ್ಜನೆಯಾಗುವಂತೆ ನೋಡಿಕೊಳ್ಳಬೇಕು. ಶಕ್ತಿವರ್ಧಕ ಸ್ವಾದಿಷ್ಟ ಆಹಾರ ಹಾಗೂ ವಿಶ್ರಾಂತಿ ಅಗತ್ಯ.

ವಿಷಪ್ರಾಶನದ ಲಕ್ಷಣಗಳು :

ಪ್ರಾಣಾಪಾಯದ ಪ್ರಮಾಣದಲ್ಲಿ ಶಂಖಪಾಷಾಣವನ್ನು ಸೇವಿಸಿದ ರೋಗಿಗಳಲ್ಲಿ ಕೆಲವೊಮ್ಮೆ 30 ನಿಮಿಷಗಳಷ್ಟು ಕ್ಷಿಪ್ರವಾಗಿಯೂ ಒಮ್ಮೊಮ್ಮೆ 2 ರಿಂದ 3 ತಾಸುಗಳಷ್ಟು ವಿಳಂಬವಾಗಿಯೂ ವಿಷ ಲಕ್ಷಣಗಳು ಕಾಣಿಸತೊಡಗುವವು. ರೋಗಿಯ ತುಟಿ, ಬಾಯಿ ಉರಿಯತೊಡಗಿ, ನಾಲಿಗೆಬತ್ತಿ, ಅತಿಶಯವಾದ ನೀರಡಿಕೆ ಉಂಟಾದರೂ ಗಂಟಲಿನಲ್ಲಿ ಅಸಾಧ್ಯ ನೋವು ಕಾಣಿಸಿಕೊಳ್ಳುವುದರಿಂದ ಕುಡಿಯಲಿಕ್ಕೆ ತುಂಬಾ ಪ್ರಯಾಸವಾಗುತ್ತದೆ; ಜೊಲ್ಲು ಸುರಿಯುವುದು. ಒಸಡು ಊತ, ನಾಲಗೆ ವ್ರಣಗಳು ಕೂಡಾ ಉಂಟಾಗುತ್ತವೆ. ಕೆಲವೊಮ್ಮೆ ಬಾಯಿ ತುಂಬಾ ಹುಣ್ಣುಗಳು

ಉಂಟಾಗಿ ದವಡೆಯ ಮಾಂಸಖಂಡಗಳು ಕೊಳೆಯಬಹುದು. ರೋಗಿಯ ಉಸಿರಿನಲ್ಲಿ ಬೆಳ್ಳುಳ್ಳಿಯ ವಾಸನೆ ಇದ್ದು, ತೀವ್ರವಾದ ಎದೆ ಉರಿಯೂ ಹೊಟ್ಟೆನೋವು ಸಹಿತವಾದ ವಾಂತಿಯೂ ಪ್ರಾರಂಭವಾಗುತ್ತವೆ. ಒಮ್ಮೊಮ್ಮೆ ವಾಂತಿಯಲ್ಲಿ ನೆತ್ತರಿನ ಹನಿಗಳೂ ಕೂಡಾ ಬೀಳಬಹುದು. ಮೇಲಿಂದ ಮೇಲೆ ಹೊಟ್ಟೆನುಲಿತ ಹಾಗೂ ರಕ್ತಮಿಶ್ರಿತವಾದ ನೀರು, ನೀರಾದ ಭೇದಿಗಳಾಗುತ್ತವೆ. ರೋಗಿಯ ಮುಖವು ಊದಿಕೊಳ್ಳತೊಡಗಿ ಅವನ ಮನಸ್ಸಿನಲ್ಲಿ ಅಂಜಿಕೆ ಚಡಪಡಿಕೆಗಳು ಹೆಚ್ಚಾಗುತ್ತದೆ. ಚರ್ಮವು ತಂಪಾಗಿ, ಜಿಡ್ಡು ಜಿಡ್ಡಾಗಿರುತ್ತದೆ; ದೇಹದ ಉಷ್ಣತೆಯು ತಗ್ಗಿರುತ್ತದೆ. ವೇಗವಾದ ವಕ್ರನಾಡಿ, ಬಿಕ್ಕಳಿಕೆ, ಕುಸಿತ ಮತ್ತು ಸಾವು ಸಂಭವಿಸಬಹುದು.

ಅಂಜು ಬುರುಕ ವರ್ಗದ ರೋಗಿಗಳಲ್ಲಿ ಹೆಚ್ಚಿನ ವಿಕೃತ ರೀತಿಯ ಕೆಲವು ಲಕ್ಷಣಗಳು ಕಾಣಿಸಬಹುದು. ಅಂತಹ ರೋಗಿಗಳಲ್ಲಿ ಮೊದಲಿಗೆ ಭಯ, ಭೀತಿ, ಕಾತರ, ಅಂಜಿಕೆಗಳು ಮೂಡಿ, ಎದೆ ಹಿಡಿದು ಕೊಂಡಂತಾಗಿ ಉಸಿರಾಟಕ್ಕೆ ತೊಂದರೆ ವುಂಟಾಗುತ್ತದೆ. ತಲೆ ತಿರುಗುವುದು ತಲೆಶೂಲೆ, ಸ್ವರವಿಕಾರ, ಕೀಲುನೋವು, ಸಂದುಬಾವು, ಕಣ್ಣು ಉರಿ, ಕಣ್ಣು ಕೆಂಪು, ರೆಪ್ಪೆ ದವಡೆಗಳ ಊತ, ಕಣ್ಣು ಗೊಂಬೆ ಕಿರಿದಾಗುವದು ಮೊದಲಾದ ಉಪದ್ರವಗಳು ಕಾಣಿಸುತ್ತವೆ. ರೋಗಿಯು ಮೂತ್ರ ವಿಕಾರದಿಂದ ನರಳುತ್ತಾನೆ. ಅಂತಹ ರೋಗಿಯು ಮುಂಗೋಪ, ಒದರಾಟ, ಅಸಂಬದ್ಧ ಪ್ರಲಾಪಗಳ ಜೊತೆಗೆ ಮನೋವಿಕಲ್ಪದಿಂದಲೂ ನರಳುತ್ತಾನೆ. ದೇಹದ ಸಮತೋಲನೆಯು ತಪ್ಪಿ ಕೈಕಾಲುಗಳು ಸ್ವಾಧೀನವಿಲ್ಲದಾಗುವದು. ಸ್ಪರ್ಶಜ್ಞಾನ ಕುಂಠಿತವಾಗುವುದು. ಅವನ ಕೊರಳು ಮೋರೆ ಮತ್ತು ಹೊಟ್ಟೆಯ ಮಾಂಸಖಂಡಗಳು ಸೆಳೆದುಕೊಳ್ಳುವವು. ಕೆಲವೊಮ್ಮೆ ಪಾರ್ಶವಾಯು ಪೀಡಿತವಾದಂತೆ ನರಳುವುದೂ ಉಂಟು. ರಕ್ತದ ಒತ್ತಡ ಇಳಿಮುಖವಾಗಿ, ಅದಿರುವಾಯು, ಕಂಪನ, ಮೊರ್ಛೆ—ಸಾವು ಸಂಭವಿಸಬಹುದು. ರೋಗಿಯ ಮೂತ್ರದಲ್ಲಿ ಆಲ್ಬಮಿನ್, ರಕ್ತದ ಕೆಂಪುಕಣ ಮತ್ತು ಕಾಸ್ಟ್‌ಗಳು ಇರುತ್ತವೆ.

ಪ್ರತ್ಯೌಷಧ:

ಶಂಖಪಾಷಾಣ ವಿಷಕ್ಕೆ ಬಿ.ಎ.ಎಲ್. ಚುಚ್ಚುಮದ್ದು ದಿವ್ಯಪ್ರತ್ಯೌಷಧ.

ಚಿಕಿತ್ಸೆ ಮತ್ತು ಉಪಚಾರ

ವಮನ, ಹೊಟ್ಟೆತೊಳಯುವುದು, ವಿರೇಚನ ಮೊದಲಾದ ಚಿಕಿತ್ಸೆಗಳನ್ನು ನಡೆಸಬೇಕು. ಅಗತ್ಯ ಬಿದ್ದಲ್ಲಿ ಗ್ಲೂಕೋಸ–ಉಪ್ಪುನೀರು ದ್ರಾವಣವನ್ನು ರಕ್ತನಾಳ

ಮೂಲಕ ನೀಡಬೇಕು. ಪುಪ್ಪುಸ ಶೋಥ ಹಾಗೂ ಯಕೃತ ವಿಕಾರಗಳಿಗೆ ಸೂಕ್ತ ಚಿಕಿತ್ಸೆ ನಡೆಸಬೇಕು.

ಪ್ರಾಣಾಪಾಯದ ಕಾಲಾವಧಿ ಒಂದು ವಾರ.

ಟಿಪ್ಪಣಿ :

ಕೊಲೆಯ ದುರುದ್ದೇಶದಿಂದ ಶಂಖ ಪಾಷಾಣವನ್ನು ಬಳಸುವ ಸಂದರ್ಭಗಳೇನು ಅಪರೂಪವೇನಲ್ಲ. ಆದ್ದರಿಂದ ಶಂಖಪಾಷಾಣ ಅಪಘಾತದ ಸಂದರ್ಭಗಳಲ್ಲಿ ತುಸು ಅನುಮಾನ ಕಂಡರೂ ಪೋಲೀಸರಿಗೆ ಸುದ್ದಿ ಕಳಿಸುವುದು ಲೇಸು. ಕೊಲೆಯ ಉದ್ದೇಶಕ್ಕೆ ಶಂಖ ಪಾಷಾಣವನ್ನು ಬಳಸುವ ದೇಶಗಳಲ್ಲಿ ದುರದೃಷ್ಟವಶಾತ್ ನಮ್ಮ ದೇಶವು ಬಹಳ ಮುಂದಿದೆ. ಮರಣಾನಂತರ ಶವವನ್ನು ಹೂಳಿದ್ದರೆ ಬಹು ಕಾಲದ ಮೇಲೆ, ದೇಹವು ಮಣ್ಣು ಪಾಲಾಗಿದ್ದರೂ ಕೂದಲು ಮತ್ತು ಉಗುರುಗಳಲ್ಲಿ ಶಂಖ ಪಾಷಾಣ ವಿಷವಿದ್ದು ಅದನ್ನು ಕಂಡು ಹಿಡಿಯುವುದು ಸಾಧ್ಯವಿದೆ. ಕೊಲೆಯ ನಿರ್ಣಯವನ್ನು ಮಾಡುವ ಪ್ರಸಂಗಗಳಲ್ಲಿ ಇದು ತೀರಾ ಮಹತ್ವದ ಅಂಶವಾಗಿರುತ್ತದೆ.

ಸೀಸ

ಪರಿಚಯ :

ಮುದ್ರಣದ ಅಚ್ಚು ಮೊಳೆಗಳನ್ನು ಸೀಸದಿಂದ ತಯಾರಿಸುತ್ತಾರೆ. ಬಣ್ಣ ಬೆಸುಗೆ, ವಿದ್ಯುತ್‌ಕೇಬಲುಗಳ ಮುಚ್ಚಿಗೆ. ಪಾತ್ರೆಗಳ ಹೊಳಪು, ರಬ್ಬರು ತಯಾರಿಕೆ, ಆಟದಸಾಮಾನುಗಳು, ಹಿತ್ತಾಳೆಯ ತಯಾರಿಕೆ–ಹೀಗೆ ನಾನಾ ಉದ್ಯಮಗಳಲ್ಲಿ ಸೀಸವನ್ನು ಬಳಸುತ್ತಾರೆ. ಸೀಸಕಡ್ಡಿಯಂತೂ ಹೆಸರೇ ಹೇಳುವಂತೆ ಸೀಸದಿಂದಲೇ ತಯಾರಾದುದು. ನೀರಿನನಳ ಜೋಡಿಸುವವರಂತಹ ಸೀಸ ಕಸುಬಿಗೇನೇ ಅಂಟಿಕೊಂಡವರೂ ಅನೇಕರಿದ್ದಾರೆ. ದುರದುಷ್ಟವಶಾತ್ ಇವರು ಸೀಸದ ಸ್ಪರ್ಶ ಹಾಗೂ ದೀರ್ಘ ಕಾಲ ಸೇವನಾವಿಷಕ್ಕೆ ತುತ್ತಾಗುವ ಸಂಭವ ಹೆಚ್ಚಾಗಿರುತ್ತದೆ.

ಸೀಸದ ಮೆರಗುಕೊಟ್ಟ ತಗಡಿನ ಡಬ್ಬಿಗಳಲ್ಲಿ ಅಡಿಗೆಮಾಡಿ, ಅಂತಹದೇ ತಟ್ಟೆ ಲೋಟಗಳಲ್ಲ ದಿರ್ಘಕಾಲ ಉಣ್ಣುವವರೂ. ಆ ಬಗೆಯ ಪಾತ್ರೆಗಳಲ್ಲಿ ಬೆಣ್ಣೆಕಾಯಿಸಿ ಉಪಯೋಗಿಸುವವರೂ. ಡಬ್ಬಗಳಲ್ಲಿ ಶೇಖರಿಸಿಟ್ಟ ಹಣ್ಣು ಹಂಪಲು, ಕಾಯಿಪಲ್ಲೆಗಳನ್ನು ಸುದೀರ್ಘಕಾಲ ಉಪಯೋಗಿಸುವವರೂ ಕ್ರಮೇಣ ಸೀಸವಿಷದ ದುಷ್ಪರಿಣಾಮಗಳಿಗೆ ತುತ್ತಾಗಬಹುದು. 'ಸುರಮಾ' ದಂತಹ ನೇತ್ರಾಂಜನ (ಕಾಡಿಗೆ)

ಗಳಲ್ಲಿಯೂ ಇತರ ಅನೇಕ ಬಗೆಯ ಶೃಂಗಾರ ಸಾಧನಗಳಲ್ಲಿಯೂ ಹೋಳಿ ಓಕುಳಿಯ ರಂಗಿನಲ್ಲಿಯೂ ಸೀಸ ಬೆರೆತಿದ್ದು ದೀರ್ಘಕಾಲದ ಬಳಕೆಯಿಂದ ಉಪದ್ರವ ಸಂಭವಿಸಬಹುದು.

ಸೀಸ ವಿಷಸೇವನೆಯ ದುಷ್ಪರಿಣಾಮಗಳು ತಕ್ಷಣ ಕಾಣಿಸಿಕೊಳ್ಳುವುದು ತೀರ ವಿರಳ. ಒಳಗೊಳಗೇ ಕೊರೆದು ಕಾಡಿ ಪ್ರಾಣಹಿಂಡುವ ವಿಷವಿದು. ಪ್ರತಿವರ್ಷವೂ ಒಂದುನೂರು ಮಂದಿ ಸೀಸ ವಿಷ ಪ್ರಯೋಗಕ್ಕೆ ತುತ್ತಾಗುವರೆಂದೂ ಆ ಪೈಕಿ ಕನಿಷ್ಟ ಹತ್ತು ಮಂದಿ ಪ್ರಾಣಕಳೆದುಕೊಳ್ಳುವರೆಂದೂ ಅಧಿಕೃತ ದಾಖಲೆಗಳಿಂದ ತಿಳಿದುಬರುತ್ತದೆ. ಆದರೆ ವಾಸ್ತವಿಕವಾಗಿ ಸೀಸ ವಿಷಪ್ರಯೋಗದಿಂದ ನರಳುವವರ ಹಾಗೂ ಸಾಯುವವರ ಸಂಖ್ಯೆ ಇದಕ್ಕಿಂತ ಎಷ್ಟೋ ಪಾಲು ಹೆಚ್ಚೆಂದು ತಜ್ಞರ ಅಭಿಮತ.

ಪ್ರಾಣಾಪಾಯದ ಪ್ರಮಾಣ (ಸೇವನೆ): 0.5 ಗ್ರಾಂ

ದೀರ್ಘಕಾಲ ವಿಷಪ್ರಯೋಗದ ಲಕ್ಷಣಗಳು : ಸೀಸವನ್ನು ಬಳಸುವ ಕೈಗಾರಿಕೆಗಳಲ್ಲಿಯೂ, ನಳ ಜೋಡಿಸುವುದು ಮೊದಲಾದ ಉದ್ಯೋಗಗಳಲ್ಲಿ ನಿರತರಾದವರೂ ಸೀಸದ ಧೂಳು-ಹೊಗೆಗಳನ್ನು ಅಲ್ಪ ಪ್ರಮಾಣದಲ್ಲಿ ಸೇವಿಸುತ್ತಿರುವುದರಿಂದ ದೀರ್ಘಕಾಲದ ವಿಷ ಪರಿಣಾಮಗಳಿಗೆ ತುತ್ತಾಗುತ್ತಾರೆ. ಅಂತಹ ರೋಗಿಗಳು ಅರುಚಿ, ಅಗ್ನಿಮಾಂದ್ಯ, ದೇಹದೌರ್ಬಲ್ಯ, ಶಕ್ತಿಗುಂದುವುದು, ಮಲಬದ್ಧತೆ, ತಲೆನೋವು, ಬಾಯಲ್ಲಿ ಲೋಹದವಾಸನೆ–ರುಚಿ ಕಾಣಿಸುವುದು ಮೊದಲಾದ ಉಪದ್ರವಗಳಿಂದ ನರಳುತ್ತಾರೆ.

ತುಸು ಅಧಿಕ ವಿಷಪ್ರಯೋಗಕ್ಕೆ ದೀರ್ಘಕಾಲ ತುತ್ತಾದ ರೋಗಿಗಳು ತೀವ್ರ ಅಪಾಯದಿಂದ ನರಳುತ್ತಾರೆ. ಅಂತಹ ರೋಗಿಗಳು ಮಲಬದ್ಧತೆಯಿಂದ ನರಳುತ್ತಿದ್ದು ಹೊಕ್ಕುಳಿನ ಸುತ್ತ ತೀವ್ರವಾದ ಹೊಟ್ಟೆನೋವು ಕಾಣಿಸಿಕೊಂಡರೂ ಬೆರಳಿನಿಂದ ಅಮುಕಿದಾಗ (ಒತ್ತಿದಾಗ) ಕ್ಷಣಕಾಲ ಈ ನೋವು ಮಾಯವಾಗುತ್ತದೆ. ಹೊಟ್ಟೆಯ ಮಾಂಸಖಂಡಗಳು ಬಿಗಿದುಕೊಳ್ಳುತ್ತವೆ. ಹೆಚ್ಚಿನ ಬೆವರು ಸುರಿಯುತ್ತಿದ್ದು ವಾಂತಿ, ಹೊಟ್ಟೆನುಲಿತ ಮೊದಲಾದ ಉಪದ್ರವಗಳು ಉಂಟಾಗುವವು. ರೋಗಿಯ ಹಲ್ಲಿನಲ್ಲಿ ಒಸಡಿಗೆ ಒತ್ತಿಕೊಂಡು—ಮುಖ್ಯವಾಗಿ ಮೇಲ್ದವಡೆಯ ಹಲ್ಲುಗಳಲ್ಲಿ ನೀಲಿ ಗೆರೆಯು ಕಾಣಸಿಕೊಳ್ಳುತ್ತದೆ. ರೋಗಿಯ ಉಸಿರು ದುರ್ವಾಸನೆಯಿಂದ ಕೂಡಿದ್ದರೂ ಅವನ ಬಾಯಲ್ಲಿ ಮಧುರವಾದ ಲೋಹದ ರುಚಿ ಇದ್ದಂತೆ ಭಾಸವಾಗುವುದು. ಕೈಬೆರಳುಗಳು - ಕೆಲವೊಮ್ಮೆ ಕಾಲು ಬೆರಳುಗಳು ಹಾಗೂ ಪಾದಗಳು–ಶಕ್ತಿಹೀನವಾಗಿ ಜೋಲು ಬೀಳುವವು. ಇದರಿಂದಾಗಿ ರೋಗಿಯ ನಡಿಗೆಯು ಊನವಾಗುರುತ್ತದೆ. ಕೀಲುನೋವು, ನಡುಕ, ಅತಿಶಯವಾದ ತಲೆ

ನೋವು, ದೃಷ್ಟಿದೋಷ, ಮರವು, ನಿದ್ರಾನಾಶ, ಹುಚ್ಚು ಭ್ರಮೆ, ಬಡಬಡಿಕೆ ಮೊದಲಾದ ಉಪದ್ರವಗಳು ಪ್ರಾರಂಭವಾಗುವುದಲ್ಲದೆ ರೋಗಿಯು ತುಸು ಮಟ್ಟಿಗೆ ಹುಚ್ಚನಾದಂತೆ ಕಾಣಿಸುತ್ತಾನೆ; ಮತ್ತು ಅವನಿಗೆ ಆಗಾಗ ಎಚ್ಚರ ತಪ್ಪಬಹುದು; ರಕ್ತದ ಒತ್ತಡ ಏರುವುದು. ಅವನ ಮೂತ್ರದಲ್ಲಿ ಆಲ್ಬುಮಿನ್ ಮತ್ತು ಸೀಸವು ಹೆಚ್ಚಿನ ಪ್ರಮಾಣದಲ್ಲಿ ಕಾಣಿಸುವುದು.

ಸ್ತ್ರೀರೋಗಿಗಳಲ್ಲಿ ಋತುಸ್ರಾವವು ಏರುಪೇರಾಗುವುದು: ಬಂಜೆತನವು ಉಂಟಾಗಬಹುದು. ಗರ್ಭಿಣಿಯರಲ್ಲಿ ಗರ್ಭಪಾತ ಅಥವಾ ಮೃತಗರ್ಭಶಿಶುಜನನವಾಗಬಹುದು. ಪುರುಷರು ಷಂಢತನಕ್ಕೆ ತುತ್ತಾಗುವರು. ಇಂತಹ ಉಪದ್ರವ ಕಾಣಿಸಿದ ಕೂಡಲೇ ರೋಗಿಯನ್ನು ಸೀಸವಿಷ ಸ್ಪರ್ಶದಿಂದ ತಪ್ಪಿಸಿ ದೂರಕ್ಕೆ ಸ್ಥಳಾಂತರಿಸಬೇಕು. ಸೋಡಿಯಂ ಅಯೋಡೈಡ್ ಅಥವಾ ಪೊಟ್ಯಾಸಿಯಂ ಅಯೋಡೈಡ್ ಬೆರೆಸಿದ ನೀರನ್ನು ಕುಡಿಸಬೇಕು. (ಇದರಿಂದ ದೇಹಗತವಾಗಿರುವ ಸೀಸವಿಷವು ಮೂತ್ರದ ಮೂಲಕ ವಿಸರ್ಜಿಸಲ್ಪಡುತ್ತದೆ.) 3–4 ಲೀಟರ ನೀರಿನಲ್ಲಿ 25 ಗ್ರಾಮ್ ಸೋಡಿಯಂ ಬೈ ಕಾರ್ಬೋನೇಟನ್ನು ಕರಗಿಸಿ ಆಗಾಗ ರೋಗಿಗೆ ಕುಡಿಸುತ್ತಿರಬೇಕು. ಅಮೋನಿಯಂ ಕ್ಲೋರೈಡ್ ಸಹ ಉಪಯುಕ್ತ ದ್ರವ್ಯ. ರೋಗಿಯು ಮುಖ್ಯವಾಗಿ ಹೆಚ್ಚು ಪ್ರಮಾಣದಲ್ಲಿ ದ್ರವವನ್ನು ಸೇವಿಸಬೇಕು. ಅವನಿಗೆ ಲವಣ ವಿರೇಚನವನ್ನು ಸುಣ್ಣದ ಅಂಶ ಹೆಚ್ಚಿರುವ ಆಹಾರ–ಪಾನೀಯುಗಳನ್ನೂ ಕೊಡಬೇಕು. ಬಿ. ಎ. ಎಲ್. ಸೂಜಿಮದ್ದು ಸೀಸ ವಿಷಹಕ್ಕೆ ಉತ್ತಮ ಪ್ರತ್ಯೌಷಧ.

ಸೀಸವನ್ನು ಬಳಸುವ ಕೈಗಾರಿಕೆಗಳ ಕಾರ್ಮಿಕರನ್ನು ಕಾಲ ಕಾಲಕ್ಕೆ ವೈದ್ಯಕೀಯ ತಪಾಸಣೆಗೆ ಒಳಪಡಿಸಬೇಕು. ಹಾಲು ಹಾಗೂ ಸುಣ್ಣದ ಅಂಶವಿರುವ ಆಹಾರ ಸೇವನೆಯೂ ಅಲ್ಪಪ್ರಮಾಣದಲ್ಲಿ ಗಂಧಕಾಮ್ಲ ಬೆರೆಸಿದ ನೀರನ್ನು ಪ್ರತಿನಿತ್ಯ ಸೇವಿಸುವುದು ಉತ್ತಮ ಪ್ರತಿಬಂಧಕೋಪಾಯುಗಳಾಗಿವೆ.

ವಿಷಪ್ರಾಶನದ ಲಕ್ಷಣಗಳು :

ಸೀಸವಿಷವನ್ನು ಸೇವಿಸಿದ ತುಸು ಹೊತ್ತಿನಲ್ಲಿ ರೋಗಿಯು ಬಾಯಲ್ಲಿ ಸವಿಯಾದ ಲೋಹ ರುಚಿ ಮತ್ತು ವಾಸನೆ ಕಾಣಿಸುತ್ತದೆ. ಅವನು ಗಂಟಲು ಉರಿ, ನಾಲಗೆ ಬತ್ತುವುದು. ನೀರಡಿಕೆ, ಹೊಟ್ಟೆನುಲಿತ ಮೊದಲಾದವುಗಳಿಂದ ನರಳುತ್ತಾನೆ; ಮತ್ತು ಈ ಉಪದ್ರವಗಳು ಕ್ಷಣಕ್ಷಣಕ್ಕೂ ಹೆಚ್ಚುತ್ತ ಹೋಗುವವು. ಬೆರಳಿನಿಂದ ಹೊಕ್ಕುಳ ಸುತ್ತ ಅಮುಕಿದಾಗ ತುಸುಹೊತ್ತು ಹೊಟ್ಟೆನೋವು ಮಾಯವಾದಂತೆ ಭಾಸವಾಗುವುದು. ಮಲಬದ್ಧತೆ ಸೀಸವಿಷ ಉಪದ್ರವದ ಒಂದು ಲಕ್ಷಣವಾದರೂ, ಒಮ್ಮೊಮ್ಮೆ

ರೋಗಿಯು ನೀರಿನಂತೆ ಭೇದಿ ಮಾಡಿಕೊಳ್ಳುವದೂ ಉಂಟು. ಕಪ್ಪಾದ ಹೆಚ್ಚಿನ ದುರ್ವಾಸನೆಯಿಂದ ಕೂಡಿದ ಮಲವಿಸರ್ಜನೆಯಾಗಬಹುದು. ಮೂತ್ರವಿಸರ್ಜನೆ ತೀರಾ ಅಲ್ಪ ಪ್ರಮಾಣದ್ದಾಗಿರುವುದು. ರೋಗಿಯ ನಾಲಿಗೆಯ ಮೇಲೆ ತೆಳ್ಳಗಿನ ಹೊಲಸು ಮಲವೂ ಬಾಯಿವಾಸನೆಯೂ ಕಾಣಿಸುವುವು. ಚರ್ಮವು ಮರಗಟ್ಟಿ ಬೆವರಿನಿಂದ ಜಿಡ್ಡಾಗಿ ತಣ್ಣಗಿರುತ್ತದೆ. ನಾಡಿಯು ತೀವ್ರವಾಗಿ ಬಡಿಯುತ್ತದೆ. ತೂಕಡಿಕೆ ಇದ್ದರೂ ಅವನಿಗೆ ನಿದ್ರೆಬಾರದು. ತಲೆತಿರುಗುವುದು ತಲೆಶೂಲೆ, ಕೈಕಾಲು ಸೆಳತ ಮತ್ತು ಅದಿರುವಾಯುಗಳಿಂದ ನರಳಬಹುದು; ಮತ್ತು ಸಾವು ಸಂಭವಿಸ ಬಹುದು.

ಪ್ರತ್ಯೌಷಧ

ಬಿ.ಎ.ಎಲ್ ಸೂಜಿಮದ್ದು ಪ್ರತ್ಯೌಷಧವಾಗಿ ಕೆಲಸ ಮಾಡುತ್ತದೆ. ರಕ್ತನಾಳದ ಮೂಲಕ ಕ್ಯಾಲ್ಸಿಯಂ ಗ್ಲೂಕೋನೆಟ್ ಕೊಡಬಹುದು.

ಚಿಕಿತ್ಸೆ ಮತ್ತು ಉಪಚಾರ :

ಸೋಡಿಯಂ ಸಲ್ಫೇಟ್ ಅಥವಾ ಮೆಗ್ನೇಶಿಯಂ ಸಲ್ಫೇಟ್ ದುರ್ಬಲ ದ್ರಾವಣ ದಿಂದ ಹೊಟ್ಟೆ ತೊಳೆಯುವದು, ವಮನ, ವಿರೇಚನ ಚಿಕಿತ್ಸೆಗಳನ್ನು ನೀಡುವುದು, ಗ್ಲೂಕೋಸ್ ಮತ್ತು ಉಪ್ಪು ನೀರುಗಳನ್ನು ರಕ್ತನಾಳದ ಮೂಲಕ ಕೊಡುವುದು ಉಪಯುಕ್ತ ಚಿಕಿತ್ಸೆಗಳಾಗಿವೆ. ಕ್ಯಾಲ್ಸಿಯಂ ಫಾಸ್ಫೇಟ್, ಬಿ.ಕಾಂಪ್ಲೆಕ್ಸ್, ಸಿ ಮತ್ತು ಡಿ ಜೀವಾತು ಮಿಶ್ರಿತ ಆಹಾರ, ಹಾಲು-ಹಣ್ಣು ಮತ್ತು ವಿಶ್ರಾಂತಿಗಳು ರೋಗಿಗೆ ಅಗತ್ಯ. ಗುಣಮುಖನಾದ ರೋಗಿಯ ಹಸ್ತ ಮತ್ತು ಪಾದಗಳು ಜೋಲು ಬೀಳು ವುದೂ ಉಂಟು. ಅದಕ್ಕೆ ಸೂಕ್ತ ಉಪಚಾರವನ್ನು ಪ್ರತ್ಯೇಕ ನಡೆಸಬೇಕು.

ರೋಗಮುಕ್ತಿಗೆ ತಿಂಗಳುಗಟ್ಟಲೆ ಸಮಯ ಹಿಡಿಯುತ್ತದೆ. ಕೆಲವೊಮ್ಮೆ ಒಂದು ವರ್ಷವೇ ಬೇಕಾಗುಬಹುದು. ಆದರೂ ಚಿಕಿತ್ಸೆಯನ್ನು ಮುಂದುವರೆಸಿದರೆ ರೋಗಿಯು ಆರೋಗ್ಯ ಹೊಂದುವುದು ನಿಶ್ಚಯ.

ಟಿಪ್ಪಣಿ :

ಸೀಸವಿಷ ಬೆರೆತ ಬಣ್ಣಗಳನ್ನು ಆದಷ್ಟುಮಟ್ಟಿಗೆ ಬಳಸುವದನ್ನು ಕೈಬಿಡ ಬೇಕು. ಹಾಗೂ ಮಕ್ಕಳಿಗೆ ಸೀಸದಿಂದ ತಯಾರಿಸಿದ ಆಟಿಗೆಗಳನ್ನು ಕೊಡ ಬಾರದು.

ಮೈಲುತುತ್ತು

ಪರಿಚಯ :

ಮಲೆನಾಡಿನ ಅಡಿಕೆಬೆಳೆಗಾರರು ಕೊಳೆರೋಗ ನಿವಾರಣೆಗಾಗಿ ಚಿಮುಕಿಸುವ ಬೋರ್ಡೋಮಿಶ್ರಣದ ಮುಖ್ಯ ಸತ್ವವೇ ಮೈಲುತುತ್ತು. ಇದನ್ನು ನೀಲ ತುತಿಯಾ, ತುತ್ಥ ಎಂದೂ ಕರೆಯುತ್ತಾರೆ. ಆಯುರ್ವೇದ ವೈದ್ಯರು ಮೈಲು ತುತ್ತನ್ನು ಅನೇಕ ಚರ್ಮರೋಗಗಳ ಚಿಕಿತ್ಸೆಗೆ ಬಳಸುತ್ತಾರೆ. ಅಲ್ಪಪ್ರಮಾಣದಲ್ಲಿ ಎಂದರೆ 120 ಮಿಲಿಗ್ರಾಂನಷ್ಟು ಸೇವಿಸಿದರೆ ಸ್ತಂಭಕವಾಗಿಯೂ, 5–10 ಗ್ರೇನ್ಸ್ ಪ್ರಮಾಣದಲ್ಲಿ ಸೇವಿಸಿದರೆ ವಾಂತಿಕಾರಕವಾಗಿಯೂ ಇರುವ ಮೈಲುತುತ್ತು ಉತ್ತಮ ಶಿಲಿಂದ್ರನಾಶಕ ದ್ರವ್ಯ. ಅವರೆಕಾಳಿನಂತಹ ಅನೇಕ ಹಸಿರು ಕಾಯಿಪಲ್ಲೆಗಳನ್ನು ಡಬ್ಬಿಶೇಖರಣೆ ಮಾಡುವಾಗ ಅದರ ಹಸಿರು ಕೆಡದಂತೆ ಉಳಿಸಲಿಕ್ಕೂ ಉಪ್ಪಿನಕಾಯಿ ದಾಸ್ತಾನಿನಲ್ಲಿಯೂ ಅತ್ಯಲ್ಪ ಪ್ರಮಾಣದಲ್ಲಿ ಎಂದರೆ ಒಂದು ಪೌಂಡು ದ್ರವ್ಯಕ್ಕೆ ಒಂದು ಗ್ರೇನಿನಷ್ಟು ಮೈಲುತುತ್ತು ಬೆರೆಸುವ ಸಂಪ್ರದಾಯ ವಿದೆ. ಅಧಿಕ ಪ್ರಮಾಣದಲ್ಲಿ ಮೈಲುತುತ್ತನ್ನು ಸೇವಿಸಿದರೆ ಪ್ರಾಣಾಂತಿಕ ಸಂಕಟಗಳು ಉಂಟಾಗುವವು. ಮೈಲುತುತ್ತು ಸೇವನೆ, ಅಘ್ರಾಣ ಹಾಗೂ ಸ್ಪರ್ಶ ವಿಷ.

ಪ್ರಾಣಾಪಾಯದ ಪ್ರಮಾಣ (ಸೇವನೆ) :

15–30 ಗ್ರಾಂ. (ಆದರೆ 4 ಔನ್ಸ್ ಮೈಲುತುತ್ತು ಸೇವಿಸಿದರೂ ಸಕಾಲದಲ್ಲಿ ಕೈಗೊಂಡ ಸೂಕ್ತ ಚಿಕಿಯಿಂದ ರೋಗಿಯು ಚೇತರಿಸಿಕೊಂಡ ದಾಖಲೆಗಳಿವೆ.) ಅತ್ಯಲ್ಪ ಪ್ರಮಾಣದಲ್ಲಿ ಮೇಲಿಂದ ಮೇಲೆ ಮೈಲುತುತ್ತನ್ನು ಸೇವಿಸುತ್ತಿದ್ದರೂ ಅಪಾಯ ಸಂಭವಿಸಬಹುದು. ಪ್ರಾಣಾಪಾಯದ ಕಾಲಾವಧಿ 3 ದಿವಸ. ತೀವ್ರ ವಿಷಪ್ರಯೋಗವಾದ ಸಂದರ್ಭದಲ್ಲಿ 2–3 ತಾಸಿನೊಳಗೆ ಸಾವು ಸಂಭವಿಸಬಹುದು.

ಸ್ಪರ್ಶ ವಿಷ ಲಕ್ಷಣಗಳು :

ಮೈಲುತುತ್ತು ಪುಡಿ, ಧೂಳು ಅಥವಾ ದ್ರಾವಕ ರೂಪದಲ್ಲಿ ಕಣ್ಣಿಗೆ ಸ್ಪರ್ಶವಾದರೆ ಕಣ್ಣು ಕೆಂಪಾಗುವುದು. ಕಣ್ಣು ಉರಿ, ಕಣ್ಣುನೋವು ಕಾಣಿಸುವುದು; ಹಾಗೂ ಕಣ್ಣೀರು ಸುರಿಯುವುದು ಮತ್ತು ಕಣ್ಣು ವ್ರಣ ಉಂಟಾಗಬಹುದು. ಸ್ಪರ್ಶ ವಿಷಕ್ಕೆ ತಕ್ಷಣ ಕಣ್ಣನ್ನು ತಣ್ಣೀರಿನಿಂದ ಚೆನ್ನಾಗಿ ತೊಳೆಯಬೇಕು. ಅಗತ್ಯಬಿದ್ದರೆ ವೈದ್ಯರ ಸಹಾಯವನ್ನೂ ಪಡೆಯಬೇಕು. ಚರ್ಮಕ್ಕೆ ಸ್ಪರ್ಶವಾದರೆ ಇಸುಬಿನಂತಹ ಚರ್ಮರೋಗಗಳೂ ವ್ರಣಗಳೂ ಉಂಟಾಗಬಹುದು. ಇಂತಹ ರೋಗಿಗಳನ್ನು ಮೈಲುತುತ್ತು ವಿಷಸಂಪರ್ಕದಿಂದ ಬಿಡಿಸಿ ಸ್ಪರ್ಶವಾದ ಭಾಗವನ್ನು ತಣ್ಣೀರಿನಿಂದ

ತೊಳೆದು, ಕೊಬ್ಬರಿಎಣ್ಣೆ ಸವರಬೇಕು; ಅಗತ್ಯಬಿದ್ದರೆ ವೈದ್ಯ ಸಹಾಯವನ್ನು ಪಡೆಯುಬಹುದು.

ದೀರ್ಘಕಾಲ ವಿಷ ಲಕ್ಷಣಗಳು :

ಮೈಲುತುತ್ತಿನ ಸಾಗಾಣಿಕೆ, ಸಿಂಪರಣೆ ಮೊದಲಾದ ಕೆಲಸಗಳಲ್ಲಿ ನಿರತರಾದ ಕಾರ್ಮಿಕರು ಮೈಲುತುತ್ತಿನ ಸಂಪರ್ಕದಿಂದ ದೀರ್ಘಕಾಲ ವಿಷಪ್ರಯೋಗಕ್ಕೆ ತುತ್ತಾಗಿ ನರಳುವ ಸಂಭವವಿರುತ್ತದೆ; ಮತ್ತು ಇದರ ಪುಡಿ ಧೂಳನ್ನು ಆಘ್ರಾಣಿಸಿಯೂ ತೊಂದರೆಗಳಿಗೆ ತುತ್ತಾಗಬಹುದು. ಇಂತಹ ರೋಗಿಯ ಬಾಯಲ್ಲಿ ಲೋಹದ ರುಚಿ ವಾಸನೆ, ಒಸಡಿನಲ್ಲಿ ನೀಲಿಗೆರೆ ಕಾಣಿಸುವವು. ಕ್ರಮೇಣ ಅವನು ವಾಕರಿಕೆ, ವಾಂತಿ, ಭೇದಿ, ತಲೆ ತಿರುವುದು ಮೊದಲಾದ ಉಪದ್ರವಗಳಿಂದ ನರಳುತ್ತಾನೆ. ಅವನಿಗೆ ಅನ್ನಾಹಾರಗಳಲ್ಲಿ ರುಚಿ ಕಾಣಿಸುವದಿಲ್ಲ. ಹೊಟ್ಟೆನುಲಿತ ಮತ್ತುಬಾಯಿಹುಣ್ಣು ಮೂತ್ರಪಿಂಡದ ನಾನಾ ವಿಕಾರಗಳು, ಶ್ವಾಸಕೋಶದ ಉಪದ್ರವಗಳು ಮತ್ತು ಪಾಂಡುರೋಗದ ಲಕ್ಷಣಗಳು ಕಾಣಿಸಿಕೊಳ್ಳುವವು.

ಇಂತಹ ರೋಗಿಗಳನ್ನು ತಕ್ಷಣ ವಿಷಸಂಪರ್ಕದಿಂದ ದೂರಮಾಡಬೇಕು. ರೋಗಿಯ ಮೈಯು ಬೆವರಿನಿಂದ ನಾರುತ್ತಿದ್ದರೆ ಸಾಬೂನು ಹಚ್ಚಿ ಬಿಸಿನೀರಿನಿಂದ ಸ್ನಾನಮಾಡಿಸಿ ಗಾಳಿ ಬೆಳಕು ಸರಿಯಾಗಿರುವ ಕೊಠಡಿಯಲ್ಲಿ ಮಲಗಿಸಿ ವಿಶ್ರಾಂತಿ ನೀಡಬೇಕು. ಅಂಗಮರ್ದನ, ಸತ್ವಭರಿತವಾದ ಲಘುಆಹಾರ ಮತ್ತು ಸಾಕಷ್ಟು ದ್ರವ ಸೇವನೆ ಅಗತ್ಯ. ಇತರ ಉಪದ್ರವಗಳಿಗೆ ಲಕ್ಷಣಾನುಸಾರ ಚಿಕಿತ್ಸೆ ನೀಡಬೇಕು.

ವಿಷಪ್ರಾಶನದ ಲಕ್ಷಣಗಳು :

ಮೈಲುತುತ್ತು ವಿಷಪ್ರಾಶನವಾದ 10–20 ನಿಮಿಷಗಳೊಳಗಾಗಿ ರೋಗಿಯು ತೀವ್ರವಾದ ಸಂಕಟವನ್ನು ಅನುಭವಿಸತೊಡಗುತ್ತಾನೆ. ಅವನ ಬಾಯಲ್ಲಿ ಲೋಹದ ರುಚಿ–ವಾಸನೆ ಕಾಣಿಸತೊಡಗಿ, ಜೊಲ್ಲುಸುರಿಯುವುದು, ತಲೆನೋವು, ನೀರಡಿಕೆ, ವಾಕರಿಕೆ,ವಾಂತಿ,ಭೇದಿ ಮೊದಲಾದ ಉಪದ್ರವಗಳು ಪ್ರಾರಂಭವಾಗುವವು. ಅವನು ಕಾರಿಕೊಂಡ ದ್ರವ್ಯವು ಹಸಿರುಮಿಶ್ರಿತವಾಗಿರುವುದು. ರೋಗಿಯು ನಾನಾ ಬಗೆಯ ಮೂತ್ರವಿಕಾರಳಿಂದಲೂ, ಅರಿಶಿಣಮುಂಡಿಗೆ ರೋಗದ ಲಕ್ಷಣಗಳಿಂದಲೂ ನರಳುವನು..ಕೈಕಾಲುಸೆಳೆತ. ನಿದ್ರೆ, ಅದಿರುವಾಯು. ದೀರ್ಘಸುಪ್ತಿ ಮತ್ತು ಸಾವು ಸಂಭವಿಸಬಹುದು.

ಚಿಕಿತ್ಸೆ ಮತ್ತು ಉಪಚಾರ :

ಮೈಲುತುತ್ತುವಿಷ ಸೇವಿಸಿದ ರೋಗಿಗೆ ಕೋಳಿತತ್ತಿಯ ಲೋಳೆ, ಹಾಲು ಅಥವಾ ಅನ್ನ ಬಸಿದಗಂಜಿಯನ್ನು ಕುಡಿಸಬೇಕು. ಹೊಟ್ಟೆತೊಳೆಯುವುದೂ, ಹರಳೆಣ್ಣೆಯ ವಿರೇಚನ, ಬಿ.ಎ.ಎಲ್ ಸೂಜಿಮದ್ದು, ಮಾರ್ಫಿಯಾ ಮತ್ತು ಕ್ಯಾಲ್ಸಿಯಂ EDTA ಸೂಜಿಮದ್ದುಗಳು ಉಪಯುಕ್ತ ಪತ್ಯೌಷಧಗಳಾಗಿ ಕೆಲಸ ಮಾಡುತ್ತವೆ. (ಮೈಲುತುತ್ತು ವಿಷಪ್ರಾಶನ ಮಾಡಿದ ರೋಗಿಗೆ ವಾಂತಿಮಾಡುದ ಪ್ರಯತ್ನ ಅನಗತ್ಯ; ಏಕೆಂದರೆ ಮೈಲುತುತ್ತು ಸ್ವತಃ ವಾಂತಿಕಾರಕ ದ್ರವ್ಯವಾಗಿದೆ).

ರಂಜಕ

ಪರಿಚಯ :

ಉರಿಹತ್ತಿಕೊಳ್ಳುವ ಹಾಗೂ ಸ್ಫೋಟಕಗುಣದ ರಂಜಕವನ್ನು ಬೆಂಕಿಕಡ್ಡಿಯಿಂದ ತೊಡಗಿ ಕೀಟನಾಶಕ, ಮೂಷಿಕ ವಿಷ. ರಾಸಾಯನಿಕ ಗೊಬ್ಬರಗಳ ತಯಾರಿಕೆಗೆ ಉಪಯೋಗಿಸುತ್ತಾರೆ. ರಂಜಕದಲ್ಲಿ **ಕೆಂಪುರಂಜಕ** ಮತ್ತು **ಬಿಳಿರಂಜಕ** ಎಂದು ಎರಡು ವಿಧಗಳಿವೆ. ಕೆಂಪುರಂಜಕವು ಹರಳು ಹರಳಾಗಿದ್ದು ಕರಗದ ನಿರ್ವಿಷ ದ್ರವ್ಯ–ನಿರಪಾಯಕಾರಿ ವಸ್ತು. ಆದರೆ ಬಿಳಿರಂಜಕವು (ಇದನ್ನು ಹಳದಿರಂಜಕವೆಂದೂ ಕರೆಯುತ್ತಾರೆ.) ಮೇಣದಂತಿದ್ದು ತೀಕ್ಷ್ಣ ವಿಷವಸ್ತುವಾಗಿದೆ. ಬೆಳಕಿನ ಸ್ಪರ್ಶವಾದೊಡನೆಯೇ ಬಿಳಿರಂಜಕವು ಹಳದಿಬಣ್ಣಕ್ಕೆತಿರುಗುತ್ತದೆ; ಮತ್ತುಗಾಳಿಸ್ಪರ್ಶವಾದರೂ ಕೂಡಾ ತನ್ನಿಂದ ತಾನೇ ಉರಿದುಕೊಳ್ಳುತ್ತದೆ. ನೀರಿನಲ್ಲಿಯೂ, ತೇವದಲ್ಲಿಯೂ ಸಹ ಇದು ಉರಿಯುತ್ತದೆ. ರಾತ್ರಿಯಲ್ಲಿ ಹೊಳೆಯುವುದು ಇದರ ವೈಶಿಷ್ಟ್ಯ. ಬೆಳ್ಳುಳ್ಳಿಯ ವಾಸನೆ ಇರುವ ಬಿಳಿರಂಜಕವು ನೀರಿನಲ್ಲಿ ಕರಗುವುದಿಲ್ಲ. **ಇದನ್ನು ಕೈಯಿಂದ ಸ್ಪರ್ಶಿಸಬಾರದು.** ಬಿಳಿರಂಜಕವು ಸೇವನೆ, ಸ್ಪರ್ಶ ಹಾಗೂ ಅಘ್ರಾಣ ವಿಷ.

ಪ್ರಾಣಾಪಾಯದ ಪ್ರಮಾಣದ (ಸೇವನೆ) : 50 ಮಿಲಿಗ್ರಾಮ್

ಸ್ಪರ್ಶ—ಅಘ್ರಾಣ ವಿಷ ಲಕ್ಷಣಗಳು :

ಬಿಳಿರಂಜಕವನ್ನು ಸ್ಪರ್ಶಿಸಿದರೆ ಮೈ ಕೈಗಳ ಮೇಲೆ ಗುಳ್ಳೆಗಳೂ, ಸುಟ್ಟ ಗಾಯಗಳೂ ಉಂಟಾಗುತ್ತವೆ; ಹಾಗೂ ಈ ವ್ರಣಗಳು ಮಾಯಲು ದೀರ್ಘಕಾಲ ಹಿಡಿಯುತ್ತದೆ ರಂಜಕದ ಹೊಗೆಯನ್ನು ಅಥವಾ ವಾಸನೆಯನ್ನು ಆಘ್ರಾಣಿಸಿದೊಡನೆ (ಅಥವಾ 2–3 ದಿವಸಗಳ ನಂತರ) ರೋಗಿಯ ಉಸಿರಾಟಕ್ಕೆ ತೊಂದರೆ

ಯುಂಟಾಗುತ್ತದೆ. ವಾಕರಿಕೆ, ವಾಂತಿ, ಅದಿರುವಾಯು, ಕುಸಿತ, ಮೂರ್ಛೆ ಮತ್ತು ಸಾವು ಸಂಭವಿಸಬಹುದು. ರಂಜಕದ ಹೊಗೆಯನ್ನು ಬಾಯಲ್ಲಿ ಹಿಡಿದಾಗ ತೂತು ಬಿದ್ದ ಹಲ್ಲಿನ ಸಂದುಗಳ ಮೂಲಕ ವಿಷವು ಹೀರಲ್ಪಟ್ಟು ದವಡೆಯ ಎಲುಬುಗಳಿಗೆ ಹಾನಿಯನ್ನುಂಟು ಮಾಡಬಹುದು. ರಂಜಕ ಕೈಗಾರಿಕೆಯ ಕಾರ್ಮಿಕರು ಹಲ್ಲು ದೋಷದಿಂದ ನರಳದಂತೆ ಕಾಲಕಾಲಕ್ಕೆ ದಂತವೈದ್ಯರ ಸಂದರ್ಶನ ಪಡೆಯುತ್ತಿರಬೇಕು.

ವಿಷಪ್ರಾಶನದ ಲಕ್ಷಣಗಳು :

ರಂಜಕವಿಷ ಪ್ರಾಶನವಾದ ಒಂದು ತಾಸಿನೊಳಗೆ ರೋಗಿಯ ಬಾಯಲ್ಲಿ ಬೆಳ್ಳುಳ್ಳಿಯ ವಾಸನೆ ಕಾಣಿಸುವುದು. ಗಂಟಲು ಉರಿ, ಅತಿಶಯ ನೀರಡಿಕೆ, ವಾಕರಿಕೆ, ವಾಂತಿ ಭೇದಿಗಳು ಉಂಟಾಗುತ್ತವೆ. ರೋಗಿಯ ವಾಂತಿ ಮತ್ತು ಮಲದಲ್ಲಿ ಬೆಳ್ಳುಳ್ಳಿಯ ವಾಸನೆಯಿದ್ದು ಇವು ರಾತ್ರಿಯ ಕತ್ತಲಿನಲ್ಲಿ ಮಿನುಗುತ್ತವೆ. ಕ್ರಮೇಣ ರೋಗಿಯ ವಾಂತಿ ಭೇದಿಗಳು ರಕ್ತಮಿಶ್ರಿತವಾಗಿರಬಹುದು.

ತೀಕ್ಷ್ಣವಾದ ರಂಜಕವಿಷಪ್ರಾಶನ ಹೊಂದಿದ ರೋಗಿಯು ಬಡಬಡಿಸುವುದು, ಅದಿರುವಾಯು, ಮೂರ್ಛೆ, ರಕ್ತಸ್ರಾವ ಮತ್ತು ಯಕೃತ್ ವಿಕಾರಗಳಿಂದ ನರಳುತ್ತಾನೆ. ಅವನ ರಕ್ತದ ಒತ್ತದವು ಇಳಿಮುಖವಾಗುವದಲ್ಲದೆ ಕಾಮಿಲಾರೋಗದ ಲಕ್ಷಣಗಳೂ ಕಾಣಿಸಬಹುದು. ಕೆಲವೊಮ್ಮೆ 24 ತಾಸಿನೊಳಗಾಗಿ ಸಾವು ಸಂಭವಿಸಬಹುದು—ಇನ್ನೂ ಕೆಲವು ಸಂದರ್ಭಗಳಲ್ಲಿ 2–3 ವಾರಗಳ ನಂತರ ಪ್ರಾಣಾಪಾಯ ಉಂಟಾಗಬಹುದು. ಸಾಮಾನ್ಯವಾಗಿ ಪ್ರಾಣಾಪಾಯದ ಕಾಲಾವಧಿ 4 ದಿನಗಳು.

ದೀರ್ಘಕಾಲ ವಿಷಪ್ರಾಶನದ ಲಕ್ಷಣಗಳು:

ರಂಜಕ ವಿಷಪ್ರಯೋಗದ ದೀರ್ಘಕಾಲ ಉಪದ್ರವವೆಂದರೆ ದವಡೆಬಾವು, ಬಾಯಿಹುಣ್ಣು, ಹಲ್ಲುನೋವು, ಒಸಡಿನ ಬಲಹೀನತೆ, ದೇಹದೌರ್ಬಲ್ಯ, ನಿಶ್ಶಕ್ತಿ, ದೇಹದತೂಕ ಇಳಿಮುಖವಾಗುವುದು, ಅಪಚನ, ರಕ್ತಹೀನತೆ, ಕೈಕಾಲು ಜೋಮು ಹಿಡಿಯುವುದು ಮತ್ತು ಹೊಟ್ಟೆನೋವು.

ಚಿಕಿತ್ಸೆ ಮತ್ತು ಉಪಚಾರ :

ರಂಜಕವಿಷ ಸೇವಿಸಿದ ರೋಗಿಯನ್ನು ಪೊಟ್ಯಾಸಿಯಂ ಪರಮಾಂಗನೇಟ್ ದುರ್ಬಲ ದ್ರಾವಣದಿಂದ ಹೊಟ್ಟೆತೊಳೆಯಬೇಕು. 120 ಮಿಲಿಲೀಟರ್ ಲಿಕ್ವಿಡ್ ಪ್ಯಾರಾಫಿನ್ ಕುಡಿಸಿ ಆನಂತರ ಒಂದು ಔಂಸ ಸೋಡಿಯಂ ಸಲ್ಫೇಟನ್ನು 250 ಮಿಲಿ

ಲೀಟರ್ ನೀರಿನಲ್ಲಿ ಕರಗಿಸಿ ಕುಡಿಸಬೇಕು. ಸರಿಯಾಗಿ ಭೇದಿಯಾದರೂ ಸಹ 2–3 ಗಂಟೆಗಳ ತರುವಾಯ ಮತ್ತೊಮ್ಮೆ ಭೇದಿ ಮಾಡಿಸಬೇಕು. ಪುಪ್ಪುಸಶೋಥ ಮೊದಲಾದ ಉಪದ್ರವಗಳಿಗೆ ತಕ್ಕ ಚಿಕಿತ್ಸೆ ನಡೆಸಬೇಕು. ಸ್ವಾದಿಷ್ಟ ಮಧುರ ಆಹಾರ, ಗ್ಲುಕೋಸ್, ಬಿ. ಕಾಂಪ್ಲೆಕ್ಸ್ ಯಥೇಚ್ಛವಾಗಿ ನೀಡಬೇಕು.

ಕ್ರೋಮಿಯಂ

ಪರಿಚಯ :

ಚರ್ಮ ಹದಮಾಡುವ ಕೈಗಾರಿಕೆಗಳಲ್ಲಿ, ಉಕ್ಕು ತಯಾರಿಕೆಯಲ್ಲಿ, ಎಲೆಕ್ಟ್ರೋ-ಪ್ಲೇಟಿನಮ್ ಹಾಗೂ ರಾಸಾಯನಿಕ ಮಿಶ್ರಣದಲ್ಲಿ ಕ್ರೋಮಿಯಂ ಲೋಹವನ್ನು ಬಳಸುತ್ತಾರೆ. ಕ್ರೊಮಿಯಂ ಸೇವನಾ ವಿಷವಾಗಿ ಸಂಭವಿಸುವುದು ತೀರಾ ಕಮ್ಮಿ. ಆದರೆ ಈ ಕೈಗಾರಿಕೆಗಳಲ್ಲಿ ನಿರತರಾಗಿರುವ ಕಾರ್ಮಿಕರಲ್ಲಿ ಪ್ರತಿ ಐವರಿಗೊಬ್ಬರು ಒಂದಲ್ಲ ಒಂದು ಬಗೆಯ ಕ್ರೋಮಿಯಂ ಆಘ್ರಾಣ ಅಥವಾ ಸ್ಪರ್ಶವಿಷ ದೋಷ ಗಳಿಂದ ನರಳುತ್ತಾರೆ.

ಪ್ರಾಣಾಪಾಯದ ಪ್ರಮಾಣ (ಸೇವನೆ) : 5 ಗ್ರಾಂ.

ಸ್ಪರ್ಶ ಮತ್ತು ಆಘ್ರಾಣ ವಿಷ ಲಕ್ಷಣಗಳು :

ಕ್ರೋಮಿಯಂ ಲೋಹದ ಆಘ್ರಾಣ–ಸ್ಪರ್ಶ ವಿಷದಿಂದ ದೀರ್ಘಕಾಲ ನರಳುವ ರೋಗಿಯ ಬಾಯಿಯಲ್ಲಿ ಕಹಿರುಚಿ ಹಾಗೂ ಅಸಹ್ಯವಾಸನೆ ಕಾಣಿಸುತ್ತದೆ. ಅಂತಹ ರೋಗಿಯು ಹೆಚ್ಚು ಪ್ರಮಾಣವಲ್ಲಿ ಸೀನುವನು; ಮೂಗುಬಾವು, ಜೊಲ್ಲು ಸುರಿಯು ವುದು, ಕಣ್ಣೀರು ಸುರಿಯುವುದು, ಕೆಮ್ಮು ಮೊದಲಾದ ಉಪದ್ರವಗಳಿಂದ ನರಳುತ್ತಾನೆ. ಕಣ್ಣುನೋವು, ಗಂಟಲುವ್ರಣ, ಯಕೃತ್‌ವಿಕಾರ ಮತ್ತು ಕಾಮಿಲಾ ರೋಗದ ಉಪದ್ರವಗಳೂ ಉಂಟಾಗುವವು.

ಈ ಬಗೆಯ ವಿಷಲಕ್ಷಣಗಳಿಂದ ನರಳುವ ರೋಗಿಯನ್ನು ಕ್ರೋಮಿಯಂ ಲೋಹ ಸಂಪರ್ಕದಿಂದ ಬೇರ್ಪಡಿಸಿ, ಸ್ಥಳಾಂತರಿಸಬೇಕು. ವ್ರಣಗಳಿಗೆ ಸೂಕ್ತ ಚಿಕಿತ್ಸೆ ನಡೆಸಬೇಕು. ಕ್ರೋಮಿಯಂ ಲೋಹದ ಸಂಪರ್ಕ ಬರುವ ಕೆಲಸಗಾರರು ಸೂಕ್ತ ಸಮವಸ್ತ್ರ ಧರಿಸುವುದು ಮತ್ತು ಕೆಲಸಕ್ಕೆ ತೊಡಗುವ ಮುನ್ನ ಎಣ್ಣೆ ಸವರಿ ಕೊಳ್ಳುವುದು ಉತ್ತಮ ಪ್ರತಿಬಂಧಕೋಪಾಯಗಳಾಗಿವೆ. ಕ್ರೋಮಿಯಂ ಲೋಹ ಬಳಸುವ ಕಾರ್ಖಾನೆಗಳಲ್ಲಿ ಸೂಕ್ತ ವಾತಾಯನ ವ್ಯವಸ್ಥೆ ಇರುವುದು ಅತ್ಯಗತ್ಯ.

ವಿಷಪ್ರಾಶನದ ಲಕ್ಷಣಗಳು :

ಕ್ರೋಮಿಯಂ ವಿಷ ಸೇವಿಸಿದ ರೋಗಿಯು 5 ನಿಮಿಷಗಳೊಳಗಾಗಿ ಬಾಯಲ್ಲಿ ಲೋಹದ ವಾಸನೆ, ತಲೆತಿರುಗುವುದು, ನೀರಡಿಕೆ, ಹೊಟ್ಟೆನೋವು ವಾಂತಿ ಮತ್ತು ಭೇದಿಗಳಿಂದ ನರಳ ತೊಡಗುತ್ತಾನೆ. ಆ ರೋಗಿಯು ಕಾರಿಕೊಂಡ ಪದಾರ್ಥವು ಹಳದಿ ವರ್ಣಕ್ಕಿರುತ್ತದೆ. ಕೆಲವು ಸಲ ರಕ್ತಮಿಶ್ರಿತವಾಗಿಯೂ ಇರಬಹುದು; ಮೂತ್ರದಲ್ಲಿಯೂ ರಕ್ತವು ಕಾಣಿಸಬಹುದು. ರೋಗಿಯ ಕಣ್ಣುಬೊಂಬೆಯು ಅರಳಿದ್ದು ಬೆಳಕಿಗೆ ಪ್ರತಿಕ್ರಿಯೆ ಶೂನ್ಯವಾಗಿರುತ್ತದೆ. ಉಸಿರಾಟವು ಬಹು ಮಂದ ವಾಗಿದ್ದು ನಾಡಿಯು ಸಹ ಕ್ಷೀಣವಾಗಿರುತ್ತದೆ. ರೋಗಿಯು ಮೇಲುಸಿರು ಎಳೆಯು ತ್ತಿರುವಂತೆ ಕಾಣಿಸುತ್ತದೆ. ಕುಸಿತ, ಸ್ಮೃತಿ ತಪ್ಪುವುದು ಮತ್ತು ಮರಣ ಸಂಭವಿಸ ಬಹುದು.

ಚಿಕಿತ್ಸೆ ಮತ್ತು ಉಪಚಾರ :

ರೋಗಿಗೆ ಮೆಗ್ನೇಶಿಯಂ ಅಥವಾ ಕ್ಯಾಲ್ಸಿಯಂ ಕಾರ್ಬೋನೇಟನ್ನು ಹಾಲಿ ನಲ್ಲಿ (ಅಥವಾ ನೀರಿನಲ್ಲಿ) ಕಲಸಿ ಕುಡಿಸಬೇಕು. ಹೊಟ್ಟೆತೊಳೆಯುವುದು, ವಮನ ಮತ್ತು ವಿರೇಚನ ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆಗಳನ್ನು ನಡೆಸುವದಲ್ಲದೆ ಉತ್ತೇಜಕ ಔಷಧ ಮತ್ತು ಪಾನೀಯಗಳನ್ನು ಕೊಡಬಹುದು.

ಆ್ಯಂಟಿಮನಿ–ಸ್ಟಿಬೈನ್.

ಪರಿಚಯ :

ಕೃತಕವಾಗಿ ವಾಂತಿಮಾಡಿಸಲು ವೈದ್ಯರು ಬಳಸುವ ಟಾರ್‌ಟಾರ್ಟ್ ಎಮಿಟಿಕ್ ಆ್ಯಂಟಿಮನಿ ಟಾರ್‌ಟಾರ್ಟ್ ಮೂಲದಿಂದ ತಯಾರಿಸಲ್ಪಡುತ್ತದೆ. ಈ ಲೋಹದಲ್ಲಿ ಕಫನಾಶಕ ಗುಣವಿರುವುದರಿಂದ ಉಬ್ಬಸ ಬಾಧೆಯ ಚಿಕಿತ್ಸೆಗೂ ಉಪಯೋಗಿಸುತ್ತಾರೆ. ಅಚ್ಚುಮೊಳೆ, ತಗಡು, ಬ್ಯಾಟರಿ, ಮಣ್ಣಿನಪಾತ್ರೆ ಹಾಗೂ ಬೆಂಕಿಕಡ್ಡಿಗಳ ತಯಾರಿ ಕೆಯಲ್ಲಿ ಆ್ಯಂಟಿಮನಿ ಲೋಹವು ಉಪಯುಕ್ತವಾಗಿದೆ. ಆ್ಯಂಟಿಮನಿ ಲೋಹವು ಸ್ಪರ್ಶ ಹಾಗೂ ಸೇವನಾ ವಿಷ, ಇದರ ಹೊಗೆಯು ಆಘ್ರಾಣವಿಷ.

ಪ್ರಾಣಾಪಾಯದ ಪ್ರಮಾಣ (ಸೇವನೆ) :

1 ಗ್ರಾಂ. ವರ್ಷಕ್ಕೆ 10 ಸಾವುಗಳು ಈ ವಿಷದ್ರವ್ಯದ ದುರುಪಯೋಗದಿಂದ ಸಂಭವಿಸುತ್ತದೆ. ಪ್ರಾಣಾಪಾಯದ ಕಾಲಾವಧಿ 24 ತಾಸು.

ದೀರ್ಘಕಾಲ ವಿಷಪ್ರಾಶನದ ಲಕ್ಷಣಗಳು :

ಆ್ಯಂಟಿಮನಿ ವಿಷವನ್ನು ದೀರ್ಘಕಾಲ ಸೇವಿಸುತ್ತಿರುವ ರೋಗಿಯು ಅಕಾರಣವಾಗಿ ಮುಂಗೋಪ, ತಲೆತಿರುಗುವುದು, ತಲೆನೋವು, ವಾಕರಿಕೆ ಮೊದಲಾದ ಉಪದ್ರವಗಳಿಂದ ನರಳುತ್ತಾನೆ. ವಾಂತಿಯೂ ಕೆಲವೊಮ್ಮೆ ಭೇದಿಯೂ, ಇನ್ನೂ ಕೆಲವು ಸಲ ಮಲಬದ್ಧತೆಯೂ ಉಂಟಾಗುತ್ತವೆ. ಅವನು ಕಣ್ಣುಬೇನೆ, ಗಂಟಲು ಊತ, ಒಸಡಿನ ರಕ್ತಸ್ರಾವ ಮತ್ತು ದೇಹದೌರ್ಬಲ್ಯಗಳಿಂದ ನರಳುತ್ತಾನೆ. ಆ ರೋಗಿಯ ನಾಲಿಗೆಯ ಮೇಲೆ ಅಸಹ್ಯವಾದ ತೆಳ್ಳಗಿನ ಪರೆ ಕಾಣಿಸುತ್ತದೆ; ಸ್ವರ ಒಡೆಯುತ್ತದೆ; ಮಂದ ನಾಡಿಯು ತೀವ್ರವೇಗದಿಂದ ಬಡಿಯುತ್ತದೆ. ಅವನ ಮೈಮೇಲೆ ಚಿಕ್ಕ ಚಿಕ್ಕ ಗಂದೆಗಳು ಕಾಣಿಸುವುವು; ಚರ್ಮವು ತಣ್ಣಗೆ ಜಿಡ್ಡು ಜಿಡ್ಡಾಗಿರುವುದು. ರೋಗಿಯು ಹೆಚ್ಚಿನ ಬಳಲಿಕೆಗೂ ದೃಷ್ಟಿದೋಷಕ್ಕೂ ಒಳಗಾಗುವನು. ಇತಂಹ ರೋಗಿಯನ್ನು ವಿಷಸಂಪರ್ಕದಿಂದ ತಪ್ಪಿಸಿ ಆ್ಯಂಟಿಮನಿ ಸೇವನೆಯನ್ನು ನಿಲ್ಲಿಸಬೇಕು. ಸಸಾರಜನಕಯುಕ್ತ ಆಹಾರ ಹಾಗೂ ಬಿ. ಕಾಂಪ್ಲೆಕ್ಸ್ ಜೀವಾತುಗಳನ್ನು ಸಾಕಷ್ಟು ನೀಡಬೇಕು.

ಆ್ಯಂಟಿಮನಿ ಹೊಗೆಯನ್ನು ಆಘ್ರಾಣಿಸಿದರೆ ರೋಗಿಯಲ್ಲಿ ತಲೆನೋವು, ವಾಕರಿಕೆ, ವಾಂತಿ, ನಿಶ್ಯಕ್ತಿ, ರಕ್ತಹೀನತೆ ಮತ್ತು ಕಾಮಿಲಾರೋಗಗಳ ಚಿನ್ಹೆಗಳು ಕಾಣಿಸುತ್ತವೆ. ಮೇಲೆ ಸೂಚಿಸಿದ ಚಿಕಿತ್ಸೆಗಳನ್ನೇ ಇಂತಹ ರೋಗಿಗಳಿಗೂ ನೀಡಬೇಕು.

ವಿಷಪ್ರಾಶನದ ಲಕ್ಷಣಗಳು :

ಆ್ಯಂಟಿಮನಿ ವಿಷವನ್ನು ಸೇವಿಸಿದ ಅರ್ಧ ತಾಸಿನೊಳಗಾಗಿ ರೋಗಿಯ ಬಾಯಲ್ಲಿ ಲೋಹದ ವಾಸನೆ ಕಾಣಿಸಿಕೊಂಡು ಬಾಯಿ, ಗಂಟಲು ಮತ್ತು ಅನ್ನನಾಳಗಳ ಉರಿ. ವಾಕರಿಕೆ, ವಾಂತಿ ಮತ್ತು ಹೊಟ್ಟೆನೋವು ಉಂಟಾಗುತ್ತದೆ. ರೋಗಿಯು ಅತಿಶಯ ನೀರಡಿಕೆಯಿಂದ ನರಳುತ್ತಿದ್ದರೂ ಅವನ ತುಟಿ. ಬಾಯಿ ಮತ್ತು ಗಂಟಲು ಊದಿಕೊಂಡಿರುವುದರಿಂದ ನುಂಗಲು ಕಷ್ಟ ಪಡುತ್ತಾನೆ. ಕೆಲವು ಸಲ ಜೊಲ್ಲು ಸುರಿಯಬಹುದು. ಹೆಚ್ಚಿನ ಪ್ರಮಾಣದಲ್ಲಿ ಭೇದಿ—ಕೆಲವೊಮ್ಮೆ ರಕ್ತಮಿಶ್ರಿತವಾಗಿ ಆಗಬಹುದು. ಅವನ ನಾಡಿಯು ಕ್ಷೀಣಿಸುತ್ತ ಬರುತ್ತಿದ್ದರೂ ಗತಿಯೂ ತೀವ್ರವಾಗಿರುತ್ತದೆ. ಉಸಿರಾಟಕ್ಕೆ ಹೆಚ್ಚಿನ ತೊಂದರೆ ಕಾಣಿಸುತ್ತದೆ. ಬಡಬಡಿಕೆ, ಮೂತ್ರಪಿಂಡಗಳ ಅವ್ಯವಸ್ಥೆ, ಯಕೃತ್‌ದೋಷ ಮತ್ತು ಸಾವು ಸಂಭವಿಸುತ್ತದೆ.

ಚಿಕಿತ್ಸೆ ಮತ್ತು ಉಪಚಾರ :

ರೋಗಿಗೆ ಸ್ಟ್ರಾಂಗ್ ಚಹ ಕುಡಿಸಬೇಕು. (ಚಹದಲ್ಲಿರುವ 'ಟ್ಯಾನಿಕ್ ಆ್ಯಸಿಡ್'–ಆ್ಯಂಟಿಮನಿ ವಿಷಕ್ಕೆ ಉತ್ತಮ ಪ್ರತೌಷಧವಾಗಿ ಇರುತ್ತದೆ.) ತಕ್ರಿಯ ಲೋಳೆ, ಇಪ್ಪೆಎಣ್ಣೆ, ಅನ್ನಬಸಿದ ಗಂಜಿ ಇವುಗಳಲ್ಲಿ ಒಂದನ್ನು ಕುಡಿಸಬೇಕು. ಬಿ. ಎ. ಎಲ್. ಸೂಜಿಮದ್ದು ಸಹ ಪ್ರತೌಷಧದಂತೆ ಕೆಲಸಮಾಡುತ್ತದೆ. ವಾಂತಿ ಮಾಡಿಸುವುದು, ಸೋಡಿಯಂ ಬೈ ಕಾರ್ಬೋನೇಟ್ ದುರ್ಬಲ ದ್ರಾವಣದಿಂದ ಹೊಟ್ಟೆ ತೊಳೆಯುವುದು ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆಗಳನ್ನು ನಡೆಸ ಬೇಕು.

ಇತರ ಕೆಲವು ಲೋಹವಿಷಗಳು—ಚಿಕಿತ್ಸೆ

ಲೋಹದ ಹೆಸರು	ವಿಷ ಲಕ್ಷಣ	ಚಿಕಿತ್ಸೆ
1. ಕೋಬಾಲ್ಟ್, ನಿಕ್ಕೆಲ್	ಚುಟುಕು ಉಸಿರಾಟ, ಎದೆಬಿಗಿತ ಚರ್ಮರೋಗ	ವಿಷ ಸಂಪರ್ಕ ತಪ್ಪಿಸುವುದು, ಲಕ್ಷಣಾನುಸಾರ ಇತರ ಚಿಕಿತ್ಸೆ.
2. ತಾಮ್ರ	ವಾಂತಿ, ಬಾಯಲ್ಲಿ ಲೋಹ ರುಚಿ, ಹೊಟ್ಟೆಉರಿ, ನೀರಡಿಕೆ, ರಕ್ತ ಮಿಶ್ರಿತ ಭೇದಿ, ಮೂತ್ರ ವಿಕಾರ.	ಬಿ.ಎ.ಎಲ್. ಸೂಜಿಮದ್ದು ಲಕ್ಷಣಾನುಸಾರ ಇತರ ಚಿಕಿತ್ಸೆ
3. ಕಬ್ಬಿಣ.	ತಲೆಶಿರುಗುವಿಕೆ, ತಲೆನೋವು, ವಾಂತಿ, ಮೂರ್ಛೆ.	ಲಕ್ಷಣಾನುಸಾರ ಚಿಕಿತ್ಸೆ.
4. ಬೆಳ್ಳಿ	ಮೂತ್ರವಿಕಾರ, ಕೈ ಮೋರೆ ಕಪ್ಪಾಗುವುದು, ವಾಂತಿ, ಮೂರ್ಛೆ.	ಚಿಕಿತ್ಸೆ ಮೇಲಿನಂತೆಯೇ
5. ಸತುವು.	ವಾಂತಿ, ಜ್ವರ, ಕೆಮ್ಮು ಉಸಿರಾಟದ ತೊಂದರೆ, ಅದಿರುವಾಯು.	ಚಿಕಿತ್ಸೆ ಮೇಲಿನಂತೆಯೇ
6. ಬಂಗಾರ.	ತುಟಿ, ನಾಲಿಗೆ, ಹಲ್ಲು ಮತ್ತು ಒಳದವಡೆ ನೇರಳೆ ವರ್ಣ-ಜೊಲ್ಲು, ವಾಂತಿ	ಬಿ.ಎ.ಎಲ್. ಸೂಜಿಮದ್ದು ಎ.ಸಿ.ಟಿ.

ಲೋಹದ ಹೆಸರು	ವಿಷ ಲಕ್ಷಣ	ಚಿಕಿತ್ಸೆ
	ಭೇದಿ–ಜ್ವರ, ಹೈತ್ತಿಕ ಗಂದೆ, ಮೂತ್ರವಿಕಾರ.	ಹೆಚ್,-ಬಿ12 ಸೂಜಿ ಮದ್ದು ಮತ್ತು ಕ್ಯಾಲ್ಶಿಯಂಗ್ಲುಕೋನೇಟ ಸೂಜಿಮದ್ದು ನೀಡಿಕೆ.
7. ಅಲ್ಯುಮಿನಿಯಂ	ಬಾಯಿ ಉರಿ, ಗಂಟಲುನೋವು, ಹೊಟ್ಟೆನೋವು ವಾಕರಿಕೆ ರಕ್ತಮಿಶ್ರಿತ ಉಸಿರಾಟದ ತೊಂದರೆ, ಅದಿರುವಾಯು, ಮೈ ತಣ್ಣಗಾಗುವುದು.	ಲಾಕ್ಷಣಿಕ ಚಿಕಿತ್ಸೆ.
8. ಮೆಗ್ನೇಶಿಯಂ	ಹೊಟ್ಟೆ ಕರಳುನೋವು–ವಾಕರಿಕೆ, ವಾಂತಿ, ಭೇದಿ–ಕಣ್ಣುಬೊಂಬೆ ಅರಳುವುದು–ಕೈ ಕಾಲು ಸ್ವಾಧೀನ ತಪ್ಪುವುದು. ಮೂತ್ರಲೋಪ, ಕುಸಿತ, ಸಾವು.	ಲಾಕ್ಷಣಿಕ ಚಿಕಿತ್ಸೆ.

ಅಧ್ಯಾಯ—4

ಕೈಗಾರಿಕೆ ವಿಷಗಳು

(ಕ್ಷಾರ–ಆಮ್ಲ–ಅನಿಲ ವಿಷಗಳು)

ಗಂಧಕಾಮ್ಲ

ಪರಿಚಯ :

ಬಣ್ಣವಿಲ್ಲದ, ಉಗ್ರವಾಸನೆ ಹಾಗೂ ದಾಹಕ ಗುಣವಿರುವ ಗಂಧಕಾಮ್ಲವು ದ್ರವರೂಪದಲ್ಲಿದ್ದು ಸೇವನೆ ಹಾಗೂ ಸ್ಪರ್ಶವಿಷವಾಗಿ ಪರಿಣಮಿಸುತ್ತದೆ. ತೀಕ್ಷ್ಣ ಗಂಧಕಾಮ್ಲದ ಕೆಲವು ಹನಿಗಳನ್ನು ಸೇವಿಸಿದರೂ ಸಾಕು–ಪ್ರಾಣಾಪಾಯ ಸಂಭವಿಸಬಹುದು. ನೀಲಿ ತಯಾರಿಕೆ ಮೊದಲಾದ ಅನೇಕ ಕೈಗಾರಿಕೆಗಳಲ್ಲಿ ಗಂಧಕಾಮ್ಲವನ್ನು ಬಳಸುತ್ತಾರೆ. ಕೈಗಾರಿಕೆಯ ಉದ್ದೇಶಗಳಿಗಾಗಿ ದೊರಕುವ ಗಂಧಕಾಮ್ಲವು ಸೀಸ, ಶಂಖಪಾಷಾಣ ಮೊದಲಾದ ವಿಷದ್ರವ್ಯ ಮಿಶ್ರಿತವಾಗಿದ್ದು, ಈ ವಿಷ ಪ್ರಯೋಗವಾದ ರೋಗಿಗಳಲ್ಲಿ ಸಮ್ಮಿಶ್ರ ವಿಷಲಕ್ಷಣಗಳು ಕಾಣಿಸಬಹುದು.

ಬೀದಿಗೊಂದಲಗಳಲ್ಲಿಯೂ ಹಿಂಸಾಚಾರಗಳಲ್ಲಿಯೂ, ದುಷ್ಟರು ಎಸೆಯುವ ಆ್ಯಸಿಡ್ ಬಲ್ಬ್, 'ಮಾಲಟಾಫ್ ಕಾಕಟೇಲ್' ಮೊದಲಾದ ಕ್ಷೋಭಕ ವಿಷಸೀಸೆಗಳಲ್ಲಿ ಅಥವಾ ಬಲ್ಬುಗಳಲ್ಲಿ ಹೆಚ್ಚಾಗಿ ಇರುವುದು ತೀವ್ರ ಸಾಂದ್ರತೆಯ ಅತ್ಯಪಾಯಕಾರೀ ಗಂಧಕಾಮ್ಲ. ಸಮಾಜ ಘಾತಕ ತಂಟೆಗಳಲ್ಲಿ ಅಥವಾ ಆಕಸ್ಮಿಕವಾಗಿ ಮೈಮೇಲೆ ಗಂಧಕಾಮ್ಲವನ್ನು ಚೆಲ್ಲಿದರೆ, ಚರ್ಮವು ಸುಟ್ಟು ವ್ರಣಗಳಾಗುವುದಲ್ಲದೆ ಅಂಗ ವಿಕಲತೆಯೂ ಉಂಟಾಗಬಹುದು. ಕಣ್ಣಿಗೆ ಸ್ಪರ್ಶವಾದರೆ ಕಣ್ಣು ಕುರುಡಾಗುವ ಸಂಭವವೂ ಇದೆ.

ಸ್ಪರ್ಶ ವಿಷ ಚಿಕಿತ್ಸೆ :

ಗಂಧಕಾಮ್ಲ ಸ್ಪರ್ಶವಾದ ಭಾಗಗಳನ್ನು ಸಾಬೂನು ಹಚ್ಚಿ ತಣ್ಣೀರಿನಿಂದ ಚೆನ್ನಾಗಿ ತೊಳೆಯಬೇಕು. ಸುಮಾರು 15–20 ನಿಮಿಷ ತಂಪುನೀರಿನ ತುಂತುರು ಹನಿ ಸೇಚನೆ ಮಾಡುವುದು ಬಹಳ ಉಪಯುಕ್ತ. ಅನಂತರ ಮೆಗ್ನೀಶಿಯಂ ಆಕ್ಸೈಡ್

ಮುಲಾಮು ಸವರಿ ಸಡಿಲವಾದ ಪಟ್ಟಿ ಕಟ್ಟಬೇಕು. ಕಣ್ಣಿಗೆ ಸ್ಪರ್ಶವಾದರೆ ಉಪ್ಪು ನೀರಿನ ದುರ್ಬಲ ದ್ರಾವಣದಿಂದ ಕಣ್ಣು ತೊಳೆದು ಒಂದೆರಡು ಹನಿ ಔಡಲ ಎಣ್ಣೆಯನ್ನು ಕಣ್ಣಿಗೆ ಹಾಕಬೇಕು.

ವಿಷಸೇವನೆಯ ಲಕ್ಷಣಗಳು :

ಗಂಧಕಾಮ್ಲವನ್ನು ಸೇವಿಸಿದರೆ ಗಂಟಲು, ನಾಲಗೆ ಮತ್ತು ಅನ್ನನಾಳಗಳ ಉರಿ, ನೋವು ಮೊದಲಾದ ಉಪದ್ರವಗಳಿಂದ ರೋಗಿಯು ನರಳುತ್ತಾನೆ. ಅವನ ಹಲ್ಲುಗಳು ಸೀಮೆಸುಣ್ಣದಂತೆ ಬೆಳ್ಳಗಾಗುವವು; ತುಟಿಗಳು ಬಾಯುವವು; ಮತ್ತು ಚರ್ಮ ಸುಲಿದಂತಾಗುವುದು. ಅಂತಹ ರೋಗಿಯ ಬಾಯಲ್ಲಿ ಬರುಗು ಬರುವುದು, ರಕ್ತಮಿಶ್ರಿತ ಕಂದು ಅಥವಾ ಕಪ್ಪು ಬಣ್ಣದ ವಾಂತಿಯಾಗುವುದು, ಬಾಯಿಯ ಮಾಂಸವು ಕಿತ್ತು ಬರುವುದು, [ಸ್ಪರ್ಶವಾದ ಯಾವುದೇ ಭಾಗದ ಮಾಂಸವಾದರೂ ಕಿತ್ತು ಬರಬಹುದು] ಹಾಗೂ ಬಟ್ಟೆಬರೆಗೆ ತಗಲಿದರೆ ಅವುಗಳಲ್ಲಿ ತೂತು ಬೀಳುವದಲ್ಲದೆ ಚರ್ಮ ಸಹ ಅಪಾಯಕ್ಕೆ ಒಳಗಾಗಬಹುದು.

ಸೇವಿಸಿದ ಗಂಧಕಾಮ್ಲವಿಷದ ಪ್ರಮಾಣವು ತುಸು ಹೆಚ್ಚಾಗಿದ್ದರೆ ರೋಗಿಯ ಅನ್ನಕೋಶವು ಸಂಪೂರ್ಣವಾಗಿ ಬೆಂದು ಹೋದಂತಾಗಿ ವಾಂತಿಯಾಗದೇ ಇರಬಹುದು. ಸ್ವರವಿಕಾರ ಹಾಗೂ ಮಾತನಾಡಲು ಆತಂಕ ಉಂಟಾಗಬಹುದು. ರೋಗಿಗೆ ಹೆಚ್ಚಿನ ನೀರಡಿಕೆಯಾಗುತ್ತಿದ್ದರೂ ಗಂಟಲಿನಲ್ಲಿ ನೀರನ್ನು ನುಂಗಲಿಕ್ಕೆ ಪ್ರಯಾಸವಾಗುವುದು. ಕಷ್ಟಪಟ್ಟು ಸೇವಿಸಿದರೆ ಮರುಕ್ಷಣದಲ್ಲಿ ವಾಂತಿಯಾಗುವುದು. ತುಟಿಗಳೂ ಬಾಯಿಯ ಮೂಲೆಯೂ ಕರಕಿಹೋಗುವುದು. ಜೊಲ್ಲು ಹಾಗೂ ಶ್ಲೇಷ್ಮಯುಕ್ತ ಸ್ರಾವವು ನಿರಂತರವಾಗುವುದು. ರೋಗಿಗೆ ಬಾಯಿತೆರೆಯಲು ಕಷ್ಟವಾಗುವುದಲ್ಲದೆ ಉಸಿರಾಟ ಕೂಡಾ ವೇದನಾಮಯವಾಗಿರುತ್ತದೆ. ಮೂತ್ರವು ಅತ್ಯಲ್ಪ ಪ್ರಮಾಣದಲ್ಲಿ ವಿಸರ್ಜನೆಯಾಗಬಹುದು; ಅಥವಾ ಸಂಪೂರ್ಣ ಲೋಪವಾಗಬಹುದು. ಮೂತ್ರವೇದನೆ, ಮಲಬದ್ಧತೆ ಮತ್ತು ಗುದಶೂಲೆಗಳು ಇರುತ್ತವೆ.

ರೋಗಿಯ ಕಣ್ಣುಗಳು ಒಳಕ್ಕೆಸೇರಿಕೊಂಡಿರುತ್ತವೆ. ನಾಲಗೆಯು ಬಾತುಕೊಂಡಿರುವುದಲ್ಲದೆ ಬಿಳಿಯ ಹೊಲಸು ಮಲವು ಕಾಣಿಸಿಕೊಂಡು ಕ್ರಮೇಣ ಅದು ಕಂದುಬಣ್ಣಕ್ಕೆ ತಿರುಗುತ್ತದೆ. ತೀಕ್ಷ್ಣವಾದ ಗಂಧಕಾಮ್ಲವು ಸೇವನೆಯಾಗಿದ್ದರೆ ನಾಲಗೆ ಸಂಪೂರ್ಣ ಸುಟ್ಟುಹೋಗಿ ವಿಕಾರವಾದ ಮಾಂಸದ ಮುದ್ದೆಯಂತೆ ಕಾಣಿಸಬಹುದು. ಅವನ ಚರ್ಮವು ತಣ್ಣಗೆ ಜಿಡ್ಡಾಗಿರುತ್ತದೆ. ರಕ್ತದ ಒತ್ತಡ ಇಳಿಮುಖ

ವಾಗಿ ಮಂದವಾದ ತೀವ್ರನಾಡಿ ಇದ್ದು ಅವನು ಕೊನೆಯ ತನಕ ಎಚ್ಚರವಾಗಿಯೇ ಇರುತ್ತಾನೆ.

ಗಂಧಕಾಮ್ಲ ವಿಷಪ್ರಾಶನ ಮಾಡಿದ ರೋಗಿಯು ಬಹಳವಾಡಿ 4–6 ತಾಸಿನೊಳಗಾಗಿ ಸಾವಿಗೆ ತುತ್ತಾಗಬಹುದು. ಕೆಲವೊಮ್ಮೆ 24 ತಾಸು ಕಳೆದ ನಂತರ ಮರಣಕ್ಕೆ ಈಡಾಗಬಹುದು. ಕೆಲವು ರೋಗಿಗಳು ಪ್ರಾಣಾಪಾಯದಿಂದ ತಾತ್ಕಾಲಿಕವಾಗಿ ಪಾರಾದರೂ, ಜ್ವರವೇರಿ ಅಥವಾ ನಂಜೇರಿ ನರಳಬಹುದು; ಹಾಗೂ ಸಾವಿಗೆ ತುತ್ತಾಗಬಹುದು (ಬಹುದಿನಗಳ ನಂತರ). ಒಟ್ಟಿನಲ್ಲಿ ಗಂಧಕಾಮ್ಲ ವಿಷವು ರೋಗಿಯನ್ನು ಬಹಳ ರೀತಿಯಲ್ಲಿ ಕಾಡಿಸಿ ಪ್ರಾಣಾಪಾಯವನ್ನು ಉಂಟುಮಾಡುವ ವಿಷದ್ರವ್ಯವಾಗಿದೆ.

ಚಿಕಿತ್ಸೆ ಮತ್ತು ಉಪಚಾರ :

ಗಂಧಕಾಮ್ಲ ವಿಷಪ್ರಾಶನಕ್ಕೆ ತುತ್ತಾದ ರೋಗಿಗೆ ಎಷ್ಟು ಕ್ಷಿಪ್ರವಾಗಿ ಚಿಕಿತ್ಸೆ ನೀಡುವುದು ಸಾಧ್ಯವಾದರೆ ಅಷ್ಟು ಒಳ್ಳೆಯದು. ಅರ್ಧತಾಸಿನೊಳಗೇ ಚಿಕಿತ್ಸೆ ಮಾಡುವುದು ಹೆಚ್ಚು ಪರಿಣಾಮಕಾರಿಯಾಗಿದೆ. ವಿಳಂಬವಾಗಿ ಚಿಕಿತ್ಸೆಗೆ ತೊಡಗಿದರೆ ವಮನ ಮಾಡಿಸುವುದು, ಹೊಟ್ಟೆ ತೊಳೆಯುವುದು ಮುಂತಾದ ಲಾಕ್ಷಣಿಕ ಚಿಕಿತ್ಸಾವಿಧಾನಗಳನ್ನು ಕೈಬಿಟ್ಟು, ವಿಷದ ಆಮ್ಲತ್ವವನ್ನೂ ತೀಕ್ಷ್ಣತೆಯನ್ನೂ ದುರ್ಬಲಗೊಳಿಸುವ ಪ್ರಯತ್ನವನ್ನು ಕೈಗೊಳ್ಳಬೇಕು. ನಾಲ್ಕು ಚಮಚ (ದೊಡ್ಡ ಚಮಚ) ಕ್ಯಾಲ್ಸಿಯಂ ಆಕ್ಸೈಡ್ ಅಥವಾ ಮೆಗ್ನೇಸಿಯಂ ಆಕ್ಸೈಡನ್ನು ಒಂದು ಪಿಂಟ್ ನೀರಿನಲ್ಲಿ ಕರಗಿಸಿ ಕುಡಿಸಬೇಕು; ಅಥವಾ ಸುಲಭದಲ್ಲಿ ದೊರೆಯುವ ಸಾಬೂನು–ನೀರನ್ನು ಒಂದು ತಂಬಿಗೆಯಷ್ಟು ಕುಡಿಸಬಹುದು. ಸುಣ್ಣದ ತಿಳಿನೀರು, ತತ್ತಿಯಲೋಳೆ, ಎಳನೀರು ತುಪ್ಪ ಅಥವಾ ವನಸ್ಪತಿತೈಲ ಸೇವನೆ ಹಿತಕರ.ರೋಗಿಯ ನೋವುಶಮನಕ್ಕೂ ಇತರ ಉಪದ್ರವಗಳಿಗೂ ಸೂಕ್ತ ಚಿಕಿತ್ಸೆ ಕೈಕೊಳ್ಳಬೇಕು.

ನೈಟ್ರಿಕ್ ಆಮ್ಲ

ಪರಿಚಯ :

ಅಕ್ಕಸಾಲಿಗರು ಚಿನ್ನಕರಗಿಸಿ ಶುದ್ಧಮಾಡಲು ಬಳಸುವ 'ತೇಜಾಪಿನ ಎಣ್ಣೆ' (ನೈಟ್ರಿಕ್ಆಮ್ಲ) ಬಣ್ಣವಿಲ್ಲದೆ ದ್ರವರೂಪದಲ್ಲಿದ್ದು ಗಾಳಿಗೆ ತೆರೆದಿಟ್ಟರೆ ಆವಿಯಾಗುತ್ತದೆ. ಇದಕ್ಕೆ ಗಾಟುವಾಸನೆ ಇದೆ. ನಿಕ್ಕೆಲ್ ಶುದ್ಧೀಕರಣಕ್ಕೂ, ಇದನ್ನು ಬಳಸುತ್ತಾರೆ.

ಪ್ರಾಣಾಪಾಯ ಪ್ರಮಾಣ (ಸೇವನೆ) : 1 ಗ್ರಾಂ. ಪ್ರಾಣಾಪಾಯ ಕಾಲಾವಧಿ 24 ತಾಸು.

ನೈಟ್ರಿಕ್ ಆಮ್ಲವು ಸ್ಪರ್ಶ ಹಾಗೂ ಸೇವನಾ ವಿಷ. ಆಕಸ್ಮಿಕ ಸೇವನೆಯಲ್ಲದೇ ಆತ್ಮಹತ್ಯೆಗೂ ಇದನ್ನು ದುರುಪಯೋಗಿಸುತ್ತಾರೆ.

ವಿಷಪ್ರಾಶನದ ಲಕ್ಷಣಗಳು :

ನೈಟ್ರಿಕ್ಆಮ್ಲ ಸೇವಿಸಿದ ರೋಗಿಗಳು ಹೆಚ್ಚಾಗಿ ಗಂಧಕಾಮ್ಲ ವಿಷಪ್ರಾಶನವಾದ ರೋಗಿಗಳಂತೆಯೇ ಉಪದ್ರವಗಳನ್ನು ಅನುಭವಿಸುತ್ತಾರೆ. ಅವರ ಗಂಟಲು, ಬಾಯಿ, ನಾಲಗೆ ಹಾಗೂ ಶ್ವಾಸನಾಳಗಳಲ್ಲಿ ಉರಿ–ನೋವು ಕಾಣಿಸುತ್ತವೆ. ಮೊದಲು ನಾಲಗೆ ಮತ್ತು ಹಲ್ಲುಗಳು ಬೆಳ್ಳಗಾಗಿ, ಅನಂತರ ಹಳದಿ ವರ್ಣಕ್ಕೆ ತಿರುಗುವವು. ಸ್ಪರ್ಶವಾದ ದೇಹದ ಇತರ ಯಾವುದೇ ಭಾಗವೂ, ಬಟ್ಟೆ ಬರೆಯೂ ಸಹ ಹಳದಿವರ್ಣಕ್ಕೆ ತಿರುಗುವುದು.

ವಿಷಪ್ರಾಶನವಾದ ರೋಗಿಯ ಹೊಟ್ಟೆಯೊಳಗೆ ವಾಯು ಉಬ್ಬರಿಸಿದಂತಾಗಿ ಹೆಚ್ಚಿನ ವೇದನೆ, ನೀರಡಿಕೆ, ಗಂಟಲುನೋವು, ನುಂಗಲುಕಷ್ಟ, ಏನನ್ನಾದರೂ ಸೇವಿಸಿದರೆ ಮರುಕ್ಷಣ ವಾಂತಿಯಾಗುವುದು. ಸ್ವರವಿಕಾರ, ಉಸಿರಾಟದಲ್ಲಿ ತೊಂದರೆ, ಮೂತ್ರವಿಕಾರ–ಮೂತ್ರಲೋಪ, ಮಲಬದ್ಧತೆ ಮತ್ತು ಗುದಶೂಲೆಗಳಿಂದ ನರಳುತ್ತಾನೆ. ರಕ್ತದ ಒತ್ತಡವು ಇಳಿಮುಖವಾಗಿರುತ್ತದೆ. ತಿವ್ರನಾಡಿ, ಜಿಡ್ಡುಜಿಡ್ಡಾದ ಚರ್ಮ ಮತ್ತು ಅತಿಶಯ ವೇದನೆಯಿಂದ ರೋಗಿಯು ನರಳುತ್ತಾನೆ.

ಚಿಕಿತ್ಸೆ ಮತ್ತು ಉಪಚಾರ :

ನೈಟ್ರಿಕ್ಆಮ್ಲ ವಿಷಪ್ರಾಶನವಾದ ರೋಗಿಗೆ ಗಂಧಕಾಮ್ಲ ವಿಷ ಚಿಕಿತ್ಸೆಯ ತತ್ವಗಳನ್ನೇ ಅನುಸರಿಸಿ ತುರ್ತು ಚಿಕಿತ್ಸೆಗಳನ್ನು ನಡೆಸಬೇಕು. ಅರ್ಥಾತ್ ಆಸು ಕಳೆದಮೇಲೆ ವಮನ ಮತ್ತು ಹೊಟ್ಟೆ ತೊಳೆಯುವ ಚಿಕಿತ್ಸೆ ಮಾಡದೆ ಸುಣ್ಣದ ತಿಳಿನೀರು, ಸಾಬೂನುದ್ರಾವಣ, ತತ್ತಿಯಲೋಳೆ, ವನಸ್ಪತಿತೈಲ ಮೊದಲಾದವುಗಳ ಪೈಕಿ ಒಂದನ್ನು ಕುಡಿಸಬೇಕು. ಒಟ್ಟಿನಲ್ಲಿ ವಿಷದ ತೀಕ್ಷ್ಣತೆಯನ್ನು ಕಮ್ಮಿಮಾಡುವುದೇ ಚಿಕಿತ್ಸೆಯ ಮುಖ್ಯ ಉದ್ದೇಶವಾಗಿದ್ದು ಇತರ ಉಪದ್ರವಗಳಿಗೆ ಸಂದರ್ಭೋಚಿತ ಚಿಕಿತ್ಸೆ ನಡೆಸಬೇಕು.

ನೈಟ್ರಿಕ್ಆಮ್ಲ ಸ್ಪರ್ಶವಿಷಕ್ಕೆ ಗಂಧಕಾಮ್ಲ ಸ್ಪರ್ಶವಿಷಕ್ಕೆ ಸೂಚಿಸಿದಂತೆ ತಣ್ಣೀರಿನಿಂದ ತೊಳೆದು, ಮುಲಾಮು ಹಚ್ಚಿ ಪಟ್ಟಿಕಟ್ಟಬೇಕು. ಕಣ್ಣಿಗೆ ವಿಷಸ್ಪರ್ಶವಾದರೆ ತಣ್ಣೀರಿನಿಂದ ತೊಳೆದು ಔಡಲ ಎಣ್ಣೆ ಹಾಕಿ ಚಿಕಿತ್ಸೆ ಮಾಡಬೇಕು.

ಆಕ್ಸಾಲಿಕ್ ಆಮ್ಲ

ಪರಿಚಯ :

ಅನೇಕ ಕೈಗಾರಿಕೆಗಳಲ್ಲಿ ಉಪಯೋಗಿಸಲ್ಪಡುವ ಆಕ್ಸಾಲಿಕ್ಆಮ್ಲವು ಸೇವನೆ ಹಾಗೂ ಸ್ಪರ್ಶವಿಷ. ಪ್ರಾಣಾಪಾಯದ ಪ್ರಮಾಣ(ಸೇವನೆ)30 ಗ್ರಾಂ. (4 ಡ್ರಾಂ) ಪ್ರಾಣಾಪಾಯದ ಕಾಲಾವಧಿ 24 ತಾಸು. ಆದರೆ ಕೆಲವೊಮ್ಮೆ ವಿಷಪ್ರಾಶನದ ಒಂದೆರಡು ತಾಸುಗಳಲ್ಲೇ ಸಾವು ಸಂಭವಿಸಬಹುದು.

ವಿಷಪ್ರಾಶನದ ಲಕ್ಷಣಗಳು :

ಆಕ್ಸಾಲಿಕ್ಆಮ್ಲ ಸೇವಿಸಿದ ರೋಗಿಯ ಬಾಯಲ್ಲಿ ಹುಳಿರುಚಿಯೂ ಗಂಟಲಲ್ಲಿ ಉರಿವೇದನೆಗಳೂ ಉಂಟಾಗುತ್ತವೆ. ಹೊಟ್ಟೆನೋವು, ವಾಕರಿಕೆ ಮತ್ತು ಶ್ಲೇಷ್ಮ ರಕ್ತಮಿಶ್ರಿತ ನಸುಹಸಿರು, ಕಂದು ಅಥವಾ ಕಪ್ಪುಬಣ್ಣದ ವಾಂತಿ ಮೊದಲಾದ ಉಪದ್ರವಗಳಿಂದ ಆತನು ನರಳುತ್ತಾನೆ. ಅವನ ಉಸಿರಾಟವೂ ನಾಡಿಯೂ ಅಸ್ತವ್ಯಸ್ತಗೊಂಡು ಅತಿಶಯ ಬೆವರು, ದವಡೆಬಿಗಿತ, ಬಡಬಡಿಸುವುದು, ಅದಿರುವಾಯು ಕುಸಿತ ಮತ್ತು ಸಾವು ಸಂಭವಿಸಬಹುದು.

ಆಕ್ಸಾಲಿಕ್ಆಮ್ಲವು ಸ್ಪರ್ಶವಾದರೆ ಚರ್ಮವು ತಣ್ಣಗೆ ಜಿಡ್ಡುಜಿಡ್ಡಾಗಿದ್ದು ಹುಣ್ಣುಗಳು ಉಂಟಾಗಬಹುದು.

ಚಿಕಿತ್ಸೆ ಮತ್ತು ಉಪಚಾರ :

ಆಕ್ಸಾಲಿಕ್ಆಮ್ಲ ಸೇವಿಸಿದ ರೋಗಿಗೆ ಸೀಮೆಸುಣ್ಣದಪುಡಿ ಬೆರೆಸಿದ ನೀರು, ಸುಣ್ಣದತಿಳಿನೀರು ಅಥವಾ ಗೋಡೆಯಸುಣ್ಣ ಕೆರೆದು ನೀರಲ್ಲಿ ಕರಗಿಸಿ ಕುಡಿಸಬೇಕು. ತತ್ತಿಯಲೋಳೆ, ಹಾಲು ಸಹ ರೋಗಿಗೆ ಉಪಯುಕ್ತವಾಗಿವೆ. ಕ್ಯಾಲ್ಶಿಯಂ ಕ್ಲೋರೈಡ್ ಮೆಗ್ನೇಷಿಯಾವನ್ನು ಸೇವಿಸುವುದು ಕೂಡಾ ಪ್ರಯೋಜನ ಕಾರಿಯಾಗಿದೆ.

ಆಕ್ಸಾಲಿಕ್ ಆಮ್ಲವಿಷಕ್ಕೆ ಸುಣ್ಣದ ತಿಳಿನೀರು ದಿವ್ಯಪ್ರತ್ಯೌಷಧವಾಗಿದೆ. ಹೊಟ್ಟೆ ತೊಳೆಯುವುದು ಮತ್ತು ಹರಳೆಣ್ಣೆ ವಿರೇಚನ ಹಾಗೂ ಸುಣ್ಣದ ತಿಳಿನೀರು ಕುಡಿಸುವುದು ಅಗತ್ಯ. ರೋಗಿಗೆ ಧಾರಾಳ ಗ್ಲೂಕೋಸ್ ಪಾನಕ ಕುಡಿಸಬೇಕು.

ಹೈಡ್ರೋಕ್ಲೋರಿಕ್ ಆಮ್ಲ

ಪರಿಚಯ :

ಗಾಟು ವಾಸನೆಯಿರುವ ಮತ್ತು ನಸು ಹುಳಿರುಚಿಯ 'ಹೈಡ್ರೋಕ್ಲೋರಿಕ್ ಆಮ್ಲ'ವನ್ನು ಅನೇಕ ಔಷಧಿಗಳ ತಯಾರಿಕೆಯಲ್ಲಿಯೂ; ಕೈಗಾರಿಕಾ ರಂಗದಲ್ಲಿಯೂ ಬಳಸುತ್ತಾರೆ. ಇದು ಸ್ಪರ್ಶ ಹಾಗೂ ಸೇವನಾ ವಿಷ.

ಪ್ರಾಣಾಪಾಯದ ಪ್ರಮಾಣ (ಸೇವನೆ) : 15 ಗ್ರಾಂ

ವಿಷಪ್ರಾಶನದ ಲಕ್ಷಣಗಳು :

ಹೈಡ್ರೋಕ್ಲೋರಿಕ್‌ಆಮ್ಲವನ್ನು ಸೇವಿಸಿದ ರೋಗಿಯ ಬಾಯಿಯಲ್ಲಿ ಜೊಲ್ಲು ಸುರಿಯುವದು. ಬಾಯಿಹುಣ್ಣು, ಗಂಟಲುಉರಿ, ಊತ ಮೊದಲಾದ ಉಪದ್ರವಗಳು ಕಾಣಿಸಿಕೊಳ್ಳುತ್ತವೆ. ಅನಂತರ ಬಡಬಡಿಸುವದು, ಆದಿರುವಾಯು ಮತ್ತು ಕೈಕಾಲುಗಳು ಸ್ವಾಧೀನ ತಪ್ಪುವದು ಪ್ರಾರಂಭವಾಗುವವು. ಈ ವಿಷದ್ರವ್ಯದ ಹಬೆಯನ್ನು (ಹೊಗೆಯನ್ನು) ದೀರ್ಘಕಾಲ ಆಘ್ರಾಣಿಸಿದರೆ, ಕೆಮ್ಮು ಕಣ್ಣುಉರಿ, ಊತ, ವ್ರಣ ಮೊದಲಾದ ಸಂಕಷ್ಟಗಳು ಉಂಟಾಗುತ್ತವೆ. ವಾಕರಿಕೆ, ವಾಂತಿ, ಎದೆನೋವು ಮತ್ತು ಹಲ್ಲುನೋವು ಸಹ ಕಾಣಿಸಿಕೊಳ್ಳುತ್ತವೆ. ಇಂತಹ ರೋಗಿಯನ್ನು ವಿಷಸಂಪರ್ಕದಿಂದ ದೂರಮಾಡಿ, ಉಪದ್ರವಗಳಿಗೆ ಸೂಕ್ತ ಚಿಕಿತ್ಸೆ ನಡೆಸಬೇಕು.

ಚಿಕಿತ್ಸೆ ಮತ್ತು ಉಪಚಾರ :

ಸುಣ್ಣದತಿಳಿನೀರು ಉತ್ತಮ ಪ್ರತ್ಯೌಷಧ. ಇತರ ಚಿಕಿತ್ಸೆ ಆಕ್ಸಾಲಿಕ್ ಆಮ್ಲ ವಿಷಪ್ರಯೋಗದಂತೆಯೇ.

ಮಡಿಮಾಡುವ ದ್ರಾವಕ

ಪರಿಚಯ :

ನಳಗಳ ಮೂಲಕ ಒದಗಿಸುವ ಕುಡಿಯುವ ನೀರನ್ನು ಶುದ್ಧ ಮಾಡಲು ಸೋಡಿಯಂ ಹೈಪೋಕ್ಲೋರೆಟ್ ಅಥವಾ ಕ್ಯಾಲ್ಸಿಯಂ ಹೈಪೋಕ್ಲೋರೆಟ್‌ನಂತಹ ಕ್ರಿಮಿನಾಶಕಗಳನ್ನು ಬಳಸುತ್ತಾರೆ. ಸೇಕಡಾ 6 ರ ದ್ರಾಣದಲ್ಲಿ ಇದು ನೀರನ್ನು ಸ್ವಚ್ಛಗೊಳಿಸುತ್ತದೆ. ಆದರೆ ಅಧಿಕಸಾಂದ್ರತೆಯಲ್ಲಿ ಸೇವನಾವಿಷವಾಗಿ ಪರಿಣಮಿಸುತ್ತದೆ. ಪ್ರಾಣಾಪಾಯದ ಪ್ರಮಾಣ (ಸೇವನೆ) : 15–30 ಗ್ರಾಂ.

ವಿಷಪ್ರಾಶನದ ಲಕ್ಷಣಗಳು :

ರೋಗಿಯ ಗಂಟಲು, ಬಾಯಿ ಮತ್ತು ನಾಲಗೆಯಲ್ಲಿ ಉರಿ, ಊತ ಹಾಗೂ ವೇದನೆಗಳು ಕಾಣಿಸುತ್ತವೆ. ಎದೆಯಲ್ಲಿಯೂ ಉರಿ, ಊತಗಳು ಉಂಟಾಗುತ್ತವೆ, ಹೊಟ್ಟೆ ತಳಮಳಿಸಿ, ವಾಕರಿಕೆ ಮತ್ತು ವಾಂತಿಯಾಗಲು ತೊಡಗುತ್ತದೆ.

ಚಿಕಿತ್ಸೆ ಮತ್ತು ಉಪಚಾರ :

ರೋಗಿಗೆ 10 ಗ್ರಾಂ. ಸೋಡಿಯಂ ಬೈಕಾರ್ಬೋನೇಟ್ ಮತ್ತು 30 ಗ್ರಾಂ. ಸೋಡಿಯಂ ಸಲ್ಫೇಟ್‌ಗಳನ್ನು ಒಂದುಲೋಟ ನೀರಿನಲ್ಲಿ ಕರಗಿಸಿ ಕುಡಿಸಬೇಕು.

ವಮನ, ವಿರೇಚನ ಚಿಕಿತ್ಸೆಗಳು ಹಾಗೂ ಹಾಲು, ಬೆಣ್ಣೆ, ತತ್ತಿಯಲೋಳೆ ಸೇವನೆಯೂ ಹಿತಕರ. ಮಡಿಮಾಡುವ ದ್ರಾವಕಗಳನ್ನು ದೀರ್ಘಕಾಲ ಸ್ಪರ್ಶಿಸಿದರೆ ಚರ್ಮರೋಗಗಳು, ಆಘ್ರಾಣಿಸಿದರೆ ಪುಪ್ಪುಸ ವಿಕಾರಗಳೂ ಉಂಟಾದಾಗ ರೋಗಿಯನ್ನು ವಿಷ ಸ್ಪರ್ಶದಿಂದ ತಪ್ಪಿಸಿ ಸೂಕ್ತ ಚಿಕಿತ್ಸೆ ನಡೆಸಬೇಕು.

ಕ್ಷಾರಗಳು

ಪರಿಚಯ :

ಸರ್ಫಯುಗ ಪ್ರಾರಂಭವಾದ ಮೇಲೆ ಬಟ್ಟೆ ಮಡಿಮಾಡಲು ಸಾಂಪ್ರದಾಯಿಕವಾಗಿ ಬಳಸುತ್ತಿದ್ದ 'ಧೋಬಿಕಾರ' ಗಳು ತುಸುಮಟ್ಟಿಗೆ ಮೂಲೆ ಪಾಲಾಗಿವೆ. 'ವಾಶಿಂಗ್‌ಸೋಡಾ' ಎಂದು ಪ್ರಸಿದ್ಧವಾದ ಸೋಡಿಯಂ ಕಾರ್ಬೊನೇಟ್, ಅಮೋನಿಯಾ, ಪೊಟಾಸಿಯಂ ಹೈಡ್ರಾಕ್ಸೈಡ್, ಕಾಸ್ಟಿಕ್ ಪೊಟಾಶ್, ಕಾಸ್ಟಿಕ್ ಸೋಡಾ, ಅಮೋನಿಯಂ ಕಾರ್ಬೊನೇಟ್, ಪೊಟಾಸಿಯಂ ಕಾರ್ಬೊನೇಟ್ ಮೊದಲಾದ ವಿವಿಧ ಕ್ಷಾರದ್ರವ್ಯಗಳನ್ನು ನೀರು ಶುದ್ಧಮಾಡಲಿಕ್ಕೂ ಮಡಿಮಾಡುವ ಕಾರ್ಯಗಳಲ್ಲಿಯೂ ಉಪಯೋಗಿಸುತ್ತಾರೆ. ಮಿತತಪ್ಪಿ ಬಳಸಿದರೆ ಈ ಕ್ಷಾರಗಳು ವಿಷವಾಗಿ ಪರಿಣಮಿಸುತ್ತವೆ.

ವಿಷಪ್ರಾಶನದ ಲಕ್ಷಣಗಳು :

ಕ್ಷಾರವಿಷ ಸೇವಿಸಿದ ರೋಗಿಯ ಬಾಯಲ್ಲಿ ಸಾಬೂನಿನ ರುಚಿ ಕಾಣಿಸುತ್ತದೆ. ಅವನು ಕಾರಿಕೊಂಡ ದ್ರವ್ಯವು ಕ್ಷಾರಗುಣವುಳ್ಳದ್ದಾಗಿರುತ್ತದೆ. ವಾಂತಿಯು ಮೊದಲು ಅಲ್ಪ ಪ್ರಮಾಣದಲ್ಲಿದ್ದು ಅನಂತರ ತೀವ್ರವಾಗುವದಲ್ಲದೆ, ಶ್ಲೇಷ್ಮ—ರಕ್ತ ಮಿಶ್ರಿತವಾಗಿರುವದು. ಭೇದಿಯಾಗ ತೊಡಗಿ, ಮಲದಲ್ಲಿ ಶ್ಲೇಷ್ಮ ಹಾಗೂ ರಕ್ತದ ಅಂಶಗಳು ಕಾಣಿಸುತ್ತವೆ. ಪ್ರಾಣಾಪಾಯದ ಕಾಲಾವಧಿ 24 ತಾಸು.

ಚಿಕಿತ್ಸೆ ಮತ್ತು ಉಪಚಾರ :

ಕ್ಷಾರವಿಷಪ್ರಾಶನ ಮಾಡಿದ ರೋಗಿಗೆ ಆಮ್ಲಗುಣವುಳ್ಳ ಔಷಧಿಗಳನ್ನು ನೀಡಬೇಕು. ನಿಂಬೆಹಣ್ಣಿನ ರಸ, ಕಿತ್ತಳೆಹಣ್ಣಿನ ರಸ, ಹುಣಸೆಹಣ್ಣು ಕಿವುಚಿದ ಗೊಜ್ಜು 'ಅಥವಾ' ವಿನೆಗರ್ ಇವುಗಳ ಪೈಕಿ ಒಂದನ್ನು ನೀರಲ್ಲಿ ಬೆರೆಸಿ ಕುಡಿಸಬೇಕು. ಇಪ್ಪೆ ಎಣ್ಣೆ, ತತ್ತಿಯಲೋಳೆ, ಹಾಲು, ಬೆಣ್ಣೆ ಸಹ ಉಪಯುಕ್ತವಾಗಿವೆ. ಇತರ ಉಪದ್ರವಗಳಿಗೆ ಲಕ್ಷಣಾನುಸಾರ ಚಿಕಿತ್ಸೆ ಮಾಡಬೇಕು.

ಕ್ಷಾರವಿಷದ ಪ್ರಾಣಾಪಾಯದ ಸೇವನಾ ಪ್ರಮಾಣ—30 ಗ್ರಾಂ. (ಅರ್ಧ ಔನ್ಸ್.) ಪ್ರತಿ ವರ್ಷ 25 ಮರಣಗಳು ಕ್ಷಾರ ವಿಷದ ದುರುಪಯೋಗದಿಂದ ಸಂಭವಿಸುತ್ತವೆ.

ಉಪ್ಪು

ಪರಿಚಯ :

ನಮ್ಮ ಆಹಾರದಲ್ಲಿಯೂ ಔಷಧಿಗಳಲ್ಲಿಯೂ ಉಪ್ಪಿಗೆ ಬಹು ಮಹತ್ವದ ಸ್ಥಾನ ವಿದೆ. ಭೂಮಿಯೊಳಗೆ ಉಪ್ಪಿನ ನಿಕ್ಷೇಪಗಳಿದ್ದಲ್ಲಿ ಗಣಿಗಳನ್ನು ಕೊರೆದು ಉಪ್ಪು ಸಂಗ್ರಹಿಸುತ್ತಾರೆ; ಹಾಗೂ ಸಮುದ್ರದ ಉಪ್ಪುನೀರನ್ನು ಘನೀಕರಿಸಿಯೂ ಉಪ್ಪನ್ನು ತಯಾರಿಸುತ್ತಾರೆ. ಕ್ಷಾರ ತಯಾರಿಕೆಯಲ್ಲಿಯೂ ಇನ್ನಿತರ ಅನೇಕ ಉದ್ಯಮಗಳ ಲ್ಲಿಯೂ ಉಪ್ಪು ಉಪಯುಕ್ತವಾಗಿದೆ.

ಮಿತಿಮೀರಿ ಉಪ್ಪನ್ನು ಸೇವಿಸುವದು ಆರೋಗ್ಯಕ್ಕೆ ಹಿತಕರವಲ್ಲ. ಮೂತ್ರ ಪಿಂಡದ ಕಾಯಿಲೆಗಳಲ್ಲಿ, ರಕ್ತದ ಅಧಿಕ ಒತ್ತಡ ಹಾಗೂ ಶೋಥ ರೋಗದಲ್ಲಿ ಉಪ್ಪು ವರ್ಜ್ಯ. ಒಮ್ಮೆಲೇ ಅರ್ಧ ಪೌಂಡಿನಷ್ಟು ಉಪ್ಪನ್ನು ಸೇವಿಸಿದರೆ ಪ್ರಾಣಾಪಾಯಂ ಉಂಟಾಗಬಹುದು.

ವಿಷಪ್ರಮಾಣದಲ್ಲಿ ಉಪ್ಪನ್ನು ಸೇವಿಸಿದ ರೋಗಿಯು ಅತಿಶಯವಾದ ನೀರ ಡಿಕೆ, ಉರಿ, ತಾಪಗಳಿಂದ ನರಳುತ್ತಾನೆ. ಮುಂಗೋಪ, ಗಲಿಬಿಲಿ ಮತ್ತು ಸಂಕಟ ಅವನನ್ನು ಕಾಡುತ್ತವೆ. ಪಕ್ಷಾಘಾತವೂ ಉಂಟಾಗಬಹುದು.

ಚಿಕಿತ್ಸೆ ಮತ್ತು ಉಪಚಾರ :

ಹೊಟ್ಟೆತೊಳೆಯುವುದು, ವಾಂತಿಮಾಡಿಸುವುದು ಮೊದಲಾದ ಲಾಕ್ಷಣಿಕ ಚಿಕಿತ್ಸೆಗಳನ್ನು ನಡೆಸಬೇಕು. ಉಪ್ಪು ವಿಷಪ್ರಯೋಗಕ್ಕೆ ತುತ್ತಾಗಿ ಪ್ರಾಣಾಪಾಯಂ ಒದಗುವ ಸಂಭವ ಕಮ್ಮಿಯಾದರೂ ದುರ್ಲಕ್ಷಣಗಳು ಕಾಣಿಸಿಕೊಂಡಾಗ ತಾತ್ಸಾರ ಮಾಡಬಾರದು.

ಸೋಡಿಯಂ ನೈಟ್ರೇಟ್

ಪರಿಚಯ :

ಬಟ್ಟೆಗೆ ಬಣ್ಣಹಾಕುವ ಉದ್ಯಮದಲ್ಲಿ ಸೋಡಿಯಂ ನೈಟ್ರೇಟ್‌ನ್ನು ಬಳಸು ತ್ತಾರೆ. ಉಪ್ಪಿನಪುಡಿಯಂತೆ ಬೆಳ್ಳಗೆ ಕಾಣುವುದರಿಂದ ಉಪ್ಪೆಂದು ಭ್ರಮಿಸಿ

ಸೋಡಿಯಂ ನೈಟ್ರೇಟ್ ಸೇವಿಸಲ್ಪಟ್ಟು, ಪ್ರಾಣಾಪಾಯ ಸಂಭವಿಸಿದ ಪ್ರಸಂಗಗಳಿವೆ ಪ್ರಾಣಾಪಾಯದ ಪ್ರಮಾಣ [ಸೇವನೆ] 2 ಗ್ರಾಂ.

ವಿಷ ಲಕ್ಷಣ–ಚಿಕಿತ್ಸೆ :

ಸೋಡಿಯಂ ನೈಟ್ರೇಟ್ ವಿಷಸೇವಿಸಿದ ರೋಗಿಗೆ ತಲೆತಿರುಗುವುದು, ತಲೆ ನೋವು, ವಾಕರಿಕೆ, ಮತ್ತು ವಾಂತಿ ಪ್ರಾರಂಭವಾಗುತ್ತವೆ. ಭೇದಿ, ಸಂಕಟ, ನಿಶ್ಯಕ್ತಿ ಅತಂಕ ಮೊದಲಾದ ಉಪದ್ರವಗಳಿಂದ ನರಳುವುದಲ್ಲದೆ ಅವನ ಮುಖವು ನೀಲಿ ವರ್ಣಕ್ಕೆ ತಿರುಗುತ್ತದೆ. ಕೈಕಾಲು ತಣ್ಣಗಾಗುತ್ತವೆ. ಅವನ ಉಸಿರಾಟವು ತೀವ್ರ ವಾಗಿ, ಅದಿರುವಾಯು, ಸ್ಮೃತಿತಪ್ಪುವುದು ಮೊದಲಾದ ಉಪದ್ರವಗಳು ಉಂಟಾಗ ಬಹುದು. ವಾಂತಿಮಾಡಿಸುವದು, ಹೊಟ್ಟೆತೊಳೆಯುವದು ಮೊದಲಾದ ವಿಧಾನ ಗಳಿಂದ ವಿಷವನ್ನು ಹೊರಕ್ಕೆ ಹಾಕಬೇಕು. ಎಡ್ರಿನಾಲಿನ್ ಅಥವಾ ಎಫಿಡ್ರಿನ್ ಸೂಜಿಮದ್ದು ಕೃತಕಉಸಿರಾಟ ಹಾಗೂ ಆಮ್ಲಜನಕ ನೀಡಿಕೆಯೂ ಅಗತ್ಯವಾಗ ಬಹುದು.

ಕಾರ್ಬನ್‌ಟೆಟ್ರೋ ಕ್ಲೋರೈಡ್.

ಪರಿಚಯ :

ಅಗ್ನಿಶಾಮಕ ದ್ರವ್ಯವಾಗಿ ಬಳಸುವ ಕಾರ್ಬನ್‌ಟೆಟ್ರೋ ಕ್ಲೋರೈಡ್‌ನ್ನು ಕಾರ್ಖಾನೆ, ಗ್ಯಾರೇಜು ಹಾಗೂ ಆಧುನಿಕ ಗೃಹಗಳನ್ನು ಶುದ್ಧಗೊಳಿಸಲಿಕ್ಕೂ ಉಪಯೋಗಿಸುತ್ತಾರೆ. ಮಾತ್ರವಲ್ಲದೇ ಜಂತುನಾಶಕ ಗುಣವಿರುವುದರಿಂದ ಅದನ್ನು ಹೊಟ್ಟೆಯೊಳಗಿನ ಹುಳಗಳ ಬಾಧೆಯನ್ನು ನಿವಾರಿಸಲಿಕ್ಕೂ ಬಳಸುತ್ತಾರೆ.

ಪ್ರಾಣಾಯದ ಪ್ರಮಾಣ (ಸೇವನೆ) : 3–5 ಮಿಲಿಲೀಟರ್.

ದೀರ್ಘಕಾಲದ ವಿಷ ಲಕ್ಷಣಗಳು :

ರಬ್ಬರ ಕೈಗಾರಿಕೆಯಲ್ಲಿ ಕಾರ್ಬನ್‌ಟೆಟ್ರೋ ಕ್ಲೋರೈಡನ್ನು ಬಳಸುವುದರಿಂದ ಆ ಕಾರ್ಮಿಕರು ದೀರ್ಘಕಾಲದ ಸ್ಪರ್ಶ ಸೇವನಾ ವಿಷಕ್ಕೆ ತುತ್ತಾಗುವ ಸಂಭವವಿದೆ. ಅಂತಹ ರೋಗಿಗಳಲ್ಲಿ ಕಣ್ಣು, ಮೂಗು ಮತ್ತು ಗಂಟಲು ಉರಿ, ಅಗ್ನಿಮಾಂದ್ಯ, ವಾಕರಿಕೆ, ದೇಹಾಯಾಸ, ನಿಶ್ಯಕ್ತಿ ಮೊದಲಾದ ಉಪದ್ರವಗಳು ಉಂಟಾಗುತ್ತವೆ. ರಕ್ತದಒತ್ತಡ ಇಳಿಮುಖವಾಗುತ್ತದೆ, ದೃಷ್ಟಿದೋಷ, ಯಕೃತ್‌ವಿಕಾರ ಮತ್ತು ಚರ್ಮರೋಗಿಗಳಿಂದ ಅವರು ನರಳುತ್ತಾರೆ.

ವಿಷಪ್ರಯೋಗದ ಲಕ್ಷಣಗಳು :

ಕಾರ್ಬನ್ ಟೆಟ್ರೋಕ್ಲೋರೈಡ್ ವಿಷ ಸೇವನೆಯಾದ 24–36 ತಾಸುಗೊಳ ಗಾಗಿ ತಲೆನೋವು, ವಾಕರಿಕೆ, ವಾಂತಿ, ಹೊಟ್ಟೆನೋವು ಮೊದಲಾದ ಉಪದ್ರವಗಳು

ಕಾಣಿಸಿಕೊಳ್ಳುತ್ತವೆ. ರೋಗಿಗೆ ಮಂಕು ಕವಿದಿರುತ್ತದೆ. ವಕ್ರನಾಡಿ, ಮಂದವಾದ ಉಸಿರಾಟ, ಕುಸಿತ ಹಾಗೂ ಮರಣ ಸಂಭವಿಸಬಹುದು.

ಚಿಕಿತ್ಸೆ ಮತ್ತು ಉಪಚಾರ :

ಸ್ವಚ್ಛವಾದ ಹವೆಗೆ ರೋಗಿಯನ್ನು ತಕ್ಷಣ ಸ್ಥಳಾಂತರಿಸಿ ಕೃತಕ ಉಸಿರಾಟ ಕೈಗೊಳ್ಳಬೇಕು. ಅವನ ಬಟ್ಟೆಬರೆಗೆಗಳಿಗೆ ವಿಷ ಸ್ಪರ್ಶವಾಗಿದ್ದರೆ ಅವುಗಳನ್ನು ಕಳಚಿ ಮೈಯನ್ನುತೊಳೆಯಬೇಕು. ವಮನ, ವಿರೇಚನ, ಹೊಟ್ಟೆತೊಳೆಯುವದು ಮೊದಲಾದ ಲಾಕ್ಷಣಿಕ ಚಿಕಿತ್ಸೆ ನಡೆಸಬೇಕು. ಮುಖ್ಯವಾಗಿ ರೋಗಿಗೆ ಯಾವದೇ ಬಗೆಯ ಉತ್ತೇಜಕ ಔಷಧ—ಪಾನೀಯಗಳನ್ನು ನೀಡಬಾರದು. ಗ್ಲೂಕೋಸ್ ನೀಡಿಕೆ, ಶರ್ಕರಪಿಷ್ಟ ಹಾಗೂ ಸುಣ್ಣದ ಅಂಶ ಹೆಚ್ಚಾಗಿರುವ ಆಹಾರವೂ ವಿಶ್ರಾಂತಿಯೂ ಅಗತ್ಯ.

ಟಿಪ್ಪಣಿ :

ಕಾರ್ಬನ್ ಟೆಟ್ರೋಕ್ಲೋರೈಡ್‌ನ್ನು ಅಗ್ನಿಶಾಮಕ ಉದ್ದೇಶಕ್ಕಾಗಿ ಬಳಸುವವರು. ಸೂಕ್ತ ಮೊಗವಾಡ ಧರಿಸಬೇಕು. ಕಾರ್ಬನ್ ಟೆಟ್ರೋಕ್ಲೋರೈಡ್ ಸಂಪರ್ಕವಿರುವವರು ಮದ್ಯಪಾನ ಮಾಡಬಾರದು.

ಅಂಗಾರಾಮ್ಲ (ಇಂಗಾಲಾಮ್ಲ)

ಪರಿಚಯ :

ಧಾನ್ಯದ ಹಗೇವುಗಳಲ್ಲಿ (ಕಣಜಗಳಲ್ಲಿ), ಹಳೆಯ ಭಾವಿಗಳಲ್ಲಿ, ಸುಣ್ಣದ ಭಟ್ಟಿಯ ಬಳಿ ಅಥವಾ ಕಲ್ಲಿದ್ದಲು ಗಣಿಗಳಲ್ಲಿ ಅನೇಕ ಸಲ ಉಸಿರುಗಟ್ಟಿ ಪ್ರಾಣಾಪಾಯ ಸಂಭವಿಸುವುದುಂಟು. ಇದಕ್ಕೆ ಅಲ್ಲಿ ತುಂಬಿರುವ ಅಂಗಾರಾಮ್ಲ (ಇಂಗಾಲಾಮ್ಲ) ವಿಷವಾಯುವೇ ಕಾರಣ. ಅಂಗಾರಾಮ್ಲವು ಗಾಳಿಗಿಂತ ತುಸು ಹೆಚ್ಚು ಭಾರವಾದ ಅನಿಲ. ನಾವು ಉಸಿರಾಡುವಾಗ ನಿಶ್ವಾಸನ ಕ್ರಿಯೆಯಲ್ಲಿ ಅಂಗಾರಾಮ್ಲವನ್ನು ಹೊರಗೆ ಬಿಡುತ್ತೇವೆ. ಇತರ ಪ್ರಾಣಿಗಳು ಇದೇ ರೀತಿ ಅಂಗಾರಾಮ್ಲವನ್ನು ಹೊರಗೆ ತಳ್ಳುತ್ತವೆ. ಸತ್ತ ಪ್ರಾಣಿಗಳು ಕೊಳೆತುಹೋಗುವಾಗ ಕೂಡಾ ಅಂಗಾರಾಮ್ಲವು ಉತ್ಪನ್ನವಾಗುತ್ತದೆ. ಅಂಗಾರಾಮ್ಲವು ಆಘ್ರಾಣವಿಷ.

ವಿಷಪ್ರಯೋಗದ ಲಕ್ಷಣಗಳು :

ಹೆಚ್ಚು ಸಾಂದ್ರತೆಯ ಅಂಗಾರಾಮ್ಲವನ್ನು ಅಥವಾ ಸಮಸ್ಥಿತಿಗಿಂತ ತುಸು ಅಧಿಕ ಸಾಂದ್ರತೆಯ ಅಂಗಾರಾಮ್ಲವನ್ನು ದೀರ್ಘಕಾಲ ಆಘ್ರಾಣಿಸುತ್ತಿದ್ದರೆ ಅಂತಹ

ರೋಗಿಗಳಲ್ಲಿ ತಲೆಭಾರ, ಕೆನ್ನೆಹೊಡೆತ, ತಲೆತಿರುಗುವುದು, ಕಿವಿಗಡಚಿಕ್ಕುವುದು, ಬೆವರುವುದು, ದೇಹದೌರ್ಬಲ್ಯ ತೂಕಡಿಕೆ ಮೊದಲಾದ ಉಪದ್ರವಗಳು ಉಂಟಾಗುತ್ತವೆ. ಬುದ್ಧಿಮಾಂದ್ಯ ಬಡಬಡಿಸುವುದು, ಮೂರ್ಛೆತಪ್ಪುವುದು, ಉಸಿರಾಟದ ಏರುಪೇರು ಮತ್ತು ಅದಿರುವಾಯು ಕಾಣಿಸಿಕೊಂಡು ರೋಗಿಯು ಸಾವಿಗೆ ತುತ್ತಾಗಬಹುದು.

ವಾತಾವರಣದಲ್ಲಿ 0.04 ರಷ್ಟು ಅಂಗಾರಾಮ್ಲವು ಬೆರೆತಿರುತ್ತದೆ. ಸೇಕಡಾ 3 ಅಂಗಾರಾಮ್ಲವು ವಾತಾವರಣದಲ್ಲಿದ್ದರೆ ರೋಗಿಗೆ ಉಬ್ಬಸ, ತಲೆಶೂಲೆ, ತಲೆತಿರುಗುವುದು, ವಾಕರಿಕೆ ಮೊದಲಾದ ತೊಂದರೆಗಳು ಉಂಟಾಗುವವು. ಅಂಗಾರಾಮ್ಲದ ಸಾಂದ್ರತೆಯು ಸೇಕಡಾ 10 ಕ್ಕೆ ಏರಿದರೆ, ದೃಷ್ಟಿದೋಷ, ಅದಿರುವಾಯು ಮೊದಲಾದ ಉಪದ್ರವಗಳು ಉಂಟಾಗಿ ಸ್ಮೃತಿತಪ್ಪಬಹುದು. ಸೇಕಡಾ 25 ಸಾಂದ್ರತೆಯು ಅಂಗಾರಾಮ್ಲವನ್ನು ಸೇವಿಸಿದಲ್ಲಿ ಸಾವು ಖಚಿತ.

ಸರಿಯಾದ ಗಾಳಿ ಬೆಳಕಿಲ್ಲದ ಕೊಠಡಿಯಲ್ಲಿ ಹೆಚ್ಚು ಕಾಲ ಕೆಲಸ ಮಾಡುವವರು ಅಂಗಾರಾಮ್ಲದ ದೀರ್ಘಕಾಲ ವಿಷಕ್ಕೆ ತುತ್ತಾಗಿ ಅನ್ನಾಹಾರಗಳಲ್ಲಿ ಅಪೇಕ್ಷೆಯನ್ನು ಕಳೆದುಕೊಳ್ಳುವರಲ್ಲದೆ ಅಜೀರ್ಣ, ರಕ್ತಹೀನತೆ ಹಾಗೂ ಅಶಕ್ತತೆಗಳಿಂದ ನರಳುತ್ತಾರೆ.

ಚಿಕಿತ್ಸೆ ಮತ್ತು ಉಪಚಾರ :

ಅಂಗಾರಾಮ್ಲ ವಿಷ ಪ್ರಯೋಗಕ್ಕೆ ತುತ್ತಾದ ರೋಗಿಯನ್ನು ಸ್ವಚ್ಛ ಹವೆಗೆ ಸ್ಥಳಾಂತರಿಸುವುದು ಮೊದಲ ಕರ್ತವ್ಯ. ಕೃತಕ ಉಸಿರಾಟ, ಆಮ್ಲಜನಕ ನೀಡಿಕೆಗಳನ್ನು ತುರ್ತಾಗಿ ಒದಗಿಸಬೇಕು. ಮೊದಲಿಗೇ ರೋಗಿಯ ಬಿಗಿ ಉಡಿಗೆಗಳನ್ನು ಸಡಿಲಗೊಳಿಸಬೇಕು. ಉಸಿರಾಟವು ಪ್ರಾರಂಭವಾದ ನಂತರ ರೋಗಿಯ ದೇಹದ ಉಷ್ಣತೆಯನ್ನು ಕಾಪಾಡಲು ಬೆಚ್ಚಗೆ ಕಂಬಳಿಹೊದಿಸಿ ಬಿಸಿನೀರು ತುಂಬಿದ ಸೀಸೆಗಳನ್ನು ಅವನ ಪಕ್ಕದಲ್ಲಿ ಇರಿಸಿ ಶಾಖ ಮಾಡಿಸಬೇಕು. ಬಿಸಿ ಕಾಫಿ, ಚಹ ಅಥವಾ ಬ್ರಾಂಡಿಯನ್ನು ನೀಡಬಹುದು. ಥಾಮು ಎಂಬ ಸೂಜಿಮದ್ದನ್ನು ರಕ್ತನಾಳವ ಮೂಲಕ ನೀಡುವುದು ಹೆಚ್ಚು ಪ್ರಯೋಜನ ಕಾರಿಯಾಗಿದೆ.

ಟಿಪ್ಪಣಿ :

ಹಾಳುಂಭಾವಿಯು ತಳದಲ್ಲಿ ಅಥವಾ ಧಾನ್ಯದ ಕಣಜಗಳಲ್ಲಿ ಸಿಕ್ಕಿಬಿದ್ದು ಅಂಗಾರಾಮ್ಲ ವಿಷವನ್ನು ಆಘ್ರಾಣಿಸಿ ನರಳುವ ರೋಗಿಯನ್ನು ರಕ್ಷಿಸುವದಕ್ಕಾಗಿ ಹೊರ

ಗೆಳೆದು ತರುವ ಆವಸರವಲ್ಲಿ ಅನೇಕರು ಹಿಂದೆಮುಂದೆ ನೋಡದೆ ಅಲ್ಲಿಗೆ ಧಾವಿಸಿ ತಾವೂ ಆ ಅನಿಲ ವಿಷಕ್ಕೆ ತುತ್ತಾಗುವುದುಂಟು. ಸರ್ವಥಾ ಹೀಗೆ ಮಾಡಬಾರದು; ಆಮ್ಲಜನಕದ ಶೇಖರಣೆ ಇದ್ದರೆ ಕೊಳವೆಯ ಮೂಲಕ ಮೊದಲು ಅದನ್ನು ಪಸರಿಸಿ, ಕಲುಷಿತ ವಾತಾವರಣವನ್ನು ಸ್ವಚ್ಛಮಾಡಿದ ಮೇಲೆ ಅಲ್ಲಿಗೆ ಹೋಗಿ ರೋಗಿಯನ್ನು ಸ್ಥಳಾಂತರಿಸಲು ಮುಂದಾಗಬೇಕು. ಈ ಸಾಧನಗಳು ಇಲ್ಲವಾದರೆ ಇತರ ಉಪಾಯಗಳಿಂದ ರೋಗಿಯನ್ನು ಮೇಲಕ್ಕೆತ್ತಿ ಚಿಕಿತ್ಸೆಗೆ ತೊಡಗಬೇಕಲ್ಲದೆ ಏಕಾ ಏಕಿ ಧಾವಿಸುವುದು ಅದು ಅಪಾಯಕರ.

ಕಾರ್ಬನ್ ಮೊನಾಕ್ಸೈಡ್

ಪರಿಚಯ :

ಇಂಧನತೈಲಗಳು ಅಪೂರ್ಣವಾಗಿ ಉರಿದಾಗ ಕಾರ್ಬನ್ ಮೋನಾಕ್ಸೈಡ್ ವಿಷಅನಿಲವು ಉತ್ಪನ್ನವಾಗುತ್ತದೆ. ಕಿಟಕಿಗಳಾಗಲಿ, ಬೆಳಕು ಕಿಂಡಿಯಾಗಲಿ ಇರದ ಸಣ್ಣ ಗ್ಯಾರೇಜಿನಲ್ಲಿ ಬಾಗಿಲುಮುಚ್ಚಿ ಕಾರಿನ ಎಂಜಿನ್ ಚಾಲೂಮಾಡಿ ಇರಿಸಿದರೆ, ಒಂದು ಮೋಟರಕಾರಿನ ಹೊಗೆಕೊಳವೆಯು ಅರ್ಧ ತಾಸಿನಲ್ಲಿ ಒಬ್ಬ ಮನುಷ್ಯನನ್ನು ಕೊಲ್ಲುವಷ್ಟು ಕಾರ್ಬನ್ ಮೋನಾಕ್ಸೈಡ್ ವಿಷ ಅನಿಲವನ್ನು ಕಾರಬಲ್ಲದು. ಗ್ಯಾಸ್ ಹೀಟರ್ ಹಾಗೂ ಗ್ಯಾಸ್ ದೀಪಗಳ ಕೊಳವೆಗಳ ಸಂದುಗಳಲ್ಲಿ ಉಂಟಾಗುವ ಅಲ್ಪ ಬಿರುಕುಗಳಿಂದಲೂ ಪ್ರಾಣಾಪಾಯ ಉಂಟಾಗುವಷ್ಟು ವಿಷ ಅನಿಲವು ಹೊರಬೀಳಬಹುದು.

ಪ್ರತಿವರ್ಷ ಪ್ರಪಂಚದ ನಾನಾ ಭಾಗಗಳಲ್ಲಿ ಸುಮಾರು 3 ಸಾವಿರ ಮಂದಿ ಕಾರ್ಬನ್ ಮೊನಾಕ್ಸೈಡ್ ಅನಿಲದ ಸೇವನೆಯಿಂದ ಸಾವಿಗೆ ತುತ್ತಾಗುತ್ತಾರೆ. ಆತ್ಮಹತ್ಯೆಹಾಗೂ ಕೊಲೆಯ ದುರುದ್ದೇಶಗಳಿಂದ ಈ ವಿಷಅನಿಲ ಬಳಸಲ್ಪಡುವ ಸಂದರ್ಭಗಳು ಪಾಶ್ಚಿಮಾತ್ಯ ದೇಶಗಳಲ್ಲಿ ಅಧಿಕ.

ಕಾರ್ಬನ್ ಮೊನಾಕ್ಸೈಡ್, ಬಣ್ಣವಿಲ್ಲದ, ವಾಸನೆಇಲ್ಲದ, ಸ್ಪರ್ಶಜ್ಞಾನವನ್ನೂ ಸಹ ಉಂಟುಮಾಡದ ವಿಷಅನಿಲ. ಇದು ಉರಿದಾಗ ನೀಲಿಛಾಯೆ ಕಾಣಿಸುತ್ತದೆ. ಶೇಕಡಾ 4 ಅಥವಾ ಅದಕ್ಕಿಂತ ಅಧಿಕ ಸಾಂದ್ರತೆಯ ಕಾರ್ಬನ್ ಮೊನಾಕ್ಸೈಡ್ ಅನಿಲವು ತೀರ ಅಪಾಯಕಾರಿ. ಕ್ಲೋರಿನ್ ವಿಷ ಅನಿಲದೊಂದಿಗೆ ಕಾರ್ಬನ್ ಮೊನಾಕ್ಸೈಡ್‌ವನ್ನು ಮಿಶ್ರಮಾಡಿ ಮಾರಕ ವಿಷ ಅನಿಲವೊಂದನ್ನು ಸಿದ್ಧಪಡಿಸಿ, ಯುದ್ಧಕಾಲದಲ್ಲಿ ವೈರಿ ದಾಳಿಗೆ ಬಳಸುತ್ತಾರೆ.

ಉಸಿರಾಡುವಾಗ ಎದೆಯೊಳಗೆ ಪ್ರವೇಶಿಸಿದ ಕಾರ್ಬನ್ ಮೋನಾಕ್ಸೈಡ್ ಅನಿಲವು ಶ್ವಾಸಕೋಶದ ಮೂಲಕ ಅತಿ ಕ್ಷಿಪ್ರಾವಧಿಯಲ್ಲಿ ಹೀರಲ್ಪಟ್ಟು ರಕ್ತದ ಕೆಂಪು ಕಣದ ರಕ್ತ ವರ್ಣಜನಕ ದ್ರವ್ಯದೊಂದಿಗೆ ಬೆರೆತು ಆಮ್ಲಜನಕದ ಸಾಗಾಣಿಕೆಗೆ ಅಡ್ಡಿಯಾಗುವುದರ ಮೂಲಕ ತೀವ್ರ ಅಪಾಯವನ್ನುಂಟು ಮಾಡುತ್ತದೆ.

ಕಾರ್ಬನ್ ಮೊನಾಕ್ಸೈಡ್ ಆಘ್ರಾಣವಿಷ. ದುರ್ದೈವದಿಂದ ಈ ವಿಷ ವಾಯುವನ್ನು ಸೇವಿಸಿದ ರೋಗಿಯು ಅಂಗಾಂಗಗಳ ಚೈತನ್ಯವನ್ನೂ, ಮಾತನಾಡುವ ಶಕ್ತಿಯನ್ನೂ ಕಳೆದುಕೊಳ್ಳುವುದರಿಂದ ಸಹಾಯಕ್ಕಾಗಿ ಕೂಗಿಕೊಳ್ಳುವದಕ್ಕಾಗಲಿ, ಹೊರಗೆ ಧಾವಿಸಿ ಬರುವವಕ್ಕಾಗಲೀ ಸಾಧ್ಯವಾಗುವುದಿಲ್ಲ. ಆದುದರಿಂದಲೇ ಪ್ರಾಣಾಪಾಯದ ಸಂಭವ ತೀರ ಹೆಚ್ಚು.

ವಿಷಪ್ರಯೋಗದ ಲಕ್ಷಣಗಳು :

ತೀಕ್ಷ್ಣ ಸಾಂದ್ರತೆಯ ಕಾರ್ಬನ್‌ಮೊನಾಕ್ಸೈಡ್ ಅನಿಲವನ್ನು ಆಘ್ರಾಣಿಸಿದರೆ ಇದ್ದಕ್ಕಿದಂತೆಯೇ ತಲೆತಿರುಗುವುದು, ಆಯಾಸ, ಮುಖವಿವರ್ಣ ಮೊದಲಾದ ಉಪದ್ರವಗಳು ಉಂಟಾಗುವವು. ವಿಳಂಬವಿಲ್ಲದೆ ದೀರ್ಘಸುಪ್ತಿ, ಕುಸಿತ ಹಾಗೂ ಮರಣಕ್ಕೆ ರೋಗಿಯು ತುತ್ತಾಗಬಹುದು. ಕೆಲವು ರೋಗಿಗಳು ಪ್ರಜ್ಞಾಶೂನ್ಯ ಅವಸ್ಥೆಯಲ್ಲಿ ಅನೇಕ ದಿವಸಗಳಕಾಲ ನರಳಿ, ಶ್ವಾಸಕೋಶದ ಊತ ಮೊದಲಾದ ಉಪದ್ರವಗಳಿಗೆ ತುತ್ತಾಗಬಹುದು.

ಕಮ್ಮಿಸಾಂದ್ರತೆಯ ಕಾರ್ಬನ್ ಮೊನಾಕ್ಸೈಡ್ ಅನಿಲವನ್ನು ಆಘ್ರಾಣಿಸಿದ ರೋಗಿಯಲ್ಲಿ ತಲೆನೊವು, ತಲೆತಿರುಗುವುದು, ಕಿವಿ ಗಡಚಿಕ್ಕುವುದು, ವಾಕರಿಕೆ, ವಾಂತಿ, ತೂಕಡಿಕೆ ಮತ್ತು ಆಯಾಸ ಉಂಟಾಗುವವು. ದೇಹವ್ಯಾಪಾರದಲ್ಲಿ ಏರುಪೇರು ಕಾಣಿಸುವವಲ್ಲದೆ ಅವನ ಕಣ್ಣುಬೊಂಬೆ ಅರಳುವುದು. ಕೆಲವೊಮ್ಮೆ ಮಂಕು ಕವಿದಂತಾಗಿ ಅರೆಹುಚ್ಚಿನ ಲಕ್ಷಣಗಳು ಸಹ ಕಾಣಿಸಬಹುದು.

ಚಿಕಿತ್ಸೆ ಮತ್ತು ಉಪಚಾರ :

ರೋಗಿಯನ್ನು ವಿಷವಾತಾವರಣದಿಂದ ಸ್ವಚ್ಛಹವೆ ಇರುವಲ್ಲಿಗೆ ತಕ್ಷಣ ಸ್ಥಳಾಂತರಿಸಬೇಕು. ಕೃತಕಉಸಿರಾಟ ಹಾಗೂ ಆಮ್ಲಜನಕ ನೀಡಿಕೆ ಪೂರೈಸಬೇಕು. ರೋಗಿಯ ಬಿಗಿ ಉಡಿಗೆಗಳನ್ನು ಸಡಿಲಿಸಬೇಕು. ಕಾಫಿ, ಚಹ, ಬ್ರಾಂಡಿ ಮೊದಲಾದ ಉತ್ತೇಜಕ ದ್ರವ್ಯಗಳು ಹಿತಕರವಾಗಿವೆ. ಅಗತ್ಯಬಿದ್ದಲ್ಲಿ ರಕ್ತನಾಳದ ಮೂಲಕ ಉಪ್ಪು ನೀರಿನ ನೀಡಿಕೆ–ರಕ್ತದಾನ ಸಹ ಒದಗಿಸಬೇಕು. ಕೊರಾಮಿನ್–ಎಡ್ರಿನಾಲಿನ್

ಸೂಜಿಮದ್ದುಗಳು ಹೆಚ್ಚಿನ ನೆರವು ನೀಡುತ್ತವೆ. ಇತರ ಉಪದ್ರವಗಳಿಗೆ ಸೂಕ್ತ ಚಿಕಿತ್ಸೆ ನಡೆಸಬೇಕು.

ದೀರ್ಘಕಾಲಾವಧಿಯ ತನಕ ಆಗೊಮ್ಮೆ ಈಗೊಮ್ಮೆ ತುಸು ಪ್ರಮಾಣದಲ್ಲಿ ಕಮ್ಮಿ ಸಾಂದ್ರತೆಯ ಕಾರ್ಬನ್ ಮೊನಾಕ್ಸೈಡ್ ಅನಿಲವನ್ನು ಆಘ್ರಾಣಿಸುತ್ತಿದ್ದರೆ ಕ್ರಮೇಣ ರೋಗಿಯ ಜ್ಞಾಪಕಶಕ್ತಿಯು ಕುಂದುವುದಲ್ಲದೆ ಬುದ್ಧಿಯು ಮಂಕಾಗುತ್ತದೆ. ಅವನ ಬೆರಳತುದಿಗಳು ಸಂವೇದನಾ ಶೂನ್ಯವಾಗಿರುತ್ತವೆ. ಇಂತಹ ರೋಗಿಯನ್ನು ವಿಷಅನಿಲದ ಆಘ್ರಾಣದಿಂದ ತಪ್ಪಿಸಿ ಸ್ವಚ್ಛಹವೆಗೆ ಸ್ಥಳಾಂತರಿಸಿ ಲಕ್ಷಣಾನುಸಾರ ಚಿಕಿತ್ಸೆ ನಡೆಸಬೇಕು.

ಅಧ್ಯಾಯ —5

ಒಕ್ಕಲುತನದ ವಿಷ ಹಾಗೂ ಮೂಷಿಕವಿಷ

ಡಿ. ಡಿ. ಟಿ

ಪರಿಚಯ :

ಡಿ.ಡಿ.ಟಿ ಯನ್ನು ಒಕ್ಕಲಿಗರ ಬಂಧು ಎಂದು ಹೇಳುವುದುಂಟು. ತೊಗರಿ, ಕಡಲೆ, ಹತ್ತಿ ಮೊದಲಾದ ಬೆಳೆಗಳಿಗೆ ತಗಲುವ ನಾನಾಬಗೆಯ ಶಿಲೀಂಧ್ರಬಾಧೆಯಿಂದ ಫಸಲನ್ನು ರಕ್ಷಿಸಲು ಡಿ.ಡಿ.ಟಿ ಯ ನೆರವು ಇಲ್ಲದಿದ್ದರೆ ಭೂಮಿತಾಯಿ ನೀಡಿ ಒಕ್ಕಲಿಗರು ಚೆನ್ನಾಗಿ ಬೆಳೆದರೂ ಕೂಡಾ ಅದರ ಕಣಜ ಬರಿದಾಗಿಯೇ ಉಳಿಯುತ್ತಿತ್ತು. ಮಲೇರಿಯವನ್ನು ಹಬ್ಬಿಸುವ ಸೊಳ್ಳೆಗಳನ್ನು ನಿರ್ನಾಮಗೊಳಿಸಲು ಆವರ್ತಕ ಸಿಂಪರಣೆಯಾಗಿ ಮನೆಮನೆಗಳಿಗೂ ಡಿ.ಡಿ.ಟಿಯನ್ನು ಚಿಮುಕಿಸುತ್ತಾರೆ. ನೊಣ, ಜಿರಳೆ. ತಿಗಣೆ ಮುಂತಾದ ಕ್ರಿಮಿಕೀಟಗಳ ಉಪದ್ರವವನ್ನು ನಿಲ್ಲಿಸಲು ಸಹ ಡಿ.ಡಿ.ಟಿ ಯನ್ನು ಬಳಸುತ್ತಾರೆ. ಒಣಪುಡಿ ರೂಪದಲ್ಲಿ, ಸಿದ್ಧಪಡಿಸಿದ ಮಿಶ್ರಣವಾಗಿ ಕರಗುವ ಪುಡಿಯಾಗಿ ಹೀಗೆ ನಾನಾ ಬಗೆಯಲ್ಲಿ ಅನೇಕ ಕಂಪನಿ ಛಾಪುಗಳಲ್ಲಿಯೂ ವಿವಿಧ ಸಾಂದ್ರತೆಗಳಲ್ಲಿಯೂ ಡಿ.ಡಿ.ಟಿ. ಮಾರುಕಟ್ಟೆಯಲ್ಲಿ ದೊರಕುತ್ತದೆ. ಡೈಕ್ಲೋರೊ ಡೈಫಿನಾಲ್ ಟ್ರೈ ಕ್ಲೋರಿಥೇನ್ ಇದು ಡಿ.ಡಿ.ಟಿ.ಯ ಪೂರ್ಣ ಹೆಸರು. ಘಾಟು ವಾಸನೆಯಿರುವ ಡಿ.ಡಿ.ಟಿ. ಸೇವನೆ, ಸ್ಪರ್ಶ ಹಾಗೂ ಆಘ್ರಾಣವಿಷ.

ಪ್ರಾಣಾಪಾಯದ ಪ್ರಮಾಣ (ಸೇವನೆ) : 20 ಗ್ರಾಂ

ದೀರ್ಘಕಾಲದ ವಿಷ ಲಕ್ಷಣಗಳು :

ಹೊಲ ಮನೆಗಳಲ್ಲಿ ಡಿ.ಡಿ.ಟಿ. ಸಿಂಪರಣೆ ಕಾರ್ಯದಲ್ಲಿ ನಿರತರಾದ ವೃತ್ತಿನಿರತ ಕೆಲಸಗಾರರು. ಡಿ.ಡಿ.ಟಿ. ಚಿಲ್ಲರೆ ಮಾರಾಟ ಮಾಡುವವರು ಮೊದಲಾಗಿ ಅನೇಕರು ಡಿ.ಡಿ.ಟಿ.ಯ ದೀರ್ಘಕಾಲ ಸ್ಪರ್ಶ ಹಾಗೂ ಆಘ್ರಾಣ ವಿಷಕ್ಕೆ ತುತ್ತಾಗುವುದುಂಟು. ಅಂತಹ ರೋಗಿಗಳಲ್ಲಿ ದೇಹಾಲಸ್ಯವುಂಟಾಗಿ ಕೈಕಾಲು ಬಲಹೀನವಾಗಿ, ಶರೀರದ ತೂಕವು ಕಮ್ಮಿಯಾಗುತ್ತ ಬರುವುದು ಮತ್ತು ಕೈಕಾಲು ಜೋಮು ಹಿಡಿಯುವುದು, ರಕ್ತಹೀನತೆ ಮೊದಲಾದ ಉಪದ್ರವಗಳು ಕಾಣಿಸುತ್ತವೆ. ಮೈ ಕೈ ನಡುಕ, ಮೂಗು ಸೋರುವುದು ಮತ್ತು ಅನೇಕ ಬಗೆಯ ಚರ್ಮ ರೋಗಗಳು ಅವರನ್ನು ಬಾಧಿಸುತ್ತವೆ

ಮಾತ್ರವಲ್ಲದೆ ಅಂತಹ ರೋಗಿಗಳು ಗಾಬರಿ ಮತ್ತು ಗಡಿಬಿಡಿಯಿಂದಲೂ ನರಳು ತ್ತಾರೆ.

ಇಂತಹ ರೋಗಿಗಳನ್ನು ಡಿ.ಡಿ.ಟಿ. ಸ್ಪರ್ಶದಿಂದ ತಕ್ಷಣ ತಪ್ಪಿಸಬೇಕು; ಮತ್ತು ಆ ಕೆಲಸದಿಂದ ಖಾಯಂ ಆಗಿ ಬಿಡುಗಡೆ ಮಾಡಬೇಕು. ಅವರಿಗೆ ಸುಣ್ಣ, ಶರ್ಕರಪಿಷ್ಟ ಹಾಗೂ ಜೀವಾತುಭರಿತ ಆಹಾರವನ್ನೂ, ವಿಶ್ರಾಂತಿಯನ್ನೂ ನೀಡಬೇಕು. ಅದಿರು ವಾಯು ಮೊದಲಾದ ಉಪದ್ರವಗಳು ಕಾಣಿಸಿದರೆ ಸೂಕ್ತ ಚಿಕಿತ್ಸೆ ನಡೆಸಬೇಕು.

ಡಿ.ಡಿ.ಟಿ. ಯನ್ನು ಸದಾ ಸ್ಪರ್ಶಿಸುವವರು ಕೆಲಸದ ವೇಳೆಯಲ್ಲಿ ಕೈಕಾಲು ಮುಖಗಳಿಗೆ ಸೂಕ್ತ ರಕ್ಷಾಕವಚಗಳನ್ನು ತೊಟ್ಟುಕೊಳ್ಳುವದು ಮತ್ತು ಕೆಲಸ ಬಿಟ್ಟ ಕೂಡಲೇ ಕೈಕಾಲು ಮುಖಗಳನ್ನು ಸಾಬೂನುಹಚ್ಚಿ ತಣ್ಣೀರಿನಿಂದ ತೊಳೆದುಕೊಳ್ಳು ವದು ಉತ್ತಮ ಮುನ್ನೆಚ್ಚರಿಕೆಯ ಕ್ರಮವಾಗಿದೆ.

ವಿಷಪ್ರಾಶನದ ಲಕ್ಷಣಗಳು :

5 ಗ್ರಾಮ್ ಪ್ರಮಾಣದ ಡಿ.ಡಿ.ಟಿ.ಯನ್ನು ಸೇವಿಸಿದ ರೋಗಿಯು ಒಂದು ತಾಸಿನೊಳಗಾಗಿ ಅತಿಶಯ ವಾಂತಿಮಾಡಿಕೊಳ್ಳಲು ಪ್ರಾರಂಭಿಸುತ್ತಾನೆ. ಉದ್ವೇಗ, ಭಯ–ಭೀತಿಗಳಿಂದಲೂ, ಅತಿಶಯ ಭೇದಿಯಿಂದಲೂ ಅವನು ನರಳುತ್ತಾನೆ. ಉದ್ರೇ ಕವು ಸ್ಪಷ್ಟವಾಗಿ ಗೋಚರಿಸುತ್ತದೆ. ರೋಗಿಯ ಕೈಕಾಲುಗಳು ಜೋಮು ಹಿಡಿ ಯುವವು.

20 ಗ್ರಾಮ ಪ್ರಮಾಣದ ಡಿ.ಡಿ.ಟಿ. ಸೇವಿಸಿದ ರೋಗಿಯು 8 ರಿಂದ 12 ತಾಸುಗಳೊಳಗಾಗಿ ರೆಪ್ಪೆಹಾರುವುದು, ತಲೆ ತಿರುಗುವುದು, ಕತ್ತು ಮೋರೆ ಕಂಪನ ಮೊದಲಾದ ಉಪದ್ರವಗಳಿಂದ ನರಳತೊಡಗುತ್ತಾನೆ. ಅದಿರುವಾಯುವು ತೊಡಗಿ, ಕ್ರಮೇಣ ದೇಹವನ್ನೆಲ್ಲ ವ್ಯಾಪಿಸಿ, ತೀವ್ರಸ್ವರೂಪದ್ದಾಗಿ ಪರಿವರ್ತನೆಗೊಳ್ಳುವುದು. ರೋಗಿಯ ಉಸಿರಾಟವು ಮೊದಲಿಗೆ ತೀವ್ರವಾಗಿದ್ದರೂ ಕ್ರಮೇಣ ಮಂದಗತಿಗೆ ತಿರುಗುವುದು. ನಾಡಿಯಲ್ಲಿ ಹೆಚ್ಚಿನ ವ್ಯತ್ಯಾಸವು ಕಂಡು ಬರುವುದಿಲ್ಲ. ದೀರ್ಘಸುಪ್ತಿ, ಕುಸಿತಸಾವು ಸಂಭವಿಸಬಹುದು. ಡಿ.ಡಿ.ಟಿ. ಯನ್ನು ಕರಗಿಸಲು ಬಳಸುವ ರಾಸಾಯ ನಿಕದ್ರವ್ಯವು ವಿಷದ್ರವ್ಯವಾಗಿದ್ದರೆ ರೋಗಿಯಲ್ಲಿ ಸಮ್ಮಿಶ್ರ ವಿಷಪ್ರಾಶನದ ಲಕ್ಷಣಗಳು ಕಾಣಿಸಿಕೊಳ್ಳಬಹುದು.

ಚಿಕಿತ್ಸೆ ಮತ್ತು ಉಪಚಾರ :

ಡಿ.ಡಿ.ಟಿ. ವಿಷಪ್ರಾಶನ ಚಿಕಿತ್ಸೆಯಲ್ಲಿ ಹೊಟ್ಟೆತೊಳೆಯುವುದು, ಮುಖ್ಯ. ವಾಂತಿ ಮಾಡಿಸುವುದು ಸೋಡಿಯಂ ಸಲ್ಫೇಟ ಮಿಶ್ರಣ ಕುಡಿಸಿ ಭೇದಿ ಮಾಡಿಸು

ವುದು, ಕೃತಕಉಸಿರಾಟ ಹಾಗೂ ಆಮ್ಲಜನಕ ನೀಡಿಕೆಗಳನ್ನು ಒದಗಿಸಬೇಕು. ಎಟ್ರೋಪಿನ ಸೂಜಿಮದ್ದು ಹಾಗೂ ರಕ್ತನಾಳದ ಮೂಲಕ ಕ್ಯಾಲ್ಶಿಯಂ ಗ್ಲೂಕೊನೇಟ್ ನೀಡುವುದು ಉಪಯುಕ್ತ. ಅದಿರುವಾಯು ನಿವಾರಣೆಗಾಗಿ ಶಾಮಕಚಿಕಿತ್ಸೆಯನ್ನು ನಡೆಸಬೇಕು. **ಉದ್ರೇಕಕಾರಿ ಔಷಧ-ಅನ್ನ–ಪಾನೀಯಗಳು ವರ್ಜ್ಯ.** ನಂಜು ಹಬ್ಬದಂತೆ ಪೆನ್‌ಸಿಲಿನ್ ಸೂಜಿಮದ್ದು, ಜೀವಾತು, ಶರ್ಕರಪಿಷ್ಟ ಭರಿತ ಆಹಾರ, ಗ್ಲೂಕೋಸ್‌ನೀಡಿಕೆ ಮತ್ತು ವಿಶ್ರಾಂತಿ ಅಗತ್ಯ. ರೋಗಿಯು ವಿಷದ ಉಪದ್ರವಗಳಿಂದ ಸಂಪೂರ್ಣ ಮುಕ್ತನಾಗಲು ಒಂದೆರಡು ತಿಂಗಳು ಹಿಡಿಯಬಹುದು.

ಟಿಪ್ಪಣಿ :

ಡಿ.ಡಿ.ಟಿ.ಯು ವಂಶಪಾರಂಪರ್ಯವಾದ ಶಾಪವನ್ನು ಕೊಡುವ ಅಪ್ರತ್ಯಕ್ಷ ವಿಷ ಪ್ರಯೋಗ ವಿಚಾರವು ಈಚೆಗೆ ಬೆಳಕಿಗೆ ಬಂದಿದೆ. ಡಿ.ಡಿ.ಟಿ.ಯನ್ನು ಕೀಟನಾಶಕವಾಗಿ ಚಿಮುಕಿಸಿ ಬೆಳೆಸಿದ ತರಕಾರಿ—ಹಣ್ಣುಹಂಪಲುಗಳನ್ನು ತೊಳೆಯದೆ, ತೊಳೆದರೂ ಸರಿಯಾಗಿ ಡಿ.ಡಿ.ಟಿ. ವಿಸರ್ಜನೆಯಾಗದೆ ಇದ್ದುದನ್ನು ಪರಿಗ್ರಹಿಸಿದರೆ ಸೇವಿಸಿದವರ ದೇಹದಲ್ಲಿ ಅಲ್ಪಪ್ರಮಾಣದ ಡಿ.ಡಿ.ಟಿ. ವಿಷವು ಸಂಚಯಗೊಳ್ಳುತ್ತದೆ. ಅಲ್ಲಿ ಅದು ಕರಗದೆ ಅಥವಾ ನಿರ್ದಿಷ್ಟಗೊಳ್ಳದೆ ವಿಸರ್ಜಿತವಾಗದೆ ದೀರ್ಘಕಾಲ ಉಳಿದುಬಿಡುತ್ತದೆ. ಡಿ.ಡಿ.ಟಿ.ಯನ್ನು ಚಿಮುಕಿಸಿದ ಹಸಿರುಹುಲ್ಲನ್ನೂ, ಧಾನ್ಯದಹೊಟ್ಟು ಮೊದಲಾದ ಆಹಾರವನ್ನೂ ತಿಂದ ಪ್ರಾಣಿಗಳ ಮಾಂಸದಲ್ಲಿಯೂ ಇದೇ ರೀತಿ ವಿಷ ಶೇಖರಣೆ ಹೊಂದಿ ಅಂತಹ ಪ್ರಾಣಿಗಳ ಮಾಂಸವನ್ನು ತಿನ್ನುವವರು ಡಿ.ಡಿ.ಟಿ. ಸೇವನೆಯ ಅಪಾಯಕ್ಕೆ ಒಳಗಾಗುತ್ತಾರೆ. ದನಕರುಗಳ ಹಾಲಲ್ಲಿ ಕೂಡಾ ಅದು ಹೊರಬಂದು ಅಂತಹ ಹಾಲನ್ನು ಕುಡಿಯುವವರ ಹೊಟ್ಟೆಗೂ ಸೇರುತ್ತದೆ. ಇದರ ಪರಿಣಾಮವಾಗಿ ಗೂರಲುಕೆಮ್ಮು (ಅಸ್ತಮಾ), ಉದರರೋಗಗಳು, ಕಫರೋಗಗಳು, ತಲೆನೋವು, ಅರಸಿನಮುಂಡಿಗೆರೋಗ ಮೊದಲಾದ ನಾನಾ ಉಪದ್ರವಗಳು ಕಾಣಿಸಿಕೊಳ್ಳಬಹುದು. ಅರ್ಬುದ ರೋಗಕ್ಕೂ ಡಿ.ಡಿ.ಟಿ. ವಿಷವು ಹೆಚ್ಚಿನ ಪ್ರೇರಕವೆಂದು ಕಂಡುಬಂದಿದೆ. ಇದೇ ಕಾರಣದಿಂದ ಅಮೇರಿಕ ಮೊದಲಾದ ದೇಶಗಳಲ್ಲಿ ಡಿ.ಡಿ.ಟಿ. ಬಳಕೆಯನ್ನು ಸಂಪೂರ್ಣವಾಗಿ ನಿಶೇಧಿಸಲಾಗಿದೆ ಎಂಬುದನ್ನು ಇಲ್ಲಿ ಗಮನಿಸಬಹುದು.

ಬಿ.ಹೆಚ್.ಸಿ.ಮತ್ತು ಲಿಂಡೇನ್

ಪರಿಚಯ :

ಬೆಂನ್‌ಜಿನ್ ಹೆಕ್ಸಾಕ್ಲೋರೈಡ್(ಬಿ.ಹೆಚ್.ಸಿ)ಪ್ರಮುಖವಾದ ಒಂದು ಶಿಲೀಂಧ್ರುನಾಶಕ ದ್ರವ್ಯ. ನೀರಿನಲ್ಲಿ ಕರಗುವ ಪುಡಿ, ಮಿಶ್ರಣ ಮೊದಲಾದ ಅನೇಕ ರೂಪ

ಗಳಲ್ಲಿ ಮಾರುಕಟ್ಟೆಯಲ್ಲಿ ಇದು ದೊರಕುತ್ತದೆ. ಲಿಂಡೇನ್ ಇದೇ ವರ್ಗದ ಇನ್ನೊಂದು ಶಿಲೀಂಧ್ರನಾಶಕ ದ್ರವ್ಯ. ಇವೆರಡೂ ದ್ರವ್ಯಗಳೂ ಸ್ಪರ್ಶ, ಆಘ್ರಾಣ ಮತ್ತು ಸೇವನಾ ವಿಷಗಳಾಗಿವೆ.

ಪ್ರಾಣಾಪಾಯದ ಪ್ರಮಾಣ (ಸೇವನೆ): ಬಿ.ಹೆಚ್.ಸಿ. 20–30 ಗ್ರಾಂ. ಲಿಂಡೇನ್ 3–5 ಗ್ರಾಂ

ವಿಷಪ್ರಯೋಗದ ಲಕ್ಷಣಗಳು :

ಬೆನ್‌ಜಿನ್ ವಿಷಪ್ರಾಶನವಾದ ರೋಗಿಯಲ್ಲಿ ವಾಂತಿ ಭೇದಿ ಮತ್ತು ಅದಿರಂ ವಾಯು ಉಪದ್ರವಗಳು ಕಾಣಿಸಿಕೊಳ್ಳುತ್ತವೆ. ಅವನ ಮೋರೆಯು ನೀಲಿ ಛಾಯೆಗೆ ತಿರುಗುತ್ತದೆ. ಮತ್ತು ಉಃ ಸಿರಾಟಕ್ಕೆ ತೀವ್ರವಾದ ತೊಂದರೆ ಕಾಣಿಸಿಕೊಳ್ಳುತ್ತದೆ. ಈ ವಿಷದ್ರವ್ಯಗಳ ಸ್ಪರ್ಶ ಹಾಗೂ ಆಘ್ರಾಣಗಳಿಂದ ತಲೆ ತಿರುಗವದು ತಲೆನೋವು ವಾಕರಿಕೆ, ಅದಿರುವಾಯು ಮೊದಲಾದ ಉಪದ್ರವಗಳೂ, ಚರ್ಮರೋಗಗಳೂ ಉಂಟಾಗುವವು. ಅಲ್ಲದೆ ರೋಗಿಯ ಕಣ್ಣು, ಮೂಗು ಗಂಟಲುಗಳಲ್ಲಿ ಕೆರೆತ, ಉರಿ ಮತ್ತು ನೋವು ಉಂಟಾಗಬಹುದು.

ಚಿಕಿತ್ಸೆ ಮತ್ತು ಉಪಚಾರ :

ಈ ವಿಷಗಳ ಸ್ಪರ್ಶ ಮತ್ತು ಆಘ್ರಾಣ ವಿಷ ಲಕ್ಷಣಗಳು ಕಾಣಿಸಿಕೊಂಡ ಕೊಡಲೇ ರೋಗಿಯನ್ನು ವಿಷ ಸಂಪರ್ಕದಿಂದ ಸ್ವಚ್ಛ ಹವೆ ಇರುವಲ್ಲಿಗೆ ಸ್ಥಳಾಂತರಿಸ ಬೇಕು. ವಿಷಸ್ಪರ್ಶವಾದ ಅಂಗಾಂಗಗಳನ್ನು ನೀರಿನಿಂದ ತೊಳೆಯಬೇಕು. ವಿಷ ಪ್ರಾಶನವಾದ ರೋಗಿಗೆ ತತ್ತಿಯ ಲೋಳೆ, ಅನ್ನಬಸಿದಗಂಜಿ ಅಥವಾ ಹಿಟ್ಟಿನ ರಾಡಿ ಯನ್ನು ಕುಡಿಸಬಹುದು. ಹೊಟ್ಟೆ ತೊಳೆಯುವದು ಮತ್ತು ವಾಂತಿ ಮಾಡಿಸುವದರ ಮೂಲಕ ವಿಷವನ್ನು ಹೊರಕ್ಕೆ ಹಾಕಬೇಕು. ಹಾಲು, ತೈಲ, ಕೊಬ್ಬು ಮತ್ತು ಉತ್ತೇಜಕ ಅನ್ನಪಾನಗಳು ಔಷಧಿಗಳು ವರ್ಜ್ಯ. ಎಟ್ರೋಪಿನ್, ಕ್ಯಾಲ್ಸಿಯಂ ಗ್ಲೂಕೋನೇಟ ಮತ್ತು ಶಾಮಕ ಔಷಧಿಗಳು ಉಪಯುಕ್ತವಾಗಿವೆ. ರೋಗಿಗೆ ಜೀವಾತು ಮಿಶ್ರವಾದ ಸ್ವಾದಿಷ್ಟಆಹಾರ, ವಿಶ್ರಾಂತಿ ಮತ್ತು ಚಿತ್ತಶಾಂತಿಗಳು ಅಗತ್ಯ.

ಟೊಕ್ಸಾಫೇನ್

ಪರಿಚಯ :

ಚಿಮುಕಿಸಿದ ಮೇಲೆ ಸುಮಾರು ಆರು ತಿಂಗಳಷ್ಟು ತನ್ನ ಶಕ್ತಿಯನ್ನು ಉಳಿಸಿ ಕೊಳ್ಳುವ ಟೊಕ್ಸಾಫೇನ್‌ನ್ನು ಅನೇಕ ಬೆಳೆಗಳನ್ನು ಕೆಡಿಸುವ ಶಿಲೀಂದ್ರಬಾಧೆಯ

ನಿವಾರಣಾರ್ಥವಾಗಿ ಬಳಸುತ್ತಾರೆ. ಒಣಪುಡಿ, ನೀರಲ್ಲಿ ಕರಗುವಪುಡಿ, ತೈಲಮಿಶ್ರಣ ಮೊದಲಾದ ನಾನಾ ರೂಪಗಳಲ್ಲಿ ಈ ಕೀಟನಾಶಕವು ದೊರಕುತ್ತದೆ. ನಮ್ಮ ದೇಶದಲ್ಲಿ ಇದರ ಉಪಯೋಗವು ಕಮ್ಮಿಯಾದರೂ ಟೊಕ್ಸಾಫೇನ್ ವಿಷಪ್ರಯೋಗದಿಂದ ಪ್ರತಿವರ್ಷ 3–4 ಸಾವುಗಳು ಸಂಭವಿಸುತ್ತವೆ.

ಪ್ರಾಣಾಪಾಯದ ಪ್ರಮಾಣ (ಸೇವನೆ) : 2 ಗ್ರಾಂ.

ದೀರ್ಘಕಾಲದ ವಿಷಪ್ರಯೋಗದ ಲಕ್ಷಣ ಮತ್ತು ಚಿಕಿತ್ಸೆ :

ದೀರ್ಘಕಾಲ ಟೊಕ್ಸಾಫೇನಿನ್ ವಿಷಪ್ರಯೋಗಕ್ಕೆ ತುತ್ತಾದ ರೋಗಿಯು ಸದಾ ಮೂಗುಸೋರುವದು, ಕೈಕಾಲು ಶಕ್ತಿಗುಂದುವದು, ಜೋಮು ಹಿಡಿಯುವದು, ಅಶಕ್ತಿ, ರಕ್ತಹೀನತೆ, ಚರ್ಮರೋಗ ಮೊದಲಾದ ಉಪದ್ರವಗಳಿಂದ ನರಳುತ್ತಾನೆ. ಗಾಬರಿ ಮತ್ತು ಗಡಿಬಿಡಿಗಳಿಂದ ಅವನ ಮನಸ್ಸಿನ ನೆಮ್ಮದಿ ತಪ್ಪುತ್ತದೆ. ಇಂತಹ ರೋಗಿಯನ್ನು ತಕ್ಷಣ ವಿಷಸಂಪರ್ಕದಿಂದ ತಪ್ಪಿಸಬೇಕು ಮತ್ತು ಮುಂದೆ ಎಂದೂ ಸಂಪರ್ಕಬಾರದಂತೆ ದೂರವಿರಿಸಬೇಕು. ಸುಣ್ಣ, ಶರ್ಕರ ಪಿಷ್ಟ ಮತ್ತು ಜೀವಾಭರಿತವಾದ ಆಹಾರವನ್ನು ವಿಶ್ರಾಂತಿಯನ್ನೂ ರೋಗಿಗೆ ನೀಡಬೇಕು. ಟೊಕ್ಸಾಫೇನ್ ವಿಷದ ಸಂಪರ್ಕ ಬರುವ ಕೆಲಸಗಾರರು ಸೂಕ್ತ ರಕ್ಷಣಾ ಕವಚಗಳನ್ನು ಧರಿಸುವುದು ಅಗತ್ಯ.

ವಿಷಪ್ರಾಶನದ ಲಕ್ಷಣಗಳು :

ಟೊಕ್ಸಾಫೇನ್ ವಿಷಪ್ರಾಶನವಾದ ರೋಗಿಯಲ್ಲಿ ವಾಕರಿಕೆಯೂ ವಾಂತಿಯೂ ಪ್ರಾರಂಭವಾಗುತ್ತದೆ. ಆದರೆ ಕೆಲವು ರೋಗಿಗಳಲ್ಲಿ ಈ ಲಕ್ಷಣಗಳು ಗೋಚರಿಸದೆ ಒಮ್ಮೆಲೇ ತೀವ್ರವಾದ ಅದಿರುವಾಯುವು ಉಂಟಾಗಬಹುದು. ಕ್ರಮೇಣ ನಡುಕಗಳ ನಡುವಣ ಮಧ್ಯಂತರವು ಹೆಚ್ಚುತ್ತಾ ಬಂದರೂ ಉಸಿರಾಟದ ಸೋಲಿನಿಂದಾಗಿ ರೋಗಿಯು ಸಾವನ್ನಪ್ಪಬಹುದು. ಬದುಕಿವುಳಿದರೆ ರಕ್ತಹೀನತೆ ಅಶಕ್ತಿ ಮೊದಲಾದ ಉಪದ್ರವಗಳು ಉಂಟಾಗುತ್ತವೆ.

ಚಿಕಿತ್ಸೆ ಮತ್ತು ಉಪಚಾರ :

ಟೊಕ್ಸಾಫೇನ್ ವಿಷಸೇವಿಸಿವ ರೋಗಿಗೆ ವಮನಮಾಡಿಸುವುದು, ಹೊಟ್ಟೆ ತೊಳೆಯುವುದು, ವಿರೇಚನಮಾಡಿಸುವುದು ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆಗಳನ್ನು ಆದಷ್ಟು ತೀವ್ರನಡೆಸಬೇಕು ಎಟ್ರೋಫೀನ್‌ಸಲ್ಫೇಟ್ ಗುಳಿಗೆಗಳನ್ನಾಗಲಿ

ಸುಜಿಮದ್ದನ್ನಾಗಲಿ ಕೊಡುವುದು ಉತ್ತಮ ಪ್ರತ್ಯೌಷಧ. ರೋಗಿಗೆ ಉದ್ರೇಕಕಾರಿ ಚಿಕಿತ್ಸೆ ಹಾಗೂ ಆಹಾರ-ಪಾನೀಯ ವರ್ಜ್ಯ. ಅದಿರುವಾಯು ನಿರೋಧಕವಾದ ಉಪಚಾರವನ್ನೂ, ಜೀವಾತು, ಶರ್ಕರ, ಪಿಷ್ಟ ಭರಿತವಾದ ಆಹಾರ ಮತ್ತು ವಿಶ್ರಾಂತಿಯನ್ನೂ ನೀಡಬೇಕು.

ಇಂಡೇನ್ ತಯಾರಿಕೆಗಳು

ಕ್ಲೋರಿಡೇನ್, ಹೆಕ್ಸಾಕ್ಲೋರ್, ಆಲ್‌ಡ್ರಿನ್, ಡೈಲೆಡ್ರಿನ್, ಎಂಡ್ರಿನ್ ಮತ್ತು ಡ್ರೈ ಎಂಡ್ರಿನ್

ಪರಿಚಯ :

ಇಂಡೇನ್ ವರ್ಗಕ್ಕೆ ಸೇರಿದ ಕ್ಲೋರಿಡೇನ್, ಹೆಪ್ಟಾಕ್ಲೋರ್, ಆಲ್‌ಡ್ರಿನ್, ಡೈಲ್‌ಡ್ರಿನ್, ಎಂಡ್ರಿನ್ ಮತ್ತು ಡ್ರೈ ಎಂಡ್ರಿನ್ ಮೊದಲಾದ ಕೀಟನಾಶಕಗಳನ್ನು ಒಕ್ಕಲಿಗರು ಬೆಳೆಗಳ ರಕ್ಷಣೆಗಾಗಿ ಉಪಯೋಗಿಸುತ್ತಾರೆ. ಪುಡಿ, ದ್ರಾವಕ ಮತ್ತು ತೈಲಮಿಶ್ರಣ ರೂಪದಲ್ಲಿ ವಿವಿಧ ಸಾಂದ್ರತೆಯಲ್ಲಿ ಇವು ಮಾರುಕಟ್ಟೆಯಲ್ಲಿ ದೊರಕುತ್ತವೆ. ಚಿಮುಕಿಸಿದನಂತರ ಸುಮಾರು 1 ವರ್ಷದಷ್ಟು ದೀರ್ಘಾವಧಿಯ ತನಕ ಆಲ್‌ಡ್ರಿನ್ ತನ್ನ ಕ್ರಿಮಿನಾಶಕ ಸ್ವಭಾವವನ್ನು ಉಳಿಸಿಕೊಳ್ಳುವುದರಿಂದ ರೈತರು ಇದನ್ನು ಬಹಳವಾಗಿ ಬಳಸುತ್ತಾರೆ. ದುರ್ದೈವವಶಾತ್ ಮಾನವರಿಗೆ ಇದು ಹೆಚ್ಚು ತೀಕ್ಷ್ಣವಿಷವಾಗಿ ಪರಿಣಮಿಸುವುದಲ್ಲದೇ ವ್ಯಾಪಕವಾದ ಉಪದ್ರವಗಳನ್ನೂ ಉಂಟು ಮಾಡುತ್ತದೆ.

ಪ್ರಾಣಾಪಾಯದ ಪ್ರಮಾಣ (ಸೇವನೆ) :15–50 ಮಿಲಿ ಗ್ರಾಂ.

ಈ ವಿಷದ್ರವ್ಯಗಳು ತೀಕ್ಷ್ಣ ವಿಷವಾಗಿದ್ದು ಕೆಲವು ಸಲ ಚರ್ಮದ ಮೂಲಕ ಹೀರಲ್ಪಟ್ಟು ಮಾರಕ ದುಷ್ಪರಿಣಾಮಗಳನ್ನು ಕೇವಲ 40 ನಿಮಿಷಗಳೊಳಗಾಗಿ ಉಂಟುಮಾಡುವುದಲ್ಲದೆ ಪ್ರಾಣಾಪಾಯವನ್ನು ತಂದೊಡ್ಡಿದ ದಾಖಲೆಯಿದೆ. ಪ್ರತಿ ವರ್ಷ ಒಂದೆರಡು ಸಾವು ಇಂಡೇನ್‌ವಿಷ ಪ್ರಯೋಗದಿಂದ ಸಂಭವಿಸುತ್ತದೆ.

ವಿಷಪ್ರಾಶನದ ಲಕ್ಷಣಗಳು :

ಇಂಡೇನ್‌ವಿಷ ಪ್ರಾಶನವಾದ ರೋಗಿಯಲ್ಲಿ ಕಾಣಿಸುವ ಮುಖ್ಯವಾದ ಲಕ್ಷಣವೆಂದರೆ ಅದಿರುವಾಯು. ಅತ್ಯಂತ ಉದ್ರೇಕಾವಸ್ಥೆ, ಮೈ ಕೈ ನಡುಕ, ದೇಹ

ವ್ಯಾಪಾರಗಳ ಮೇಲೆ ಸಮತೋಲನೆ ತಪ್ಪುವುದು ಮೊದಲಾದ ಉಪದ್ರವಗಳು ವಿಷಪ್ರಾಶನವಾದ ಅರ್ಧತಾಸಿನೊಳಗಾಗಿ ಕಾಣಿಸಿಕೊಳ್ಳುವುವಲ್ಲದೆ ಪ್ರಾಣಾಪಾಯವೂ ಸಹ ಉಂಟಾಗಬಹುದು.

ಚಿಕಿತ್ಸೆ ಮತ್ತು ಉಪಚಾರ :

ಸ್ಪರ್ಶವಿಷಕ್ಕೆ ತುತ್ತಾದ ರೋಗಿಯನ್ನು ತಕ್ಷಣ ವಿಷದ ಪರಿಸರದಿಂದ ಬೇರ್ಪಡಿಸಿ, ತಣ್ಣೀರಿನಿಂದ ಮೈ ಕೈಗಳನ್ನು ತೊಳೆಯಬೇಕು. ಹೊಟ್ಟೆಗೆ ಸೇರಿದ ವಿಷವನ್ನು ವಮನ ಮಾಡಿಸುವುದು, ಹೊಟ್ಟೆ ತೊಳೆಯುವುದು ಮೊದಲಾದ ಚಿಕಿತ್ಸೆಗಳಿಂದ ಹೊರಕ್ಕೆಹಾಕಬೇಕು. ಎಟ್ರೋಪಿನ ಉತ್ತಮ ಪ್ರತ್ಯೌಷಧ. (ಎಟ್ರೋಪಿನ್ ಸೂಜಿ ಮದ್ದು ಅಥವಾ ಗುಳಿಗೆಗಳನ್ನು ಕೊಡಬೇಕು).ಕ್ಯಾಲ್ಸಿಯಂ ಗ್ಲೂಕೋನೇಟ್ ಮತ್ತು ಶಾಮಕ ಔಷಧಿಗಳೂ ಸಾಕಷ್ಟು ದ್ರವ ನೀಡಿಕೆಯೂ ಅಗತ್ಯ. ರೋಗಿಗೆ ಉತ್ತೇಜಕ ಚಿಕಿತ್ಸೆಯಾಗಲಿ ಉಪಚಾರ-ಅನ್ನಪಾನೀಯಗಳಾಗಲಿ ವರ್ಜ್ಯ. ಶರ್ಕರ, ಪಿಷ್ಟ, ಜೀವಾತು ಭರಿತವಾದ ಆಹಾರ ಮತ್ತು ವಿಶ್ರಾಂತಿಗಳನ್ನು ನೀಡಬೇಕು,

ಫಾಸ್‌ಫೇಟ್ ಈಸ್ಟರ್ ತಯಾರಿಕೆಗಳು

ಪರಥಿಯಾನ್, ಮಲಥಿಯಾನ್ ಮತ್ತು ಮೆಟಾಸೈಡ್‌ಗಳು

ಪರಿಚಯ :

ಬೆಳೆಗಳಮೇಲೆ ದಾಳಿಯಿಟ್ಟು ಹಾವಳಿ ಮಾಡುವ ಮೃದುದೇಹದ ಕೀಟಗಳನ್ನು ನಾಶಮಾಡಲು ಬಳಸುವ ಫಾಸ್‌ಫೇಟ್ ಈಸ್ಟರ್ ವರ್ಗದ ಕ್ರಿಮಿನಾಶಕಗಲ್ಲಿ ಪರಥಿಯಾನ್, ಮಲಥಿಯಾನ್ ಮತ್ತು ಮೆಟಾಸೈಡ್‌ಗಳು ಮುಖ್ಯ ತಯಾರಿಕೆಗಳು . ಪ್ರಾಣಾಪಾಯದ ಪ್ರಮಾಣ (ಸೇವನೆ) : ಪರಥಿಯಾನ್ 100 ಮಿಲಿಗ್ರಾಂ, ಮಲಥಿಯಾನ್ 1 ಗ್ರಾಂ.

ಈ ಕೀಟನಾಶಕಗಳು ಸೇವನೆ, ಸ್ಪರ್ಶ ಹಾಗೂ ಆಘ್ರಾಣವಿಷವಾಗಿದ್ದು, ಅತ್ಯಲ್ಪ ಪ್ರಮಾಣದಲ್ಲಿ ನಾಲ್ಕಾರು ವಾರಗಳಕಾಲ ಸ್ಪರ್ಶವಾಗುತ್ತಿದ್ದು ದೇಹಗತವಾದರೂ ಕೂಡಾ ತೀವ್ರ ಅಪಾಯವುಂಟಾಗಬಹುದು. ಆಗಾಗ ಎಂದರೆ ಅನೇಕ ದಿವಸಗಳ ಅಂತರದಲ್ಲಿ ತುಸು ಪ್ರಮಾಣದಲ್ಲಿ ವಿಷಪ್ರಯೋಗವಾಗುತ್ತಿದ್ದರೂ ಅಪಾಯ ಸಂಭವಿಸಬಹುದು.

ದೀರ್ಘಕಾಲದ ವಿಷ ಪ್ರಯೋಗ ಲಕ್ಷಣ ಮತ್ತು ಚಿಕಿತ್ಸೆ :

ಫಾಸ್ಫೇಟ್ ಈಸ್ಟರ್ ವರ್ಗದ ಕ್ರಿಮಿನಾಶಕ ವಿಷಪ್ರಯೋಗಕ್ಕೆ ದೀರ್ಘಕಾಲ ತುತ್ತಾದ ರೋಗಿಯ ಪಾದ ಮತ್ತು ಮೊಣಕೈ ಗಂಟುಗಳ ಎರಡೂ ಪಾರ್ಶ್ವಗಳು

ಅಶಕ್ತವಾಗುವವು. ಕ್ರಮೇಣ ಅವನ ಕೈಕಾಲುಗಳನ್ನೂ ಶ್ವಾಸಕೋಶವನ್ನೂ ಈ ಅಶಕ್ತತೆಯು ಆವರಿಸಿ, ಪಕ್ಷಾಘಾತವಾದಂತೆ ಕಾಣಿಸುವುದು. ಇಂತಹ ರೋಗಿಯನ್ನು ವಿಷಸಂಪರ್ಕದಿಂದ ತಕ್ಷಣ ತಪ್ಪಿಸಿ, ಸೂಕ್ತ ವೈದ್ಯಚಿಕಿತ್ಸೆ ನೀಡುವುದಲ್ಲದೆ ಸತ್ವಯುತ ಆಹಾರ ಮತ್ತು ವಿಶ್ರಾಂತಿಗಳನ್ನು ಕೂಡಾ ಒದಗಿಸಬೇಕು.

ವಿಷಪ್ರಾಶನದ ಲಕ್ಷಣಗಳು :

ಫಾಸ್‌ಫೇಟ್ ಈಸ್ಟರ್ ವರ್ಗದ ಕೀಟ ಔಷಧಗಳನ್ನು ಸೇವಿಸಿದ ರೋಗಿಯಲ್ಲಿ ದೃಷ್ಟಿದೋಷ, ಉಸಿರಾಟದ ತೊಂದರೆ ಮೊದಲಾದ ಉಪದ್ರವಗಳು ಕಾಣಿಸುವವು. ಮೊದಲಿಗೆ ತಲೆತಿರುಗುವುದು, ತಲೆನೋವು, ಆಯಾಸ, ಕಣ್ಣು ಕತ್ತಲೆ ಬರುವುದು ಮೊದಲಾದ ಲಕ್ಷಣಗಳು ಉಂಟಾಗುತ್ತವೆ. ರೋಗಿಯು ಆತಂಕ ಹಾಗೂ ಭಯದಿಂದ ತತ್ತರಿಸುತ್ತಾನೆ. ಅವನ ನಾಲಗೆ ರೆಪ್ಪೆಗಳು ಹಾರುತ್ತವೆ. ತಾತ್ಕಾಲಿಕವಾಗಿ ದೃಷ್ಟಿ ದೋಷವೂ ಸಹ ಉಂಟಾಗಬಹುದು. ವಿಷಪ್ರಯೋಗವು ಹೆಚ್ಚಿನ ಪ್ರಮಾಣದಲ್ಲಾಗಿದ್ದರೆ ವಾಕರಿಕೆ, ವಾಂತಿ, ಕಣ್ಣೀರು, ಹೊಟ್ಟೆ ಚಳುಕು, ಮೈಬೆವರುವದು ಮೊದಲಾದ ಲಕ್ಷಣಗಳು ಉಂಟಾಗುತ್ತವೆ. ನಾಡಿಯು ಬಲು ನಿಧಾನವಾಗುವದು. ಮೈ ನಡುಕವು ಪ್ರಾರಂಭವಾಗುವದು. ಇನ್ನೂ ಹೆಚ್ಚಿನ ಉಲ್ಬಣಾವಸ್ಥೆಗೇರಿದಾಗ ಕಣ್ಣು ಬೊಂಬೆ ಸೂಜಿಮೊನೆಯಷ್ಟು ಕಿರಿದಾಗಿರುವದು. ಬೆಳಕಿಗೆ ಪ್ರತಿಸ್ಪಂದಿಸುವದಿಲ್ಲ. ಭೇದಿಯೂ ತೊಡಗುತ್ತದೆ. ಮುಖವು ನೀಲಿ ಛಾಯೆಗೆ ತಿರುವದು; ಅದಿರುವಾಯು ಸ್ಮೃತಿ ತಪ್ಪುವಿಕೆ ಮತ್ತು ಹೃದಯವಿಕಾರ ಮರಣ.

ಪ್ರತ್ಯೌಷಧ :

ಈ ವಿಷಗಳಿಗೆ ಎಟ್ರೋಪಿನ್ ಸಿದ್ಧ ಪ್ರತ್ಯೌಷಧ. (ಎಟ್ರೋಪಿನ್ ಸೂಜಿ ಮದ್ದು ಅಥವಾ ಗೋಲಿ.)

ಚಿಕಿತ್ಸೆ ಮತ್ತು ಉಪಚಾರ :

ಸ್ಪರ್ಶವಿಷಕ್ಕೆ ತುತ್ತಾದ ರೋಗಿಯನ್ನು ಮೊದಲು ವಿಷದ ಪರಿಸರದಿಂದ ದೂರಸಾಗಿಸಿ, ಮೈ ಕೈಗೆ ಸ್ಪರ್ಶವಾಗಿದ್ದ ವಿಷವನ್ನು ಸಾಬೂನು ಹಚ್ಚಿ ನೀರಿನಿಂದ ಚೆನ್ನಾಗಿ ತೊಳೆಯಬೇಕು. ದವಾಖಾನೆಗೆ ರೋಗಿಯನ್ನು ಸೇರಿಸಿ ಚಿಕಿತ್ಸೆ ಮಾಡುವದು ಉಚಿತ. ಕೃತಕ ಉಸಿರಾಟ, ಆಮ್ಲಜನಕ ಸೇಡಿಕೆಗಳು ಅಗತ್ಯವಾಗಬಹುದು. ರೋಗಿಯ ಹೊಟ್ಟೆಗೆ ಸೇರಿದ ವಿಷವನ್ನು ಹೊಟ್ಟೆತೊಳೆಯುವದು, ವಾಂತಿಮಾಡಿಸುವದು ಮೊದಲಾದ ವಿಧಾನಗಳಿಂದ ಹೊರಕ್ಕೆ ಹಾಕುವುದಲ್ಲದೆ 30 ಗ್ರಾಂ ಸೋಡಿಯಂ

ಸಲ್ಫೇಟನ್ನು ಒಂದು ಕಪ್ಪು ನೀರಿನಲ್ಲಿ (2 ಮಿಲಿ ಲೀಟರ) ಕಲಸಿ ಕುಡಿಸಿ ಭೇದಿಮಾಡಿಸಬೇಕು.

ರೋಗಿಯ ಉಸಿರಾಟಕ್ಕೆ ತಡೆಯಾಗದಂತೆ ಶ್ವಾಸನಾಳವನ್ನು ಸ್ವಚ್ಛ ಮಾಡುತ್ತಿರಬೇಕು. ಪುಪ್ಪುಸ ವಿಕಾರಕ್ಕೆ ಸೂಕ್ತ ಚಿಕಿತ್ಸೆ ನಡೆಸಬೇಕು. ಮಾರ್ಫಿಯಾ, ಅಮೈನೋಫೈಲಿನ್ ಮತ್ತು ಬಾರ್ಬಿಟೋನ್ ಔಷಧಿಗಳು ವರ್ಜ್ಯ.

ಸಸ್ಯಸಂರಕ್ಷಣೆಯ ವಿಷ ಬಳಕೆಯಲ್ಲಿ ವಹಿಸಬೇಕಾದ ಮುನ್ನೆಚ್ಚರಿಕೆಗಳು—ಬೇಕುಗಳು

1. ಸಸ್ಯಸಂರಕ್ಷಣೆಯ ಔಷಧಿಗಳನ್ನೂ ಕೀಟನಾಶಕಗಳನ್ನೂ ಬಳಸುವಾಗಲೂ ತಯಾರಿಕೆ, ಸಾಗಾಣಿಕೆ ಮತ್ತು ಬಳಕೆಯ ಪ್ರತಿ ಹಂತದಲ್ಲಿಯೂ ಸೂಕ್ತ ಮುನ್ನೆಚ್ಚರಿಕೆ ವಹಿಸಬೇಕು.
2. ಒಕ್ಕಲುತನವಿಷದ ಪ್ರತಿಯೊಂದು ಸೀಸೆ, ಡಬ್ಬ ಅಥವಾ ಪೊಟ್ಟಣವೊಡನೆ ಇರುವ ಕಂಪನಿಯ ಮುದ್ರಿತ, ಗುರುತು ಚೀಟಿ, ಕರಪತ್ರ, ಸೂಚನಾಪತ್ರಗಳನ್ನು–ಓದಿ ಮನನ ಮಾಡಿಕೊಂಡು, ಜೋಪಾನವಾಗಿ ತೆಗೆದಿರಿಸಬೇಕು. ಸಂದೇಹ ಬಂದಾಗಲೆಲ್ಲ ಮತ್ತೆ ಮತ್ತೆ ಓದಿ ನೋಡಬೇಕು.
3. ಔಷಧಿ ಸಿಂಪರಣೆ ಮಾಡುವಾಗ ಮೋರೆ ಮತ್ತು ಕೈಗಳಿಗೆ ರಕ್ಷಾಕವಚ ಧರಿಸಬೇಕು. ಸಿಂಪರಣೆಯ ಉಪಕರಣದ (ನಲಿಕೆಯ) ರಂಧ್ರವು ಮುಚ್ಚಿಕೊಂಡರೆ ಆದನ್ನು ಸರಿಪಡಿಸಲು ಗುಂಡುಸೂಜಿಯನ್ನು (ಟಾಚಣಿ) ಉಪಯೋಗಿಸಬೇಕು.
4. ಔಷಧ ಸಿಂಪರಣೆ ಮಾಡುವಾಗ ಮೈ ಕೈಗಳಿಗೆ ಸ್ಪರ್ಶವಾದರೆ ಸಿಂಪರಣೆಯನ್ನು ತಕ್ಷಣ ನಿಲ್ಲಿಸಿ ಆ ಭಾಗವನ್ನು ಸಾಬೂನು ಹಚ್ಚಿ ತಣ್ಣೀರಿನಿಂದ ಚೆನ್ನಾಗಿ ತೊಳೆಯಬೇಕು. ಸಿಂಪರಣಾ ಕಾರ್ಯದಲ್ಲಿ ಬಳಸುವ ಪ್ರತಿಯೊಂದು ಉಪಕರಣವನ್ನೂ ಪಾತ್ರೆ ಮೊದಲಾದ ಸಲಕರಣೆಗಳನ್ನು ದಿನದ ಕೊನೆಯಲ್ಲಿ ನೀರಿನಿಂದ ತೊಳೆದು ಇರಿಸಬೇಕು.
5. ಬರಿದಾದ ಔಷಧ ಪೆಟ್ಟಿಗೆ, ಸೀಸೆ ಅಥವಾ ಪೊಟ್ಟಣಗಳನ್ನು ತಕ್ಷಣ ನಾಶಮಾಡಬೇಕು–ಕನಿಷ್ಟಪಕ್ಷ ಮಕ್ಕಳ ಕೈಗೆ ಸಿಗದಂತೆ ತೆಗೆದಿರಿಸಬೇಕು.
6. ಸಸ್ಯಸಂರಕ್ಷಣಾ ಔಷಧಿಗಳನ್ನು ಜೋಪಾನವಾಗಿ (ಬೀಗದಲ್ಲಿ) ಇರಿಸುವುದು ಅಗತ್ಯ
7. ಆಕಸ್ಮಿಕ ಸಂಭವಿಸಿದಲ್ಲಿ ಪ್ರಥಮ ಚಿಕಿತ್ಸೆ ನೀಡಿ ಬಳಸಲ್ಪಟ್ಟ ವಿಷದ ಗುರುತು ಚೀಟಿ, ಮಾಹಿತಿ ಪತ್ರದೊಂದಿಗೆ ವೈದ್ಯರಲ್ಲಿಗೆ ರೋಗಿಯನ್ನು ಸಾಗಿಸಬೇಕು.

ಸಸ್ಯಸಂರಕ್ಷಣೆಯ ವಿಷಬಳಕೆಯಲ್ಲಿ ವಹಿಸ ಬೇಕಾದ ಮುನ್ನೆಚ್ಚರಿಕೆಗಳು—ಬೇಡಗಳು

1. ಸಸ್ಯಸಂರಕ್ಷಣೆಯ ಔಷಧಿಗಳನ್ನೂ ಕ್ರಿಮಿನಾಶಕಗಳನ್ನೂ ಆಹಾರ ಪದಾರ್ಥಗಳೊಂದಿಗೆ ಇರಿಸುವದು ಬೇಡ. ದ್ರಾವಕಗಳನ್ನು ಸಿಂಪಡಿಸುವಾಗ ಅಥವಾ ಇನ್ನಿತರ ರೀತಿಗಳಿಂದ ಪ್ರಯೋಗಿಸುತ್ತಿರುವಾಗ ಉಣ್ಣುವುದು, ತಿನ್ನುವುದು ಏನನ್ನಾದರೂ ಕುಡಿಯುವುದು, ಪಾನ (ಎಲೆ-ಅಡಿಕೆ) ಜಗಿಯುವುದು ಮತ್ತು ಹೊಗೆಬತ್ತಿ ಸೇದುವುದು ಬೇಡ.

2. ಸಿಂಪಡಿಸುವ ಮಿಶ್ರಣವನ್ನು ಕೈಯಿಂದ ಕಲಸುವುದು ಅಥವಾ ಸ್ಪರ್ಶಿಸುವುದು ನಿಶಿದ್ಧ. ಬಾಯಿಯಿಂದ ಉಸಿರೆಳೆದು ನಡೆಸುವ ಯಾವ ಸಲಕರಣೆಗಳನ್ನೂ ಉಪಯೋಗಿಸಬಾರದು.

3. ಸಸ್ಯ ಸಂಗಕ್ಷಣಾದ್ರವ್ಯದ ಸೀಸೆಯನ್ನು ಮುಖದ ಬಳಿ ಹಿಡಿದು ಮುಚ್ಚಳ ತೆಗೆಯಬಾರದು. ಸಿಂಪಡಿಸುವಾಗ ಗಾಳಿಯ ಓಟಕ್ಕೆ ಎದುರಾಗಿ ಹಿಡಿದು ವಿಷದ ಹನಿಗಳು ನಿಮ್ಮೆಡೆಗೆ ತೂರಿ ಬರುವಂತೆ ಪ್ರಯೋಗಿಸಬಾರದು.

4. ಆರೋಗ್ಯವಂತ ಯುವಕರ ವಿನಃ ಮಕ್ಕಳು-ಮುದುಕರು ಮೊದಲಾದವರನ್ನು ಈ ಔಷಧಿ ತಯಾರಿಕೆ, ಸಾಗಾಣಿಕೆ ಮತ್ತು ಬಳಕೆಯ ಕೆಲಸಗಳಿಗೆ ನೇಮಿಸುವುದು ಬೇಡ.

5. ಅರಿಯದ ಜನರೂ, ಮೂಕಪ್ರಾಣಿಗಳೂ, ಕೋಳಿ ಮೀನು ಮೊದಲಾದ ಜೀವಜಂತುಗಳು ಸಸ್ಯಸಂರಕ್ಷಣಾ ಔಷಧಿ ಬೆರೆತ ಆಹಾರ, ಮೇವು, ಮತ್ತು ನೀರನ್ನು ಸೇವಿಸಿ ಅಪಾಯಕ್ಕೆ ತುತ್ತಾಗುವ ಸಂಭವವಿರುವುದರಿಂದ ಇವುಗಳನ್ನು ಬಳಸುವಾಗ ಅಸಡ್ಡೆ ಮತ್ತು ಮೈಮರೆವು ಬೇಡ.

6. ವಿಷಪ್ರಯೋಗವಾದರೆ ಗಾಬರಿಯಾಗುವುದು ಬೇಡ. ತಕ್ಷಣ ಪ್ರಥಮ ಚಿಕಿತ್ಸೆ ಕೈಗೊಂಡು ತುರ್ತು ವೈದ್ಯಸಹಾಯ ಪಡೆಯಲು ವಿಳಂಬಿಸುವುದು ಬೇಡ.

ಮೂಷಕವಿಷ-ಥಲ್ಲಿಯಂ

ಪರಿಚಯ :

ಮೂಷಕವಿಷವಾಗಿ ಬಳಸುವ ಥಲ್ಲಿಯಂ ಮೃದುವಾದ ಭಾರವುಳ್ಳ ಬಿಳಿಯ ತಗಡಿನ ಪುಡಿಯಂತೆ ಕಾಣಿಸುವ ವಿಷಲೋಹ. ಬಣ್ಣದ ಕೈಗಾರಿಕೆಯಲ್ಲಿಯೂ. ಗಾಜು ತಯಾರಿಕೆಯಲ್ಲಿಯೂ ಇದನ್ನು ಬಳಸುತ್ತಾರೆ. ಥಲ್ಲಿಯಂ ಅಸಿಟೇಟ್‌ನಿಂದ

ತಯಾರಿಸಿದ ಔಷಧಿಗಳನ್ನು ಮಕ್ಕಳ ತಲೆಗಳಲ್ಲಿ ಶದ್ದು ರೋಗದ ಉಂಟಾಗುವ ಚಿಕಿತ್ಸೆಗಾಗಿ ಸವರುತ್ತಾರೆ. ಅನುಚಿತವಾಗಿ ಬೆಳೆದು ದೇಹದ ಚೆಲುವನ್ನು ಕೆಡಿಸುವ ಹೆಚ್ಚುವರಿ ರೋಮವನ್ನು ನಾಶಮಾಡಲು ಶೃಂಗಾರಪ್ರಿಯರಾದ ಬೆಡಗುಗಾತಿಯರು ಇದರ ಮುಲಾಮನ್ನು ಹಚ್ಚುವುದುಂಟು.

ಥಲ್ಲಿಯಂ ಒಗ್ಗದವರಲ್ಲಿ ಅನಿರೀಕ್ಷಿತ ದುಷ್ಪರಿಣಾಮಗಳನ್ನುಂಟುಮಾಡುತ್ತವೆ. ಬಹುದೀರ್ಘಕಾಲ ಅಥವಾ ಹೆಚ್ಚು ಪ್ರಮಾಣದಲ್ಲಿ ಬಳಸಿದಾಗಲೂ ಕೂಡಾ ಉಪದ್ರವ ಕಟ್ಟಿಟ್ಟದ್ದು. ಥಲ್ಲಿಯಂ ಸೇವನೆ ಹಾಗೂ ಸ್ಪರ್ಶ ವಿಷ.
ಪ್ರಾಣಾಪಾಯದ ಪ್ರಮಾಣ (ಸೇವನೆ) ಒಂದು ಗ್ರಾಮು.

ಥಲ್ಲಿಯಂ ವಿಷ ಪ್ರಯೋಗದ ವಿಶಿಷ್ಟ ಲಕ್ಷಣವೆಂದರೆ ಕೂದಲು ಉದುರುವುದು.

ಸ್ಪರ್ಶವಿಷದ ಲಕ್ಷಣಗಳು ಮತ್ತು ಚಿಕಿತ್ಸೆ :

ಥಲ್ಲಿಯಂ ಸ್ಪರ್ಶ ವಿಷಕ್ಕೆ ತುತ್ತಾದ ರೋಗಿಯು ದೇಹಾಯಾಸ, ನಿದ್ರಾನಾಶ ಅಗ್ನಿಮಾಂದ್ಯ, ಅರುಚಿ, ಮೊದಲಾದ ಉಪದ್ರವಗಳಿಂದ ನರಳುವುದಲ್ಲದೆ ವಿಶೇಷ ಚಡಪಡಿಸುತ್ತಾನೆ. ಅವನ ಮೈ ಕೈಗಳು ದುರ್ಬಲವಾಗುವುವು; ಮತ್ತು ಚರ್ಮದ ವರ್ಣವೂ ಸಹ ವ್ಯತ್ಯಾಸವಾಗುವುದು. ಅವನು ಮಂದವಾದ ಹೊಟ್ಟೆನೋವು, ಕಾಲುನೋವು ಮೊದಲಾದ ಉಪದ್ರವಗಳಿಂದ ನರಳುವನು. ಜೊಲ್ಲುಸುರಿಯುವುದು. ಒಸಡಿನಲ್ಲಿ ನೀಲಿರೇಖೆ ಕಾಣಿಸುವುದು ಮತ್ತು ಚರ್ಮವು ಒಣಗುವುದು. ಸ್ತ್ರೀಯರಲ್ಲಿ ಋತುಸ್ರಾವದ ಏರುಪೇರು, ಪುರುಷರಲ್ಲಿ ಬೀಜೋತ್ಪತ್ತಿಯ ಅವ್ಯವಸ್ಥೆ ಕಾಣಿಸುವುದು, ರೋಗಿಯ ಕೂದಲು ಮತ್ತು ರೋಮಗಳು ಉದರುವುದು ಇವು ಎದ್ದು ಕಾಣಿಸುವ ಲಕ್ಷಣಗಳಾಗಿವೆ. ಇಂತಹ ರೋಗಿಯನ್ನು ತಕ್ಷಣ ವಿಷಸಂಪರ್ಕದಿಂದ ಬೇರ್ಪಡಿಸಬೇಕು; ಮತ್ತು ಮುಂದೆ ಖಾಯಂ ಆಗಿ ವಿಷಸ್ಪರ್ಶವನ್ನು ತಪ್ಪಿಸಬೇಕು. ಬಿ. ಎ. ಎಲ್. ಸೂಜಿಮದ್ದು ಥಲ್ಲಿಯಂ ವಿಷಕ್ಕೆ ಸಿದ್ಧ ಪ್ರತ್ಯೌಷಧ. ಇತರ ಉಪದ್ರವಗಳಿಗೆ ಲಕ್ಷಣಾನುಸಾರ ಚಿಕಿತ್ಸೆ ನಡೆಸಬೇಕು.

ವಿಷಪ್ರಾಶನದ ಲಕ್ಷಣಗಳು :

ಥಲ್ಲಿಯಂ ವಿಷವನ್ನು ಸೇವಿಸಿದ ರೋಗಿಯಲ್ಲಿ ಕೆಲವು ಗಂಟೆಗಳೊಳಗಾಗಿ ವಿಷ ಲಕ್ಷಣಗಳು ಕಾಣಿಸಬಹುದು. ಅಥವಾ ಕೆಲವೊಮ್ಮೆ ಅನೇಕ ದಿವಸಗಳ ನಂತರ ಉಪದ್ರವಗಳು ಪ್ರಾರಂಭವಾಗುವುದೂ ಉಂಟು. ರೋಗಿಯು ಬಾಯಿ ಒಣಗು

ವುದು, ಮೂಗುಸೋರುವುದು, ಕಣ್ಣುನೋವು, ಗಂಟಲುನೋವು, ಹೊಟ್ಟೆನೋವು, ವಾಕರಿಕೆ ಮತ್ತು ವಾಂತಿ ಮೊದಲಾದ ಉಪದ್ರವಗಳು ಕಾಣಿಸುತ್ತವೆ. ಮೈ ಕೈ ನೋವಿನಿಂದ ಕೂಡಿದ ಜ್ವರ, ಭೇದಿ ಮತ್ತು ನಿರ್ವಿಣ್ಣತೆಗಳಿಂದ ಆವನು ಹೆಚ್ಚು ಸಂಕಟಪಡುತ್ತಿದ್ದು ಕೂದಲು ಉದುರುವುದು, ಉಗುರು ಹರಕಾಗುವುದು ಸಹ ಕಾಣಿಸುತ್ತವೆ. ರೋಗಿಯ ದೇಹದ ಸಮತೋಲನೆಯು ತಪ್ಪುತ್ತದೆ; ಬಡಬಡಿಕೆ, ಅದಿರುವಾಯು, ಕಂಪನ ಮತ್ತು ಉಸಿರಾಟದ ತೊಂದರೆ, ನಾನಾ ಬಗೆಯ ಮೂತ್ರ ವಿಕಾರ. ಮೂತ್ರದ ಇಳುವರಿ, ಪುಪ್ಪುಸ ಊತ, ಕುಸಿತ, ಸ್ಮೃತಿ ತಪ್ಪುವುದು ಮತ್ತು ಮರಣ.

ಪ್ರತ್ಯೌಷಧ :

ಥಲ್ಲಿಯಂ ವಿಷಕ್ಕೆ ಸಿದ್ಧಪ್ರತ್ಯೌಷಧ ಬಿ.ಎ.ಎಲ್. ಸೂಜಿಮದ್ದು.

ಚಿಕಿತ್ಸೆ ಮತ್ತು ಉಪಚಾರ :

ಥಲ್ಲಿಯಂ ವಿಷ ಪ್ರಯೋಗಕ್ಕೆತುತ್ತಾದ ರೋಗಿಯನ್ನು ವಾಂತಿಮಾಡಿಸುವುದು ಹೊಟ್ಟೆತೊಳೆಯುವುದು ಮತ್ತು ವಿರೇತ್ತನಮಾಡಿಸುವುದು ಮೊದಲಾದ ಸಾಂಪ್ರದಾಯಿಕ ವಿಧಾನಗಳಿಂದ ಚಿಕಿತ್ಸೆ ಮಾಡಬೇಕು. ಸೋಡಿಯಂ ಥಿಯೋಸಲ್ಫೇಟ್ ಸೂಜಿಮದ್ದು ಉಪಯುಕ್ತವಾಗಿದೆ. 3ರಿಂದ 5ಗ್ರಾಂ ಪೊಟಾಸಿಯಂ ಕ್ಲೋರೈಡ್‌ನ್ನು ಒಂದು ಪಿಂಟ್ ನೀರಿನಲ್ಲಿ ಕರಗಿಸಿ ಕುಡಿಸುವುದು ಸಹ ಉಪಯುಕ್ತ ಪರಿಣಾಮವನ್ನು ಉಂಟುಮಾಡುತ್ತದೆ. ರೋಗಿಯ ಮೈ ಬೆಚ್ಚಗಿರುವಂತೆ ಮಾಡಲು ಕಂಬಳಿ ಹೊದಿಸುವುದು, ಬಿಸಿನೀರು ತುಂಬಿದ ಸೀಸೆಗಳನ್ನು ಪಕ್ಕದಲ್ಲಿ ಇರಿಸುವುದು ಮೊದಲಾದ ಉಪಚಾರವನ್ನು ನಡೆಸಬೇಕು. ಮೂತ್ರವಿಕಾರ, ರಕ್ತಹೀನತೆ ಮೊದಲಾದ ಉಪದ್ರವಗಳಿಗೆ ಸೂಕ್ತ ಚಿಕಿತ್ಸೆ ನಡೆಸಬೇಕು.

ಮುನ್ನೆಚ್ಚರಿಕೆ :

ಇಲ್ಲಿವಿಷವಾಗಿ ಥಲ್ಲಿಯಂನ್ನು ಬಳಸುವಾಗ ಸಕ್ಕರೆ, ಜೇನುತುಪ್ಪ ಅಥವಾ ಬೆಲ್ಲದೊಂದಿಗೆ ಬೆರಸಿ ಇರಿಸುತ್ತಾರೆ. ಇದು ವಿಷಮಿಶ್ರಿತ ವಸ್ತುವೆಂದು ತಿಳಿಯದೇ ಚಿಕ್ಕ ಮಕ್ಕಳು–ಕೆಲವುಸಲ ದೊಡ್ಡವರೂಸಹ-ಸೇವಿಸಿ, ಪ್ರಾಣಾಪಾಯಕ್ಕೆ ತುತ್ತಾಗುತ್ತಾರೆ. ಆದ್ದರಿಂದ ಮನೆಗಳಲ್ಲಿ ಇಲಿಗಳನ್ನು ಕೊಲ್ಲುವ ಪಂಚಿಕೆ ಹೂಡಿದಾಗ ಈ ಬಗೆಯ ಆಕಸ್ಮಿಕ ಸಂಭವಿಸದಂತೆ ಎಲ್ಲರಿಗೂ ತಿಳುವಳಿಕೆ ಮುನ್ನೆಚ್ಚರಿಕೆ ನೀಡಬೇಕು

ಮೂಷಕ ವಿಷ

ಪರಿಚಯ :

ರಕ್ತಕಾರಿಸುವ ಮೂಲಕ ಇಲಿಗಳನ್ನು ಸಾಯಿಸಲು ಬಳಸುವ ಮೂಷಿಕವಿಷ ವಾರ್ಫಾರಿನನ್ನು ನಾನಾ ಬಗೆಯ ರೋಗ ಚಿಕಿತ್ಸೆಗೂ ಬಳಸುತ್ತಾರೆ. ಎಷ್ಟು ಹೆಚ್ಚು ಪ್ರಮಾಣದಲ್ಲಿ ಒಂದುಬಾರಿ ಸೇವಿಸಿದರೂ ಇದರಿಂದ ಪ್ರಾಣಾಪಾಯ ಸಂಭವಿಸುವುದಿಲ್ಲ. ಆದರೆ ಅಲ್ಪ ಪ್ರಮಾಣದಲ್ಲಿಯೇ ಆದರೂಮತ್ತೆ ಮತ್ತೆ ಸೇವಿಸಿದಾಗ ಅಪಾಯ ಖಚಿತ. ವಿಷಪ್ರಾಶನವಾದ ಪ್ರತಿಯೊಂದು ಸಲವೂ ಹಿಂದಿನ ಸರ್ತಿಗಿಂತ ಹೆಚ್ಚು ರಕ್ತ ಸ್ರಾವವುಂಟಾಗುವುದು–ಈ ವಿಷದ್ರವ್ಯದ ವೈಶಿಷ್ಟ್ಯವಾದುದರಿಂದ ವಿಷಪ್ರಾಶನ ವಾದುದನ್ನು ಸಮಯಾನುಸಾರ ಗುರುತಿಸಿ ಚಿಕಿತ್ಸೆ ಕೈಗೊಂಡು ರೋಗಿಯನ್ನು ಪ್ರಾಣಾಪಾಯದಿಂದ ತಪ್ಪಿಸುವುದಕ್ಕೂ ಮುಂದೆ ವಿಷಪ್ರಾಶನವಾಗದಂತೆ ತಡೆಗಟ್ಟು ವುದಕ್ಕೂ ಸಾಧ್ಯವಿದೆ.

ಪ್ರಾಣಾಪಾಯದ ಪ್ರಮಾಣ (ಸೇವನೆ) 100 ಮಿಲಿಗ್ರಾಂ. (ಅನೇಕ ಬಾರಿ ಮೇಲಿಂದ ಮೇಲೆ ಸೇವನೆ)

ವಿಷಪ್ರಯೋಗದ ಲಕ್ಷಣಗಳು :

ವಾರ್ಫಾರಿನ್ ವಿಷಸೇವಿಸಿದ ರೋಗಿಯ ಬಾಯಿಯಿಂದ–ಮುಖ್ಯವಾಗಿ ಮೂಗು ಮತ್ತು ಮಲ–ಮೂತ್ರದ್ವಾರಗಳಿಂದ ರಕ್ತಸ್ರಾವವಾಗುವುದು. ರೋಗಿಯ ಚರ್ಮವು ಅಲ್ಲಲ್ಲಿ ಕಿತ್ತು ಬರುವುದಲ್ಲದೆ ಅಂತಹ ಭಾಗಗಳಿಂದ ಮೈ, ಕೈ, ಬೆನ್ನು ಮೊದಲಾದ ಅಂಗಾಂಗಗಳಿಂದ ಕೂಡಾ ರಕ್ತಸ್ರಾವವುಂಟಾಗುತ್ತದೆ. ರೋಗಿಯು ಬಿಳಿಚಿಕೊಳ್ಳುತ್ತಾನೆ.

ಪ್ರತ್ಯೌಷಧ :

ವಾರ್ಫಾರಿನ್ ವಿಷ ಪ್ರಯೋಗಕ್ಕೆ ಸಿದ್ಧಪ್ರತ್ಯೌಷಧವೆಂದರೆ ವಿಟಮಿನ ಕ್ಕೆ ಸೂಜಿಮದ್ದು.

ಚಿಕಿತ್ಸೆ ಮತ್ತು ಉಪಚಾರ :

ವಾರ್ಫಾರಿನ್ ವಿಷಪ್ರಯೋಗಕ್ಕೆ ತುತ್ತಾದ ರೋಗಿಗೆ ರಕ್ತಬಂಧಕವಾದ ಔಷಧೋಪಚಾರ ಮಾಡಿ, ರಕ್ತಸ್ರಾವವನ್ನು ತಡೆಗಟ್ಟಬೇಕು. ಆಡುಸೋಗೆ ಎಲೆಯ

(ಆಡುಸ್ಸಾಲ–ಆಡು ಮುಟ್ಟದ ತೊಪ್ಪಲು) ಕಷಾಯವನ್ನು ಕುಡಿಸಬಹುದು. ಮೊದಲಿಗೆ ಹೊಟ್ಟೆತೊಳೆಯುವುದು, ವಾಂತಿಮಾಡಿಸುವುದು ಮತ್ತು ವಿರೇಚನಚಿಕಿತ್ಸೆಗಳಿಂದ ವಿಷಮುಕ್ತಿ ಮಾಡಿಸಬೇಕು. ಅಗತ್ಯಬಿದ್ದರೆ ರೋಗಿಗೆ ರಕ್ತದಾನ ಸಹ ನೀಡಬೇಕು.

ಬೇರಿಯಂ

ಪರಿಚಯ :

ಬೇರಿಯಂ ಕುಡಿಸಿ ಕರುಳು ಹುಣ್ಣಿನ ಎಕ್ಸ್‌ರೇ ಚಿತ್ರ ತೆಗೆಯುತ್ತಾರೆ. ಈ ಬೇರಿಯಂಸಲ್ಫೇಟ್ ನಿರಪಾಯಕಾರಿ ನಿರ್ವಿಷದ್ರವ್ಯ. ಆದರೆ ಬೇರಿಯಂನ ಇತರ ಕೆಲವು ತಯಾರಿಕೆಗಳು ಮಾರಕ ವಿಷಗಳಾಗಿವೆ. ಇಲಿಗಳು ಹಾಗೂ ಕ್ರಿಮಿ ಕೀಟಗಳ ನಾಶಕ್ಕೂ ಬೇರಿಯಂ ವಿಷವನ್ನು ಬಳಸುತ್ತಾರೆ. ಇವು ತೀಕ್ಷ್ಣವಾದ ಸೇವನಾ ವಿಷಗಳಾಗಿವೆ. ಪ್ರಾಣಾಪಾಯದ ಪ್ರಮಾಣ (ಸೇವನೆ) 1 ಗ್ರಾಂ.

ವಿಷಪ್ರಾಶನದ ಲಕ್ಷಣಗಳು :

ಬೇರಿಯಂ ವಿಷ ಪ್ರಾಶನವಾದ ರೋಗಿಯು ಸ್ನಾಯುಗಳ ಸೆಳೆತ, ವಾಂತಿ, ಭೇದಿ, ಮನೋವ್ಯಾಕುಲತೆ, ಉಸಿರಾಟದ ತೊಂದರೆ, ಎದೆ ಬಡಿತದ ಏರುಪೇರು ಮೊದಲಾದ ಉಪದ್ರವಗಳಿಂದ ನರಳುತ್ತಾನೆ. ಕ್ರಮೇಣ ಆದಿರುವಾಯು, ಹೃದಯಾಘಾತ ಸಂಭವಿಸಿ ಸಾವು ಉಂಟಾಗಬಹುದು.

ಪ್ರತ್ಯೌಷಧ ಮತ್ತು ಚಿಕಿತ್ಸೆ :

ಸೋಡಿಯಂ ಸಲ್ಫೇಟ್ ಸೂಜಿಮದ್ದು ಬೇರಿಯಂ ವಿಷಕ್ಕೆ ಸಿದ್ಧಪ್ರತ್ಯೌಷಧ. (ಇದನ್ನು ರಕ್ತನಾಳದ ಮೂಲಕ ಕೊಡಬೇಕು.) 30 ಗ್ರಾಂ ಸೋಡಿಯಂ ಸಲ್ಫೇಟನ್ನು ಒಂದುಲೋಟ ನೀರಿನಲ್ಲಿ ಕರಗಿಸಿ ಪ್ರತಿತಾಸಿಗೊಮ್ಮೆ ಕುಡಿಸಬಹುದು. ಎಟ್ರೋಪಿನ್, ಮಾರ್ಫಿನ್ ಸೂಜಿಮದ್ದುಗಳೂ ಉಪಯುಕ್ತ.

ಅಧ್ಯಾಯ—6

ಅಮಲು ವಿಷಗಳು

ಶುದ್ಧಮದ್ಯ (ಧಾನ್ಯಮದ್ಯ)

ಪರಿಚಯ :

ಹಣ್ಣುಗಳಿಂದ, ಧಾನ್ಯಗಳಿಂದ ಅಥವಾ ರಾಸಾಯನಿಕ ಸಂಯೋಜನೆಯಿಂದ ತಯಾರಿಸಿದ ಕುಡಿಯುವ ಮದ್ಯವನ್ನು ಶುದ್ಧಮದ್ಯ ಅಥವಾ ಧಾನ್ಯಮದ್ಯವೆಂದು ಕರೆಯುತ್ತಾರೆ. ಇದು ಬಣ್ಣವಿಲ್ಲದ ದ್ರವವಾಗಿದ್ದರೂ ವಿವಿಧ ಛಾಪುಗಳಲ್ಲಿ ಹಾಗೂ ರೂಪುಗಳಲ್ಲಿ ಸಿದ್ಧಗೊಂಡಾಗ ಬೇರೆ ಬೇರೆ ಬಣ್ಣವನ್ನೂ ವಿವಿಧ ಪ್ರಮಾಣದಲ್ಲಿ ಮಾದಕ ಸತ್ವವನ್ನೂ ಹೊಂದಿದ್ದು ಮದ್ಯದ ವಿಶಿಷ್ಟ ವಾಸನೆಯನ್ನೂ ಒಳಗೊಂಡಿರುತ್ತದೆ.

ಬೀರ್‌ನಲ್ಲಿ ಶೇಕಡಾ 3–6 ಪಾಲು, ಜಂಜರ್ ಬೀರ್‌ನಲ್ಲಿ ಶೇಕಡಾ 1–3 ಪಾಲು, ಪೋರ್ಟರ್‌ನಲ್ಲಿ ಶೇಕಡಾ 3–7 ಪಾಲು, ಎಲ್‌ನಲ್ಲಿ ಶೇಕಡಾ 3-7 ಪಾಲು, ಶಾಂಪೇನ್‌ನಲ್ಲಿ ಶೇಕಡಾ 10-13 ಪಾಲು, ಕ್ಲಾರೆಟ್‌ನಲ್ಲಿ ಶೇಕಡಾ 8–12 ಪಾಲು, ಪೋರ್ಟ್‌ವೈನ್‌ನಲ್ಲಿ ಶೇಕಡಾ 18-20 ಪಾಲು, ಬ್ರಾಂಡಿಯಲ್ಲಿ ಶೇಕಡಾ 40–50 ಪಾಲು, ಜಿನ್‌ನಲ್ಲಿ ಶೇಕಡಾ 51–59 ಪಾಲು, ವಿಸ್ಕಿಯಲ್ಲಿ ಶೇಕಡಾ 40–50 ಪಾಲು, ರಮ್‌ನಲ್ಲಿ ಶೇಕಡಾ 51–59 ಪಾಲು—ಹೀಗೆ ವಿವಿಧ ತರಗತಿಯ ಮದ್ಯಗಳಲ್ಲಿ ಬೇರೆ ಬೇರೆ ಪ್ರಮಾಣದ ಮಾದಕ ಅಂಶವಿರುತ್ತದೆ.

ಮದ್ಯದ ಪ್ರಭಾವವು ಕಾಣಿಸಬೇಕಾದರೆ ಕುಡಿದ ಮದ್ಯದ ಪ್ರಮಾಣವೆಷ್ಟೆಂಬುದು ಪ್ರಧಾನವಲ್ಲ. ಸೇವಿಸಿದ್ದರಲ್ಲಿ ಎಷ್ಟು ಪಾಲು ಮದ್ಯವು(ಮಾದಕ ಅಂಶವು) ರಕ್ತಗತವಾಗಿ ದೇಹದಲ್ಲಿ ಸಂಚಿತಗೊಂಡಿದೆ ಎಂಬುದು ಮುಖ್ಯ. ಹಸಿದಹೊಟ್ಟೆಯಲ್ಲಿ ಸೇವಿಸಿದ ಅಲ್ಪಾಂಶ ಮದ್ಯವೂ ಕೂಡಾ ಶೀರಾ ಚುರುಕಾಗಿ ಕೆಲಸಮಾಡಿದರೆ, ಹೊಟ್ಟೆ ತುಂಬ ಉಂಡಮೇಲೆ ಸ್ವೀಕರಿಸಿದ ಮದ್ಯವು ಕಮ್ಮಿ ಪ್ರಭಾವವನ್ನು ಬೀರುತ್ತದೆ. ಇಷ್ಟುಮಾತ್ರವಲ್ಲದೆ ಸೇವಿಸಿದ ಮದ್ಯದಲ್ಲಿ ಇರುವ ಮದ್ಯದ ಅಂಶವೆಷ್ಟು ಎಂಬುದು ಕೂಡಾ ಇಲ್ಲಿ ಗಮನಾರ್ಹವಾದುದು. ಚೆನ್ನಾಗಿ ಕುಡಿಯುವ ಅಭ್ಯಾಸವುಳ್ಳವರು ನಿಧಾನವಾಗಿ ಪಾನಮಾಡುತ್ತ ಕುಳಿತಾಗ ಬಹಳಷ್ಟು ಮದ್ಯವನ್ನು ದಕ್ಕಿಸಿಕೊಳ್ಳಬಲ್ಲರು. ರೋಗಿಗಳು, ದೇಹಾಯಾಸದಿಂದ ಬಳಲುವವರು, ಹಸಿದವರು, ವೃದ್ಧರು

ಮೊದಲಾದ ಅಶಕ್ತವರ್ಗಕ್ಕೆ ಸೇರಿದವರು, ಅಲ್ಪಪ್ರಮಾಣದ ಮದ್ಯವನ್ನು ಸೇವಿಸಿದರೂ ಕೂಡಾ ಅಪಾಯ–ಉಪದ್ರವಗಳು ಕಾಣಿಕೊಳ್ಳಬಹುದು.

ಪ್ರಾಣಾಪಾಯದ ಪ್ರಮಾಣ (ಸೇವನೆ) 300–400 ಮಿಲಿ ಲೀಟರ್ (ಸುಮಾರು 10 ರಿಂದ 14 ಔನ್ಸ್) ಶುದ್ಧ ಮದ್ಯವನ್ನು 1 ತಾಸಿನಲ್ಲಿ ಕುಡಿದರೆ ಪ್ರಾಣಾಪಾಯವನ್ನುಂಟು ಮಾಡಬಹುದು.

ಮದ್ಯಪಾನದ ಲಕ್ಷಣಗಳು :

ಮದ್ಯಪಾನ ಮಾಡಿದ ರೋಗಿಯ ರಕ್ತದಲ್ಲಿ ಸಂಚಿತವಾದ ಮದ್ಯದ ಪ್ರಮಾಣವನ್ನು ಗುರುತಿಸಿ, ಮೂರು ವರ್ಗಗಳನ್ನಾಗಿ ವಿಂಗಡಿಸುತ್ತಾರೆ. ರಕ್ತದಲ್ಲಿ ಸೇಕಡಾ 0 ಅಂಶದಿಂದ 0.05 ಅಂಶದ ತನಕ ಮದ್ಯದ ಪ್ರಮಾಣವಿದ್ದರೆ **ಸಾಮಾನ್ಯ ಮದ್ಯಪಾನಸ್ಥಿತಿ** ಎಂದು ಹೇಳುತ್ತಾರೆ; ರಕ್ತದಲ್ಲಿ 0.15 ಅಂಶದಿಂದ 0.30 ಅಂಶದ ತನಕ ಮದ್ಯದ ಪ್ರಮಾಣವಿದ್ದರೆ **ವಿಶೇಷ ಮದ್ಯಪಾನಸ್ಥಿತಿ** ಎಂದು ಹೇಳುತ್ತಾರೆ, ರಕ್ತದಲ್ಲಿ 0.5 ಅಂಶ ಮತ್ತು ಅದಕ್ಕಿಂತ ಹೆಚ್ಚು ಅಂಶ ಮದ್ಯವಿದ್ದರೆ **ತೀವ್ರಾವಸ್ಥೆಯೆಂದು** ಕರೆಯುತ್ತಾರೆ.

1. ಸಾಮಾನ್ಯ ಮದ್ಯಪಾನ ಸ್ಥಿತಿಯಲ್ಲಿ ರೋಗಿಯು ಮದ್ಯಪಾನದ ಪರಿಣಾಮವಾಗಿ ತನ್ನಲ್ಲಿದ್ದ ಭಯ–ಸಂಕೋಚಗಳನ್ನು ಕಳೆದು ಉತ್ಸಾಹಿತನಾಗುತ್ತಾನೆ. ಅವನ ಮನಸ್ಸು ಸಂತೋಷಗೊಂಡು ಕುಣಿದಾಡುತ್ತದೆ. ಕೇಂದ್ರ ನರಮಂಡಳದ ಹತೋಟಿಯು ಕುಂಠಿತಗೊಂಡಿರುವುದರ ಪರಿಣಾಮವಾಗಿ ಸ್ವಯಂ ಶ್ರೇಷ್ಠತೆಯ ಮನೋಭಾವವು ಉಂಟಾಗಿ ಭಾವೋದ್ವೇಗಕಾರಿಯಾದ ಮಾತುಕತೆಗಳೂ ಎತ್ತರಿಸಿದ ಧ್ವನಿಯಲ್ಲಿ ಸಂಭಾಷಣೆಯೂ ಮೊದಲಾಗುತ್ತದೆ. ಅವನ ಬುದ್ಧಿ ಮತ್ತು ವಿವೇಚನೆ ಲಗಾಮು ತಪ್ಪಿರುವುದರಿಂದ ಇತರ ಸಂದರ್ಭಗಳಲ್ಲಿ ಮಾಡಲಿಛಿಸದ ಕೆಲಸಗಳನ್ನೆಲ್ಲ ಯಾವ ಮುಲಾಜು ಇಲ್ಲದೆ ಮಾಡಲು ಮುಂದಾಗುತ್ತಾನೆ. ತಾನು ಮಾಡುತ್ತಿರುವುದೆಲ್ಲ ಧೀರೋಧಾತ್ತ ಸಾಹಸದ ಮಹತ್ಕಾರ್ಯವೆಂಬ ಭ್ರಮೆ ಇರುತ್ತದೆ. ವಿವೇಕವೂ ತಾರತಮ್ಯಜ್ಞಾನವೂ ತಾತ್ಕಾಲಿಕವಾಗಿ ವಿಶ್ರಾಂತಿ ತೆಗೆದುಕೊಂಡಿರುವುದರಿಂದ ಅವನು ತನ್ನ ಶಕ್ತಿ ಸಾಮರ್ಥ್ಯಗಳ ಮಿತಿಯನ್ನು ಮರೆತು ಬಿಡುತ್ತಾನೆ.

ಮೊದಲಿಗೆ ಉದ್ರೇಕ ಹಾಗೂ ಮುದಗೊಳಿಸುವ ಆಹ್ಲಾದ ಮನೋಸ್ಥಿತಿ ಉಂಟಾದರೂ ಮದ್ಯಪಾನದ ಮದವು ಕ್ರಮೇಣ ಅವನಲ್ಲಿ ಜಡತ್ವವನ್ನು ಉಂಟು ಮಾಡುತ್ತದೆ. ದೃಷ್ಟಿಶಕ್ತಿಯಲ್ಲಿ ತುಸು ಏರುಪೇರು ಉಂಟಾಗುವುದು, ಬೆಳಕಿಗೆ ಕಣ್ಣಿನ ಪ್ರತಿಕ್ರಿಯೆ ವಿಳಂಬವಾಗುವುದು. ಮೈ ಕೈ ತುಸು ಜೋಲಾಡುವುದು ಮತ್ತು ಮಾತಿನ ಸರಣಿ ತಪ್ಪುವುದು ಮೊದಲಾದ ಅಸ್ತವ್ಯಸ್ತತೆಗಳು ತಲೆ ಹಾಕುವವು.

2. ವಿಶೇಷಮದ್ಯಪಾನ ಸ್ಥಿತಿಗೆ ಮುಟ್ಟಿದ ರೋಗಿಯಲ್ಲಿ ಮೇಲೆ ಹೇಳಿದ ಲಕ್ಷಣಗಳಲ್ಲದೆ ಮೈ ಕೈ ಜೋರಾಗಿ ಜೋಲಿ ಹೊಡೆಯುವುದು, ಯದ್ವಾತದ್ವಾ ಮಾತು, ಅಡ್ಡಾತಿಡ್ಡೆ ಹೆಜ್ಜೆಹಾಕುತ್ತಾ ನಡೆಯುವುದು ಮತ್ತು ತೂಕಡಿಕೆಗಳು ಕಾಣಿಸುತ್ತದೆ. ದೃಷ್ಟಿ ದೋಷವು ಈಗ ಸ್ಪಷ್ಟವಾಗಿ ಉಂಟಾಗಿರುತ್ತದೆ; ಹಾಗೂ ಸ್ಪರ್ಶ ಜ್ಞಾನವು ಕಮ್ಮಿಯಾಗಿರುತ್ತದೆ. ಈ ಸ್ಥಿತಿಯಲ್ಲಿ ರೋಗಿಯು ವಿಚಿತ್ರ ಮನೋಭಾವವನ್ನು ಹೊಂದಿರುತ್ತಾನೆ.

3. ತೀವ್ರಾವಸ್ಥೆಗೆ ತಲುಪಿದ ರೋಗಿಯು ಪ್ರಜ್ಞಾಶೂನ್ಯನಾಗುತ್ತಾನೆ. ಅವನಿಗೆ ದೇಹ ಪ್ರತಿಕ್ರಿಯೆಗಳೂ ಸ್ಪರ್ಶಜ್ಞಾನವೂ ಇರುವದಿಲ್ಲ; ಉಸಿರಾಟವು ಮಂದವಾಗಿರುತ್ತದೆ. ದೀರ್ಘ ವಿಸ್ಮೃತಿ ಹಾಗೂ ಸಾವು ಸಂಭವಿಸಬಹುದು.

ಚಿಕಿತ್ಸೆ ಮತ್ತು ಉಪಚಾರ :

ಮದ್ಯಪಾನ ವಿಷದಿಂದ ನರಳುವ ರೋಗಿಯನ್ನು ಹೊಟ್ಟೆತೊಳೆಯುವದು, ವಾಂತಿ ಮಾಡಿಸುವದು ಮೊದಲಾದ ಸಾಂಪ್ರದಾಯಿಕ ವಿಧಾನಗಳಿಂದ ಚಿಕಿತ್ಸೆ ಮಾಡಬೇಕು. ಮೊದಲು ರೋಗಿಯನ್ನು ಸ್ವಚ್ಛವಾದ ಹವೆಯಿರುವ ಕೊಠಡಿಯಲ್ಲಿ ಮಲಗಿಸಬೇಕು. ಸೋಡಿಯಂ ಬೈ ಕಾರ್ಬೋನೇಟ್ ಮಿಶ್ರಣವನ್ನು ತಾಸಿಗೊಮ್ಮೆ ಕುಡಿಸುವದರಿಂದ ಮೂತ್ರವಿಸರ್ಜನೆ ಕ್ರಮಬದ್ಧವಾಗುವದು. (ಆದರೆ ರೋಗಿಗೆ ಹೆಚ್ಚು ಪ್ರಮಾಣದಲ್ಲಿ ದ್ರವವನ್ನು ಕುಡಿಸಬಾರದು). ಕೆಫೀನ್, ಸೋಡಿಯಂ ಬೆಂಜನೇಟ್ ಸೂಜಿಮದ್ದನ್ನೂ, ಮಿಶ್ರಣಗಳನ್ನೂ ಕೊಡಬೇಕು. ಬಿಸಿಯಾದ ತೀಕ್ಷ್ಣ ಕಾಫಿಯನ್ನು ಕುಡಿಸಬಹುದು. ನಿದ್ರೆಬರಿಸುವ ಹಾಗೂ ಶಾಮಕ ಚಿಕಿತ್ಸೆ ಉಪಚಾರಗಳು ನಿಶಿದ್ಧ.

ದೀರ್ಘಕಾಲದ ವಿಷ ಲಕ್ಷಣಗಳು ಮತ್ತು ಚಿಕಿತ್ಸೆ :

ದೀರ್ಘಕಾಲದಿಂದ ಮದ್ಯಪಾನಮಾಡುವ ಚಟಕ್ಕೆ ಬಿದ್ದ ರೋಗಿಯ ದೇಹವು ಕ್ಷೀಣವಾಗಿ, ಮುಖವು ನೇರಿಗೆ ಬಿದ್ದು, ಕಣ್ಣು ಆಳಕ್ಕೆ ಇಳಿದು, ಅಧಃಪತನದ ಕರಿನೆರಳು ಪ್ರತ್ಯಕ್ಷವಾಗಿ ಅವನ ಮೋರೆಯ ಮೇಲೆ ಗೋಚರಿಸುತ್ತದೆ. ಅನ್ನಾಹಾರಗಳ ಮೇಲೆ ಇಚ್ಛೆಯು ಲೋಪವಾಗಿರುತ್ತದೆ; ನೆನಪಿನಶಕ್ತಿಯು ಕುಂದಿರುತ್ತದೆ; ಮತ್ತು ದೃಷ್ಟಿದೋಷವು ಉಂಟಾಗಿರುತ್ತದೆ. ಬುದ್ಧಿಮಾಂದ್ಯ, ಅಶಾಂತಿ, ಭ್ರಮೆಗಳು ಉಂಟಾಗುವವಲ್ಲದೆ ವಿವೇಕ, ವಿವೇಚನಾ ಶಕ್ತಿಗಳು ಶೂನ್ಯವಾಗಿ ಬಿಡುತ್ತವೆ. ಕೆಲವೊಮ್ಮೆ ಆದಿರುವಾಯು ಬಡಬಡಿಸುವದು ಮೊದಲಾದ ಉಪದ್ರವಗಳೂ ಉಂಟಾಗಬಹುದು.

ಮದ್ಯಪಾನದ ಚಟಕ್ಕೆಬಿದ್ದು ದೀರ್ಘಕಾಲದ ವಿಷಪರಿಣಾಮಗಳಿಂದ ನರಳುವ ರೋಗಿಯ ಚಿಕಿತ್ಸೆಗೆ ತಜ್ಞರ ನೆರವನ್ನು ಪಡೆಯಬೇಕು. ತಾತ್ಕಾಲಿಕ ಉಪಶಮನಕ್ಕಾಗಿ ಪೆರಲ್‌ಡಿಹೈಡ್ ಸೂಜಿ ಮದ್ದನ್ನು ನೀಡಬಹುದು. ಬಿ 1 ಮತ್ತು ಸಿ ಜೀವಾತುಗಳು ನಿಕೋಟಿನಿಕ್‌ಆಸಿಡ್ ಮತ್ತು ಗ್ಲೂಕೋಸ್ ಸೇವನೆ ಉಪಯುಕ್ತವಾಗಿವೆ.

ಆ್ಯಂಟಿಬ್ಯೂಸ್, ಟೆಂಪೋನಿಲ್ ಮೊದಲಾದ ಔಷಧಿಗಳನ್ನು ತಜ್ಞರ ನೇತೃತ್ವದಲ್ಲಿ ತಿಂಗಳುಗಟ್ಟಲೆ ನೀಡುವುದರಿಂದ ರೋಗಿಯು ಮದ್ಯಪಾನದ ಬಗ್ಗೆ ತಿರಸ್ಕಾರ ಹೊಂದುತ್ತಾನೆ. ಈ ಚಿಕಿತ್ಸೆಯನ್ನು ತಜ್ಞರ ನೇತೃತ್ವದಲ್ಲೇ ನಡೆಸಬೇಕು, ಹಾಗೂ ರೋಗಿಯ ದೃಢನಿರ್ಧಾರ–ಸಹಕಾರಗಳೂ ಅಗತ್ಯ.

ಅಶುದ್ಧಮದ್ಯ (ಸಸ್ಯಮದ್ಯ)ಮತ್ತುಕಳ್ಳಭಟ್ಟಿ

ಪರಿಚಯ :

ಬಣ್ಣದ ಕೈಗಾರಿಕೆಯಲ್ಲಿ, ವಾರ್ನಿಸ್ ತಯಾರಿಕೆಯಲ್ಲಿ ಹಾಗೂ ರಾಸಾಯನಿಕ ಮಿಶ್ರಣಗಳಲ್ಲಿ ಉಪಯೋಗಿಸುವ ಅಶುದ್ಧಮದ್ಯವನ್ನು ಸಸ್ಯಮದ್ಯವೆಂದೂ ಕರೆಯುತ್ತಾರೆ. ಇದು ಸೇವನೆಗೆ ಅನರ್ಹವಾಗಿದ್ದು, ಕುಡಿದರೆ ತೀಕ್ಷ್ಣ ವಿಷವಾಗಿ ಪರಿಣಮಿಸುತ್ತದೆ. ಈ ವರ್ಗಕ್ಕೆ ಸೇರಿದ 'ಡಿನೇಚರ್ಡ್ ಸ್ಪಿರಿಟನ್ನು' ನಸುಗೆಂಪು ಅಥವಾ ಕಂದು ಬಣ್ಣದ ಬಾಟಲಿಯಲ್ಲಿ ತುಂಬಿಸಿ, ಅಪಾಯ ಸೂಚಕವಾದ ತಲೆ ಬುರುಡೆ ಮತ್ತು ಎಲುಬುಗಳ ಅಡ್ಡ ಚಿತ್ರವನ್ನು ಕೆಂಬಣ್ಣದಲ್ಲಿ ಮುದ್ರಿಸಿ **'ಸೇವನೆ ನಿಷಿದ್ಧ'** ಎಂಬ ಸೂಚನೆಯನ್ನು ಕೂಡಾ ಅಚ್ಚುಮಾಡಿದ ಚೀಟಿಯನ್ನು ಅಂಟಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡಬೇಕೆಂಬ ನಿಯಮವಿದೆ.

ಸರಕಾರವು ಪಾನನಿರೋಧ ಕಾರ್ಯಕ್ರಮವನ್ನು ಜಾರಿಗೆ ತಂದಾಗಿನಿಂದ ಸೇವನಾರ್ಹವಲ್ಲದ ಈ ಅಶುದ್ಧ ಮಧ್ಯವನ್ನು ಕುಡಿಯುವ ಪ್ರಸಂಗಗಳು ಹೆಚ್ಚಾಗ ತೊಡಗಿದವು. ಜೊತೆಗೆ ಕಳ್ಳಭಟ್ಟಿಯ ತಯಾರಿಕೆಯೂ ಹೆಚ್ಚಾಗತೊಡಗಿತು. ಕಳ್ಳಭಟ್ಟಿಯನ್ನು ಹೊಲಸು ವಾತಾವರಣದಲ್ಲಿ ಕದ್ದುಮುಚ್ಚಿ ಅಶುದ್ಧವಾದ ಹಾಗೂ ಆರೋಗ್ಯಕ್ಕೆ ಹಾನಿಕರವಾದ ವಸ್ತುಗಳ ಮಿಶ್ರಣದಿಂದ ತಯಾರಿಸುವದಷ್ಟೇ ಅಲ್ಲದೆ ಮತ್ತೇರಿಸಲು ವಿಷದ್ರವ್ಯಗಳನ್ನು ಸಹ ಕಲಬೆರಕೆ ಮಾಡುವದು ಅಬಾಧಿತವಾಗಿ ನಡೆದಿದೆ. ಇಂತಹ ವಿಷವನ್ನು ಸೇವಿಸಿ ಪ್ರಾಣಾಪಾಯಕ್ಕೆ ಜನರು ತುತ್ತಾಗುತ್ತಿರುವ ವರದಿಗಳು ದಿನನಿತ್ಯ ವೃತ್ತ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುತ್ತವೆ.

ಪ್ರಾಣಾಪಾಯದ ಪ್ರಮಾಣ (ಸೇವನೆ) 100–250 ಮಿಲೀಲೀಟರ್.

ವಿಷಪ್ರಾಶನವಾದ ಒಂದು ತಾಸಿನೊಳಗೆ ವಿಷಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಕೆಲವೊಮ್ಮೆ 48 ತಾಸುಗಳಷ್ಟು ವಿಳಂಬವಾಗಿ ಕಾಣಿಸುವುದೂ ಇದೆ. ಅಶುದ್ಧ ಮದ್ಯವು ಸೇವನೆ ಹಾಗೂ ಆಘ್ರಾಣ ವಿಷ. ಅಶುದ್ಧಮದ್ಯ ಸೇವನೆಯು ದುಷ್ಪರಿಣಾಮವಾಗಿ ಕಣ್ಣುಗಳು ಸಂಪೂರ್ಣ ಕುರುಡಾಗಬಹುದು. ವಿಷಪ್ರಯೋಗಕ್ಕೆ ತುತ್ತಾದ ರೋಗಿಗಳಲ್ಲಿ ಸೇಕಡಾ 25 ಮಂದಿ ಪ್ರಾಣಕಳೆದುಕೊಳ್ಳುತ್ತಾರೆ.

ವಿಷಪ್ರಾಶನದ ಲಕ್ಷಣಗಳು :

ಅಶುದ್ಧಮದ್ಯವನ್ನು ಸೇವಿಸಿದ ರೋಗಿಯಲ್ಲಿ ತಲೆತಿರುಗುವುದು, ತಲೆನೋವು ವಾಕರಿಕೆ, ವಾಂತಿ, ಹೊಟ್ಟೆನುಲಿತ, ಹೊಟ್ಟೆನೋವು, ಸಂಕಟ, ನಿಶ್ಶಕ್ತಿ, ದೃಷ್ಟಿದೋಷ, ಉಸಿರಾಟಕ್ಕೆತೊಂದರೆ, ಮೋರೆ ನೀಲಿಗಟ್ಟುವುದು, ಬಡಬಡಿಕೆ ಮೊದಲಾದ ಉಪದ್ರವಗಳು ಕಾಣಿಸುತ್ತವೆ. ಅವನ ರಕ್ತದ ಒತ್ತಡವು ಇಳಿಮುಖವಾಗುತ್ತದೆ, ಕಣ್ಣುಗುಡ್ಡೆ ಅರಳುತ್ತದೆ. ಅದಿರುವಾಯು, ದೀರ್ಘಸುಪ್ತಿ ಮೊದಲಾದ ಉಪದ್ರವಗಳು ಕ್ರಮೇಣ ಉಂಟಾಗಿ ಸಾವು ಸಂಭವಿಸಬಹುದು–ಬದುಕಿ ಉಳಿದರೂ ಕೂಡಾ ಕಣ್ಣು ಕುರುಡಾಗುವ ಸಂಭವವಿದೆ.

ಪ್ರತ್ಯೌಷಧ ಚಿಕಿತ್ಸೆ ಮತ್ತು ಉಪಚಾರ:

ಅಶುದ್ಧಮದ್ಯ ವಿಷಕ್ಕೆ ಸಿದ್ಧಪ್ರತ್ಯೌಷಧ–ಶುದ್ಧಮದ್ಯ. ವಿಷಪ್ರಾಶನವಾದ ಎರಡುಗಂಟೆಗಳೊಳಗಾಗಿ ರೋಗಿಗೆ ಚಿಕಿತ್ಸೆ ನೀಡುವುದು ಸಾಧ್ಯವಾದರೆ ಅವನನ್ನು ಪ್ರಾಣಾಪಾಯದಿಂದ ಪಾರುಮಾಡಬಹುದು. ಶುದ್ಧಮದ್ಯವನ್ನು 5–20 ಮಿಲಿ ಲೀಟರ್ ಪ್ರಮಾಣದಲ್ಲಿ ಪ್ರತಿ 2 ತಾಸಿಗೊಮ್ಮೆ ಕುಡಿಸಬೇಕು. ಸೋಡಿಯಂ ಬೈ ಕಾರ್ಬೋನೇಟ್ ದ್ರಾವಣದಿಂದ ಹೊಟ್ಟೆತೊಳೆಸಬೇಕು. ದೇಹದ ಶಾಖರಕ್ಷಣೆಗೂ, ರಕ್ತಾಮ್ಲತೆಯನ್ನು ತಡೆಗಟ್ಟುವುದಕ್ಕೂ ಸೂಕ್ತ ಚಿಕಿತ್ಸೆ ನಡೆಸಬೇಕು. ರೋಗಿಗೆ ಧಾರಾಳ ದ್ರವ, ಪೌಷ್ಟಿಕ ಆಹಾರ ಹಾಗೂ ವಿಶ್ರಾಂತಿಯನ್ನು ನೀಡಬೇಕು. ಅವನ ಕಣ್ಣುಗಳನ್ನು ಬೆಳಕಿನಿಂದ ತಾತ್ಕಾಲಿಕವಾಗಿ ಮರೆಮಾಡುವಂತೆ ಪಟ್ಟಿ ಕಟ್ಟಬೇಕು. ಬಡಬಡಿಸುವುದು, ಅದಿರುವಾಯು ಮೊದಲಾದ ಉಪದ್ರವಗಳು ಕಾಣಿಸಿಕೊಂಡಲ್ಲಿ ಸೂಕ್ತ ಚಿಕಿತ್ಸೆ ನಡೆಸಬೇಕು.

ಅಫೀಮು

ಪರಿಚಯ :

ಅಫೀಮು ವೈದ್ಯರ ಕೈಯಲ್ಲಿ ಸಂಜೀವಿನಿ; ಆದರೆ ದುರುಪಯೋಗದಿಂದ ಮಾರಕವಿಷ. ವೇದನಾಶಾಮಕ, ಕಫಹರ, ಮಲ ಬಂಧಕ ಹಾಗೂ ರಕ್ತಸ್ರಾವ ನಿರೋಧಕ ಔಷಧಿಯಾಗಿ ಸಾವಿರಾರು ವರ್ಷಗಳಿಂದ ಆಯುರ್ವೇದ ವೈದ್ಯರು ಅಹಿ ಫೇನವನ್ನು (ಅಫೀಮನ್ನು) ಶುದ್ಧ ಮಾಡಿ ಬಳಸುತ್ತ ಬಂದಿದ್ದಾರೆ. ಅಫೀಮು, ಅಫೀನಿ, ಅಫು, ಓಪಿಎಮ್ ಅಹಿಫೇನ, ಅಫೂಕ ಮೊದಲಾದ ಹೆಸರುಗಳಿಂದ ಕರೆಯಲ್ಪಡುವ ಈ ಅಮಲುದ್ರವ್ಯ ಹಿಮಾಲಯದ ತಪ್ಪಲಿನಲ್ಲಿಯೂ, ಕಾಶ್ಮೀರ ದಲ್ಲಿಯೂ, ಉತ್ತರ ಹಿಂದುಸ್ಥಾನದ ಅನೇಕ ಭಾಗಗಳಲ್ಲಿಯೂ ಬೆಳೆಯುವ ಅಫೀಮು ಗಿಡದ ದೋರೆಗಾಯಿ 'ಪೋಸ್ತುಫಲ'ದ ನಿರ್ಯಾಸವಾಗಿ ಸಂಗ್ರಹಿಸಲ್ಪಡುವ ದ್ರವ್ಯ. ಈ ಕಾಯಿಗಳ ಬೀಜಗಳು ನಾವು ಪಾಯಸಕ್ಕೆ ಬಳಸುವ ರುಚಿಕರವಾದ ಗಸಗಸೆ; ಇದರ ಬೀಜದಿಂದ ಖಸ್‌ಖಸ್ ಎಂಬ ಎಣ್ಣೆಯನ್ನೂ ತೆಗೆಯುತ್ತಾರೆ. ಇವೆರಡೂ ನಿರಪಾಯಕರವಾದ ನಿರ್ವಿಷ ದ್ರವ್ಯಗಳು.

ಅಫೀಮು ಮೂಲರೂಪದಲ್ಲಿ ಅಸಹ್ಯ ವಾಸನೆಯುಳ್ಳ ಕಹಿ ಮೇಣದ ಮುದ್ದೆ. ಇದನ್ನು ಸೇವಿಸುವ ಚಟಕ್ಕೆ ಬಲಿಯಾದವರು ತಮ್ಮ ತಲೆಯ ಮೇಲೆ ತಾವೇ ಕಲ್ಲು ಚಪ್ಪಡಿಯನ್ನು ಎಳೆದು ಕೊಳ್ಳುತ್ತಾರೆ. ದಿನದಿಂದ ದಿನಕ್ಕೆ ತಾನು ಸೇವಿಸುವ ಅಫೀಮಿನ ಪ್ರಮಾಣವನ್ನು ಅವರು ಹೆಚ್ಚಿಸುತ್ತಲೇ ಹೋಗುತ್ತಾರೆ. ಕೊನೆಗೆ ಏನೇ ಆಗಲಿ ಒಂದರೆಗಳಿಗೆಯೂ ಅಫೀಮಿನ ನಿಶೆಯನ್ನು ಬಿಟ್ಟಿರಲಾಗದಷ್ಟು ಎನ್ನು ವಷ್ಟು ಮಟ್ಟಿಗೆ ಚಟದ ಗುಲಾಮರಾಗುತ್ತಾರೆ. ಸಟ್ಟಾ, ಜುಗಾರಿ, ಮಟಕಾ



ಅಫೀಮು ಕಾಯಿಗಳು



ಅಫೀಮು ಗಿಡದ ಹೂವು

ದುರ್ವ್ಯಸನಗಳಲ್ಲಿ ಸರ್ವನಾಶ ಮಾಡಿಕೊಂಡವರೂ, ಅನಿರೀಕ್ಷಿತ ಸೋಲು–ನಿರಾಶೆಗಳನ್ನು ಎದುರಿಸಬೇಕಾಗಿ ಬಂದ ಅಂಜುಬುರುಕರೂ, ವಿಫಲ ಸಾಹಸಗಳಿಂದ ನೊಂದ

ವರೂ, ದೀರ್ಘಕಾಲ ವ್ಯಾಧಿಪೀಡಿತರಾಗಿ ನರಳುವವರೂ, ಪ್ರಣಯಭಂಗಕ್ಕೆ ತುತ್ತಾದವರೂ, ಪ್ರಾಣ ಕಳೆದುಕೊಳ್ಳಲು ಮೊರೆಹೊಗುವ ಸುಲಭ ಸಾಧನಗಳಲ್ಲಿ ಅಫೀಮು ಮುಖ್ಯ ವಸ್ತುವಾಗಿದೆ. ಕೊಲೆ, ಸುಲಿಗೆ, ಮತ್ತು ವಂಚನೆಗಳ ದುರುದ್ದೇಶದಿಂದ ಅಫೀಮನ್ನು ದುರುಪಯೋಗಿಸುವುದೂ ಉಂಟು. ಮಕ್ಕಳು, ಎಳೆಗೂಸುಗಳು ಹಾಗೂ ಸ್ತ್ರೀಯರು ಸಹ ಅಫೀಮು ವಿಷಕ್ಕೆ ತುತ್ತಾಗುತ್ತಾರೆ. ಅಫೀಮು ಪ್ರಾಣಿ ಪಕ್ಷಿಗಳಿಗೂ ಕೂಡ ವಿಷ. ಅಫೀಮನ್ನು ನಾನಾ ರೂಪದಲ್ಲಿ ಸೇವಿಸುತ್ತಾರೆ. ಗುಳಿಗೆಗಳನ್ನು ಮಾಡಿ, ಲೇಹ್ಯ, ಶರಬತ್ತುಗಳ ರೂಪದಲ್ಲಿ ಬಳಸುವುದು ಸರ್ವ ಸಾಮಾನ್ಯ ಪದ್ಧತಿ. ಸೂಜಿಮದ್ದಿನ ಪ್ರಯೋಗವೂ ಇದೆ.

ಪ್ರಾಣಾಪಾಯದ ಪ್ರಮಾಣ (ಸೇವನೆ): ಕೋಡಿನ್ 60–120 ಮಿಲಿಗ್ರಾಂ., ಹೆರೋಯಿನ್ 0.2 ಗ್ರಾಂ. ಮಾರ್ಫಿನ್ 0.2ಗ್ರಾಂ., ಅಫೀಮ 0.3 ಗ್ರಾಂ ಕರ್ಪೂರದ ಅರ್ಕದಲ್ಲಿ 60 ಗ್ರಾಂ. ಚಟಕ್ಕೆ ಬಿದ್ದವರು ಇದಕ್ಕಿಂತ ಅಧಿಕಪ್ರಮಾಣದ ಅಫೀಮನ್ನು ಅರಗಿಸಿಕೊಳ್ಳಬಲ್ಲರು. ಹಸಿದ ಹೊಟ್ಟೆಯಲ್ಲಿ ಅಥವಾ ಮದ್ಯದಲ್ಲಿ ಬೆರಸಿದ ಅಫೀಮು ಅತ್ಯಲ್ಪಪ್ರಮಾಣದಲ್ಲಿ ಕೂಡಾ ಹೆಚ್ಚು ದುಷ್ಪರಿಣಾಮವುಂಟು ಮಾಡಬಲ್ಲದು.

ದೀರ್ಘಕಾಲ ವಿಷಪ್ರಯೋಗದ ಲಕ್ಷಣಗಳು :

ಅಫೀಮು ವಿಷ ಪ್ರಯೋಗಕ್ಕೆ ದೀರ್ಘಕಾಲ ತುತ್ತಾದ ರೋಗಿಯು–ಮುಖ್ಯವಾಗಿ ಅಫೀಮು ತಿನ್ನುವ ಅಥವಾ ಅಫೀಮ ಸೂಜಿಮದ್ದು ತೆಗೆದುಕೊಳ್ಳುವ ಚಟಕ್ಕೆ ಬಿದ್ದವನು–ಅನೇಕ ದುಷ್ಪರಿಣಾಮಗಳಿಗೆ ಬಲಿಯಾಗುತ್ತಾನೆ. ಅವನ ದೇಹವು ಸೊರಗಿ, ಕೂದಲು ಒಣಗಿ, ಚರ್ಮವೂ ಒಣಗಿ ಸುಕ್ಕುಗಟ್ಟುತ್ತದೆ. ಅವನ ಕೆನ್ನೆ, ಹುಬ್ಬು, ರೆಪ್ಪೆ ಮತ್ತು ಬಾಯಿಯ ಸುತ್ತು ಒಣಮಚ್ಚೆಗಳು ಕಾಣಿಸುತ್ತವೆ, ನಾಲಗೆ ಹೊಲಸಾಗುತ್ತದೆ. ಮಲಬದ್ಧತೆ, ಅಗ್ನಿಮಾಂದ್ಯ, ಅರುಚಿ ಮತ್ತು ವಾಕರಿಕೆಗಳು ಉಂಟಾಗುತ್ತವೆ. ಅವನ ಚರ್ಮವು ಬಿಳಿಚಿಕೊಳ್ಳುತ್ತದೆ, ಉಗುರುಗಳು ಸೀಳುತ್ತವೆ ಹಾಗೂ ಕೂದಲುಗಳು ಉದುರುವವು. ಬಾಯಿ ಒಣಗುವುದು, ನೀರಡಿಕೆ ಮತ್ತು ಕೆಲವು ಸಲ ತಡೆಯಲಾರದಂತಹ ಹಸಿವು ಕಾಡುತ್ತದೆ. ಛಳಿ, ಜ್ವರ, ತಲೆನೋವು, ಎದೆಭಾರ, ಕರುಳುನುಲಿತ ಹಾಗೂ ರಕ್ತಮಿಶ್ರಿತ ಭೇದಿ ಸಹ ಉಂಟಾಗಬಹುದು. ಕೆಲವೊಮ್ಮೆ ಮೂತ್ರವಿಕಾರವೂ ಕಾಣಿಸಬಹುದು. ರೋಗಿಯ ಕಣ್ಣುಬೊಂಬೆಯು ಕಿರಿದಾಗಿರುತ್ತದೆ. ಕಣ್ಣುಉರಿ, ಕಣ್ಣೀರು ಸುರಿಯುವುದು ಮೊದಲಾದ ಉಪದ್ರವಗಳು ಪ್ರಾರಂಭವಾಗುವವು. ಕೆಮ್ಮು, ನೀರಾದ ಕಫ, ಮೊದಲಾದ ತೊಂದರೆಗಳು ಉಂಟಾಗುತ್ತವೆ. ರೋಗಿಯಲ್ಲಿ ಮೊದಲಿಗೆ ಅತಿಶಯವಾಗಿ ಕಾಣಿಸಿಕೊಂಡ ಕಾಮಾ

ಸಕ್ತಿಯು ಕ್ರಮೇಣ ಕಮ್ಮಿಯಾಗುತ್ತ ಬಂದು, ಕೊನೆಗೆ ಸಂಪೂರ್ಣ ನಾಶವಾಗುತ್ತದೆ ಸ್ತ್ರೀಯರಲ್ಲಿ ಋತು ಸ್ರಾವದ ಏರುಪೇರು ಉಂಟಾಗುತ್ತದೆ. ಭ್ರಮೆ ಮತ್ತುಬುದ್ಧಿ ವಿಕಾರಗಳು ಸಹ ಕಾಣಿಸಬಹುದು. ಹುಚ್ಚು ಹುಚ್ಚಾದ ವರ್ತನೆ, ತೊದಲುಮಾತು ಮತ್ತು ಸರ್ವಾಂಗ ವೇದನೆಯಿಂದ ನರಳುವಂತೆ ದುಃಖಿಸುತ್ತ ರೋಗಿಯು ಆತಂಕ ಪಡುತ್ತಿದ್ದು ಈ ಸ್ಥಿತಿಯಲ್ಲಿ ಆವನ ಏಕೈಕ ಉದ್ದೇಶವೆಂದರೆ ಹೇಗಾದರೂ ಮಾಡಿ ಅಫೀಮನ್ನು ಗಿಟ್ಟಿಸಿಕೊಂಡು ಮುಕ್ಕುವದೊಂದೇ ಎಂಬಷ್ಟು ಹೀನಾವಸ್ಥೆಗೆ ತಲುಪಿರುತ್ತದೆ.

ಅಫೀಮು ಸೇವನೆಯ ಚಟಕ್ಕೆ ಬಿದ್ದ ರೋಗಿಗೆ ಚಿಕಿತ್ಸೆಯೆಂದು ತಕ್ಷಣ ಅಫೀಮನ್ನು ವರ್ಜಿಸಬಾರದು. ರೋಗಿಯು ಅಧಃಪತನದಿಂದ ತಪ್ಪಿಸಲು ಧೃಢ ನಿರ್ಧಾರ ಕೈಗೊಂಡು, ಪರಿಣಿತವೈದ್ಯರ ಸಲಹೆ ಹಾಗೂ ಮೇಲ್ವಿಚಾರಣೆಯಲ್ಲಿ ಚಿಕಿತ್ಸೆ ನಡೆಸಿದರೆ ಅವನು ಚಟಮುಕ್ತನಾಗುವುದು ಸಾಧ್ಯ.

ವಿಷಪ್ರಯೋಗದ ಲಕ್ಷಣಗಳು :

ವಿಷಪ್ರಮಾಣದಲ್ಲಿ ಅಫೀಮನ್ನು ಸೇವಿಸಿದರೆ ಅರ್ಧತಾಸಿನೊಳಗಾಗಿ. ಕೆಲವೊಮ್ಮೆ ಸೇವಿಸಿದ ಕೆಲವೇ ನಿಮಿಷಗಳೊಳಗಾಗಿ ಉಪದ್ರವಗಳು ಕಾಣಿಸುತ್ತವೆ. ಮೊದಲು ರೋಗಿಯು ಉದ್ರೇಕಾವಸ್ಥೆಯನ್ನು ಅನುಭವಿಸುತ್ತಾನೆ. ಹೃದಯದ ಚಟುವಟಿಕೆ ಹೆಚ್ಚಿ ಅವನು ಅತ್ಯಂತ ಉಲ್ಲಾಸಭರಿತನಾಗುತ್ತಾನೆ. ಅವನ ಮೋರೆಯು ಕೆಂಪೇರುತ್ತದೆ. ಕ್ರಮೇಣ ಕಳವಳವೂ ಅಸಂಬದ್ಧ ಮಾತುಗಳೂ ಪ್ರಲಾಪವೂ ತೊಡಗಿ ರೋಗಿಯು ಅಶಾಂತಿಯ ತುಮುಲಕ್ಕೆ ಬಲಿಯಾಗುತ್ತಾನೆ. (ಕೆಲವರಲ್ಲಿ ಈ ಸ್ಥಿತಿಯು ಕ್ಷಣಕಾಲ ಇರಬಹುದು ಇನ್ನು ಕೆಲವರಲ್ಲಿ ತುಸು ಹೆಚ್ಚು ಹೊತ್ತು ಇರಬಹುದು).

ರೋಗಿಯು ತೂಕಡಿಕೆಯಸ್ಥಿತಿಗೆ ಮುಟ್ಟುವುದು ಎರಡನೇಯ ಹಂತ. ತಲೆ ನೋವು, ನೀರಡಿಕೆ, ವಾಕರಿಕೆ, ವಾಂತಿ, ಕಣ್ಣು ಕತ್ತಲು ಬರುವುದು, ಆಯಾಸ ಮತ್ತು ಹೆಚ್ಚಿನ ತೂಕಡಿಕೆ ಹಾಗೂ ನಿದ್ರಿಸುವ ಉತ್ಕಟ ಅಪೇಕ್ಷೆಗಳು ಉಂಟಾಗುತ್ತವೆ. ಅವನ ಮುಖವು ನಿಸ್ತೇಜವಾಗಿ, ಕಣ್ಣು ಬೊಂಬೆಯು ತೀರ ಕಿರಿದಾಗುತ್ತದೆ. ಮೈತುರಿಕೆ (ತಿಂಡಿ) ಉಂಟಾಗುತ್ತದೆ, ರೋಗಿಯ ನಾಡಿ ಮತ್ತು ಉಸಿರಾಟ ಈ ಹಂತದಲ್ಲಿ ಕೂಡಾ ಏರುಪೇರಾಗಿರುವುದಿಲ್ಲ.

ಮುಂದಿನ ಅವಸ್ಥೆ ಮೂರ್ಛಾವಸ್ಥೆ ಈಗ ರೋಗಿಯನ್ನು ಎಚ್ಚರಿಸುವುದು ಸಾಧ್ಯವಾಗುವುದಿಲ್ಲ. ಅವನ ಕಣ್ಣುಗಳು ಬೆಳಕಿಗೆ ಪ್ರತಿಸ್ಪಂದಿಸುವು

ದಿಲ್ಲ; ಶೀತೋಷ್ಣ ಸ್ಪರ್ಶಗಳಿಗೆ ಇಂದ್ರಿಯ ಪ್ರತಿಕ್ರಿಯೆಗಳು ಲೋಪವಾಗಿರುತ್ತವೆ. ಅವನ ರಕ್ತದ ಒತ್ತಡವು ಇಳಿಮುಖವಾಗಿ ಉಸಿರಾಟದ ಗತಿಯು ತೀರ ಮಂದ ವಾಗುತ್ತ ಒಂದು ನಿಮಿಷಕ್ಕೆ ಕೇವಲ 2–3 ಸಲ ಉಸಿರಾಡುವುದೂ ಉಂಟು. ಚರ್ಮ ತಣ್ಣಗೆ ಜಿಡ್ಡಾಗಿರುತ್ತದೆ. ಈ ವಿಷಮ ಪರಿಸ್ಥಿತಿಯಲ್ಲಿಯೂ ಸಹ ಸೂಕ್ತ ಚಿಕಿತ್ಸೆ ನೀಡಿದರೆ ರೋಗಿಯನ್ನು ಪ್ರಾಣಾಪಾಯದಿಂದ ಕಾಪಾಡಬಹುದು. ಇಲ್ಲವಾದರೆ ನಾಡಿಯು ಕ್ಷೀಣವಾಗಿ ವಕ್ರವಾಗುವುದಲ್ಲದೆ ಉಸಿರಾಟವೂ ಕೂಡಾ ತೀರ ಅಸ್ತವ್ಯಸ್ತ ಗೊಂಡು ಜ್ವರ, ಬೇಧಿ ಮತ್ತು ಅದಿರುವಾಯು ಕಾಣಿಸಿಕೊಳ್ಳಬಹುದು. ಈ ಹಂತದಲ್ಲಿ ಕಣ್ಣುಗೊಂಬೆ ಅರಳುತ್ತದೆ; ಮತ್ತು ಮರಣ ಸಂಭವಿಸುತ್ತದೆ. ರೋಗಿಯ ಉಸಿರಿನಲ್ಲಿ ಅಫೀಮಿನ ವಾಸನೆ ಬೆರೆತಿರುವುದು ನಿಜವಾದರೂ ಮದ್ಯಪಾನವೂ ರೋಗಿಯು ಸೇವಿಸಿದ ತಂಬಾಕು, ಸುಗಂಧದ್ರವ್ಯ ಮೊದಲಾದವುಗಳು ಈ ವಾಸನೆ ಯಲ್ಲಿ ಮರೆಮಾಡಬಹುದು.


ಚಿಕಿತ್ಸೆ ಮತ್ತು ಉಪಚಾರ :

ರೋಗಿಯನ್ನು ಉಗುರು ಬೆಚ್ಚಗಿನ ನೀರಿನಿಂದ ಮೊದಲು ಹೊಟ್ಟೆತೊಳೆದು ರಾಸಾಯನಿಕ ವಿಶ್ಲೇಷಣೆಗೆ ಅಗತ್ಯವೆನಿಸಿದರೆ ಅದನ್ನು ತೆಗೆದಿರಿಸಬೇಕು. ಅನಂತರ ಪೊಟಾಸಿಯಂ ಪರಮಾಂಗನೇಟಿನ ದುರ್ಬಲ ದ್ರಾವಣದಿಂದ ಅದು ದೊರಕದಿದ್ದರೆ ಜಹದಿಂದ ಹೊಟ್ಟೆತೊಳೆಯುವುದು, ವಮನ ಮಾಡಿಸುವುದು ಹಾಗೂ ವಿರೇಚನ ಚಿಕಿತ್ಸೆ ನಡೆಸಬೇಕು. ಕೃತಕ ಉಸಿರಾಟ ಹಾಗೂ ಆಮ್ಲಜನಕ ನೀಡಿಕೆಗಳನ್ನು ಅಗತ್ಯ ಬಿದ್ದರೆ ಒದಗಿಸಬೇಕು. ರೋಗಿಯ ದೇಹದ ಶಾಖವನ್ನು ಕಾಪಾಡಲು ಸೂಕ್ತ ಉಪಚಾರಗಳನ್ನು ಕೈಗೊಳ್ಳಬೇಕು. ಎಫಿಡ್ರಿನ್, ಎಡ್ರಿನಾಲಿನ್, ಎಟ್ರೋಪಿನ್ ಮತ್ತು ಕೊರಾಮಿನ್ ಸೂಜಿಮದ್ದುಗಳು ಉಪಯುಕ್ತವಾಗಿವೆ.

ಅಫೀಮು ವಿಷಕ್ಕೆ ಪ್ರತ್ಯೌಷದ ನಲ್ಲಿನೇ ಸೂಜಿಮದ್ದು ಮತ್ತು ಎಟ್ರೋಪಿನ್ ಸಲ್ಫೇಟ್.

ಟಿಪ್ಪಣಿ :

ಅಫೀಮು ವಿಷಪ್ರಾಶನದ ಹಿನ್ನೆಲೆಯಲ್ಲಿ ಅತ್ಮಹತ್ಯೆ ಅಥವಾ ಕೊಲೆಯ ಪ್ರಯತ್ನವಿರಬಹುದು. ಎಂಬುದನ್ನು ಸದಾ ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು, ಸಣ್ಣಮಕ್ಕಳಿಗೆ ಅಫು ನೀಡಿ ತಾಯಂದಿರು ಕೆಲಸಗಳಿಗೆ ನಿರ್ಯೋಚನೆಯಿಂದ ಹೋಗುವ ಪರಿಪಾಠವಿದೆ. ಇದನ್ನು ಕೈಬಿಡಬೇಕು.



ಬಂಗಿ

ಪರಿಚಯ :

ಹಿಮಾಲಯದ ತಪ್ಪಲಿನಲ್ಲಿ ಬೆಳೆಯುವ ಬಂಗಿ ಗಿಡ ಉದ್ದವಾದ ಹಸಿರೆಲೆ, ನಸುಹಳದಿ ಹಸುರು ಹೂವಿನ ಸಣ್ಣ ಗಿಡಮೂಲಿಕೆಯಾಗಿದೆ. ಬಂಗಿ ಗಿಡವನ್ನು ನೆಟ್ಟು ಬೆಳೆಸಲು ಸರಕಾರದ ಪರವಾನಿಗೆ ಪಡೆದಿರಬೇಕೆಂಬ ನಿಯಮವಿದೆ. ಬಂಗಿಯನ್ನು ಗಾಂಜಾ ಎಂದೂ ಕರೆಯುತ್ತಾರೆ. ಬಂಗಿಯಲ್ಲಿ 'ಕೆನ್ನಾಬಿನಾಲಿ' ಎಂಬ ವಿಷ ಸತ್ವವಿದೆ. ಬಂಗಿ ಗಿಡದ ಎಲೆ, ಮೃದುಟೊಂಗೆ, ಕಡ್ಡಿ, ಹೂವು, ಹೀಚು ಮೊದಲಾದವನ್ನು ಶುದ್ಧಮಾಡಿ ತಾಂಬೂಲದೊಡನೆ ಸವಿಯುತ್ತಾರೆ; ಹಾಲು ಸಕ್ಕರೆ ಬೆರೆಸಿ ಹೀರುತ್ತಾರೆ; ಬೆಣ್ಣೆಗುಳಿಗೆ ಮಾಡಿ ಮೆಲ್ಲುತ್ತಾರೆ. ಇಷ್ಟು ಮಾತ್ರವಲ್ಲದೆ ಇನ್ನೂ ನಾನಾ ಬಗೆಗಳಿಂದಲೂ ಬಳಸುತ್ತಾರೆ; ಸೂಜಿ ಮದ್ದಿನಂತೆ ಸ್ವೀಕರಿಸುವುದೂ ಉಂಟು.

ಬಂಗಿಯನ್ನು ಹೊಟ್ಟೆಹಸಿದಿದ್ದಾಗ ಸೇವಿಸಿದರೆ ಅರ್ಧ ತಾಸಿನೊಳಗಾಗಿಯೂ, ಇನ್ನು ಕೆಲವುಸಲ (ಊಟ ಮಾಡಿದ ನಂತರ ಇತ್ಯಾದಿ) 4–6 ತಾಸುಗಳಷ್ಟು ದೀರ್ಘಾವಧಿಯ ಮೇಲೂ ವಿಷ ಪರಿಣಾಮಗಳು ಕಾಣಿಸುತ್ತವೆ. ಮೊದಮೊದಲು ಅತ್ಯುತ್ತೇಜನ, ವಿಲಕ್ಷಣ ಸ್ಫೂರ್ತಿ, ಧೈರ್ಯ ಹಾಗೂ ಆನಂದೋಲ್ಲಾಸಗಳು ಕಾಣಿಸಿ

ಕೊಳ್ಳುವವು; ಕಾಮೋತ್ತೇಜನಗೊಳ್ಳುವುದಲ್ಲದೆ ತುದಿ ಮೊದಲಿಲ್ಲದ ಮನಸೋಕ್ತ ಮಾತುಕತೆಗಳಿಗೆ ಮೊದಲಾಗುತ್ತದೆ. ಒಟ್ಟಿನಲ್ಲಿ ಬಂಗಿ ಕುಡಿದವನು ಸ್ವರ್ಗ ಸುಖ ವನ್ನು ಅನುಭವಿಸುತ್ತಿರುವಂತೆ ಆನಂದೋನ್ಮತ್ತನಾಗಿ ಇದ್ದು ಕ್ರಮೇಣ ನಿಶ್ಶಕ್ತಿ, ತೂಕಡಿಕೆ, ನಿದ್ರೆ ಮತ್ತು ಸುಷುಪ್ತಿ ಸ್ಥಿತಿಗೆ ತಲುಪುತ್ತಾನೆ. ಬಂಗಿಯ ಮದವು 3–4 ತಾಸುಗಳಷ್ಟು ಹೊತ್ತು ಇರುತ್ತದೆ.

ಗಾಂಜಾದ ಒಣಗಿದ ಎಲೆ, ಕಡ್ಡಿ, ಹೀಚುಗಳನ್ನು ಬೇಯಿಸಿ ಕಷಾಯಮಾಡಿ, ಕಾಳು ಮೆಣಸು ಹಾಗೂ ಕಲ್ಲುಸಕ್ಕರೆ ಬೆರಸಿ 'ಬಂಗಿ ಪಟ್ಟಿ–ಸಬ್ಜಿ' ಎಂಬ ಹೆಸರಿನ ಸಣ್ಣ ಸಣ್ಣ ಗುಳಿಗೆಗಳನ್ನು ತಯಾರಿಸಿ ಪಾನಕದೊಂದಿಗೆ ಕಲಸಿ ಕುಡಿಯುವುದೂ ರೂಢಿಯಲ್ಲಿದೆ. ಇಂತಹ ರೋಗಿಗಳು ಅನೇಕ ಬಗೆಯ ಆಮೋದ ಪ್ರಮೋದ ಗಳಲ್ಲಿ ತೊಡಗಿ, ನೃತ್ಯ–ಸಂಗೀತಾದಿಗಳಲ್ಲಿಯೂ! ರತಿಸುಖದಲ್ಲಿಯೂ ಆಸಕ್ತರಾಗಿ ಯಥೇಷ್ಟ ಆನಂದಿಸುತ್ತಾರೆ. ಅಂತಹವರಲ್ಲಿ ಪಾನ ಭೋಜನಗಳ ಮೇಲೆ ಹೆಚ್ಚಿನ ಅಪೇಕ್ಷೆ ಕಾಣಿಸುತ್ತದೆ. ಸುಮಾರು 4 ತಾಸುಗಳ ನಂತರ ಅವರು ನಿದ್ರಾಪರವಶ ರಾಗುತ್ತಾರೆ.

ಬಂಗಿಗಿಡದ ಎಲೆಗಳನ್ನು ಚೂರ್ಣಮಾಡಿ ಹಾಲು, ಬೆಣ್ಣೆ, ಸಕ್ಕರೆ ಮತ್ತು ಗೋಧಿಹಿಟ್ಟಿನೊಂದಿಗೆ ಮಿಶ್ರಮಾಡಿ ತಯಾರಿಸುವ 'ಮಾಜುನ್ ಹಲ್ವಾ' ರುಚಿಕರ ವಾದ ಸುಮಧುರ ತಯಾರಿಕೆಯಾಗಿದ್ದು, ಇದನ್ನು ಸೇವಿಸಿದ ರೋಗಿಯು ತಾನೊಬ್ಬ ರಾಜ-ಮಹಾರಾಜ ವಂಶಸ್ತನೆಂಬ ಭ್ರಮೆಗೊಳಗಾಗಿ ಮನಸ್ಸಿನಲ್ಲಿ ಸಂತೋಷಪಡುತ್ತಾ ಆನಂದ ಸಾಗರದಲ್ಲಿ ತೇಲುತ್ತಾನೆ. ಬಂಗಿಯ ಹೂ, ಹೀಚು ಗಳನ್ನು ಒಣಗಿಸಿ ತಯಾರಿಸಿದ ಗಾಂಜಾ ಹಸುರಾಗಿದ್ದು ಬಂಗಿಯವಾಸನೆಯಿಂದ ಕೂಡಿರುತ್ತದೆ. ಇದನ್ನು ಚಿಲುಮೆಯಲ್ಲಿಟ್ಟು ಅಥವಾ ತಂಬಾಕದೊಂದಿಗೆ ಸೇರಿಸಿ ಸೇವಿಸುತ್ತಾರೆ. ಸಾಧು–ಸನ್ಯಾಸಿಗಳಿಗೂ, ಬಾವಾಜಿ ಬೈರಾಗಿಗಳಿಗೂ ಈ ಬಂಗಿಯ ಹೊಗೆ ಆನಂದ ಲೋಕದಲ್ಲಿ ವಿಹರಿಸಲು ರಹದಾರಿ ನೀಡುತ್ತದೆ. ಬಂಗಿಗಿಡದ ಎಲೆ, ಟೊಂಗಿಗಳಿಂದ ಬರುವ ಮೇಣವನ್ನು ಸಂಗ್ರಹಿಸಿ ತಂಬಾಕಿನೊಂದಿಗೆ ಬೆರೆಸಿ, ಹುಕ್ಕಾ ಸೇವಿಸುತ್ತಾರೆ. (ಇದನ್ನು 'ಚರಸ್' ಎಂದೂ ಕರೆಯುತ್ತಾರೆ. ಸಿಗರೇಟಿನಂತೆ ಸೇವನೆಗೆ ಬರುವ ಚರಸ್ಸಿಗೆ ಕೂಟ ಪ್ರಮೋದಗಳಲ್ಲಿ ಅಗ್ರಮಾನ್ಯತೆಯಿದೆ).

ರೀಫರ್, ಪಾಟ್, ವೀಡ್, ಇಂಡಿಯನ್ ಹೇ, ಗ್ರಾಸ್, ಆಸಿಡ್, ಮೇರಿ ಜೇನ್, ಎಲ್. ಎಸ್. ಡಿ. ಮೊದಲಾದ ಹೆಸರಿನ ನಾನಾಬಗೆಯ ಗಾಂಜಾಸಿದ್ಧ ಮಾದಕದ್ರವ್ಯಗಳು ಹಿಪ್ಪಿಕುಲಕ್ಕೆ ಸೇರಿದ ಭ್ರಾಮಕ ತರುಣ ಪೀಳಿಗೆಯ ಬದುಕಿನ ಉಸಿರು ಮತ್ತು ಅನ್ನಾಹಾರವಾಗಿದೆ ಎಂದರೆ ಅತಿಶಯೋಕ್ತಿಯಲ್ಲ.

ವಿಷಪ್ರಯೋಗದ ಲಕ್ಷಣಗಳು :

ಬಂಗಿ ಸೇವಿಸಿದರೋಗಿಯು ಮೊದಲು ಉದ್ರೇಕ ಚಿತ್ತವೃತ್ತಿಯನ್ನೂ ಭ್ರಮೆಯನ್ನೂ 'ಏಕ ಕಾಲದಲ್ಲಿ ಅನುಭವಿಸುತ್ತಾನೆ. ನಗುವುದು, ಹರಟುವುದು, ವಾಚಾಳತ್ವ, ಅಕಾರ ಕುಣಿತ ಮೊದಲಾದ ಮನಸ್ವೀ ಚಟುವಟಿಕೆಗಳೂ, ಹೆಚ್ಚಿನ ಹಸಿವೂ, ಕಾಮಾಸಕ್ತಿಯೂ ಉಂಟಾಗುತ್ತವೆ; ಹಾಗೂ ಅವನ ವಿವೇಕ ವಿವೇಚನಾ ಶಕ್ತಿಗಳು ಶೂನ್ಯವಾಗಿ ಬಿಡುತ್ತವೆ. ಸ್ಥಳ ಸನ್ನಿವೇಶಗಳನ್ನೆಲ್ಲ ಮರೆತು, ಯದ್ವಾತದ್ವಾ ನಡೆನುಡಿಗಳು ಪ್ರಾರಂಭವಾಗುತ್ತವೆ. ಒಮ್ಮೊಮ್ಮೆ ಕೊಲೆಗಡುಕ ಪ್ರವೃತ್ತಿಯು ಸಹ ತಲೆಹಾಕಬಹುದು. ತಲೆತಿರುಗುವುದು, ಮೈಮೇಲೆ ಇರುವೆ ಹರಿದಂತಾಗುವುದು ಮತ್ತು ತೂಕಡಿಕೆ ಮೊದಲಾದ ಉಪದ್ರವಗಳು ಕಂಡು ಬರುವುವು. ಮುಂದಿನ ಹಂತದಲ್ಲಿ ರೋಗಿಯ ಅರಿವು ತಪ್ಪುತ್ತದೆ. ಮೊದಲು ಕಿರಿದಾಗಿದ್ದ ಅವನ ಕಣ್ಣುಬೊಂಬೆ ಈ ಸ್ಥಿತಿಯಲ್ಲಿ ಅರಳಿ ದೊಡ್ಡದಾಗುತ್ತದೆ; ಹಾಗೂ ಗಾಢನಿದ್ರೆ ಅವನನ್ನು ಆವರಿಸುತ್ತದೆ. ಉಸಿರಾಟದ ಅವರೋಧದಿಂದ ಸಾವು ಸಂಭವಿಸಬಹುದು.

ಚಿಕಿತ್ಸೆ ಮತ್ತು ಉಪಚಾರ :

ಬಂಗಿ ಸೇವಿಸಿದ ರೋಗಿಗೆ ವಮನ, ವಿರೇಚನ ಮತ್ತು ಹೊಟ್ಟೆ ತೊಳೆಯುವ ಚಿಕಿತ್ಸೆಗಳನ್ನು ನಡೆಸಬೇಕು. ಅಗತ್ಯಬಿದ್ದರೆ ಕೃತಕ ಉಸಿರಾಟ ಹಾಗೂ ಆಮ್ಲಜನಕ ನೀಡಿಕೆಗಳನ್ನು ಪೂರೈಸಬೇಕು. ಉತ್ತೇಜಕ ಔಷಧಿ, ಪಾನ–ಪೇಯಗಳನ್ನು ನೀಡಬೇಕು. ಎಟ್ರೋಪೀನ್, 'ಸ್ಟ್ರಿಕ್‌ನೀನ್,' ಕೊರಾಮಿನ್ ಸೂಜಿಮದ್ದುಗಳು ಉಪಯುಕ್ತವಾಗಿವೆ. ಆಯುರ್ವೇದ ವೈದ್ಯರು ಲಕ್ಷ್ಮೀವಿಲಾಸರಸ ಅಥವಾ ಬೃಹತ್ ವಾತ ಚಿಂತಾಮಣಿರಸ (ಭಸ್ಮ ಪ್ರಯೋಗ) ನೀಡುತ್ತಾರೆ. ಹಸಿ ಶುಂಠಿಯ ಕಲ್ಕವನ್ನು ಮೊಸರಿನಲ್ಲಿ ಕಲಸಿ ಕುಡಿಸುವುದು, ಹುಣಸೆ ಎಲೆಯ ಕಲ್ಕವನ್ನು ತಿನ್ನಿಸುವುದು; ನೇರಲ ಚಿಗುರೆಲೆಯನ್ನು ನೀರಿನಲ್ಲಿ ಅರೆದು ಕುಡಿಸುವುದು; ಚಿಲ್ಲಿ ಬೀಜವನ್ನು ಮಜ್ಜಿಗೆಯಲ್ಲಿ ಅರೆದು ಕುಡಿಸುವುದು; ಅಕ್ಕಿ ತೊಳೆದ ನೀರು (ಕಲಗಚ್ಚು) ಕುಡಿಸುವುದು ಮೊದಲಾದ ಚಿಕಿತ್ಸೆಗಳ ಪೈಕಿ ಯಾವುದಾದರೂ ಒಂದನ್ನು ಕೂಡಾ ನಡೆಸಬಹುದು.

ದೀರ್ಘಕಾಲ ವಿಷ ಪ್ರಯೋಗ ಲಕ್ಷಣ—ಚಿಕಿತ್ಸೆ :

ಬಂಗಿ ಸೇವಿಸುವ ಚಟಕ್ಕೆ ಬಿದ್ದು ದೀರ್ಘಕಾಲ ವಿಷಪ್ರಯೋಗಕ್ಕೆ ತುತ್ತಾದ ರೋಗಿಯು ಅನ್ನಆಹಾರಗಳಲ್ಲಿ ಆಸಕ್ತಿಯನ್ನೂ, ಬಾಯಿ ರುಚಿಯನ್ನೂ ಕಳೆದು

ಕೊಳ್ಳುತ್ತಾನೆ. ಅವನ ದೇಹವು ಸೊರಗಿ ಕಡ್ಡಿಯಂತಾಗುತ್ತದೆ; ಕೈಕಾಲು ನಡುಗುತ್ತವೆ; ಮುಖದಲ್ಲಿ ಕಳೆಯೇ ಇರುವುದಿಲ್ಲ. ಅವನು ದೈನ್ಯತೆ, ಸಂತಾಪ ಹಾಗೂ ಚಾಂಚಲ್ಯತೆಯ ಸಾಕಾರ ಮೂರ್ತಿಯಂತೆ ಕಾಣಿಸುತ್ತಾನೆ. ಅವನಲ್ಲಿ ಕಾಮಾಸಕ್ತಿಯು ಸಂಪೂರ್ಣ ಲೋಪವಾಗಿರುತ್ತದೆ. ಸದ್ಬುದ್ಧಿ, ನೀತಿ, ವಿವೇಕ, ವಿವೇಚನಾ ಶಕ್ತಿಗಳೆಲ್ಲ ಗಾಳಿಯಲ್ಲಿ ತೂರಿಹೋಗಿರುತ್ತವೆ. ಬುದ್ಧಿಭ್ರಮಣೆಗೆ ತುತ್ತಾಗುವುದೂ ಅಪರೂಪವೇನಲ್ಲ. ಬಂಗಿ ವಿಷ ಬುದ್ಧಿಗೇಡಿಯಾದ ರೋಗಿಯು ನಾನಾ ಬಗೆಯ ಮನೋವಿಕಾರಗಳಿಗೆ ಬಲಿಯಾಗುತ್ತಾನೆ. ಹಿಂಸಾ ಪ್ರವೃತ್ತಿ, ಕಾರ್ಯ ಮತ್ತು ವಿಕೃತ್ತಕಾಮಚೇಷ್ಟೆಗಳಿಂದ ಪರಪೀಡಕನೂ, ಸಮಾಜ ಕಂಟಕನೂ ಆಗುತ್ತಾನೆ. ಇತರರು ಸುಖವಾಗಿರುವುದನ್ನು ನೋಡಿ ಸಹಿಸಲು ಸಾಧ್ಯವಾಗದಂತಹ ದುಷ್ಟ ಅಸೂಯೆಗೆ ತುತ್ತಾಗಿ, ಸರಿಯಾಗಿರುವುದನ್ನೆಲ್ಲ ಹಾಳು ಮಾಡಬೇಕೆಂಬ ಪೈಶಾಚಿಕ ಪ್ರವೃತ್ತಿಗೆ ಬಲಿಯಾಗುತ್ತಾನೆ. ಕೊಲೆ, ಸುಲಿಗೆ, ಅತ್ಯಾಚಾರ, ಅನಾಚಾರ ಮೊದಲಾದ ಪಾಪ ಕೃತ್ಯಗಳನ್ನು ಮಾಡುತ್ತ, ಹೊಲಸು ಬದುಕನ್ನು ನಡೆಸುತ್ತಿದ್ದರೂ ಆ ಬಗ್ಗೆ ಅವನಿಗೆ ಲವಲೇಶವಾದರೂ ಚಿಂತೆಯಿರುವುದಿಲ್ಲ. ರೋಗಿಯು ಈ ಬಗೆಯ ಪಶು ಜೀವನ ಮಟ್ಟಕ್ಕೆ ಇಳಿದು ಕೈಯ್ಯಾರೆ ದುರಂತವನ್ನು ತಾನೇ ತಂದುಕೊಳ್ಳುತ್ತಾನೆ.

ಬಂಗಿ ಸೇವಿಸಿದ ಅಮಲಿನಲ್ಲಿ ಕೊಲೆ, ಸುಲಿಗೆ, ಲೂಟಿ, ಜಗಳ, ಹಾದರ, ಅತ್ಯಾಚಾರ, ಅನಾಚಾರ, ಬೀದಿ ತಂಟೆ ಮತ್ತು ಹೊಡೆದಾಟ ನಡೆಯುವುದು ಸರ್ವೇ ಸಾಧಾರಣ ದೃಶ್ಯ ಕೆಲವರು ತಲೆ ಕೆಟ್ಟು ಬೀದಿಯಲ್ಲಿ ಅಡ್ಡಾಡುತ್ತ ಇದಿರು ಸಿಕ್ಕವರನ್ನೆಲ್ಲ ಕತ್ತಿಯಿಂದ ಇರಿದು ಗಾಯಗೊಳಿಸಬಹುದು; ಕೊಲೆ ಮಾಡಬಹುದು. ಪಾಪ, ತಮ್ಮ ಬುದ್ಧಿ ಸ್ಥಿಮಿತದಲ್ಲಿ ಇರದವರಿಗೆ ಯಾವುದು ಸರಿ, ಯಾವುದು ತಪ್ಪು ಎನ್ನುವ ವಿವೇಚನೆ, ವಿವೇಕ ಎಲ್ಲಿರುತ್ತದೆ. ?

ಇಂತಹ ರೋಗಿಗಳನ್ನು (ಬಂಗಿ ವಿಷಕ್ಕೆ ತುತ್ತಾದ ಚಟದ ರೋಗಿಗಳನ್ನು) ಬಂಗಿಯ ಸಂಪರ್ಕದಿಂದ ಕಡ್ಡಾಯವಾಗಿ ದೂರ ಮಾಡಿ ತಜ್ಞವೈದ್ಯರಿಂದ ಚಿಕಿತ್ಸೆ ನಡೆಸಬೇಕು.

ಚರಸ್

ಪರಿಚಯ :

ಅಮಲುವಿಷದಲ್ಲಿ ಚರಸ್‌ನಷ್ಟು ಖೋಡಿ ಬೇರಾವುದೂ ಇಲ್ಲವೆನ್ನಬಹುದು. ಸುಮಾರು 5 ಸಾವಿರ ವರ್ಷಗಳಷ್ಟು ಹಿಂದೆಯೇ ಮಧ್ಯಏಷಿಯಾದ ಅಲೆಮಾರಿ ಜನಾಂಗದ ಸ್ಕಿಥಿಯಾನರು ಚರಸ್‌ನ್ನು ಮುಕ್ಕುತ್ತಿದ್ದರೆಂಬುದಕ್ಕೆ ಆಧಾರಗಳಿವೆ.


ಅಮೇರಿಕದಲ್ಲಿ ಮರಿಜುವಾನ್ ಎಂದೂ, ಯುರೋಪಿನಲ್ಲಿ ಹಷೀಷ್ ಎಂದೂ ಆಫ್ರಿಕಾದಲ್ಲಿ ಖೀಫ್ ಅಥವಾ ಡಗ್ಗಾ ಎಂದೂ ಇದನ್ನು ಕರೆಯುತ್ತಾರೆ. ವಾಸ್ತವ ವಾಗಿ ಇದು ಬಂಗಿಗಿಡದಿಂದ ಒಸರುವ ನಸುಹಳದಿ ಬಣ್ಣದ ಹಾಲಾಗಿದ್ದು, ಅದನ್ನು ಸಂಗ್ರಹಿಸಿ ಒಣಗಿಸಿ ಚರಸ್ ಮಾದಕವನ್ನು ಸಿದ್ಧಮಾಡುತ್ತಾರೆ. ಕಳ್ಳವ್ಯಾಪಾರದ ಜಗತ್ತಿನಲ್ಲಿ ಚರಸ್ಸಿಗೆ ಬಹಳ ಮಹತ್ವ. ಶುದ್ಧಚರಸ್ ಭಾರೀ ಅಮಲೇರಿಸುವ ದ್ರವ್ಯವಾಗಿರುವುದರಿಂದ ಇದರ ಕಿಮ್ಮತ್ತು ತೀರಾ ಹೆಚ್ಚಾಗಿದ್ದು ಕಳ್ಳಪೇಟೆಯಲ್ಲಿ ದುಬಾರಿ ಬೆಲೆಗೆ ಮಾರಾಟವಾಗುತ್ತದೆ.

ಚರಸ್ ಮಾರುಕಟ್ಟೆಯಲ್ಲಿ ವಿವಿಧ ವೇಷ ತಳೆದುಕೊಂಡು ಹಾಜರಾಗುತ್ತದೆ. ಜಾಯಿಂಟ್ ಎಂಬ ಹೆಸರಿನ ವಿಶೇಷ ಮಾದರಿಯ ಸಿಗರೇಟ್ ರೂಪದಲ್ಲಿಯೂ, ಕೈಕೊಳವೆಯುಳ್ಳ ಗುಡುಗುಡಿಯಂತಹ ಮಣ್ಣಿನ ಮಡಿಕೆಯ ಮೂಲಕವೂ, ಚಿಲುಮೆ, ಹುಕ್ಕ ಮತ್ತು ಸಾಮಾನ್ಯ ಪೈಪುಗಳಿಂದಲೂ ಇದರ ಹೊಗೆಯನ್ನು ಸೇವಿಸುತ್ತಾರೆ. ಚಹದಂತೆ ಚರಸ್ಸಿನ ಕಷಾಯವನ್ನು ಬಸಿದುಕೊಂಡು, ಬ್ರೆಡ್, ಕೇಕ್, ಚಪಾತಿ ಮೊದಲಾದ ಖಾದ್ಯಗಳಲ್ಲಿ ಬೆರೆಸುವುದೂ ಉಂಟು. ಕೆಲವರು ಚರಸ್‌ನ ದ್ರಾವಣವನ್ನು ರಕ್ತನಾಳದ ಮೂಲಕವೋ, ಮಾಂಸಖಂಡದ ಮೂಲಕವೋ ಚುಚ್ಚುಮದ್ದಿನಂತೆ ಉಪಯೋಗಿಸುವ ಚಟವನ್ನು ಬೆಳೆಸಿಕೊಂಡಿರು ತ್ತಾರೆ. ಇಂತಹವರು ಚರಸ್‌ವಿಷದ ದೀರ್ಘಕಾಲ ವಿಷಪ್ರಯೋಗಕ್ಕೆ ತುತ್ತಾಗಿರು ತ್ತಾರೆ.

ವಿಷಪ್ರಯೋಗದ ಲಕ್ಷಣ ಮತ್ತು ಚಿಕಿತ್ಸೆ :

ಚರಸ್ ಹೊಗೆಬತ್ತಿಯನ್ನು ಸೇದಿದೊಡನೆಯೇ ಅಮಿತಾನಂದ ಹಾಗೂ ಆತ್ಮವಿಶ್ವಾಸಗಳು ಉಂಟಾದಂತೆ ಪ್ರವರ್ತಿಸುವುದರಿಂದ ರೋಗಿಯು ತನ್ನನ್ನು ತಾನು ಮರೆತು, ಆಮೋದ–ಪ್ರಮೋದಗಳಲ್ಲಿ ತಲ್ಲೀನನಾಗುತ್ತಾನೆ. ಲೈಂಗಿಕ ವಿಷಯದಲ್ಲಂತೂ ಅವನು ಪರಮಾವಧಿ ಸುಖವನ್ನು ಅನುಭವಿಸುತ್ತಾನೆ. ಹಾಡು ವುದು, ಕುಣಿಯುವುದು, ಬರೆಯುವುದು, ಚಿತ್ರಬಿಡಿಸುವುದು ಮೊದಲಾದ ಅಂಶ ಗಳು ಹೆಚ್ಚು ಸ್ಫುಟವಾಗಿ ಕಾರ್ಯಗತವಾಗುವುವು. ಅದರ ಬದಲಿಗೆ ಜಗಳ, ಹೊಡೆದಾಟ, ಬಡಿದಾಟ ಕೂಡಾ ಸಂಭವಿಸಬಹುದು. ಚರಸ್ ಸೇವಿಸಿದ ರೋಗಿಯು ಕನಸುಕಾಣುತ್ತಿರುವವನಂತೆ ಇದ್ದು, ಒಮ್ಮೆ ಜೋರಾಗಿ ಒದರಾಡು ತ್ತಿದ್ದು ಮರುಕ್ಷಣದಲ್ಲಿ ಥಟ್ಟನೆ ಮೌನಪಂಡಿತನಾಗಿ ಬಿಡಬಹುದು. ಒಟ್ಟಿನಲ್ಲಿ ವಿಚಿತ್ರವಾದ, ಊಹೆಗೂ ನಿಲುಕದಂತಹ ನಡುವಳಿಕೆಯಿದ್ದು, ಕೊನೆಗೊಮ್ಮೆ ಗಾಢ ನಿದ್ರಾವಶನಾಗುವನು.

ಮತಿಭ್ರಮಣೆಗೂ ಚರಸ್ ಸೇವನೆಗೂ ನಿಕಟ ಸಂಬಂಧವಿದೆ. ಅಶಕ್ತ ದೇಹಿಗಳೂ, ದುರ್ಬಲ ಮನಸ್ಕರೂ ಖಂಡಿತವಾಗಿ ಬುದ್ಧಿ ವಿಕಲ್ಪಕ್ಕೆ ಒಳಗಾಗು



ತ್ತಾರೆ. ತಮ್ಮ ದೈಹಿಕ, ಮಾನಸಿಕ, ಬೌದ್ಧಿಕ ಕೀಳ್ಮೆಯನ್ನು ನಿವಾರಿಸುವುದಲ್ಲದೆ ತಮ್ಮನ್ನು ಪ್ರತಿಷ್ಠಿತರೂ, ಧೇಯೋದಾತ್ತ ಮಹತ್ವಾಕಾಂಕ್ಷಿ ಧೀಃಪುರುಷರನ್ನಾಗಿ ಸಮಾಜದಲ್ಲಿ ಮೇಲಂತಸ್ತಿಗೆ ಏರಿಸಲು ಚರಸ್ ನೆರವಾಗುತ್ತದೆಂಬ ಪ್ರಬಲ ನಂಬಿಕೆಯೇ ಈ ಮಾದಕದ್ರವ್ಯದ ಸೇವನೆಗೆ ಬಹು ಜನರು ಪ್ರೇರೇಪಿಸಲ್ಪಡಲು ಪ್ರಧಾನವಾದ ಕಾರಣವಾಗಿದೆ.

ಚರಸ್ ಸೇವನೆಯ ಪರಿಣಾಮವಾಗಿ ಅನತಿ ಕಾಲದೊಳಗೆ ರೋಗಿಯ ಕಣ್ಣು ಕೆಂಪಾಗುತ್ತದೆ; ನಾಲಗೆ ಒಣಗುತ್ತದೆ. ದೇಹದ ಉಷ್ಣಾಂಶವು ಇಳಿಮುಖವಾಗುವುದಲ್ಲದೆ ಮೂತ್ರವಿಸರ್ಜನೆ ಅಧಿಕಗೊಳ್ಳುತ್ತದೆ. ರಕ್ತದ ಒತ್ತಡ ಮತ್ತು ನಾಡಿಯ ಬಡಿತ ಹೆಚ್ಚಾಗುತ್ತವೆ. ಸುಮಾರು ನಾಲ್ಕೈದು ತಾಸುಗಳ ಕಾಲ ಈ ಸ್ಥಿತಿ ಇರುತ್ತದೆ. ಅನಂತರ ಹತಾಶ ಭಾವನೆ, ತೂಕಡಿಕೆ, ನಿದ್ರೆ, ಕೆಲಸ ಮಾಡಲು ಅಸಮರ್ಥತೆ ಮೊದಲಾದ ಉಪದ್ರವಗಳು ತಲೆದೋರಿ ಅವನು ಮತ್ತಷ್ಟು ಹೆಚ್ಚು ಮಾದಕ ದ್ರವ್ಯದ ಮರೆಹೋಗುವಂತೆ ಪ್ರೇರೇಪಿಸಲ್ಪಡುತ್ತಾನೆ. ಕ್ರಮೇಣ ಅವನ ಜೀವನದ ಸರ್ವಸ್ವವೂ ಈ ಮಾದಕದ್ರವ್ಯವನ್ನು ಸೇವಿಸುವುದೇ ಆಗಿ, ಅವನು ಚರಸ್‌ನ ದಾಸನಾಗಿ ತನ್ನ ಬಾಳುವೆಯನ್ನು ಸಂಪೂರ್ಣ ಹಾಳು ಮಾಡಿಕೊಳ್ಳುತ್ತಾನೆ.

ಚರಸ್ ಸೇವನೆಯ ಚಟಕ್ಕೆಬಿದ್ದ ರೋಗಿಯನ್ನು ಚರಸ್ ಸಂಪರ್ಕ ತಪ್ಪಿಸಿ ತಜ್ಞ ವೈದ್ಯರ ನೇತೃತ್ವದಲ್ಲಿ ಚಿಕಿತ್ಸೆ ನಡೆಸಿನರೆ ಪುನಃ ನಾಗರಿಕ ಜೀವನವನ್ನು ನಡೆಸುವುದು ಸಾಧ್ಯ.

ಕೊಕೇನ್

ಪರಿಚಯ :

ನಮ್ಮ ನಾಡಿನ ಚಹ ತೋಟಗಳ ನಡುವೆ ನೆಟ್ಟುಬೆಳೆಸುವ ಕೋಕಾ ಗಿಡದ ಫಲದಿಂದ ಮಧುರವಾದ ಕೋ ಕೋ ಪೇಯವನ್ನು ತಯಾರಿಸುತ್ತಾರೆ. ಕೋಕಾ ಗಿಡದ ಸತ್ವವೇ ಮಾದಕಗುಣವುಳ್ಳ ಕೊಕೇನ್. ಇದು ಕಹಿ ರುಚಿಯಿಂದ ಕೂಡಿರುತ್ತದೆ. ಕೊಕೇನನ್ನು ರಾಸಾಯನಿಕವಾಗಿ (ಕೃತಕವಾಗಿ) ತಯಾರಿಸಲು ಸಾಧ್ಯವಿದೆ. ಕೊಕೇನ್ ಸ್ಪರ್ಶದಿಂದ ಅಂಗಾಂಗಗಳಲ್ಲಿ ತಾತ್ಕಾಲಿಕ ಸಂಜ್ಞಾಹೀನತೆಯು ಉಂಟಾಗುತ್ತದೆ. ದಂತವೈದ್ಯರ ಹಾಗೂ ನೇತ್ರವೈದ್ಯರ ಕೈಗಳಲ್ಲಿ ಕೋಕೆನ್ ಕಾಮಧೇನುವಿನಂತೆ ಕೆಲಸಮಾಡುತ್ತದೆ. ಸಿಂಪರಣೆ ಹಾಗೂ ಸೂಜಿಮದ್ದಿನ ಮೂಲಕ ಸ್ಥಾನಿಕವೇದನೆಯ ಪರಿಹಾರಕ್ಕಾಗಿ ಕೊಕೇನನ್ನು ಬಳಸುತ್ತಾರೆ. ಕೊಕೇನ್ ಸತ್ವದ ಮುಲಾಮು ಸಹ ದೊರಕುತ್ತದೆ. ಕೊಕೇನನ್ನು ನಿತ್ಯ ಸೇವಿಸುವ ಅಭ್ಯಾಸವುಳ್ಳವರು ಅಥವಾ ನಿತ್ಯ ಸೂಜಿಮದ್ದು ಪಡೆಯುವವರು ಇದರ ಚಟಕ್ಕೆ ಬಲಿಯಾಗುತ್ತಾರೆ.

ಕೊಕೇನ್ ಕಾಮೋತ್ತೇಜಕ ದ್ರವ್ಯವೆಂಬ ಭ್ರಮೆಯಿಂದ ತಾಂಬೂಲ ದೊಂದಿಗೆ ಬೆರೆಸಿ ಕೆಲವರು ಮುಕ್ಕುತ್ತಾರೆ. ವೇಶ್ಯೆಯರು ತಮ್ಮ ಜನನೇಂದ್ರಿಯ ಗಳಿಗೆ ಕೊಕೇನ್ ಮುಲಾಮನ್ನು ಬಳಿದುಕೊಂಡು ಯೋನಿಯ ಕೃತಕ ಬಿರುಸುತನ ವನ್ನು ನಿರ್ಮಿಸಿ ವಿಟ ಪುರುಷರಿಗೆ ಭ್ರಾಮಕ ಸುಖವನ್ನು ತೋರಿಸುವುದುಂಟು. ಶೀಘ್ರಸ್ಖಲನದ ಭಯವುಳ್ಳ ಪುರುಷರು ತಮ್ಮ ಶಿಶ್ನಕ್ಕೆ ಕೊಕೇನ್ ಮುಲಾಮನ್ನು ಸಂಭೋಗ ಪೂರ್ವದಲ್ಲಿ ಸವರುವುದುಂಟು. ಈ ಬಗೆಯಾಗಿ ಬಳಸಲ್ಪಟ್ಟಾಗ ಕೊಕೇನ್ ಸ್ಪರ್ಶ ವಿಷವು ದೇಹಾಪಾಯವುಂಟಾಗುವ ಸಂಭವವಿರುತ್ತದೆ.

ಪ್ರಾಣಾಪಾಯದ ಪ್ರಮಾಣ (ಸೇವನೆ) : 1 ಗ್ರಾಂ ಸೂಜಿ ಮದ್ದು ರೂಪದಲ್ಲಿ 60 ಮಿಲಿ ಗ್ರಾಂ.

(ಕೋಕೇನ್ ಚಟಕ್ಕೆ ಬಲಿಯಾದವರು ತುಸು ಅಧಿಕ ಪ್ರಮಾಣದ ಔಷಧಿ ಯನ್ನು ತಡೆದು ಕೊಳ್ಳಬಲ್ಲರು.)

ದೀರ್ಘಕಾಲದ ವಿಷಪ್ರಯೋಗದ ಲಕ್ಷಣ ಮತ್ತು ಚಿಕಿತ್ಸೆ :

ಕೊಕೇನ್ ಚಟಕ್ಕೆ ಬಲಿಯಾದ ರೋಗಿಯ ದೇಹವು ಕ್ರಮೇಣ ಸೊರಗುತ್ತದೆ; ಮುಖವು ಕಳೆಗುಂದುತ್ತದೆ; ಕಣ್ಣು ಗುಳಿಬೀಳುತ್ತವೆ. ಹಾಗೂ ಕಣ್ಣು ಬೊಂಬೆಗಳು ಅರಳುತ್ತವೆ. ಆ ರೋಗಿಯಲ್ಲಿ ದೃಷ್ಟಿದೋಷವೂ ಸಹ ಉಂಟಾಗಬಹದು. ಹಸಿವು ಬಾಯಿ ರುಚಿ ಮತ್ತು ನಿದ್ರೆ ಹೇಳ ಹೆಸರಿಲ್ಲದಂತಾಗುತ್ತದೆ. ಅವನಲ್ಲಿ ಕಾಮಾಸಕ್ತಿಯು ಬಹುಪಾಲು ನಿರ್ನಾಮವಾಗಿರುತ್ತದೆ; ಜ್ಞಾಪಕ ಶಕ್ತಿಯು ಕುಂದಿ, ದೈಹಿಕ ಹಾಗೂ ಮಾನಸಿಕ ದೌರ್ಬಲ್ಯ ತಲೆದೋರುವುದು; ಮತ್ತು ವಿಚಿತ್ರ ಮನೋಭ್ರಮೆ ಹಾಗೂ ಹಿಂಸಾ ಪ್ರವೃತ್ತಿ ಉಂಟಾಗುವುದು. ಅವನ ನಾಡಿಯು ಜೋರಾಗಿ ಬಡಿದುಕೊಳ್ಳುವುದು. ಒಮ್ಮೊಮ್ಮೆ ಮೈ ಕೈ ನಡುಕ ಕೂಡಾ ಉಂಟಾಗ ಬಹುದು. ರೋಗಿಯು ತೀರಾ ಅಸಹಾಯಕನಂತೆ ಕಾಣಿಸುತ್ತಾನೆ.

ಕೊಕೇನ್ ದೀರ್ಘಕಾಲ ವಿಷಕ್ಕೆ ಬಲಿಯಾದ ರೋಗಿಯನ್ನು ಕೊಕೇನ್ ಸಂಪರ್ಕ ಹಾಗೂ ಸೇವನೆಯಿಂದ ದೂರ ಮಾಡಿ ತಜ್ಞವೈದ್ಯರ ಮೇಲ್ವಿಚಾರಣೆಯಲ್ಲಿ ಸರಿಯಾದ ಚಿಕ್ಸಿತೆ ನಡೆಸಿದರೆ ರೋಗಿಯು ಆರೋಗ್ಯವಂತನಾಗುವನು.

ವಿಷಪ್ರಾಶನದ ಲಕ್ಷಣಗಳು :

ಕೊಕೇನ್ ಸೂಜಿಮದ್ದು ಅಥವಾ ಸೇವನೆ ಮಾಡಿದ ರೋಗಿಗೆ ಮೊದಮೊದಲು ಸುಖ ಸಂತೋಷದಲ್ಲಿ ಓಲಾಡುವ ಮಧುರ ಭಾವನೆಯುಂಟಾಗುವುದಲ್ಲದೇ ಮನೋ

ಲ್ಲಾಸ, ವಾಚಾಳತ್ವ, ಚುರುಕು ಚಟುವಟಿಕೆ ಜತೆಗೆ ಗಲಿಬಿಲಿಯೂ ಉಂಟಾಗುತ್ತವೆ. ಆ ನಂತರ ಇದ್ದಕ್ಕಿದ್ದ ಹಾಗೆಯೇ ಮೈ ನಡುಕ ಜ್ವರ ಪ್ರಾರಂಭವಾಗುತ್ತದೆ. ಬಾಯಿ ಮತ್ತು ಗಂಟಲು ಒಣಗತೊಡಗಿ ಏನಾದರೂ ನುಂಗಲು ಕಷ್ಟವಾಗುತ್ತದೆ. ನೀರಡಿಕೆ, ವಾಕರಿಕೆ, ತಲೆ ತಿರುಗುವುದು, ತಲೆನೋವು, ಕಣ್ಣು ಕತ್ತಲು ಬರುವುದು, ಹೊಟ್ಟೆನುಲಿತ, ಕಣ್ಣುಬೊಂಬೆ ಅರಳುವುದು. ಮಂದ-ವಕ್ರನಾಡಿ, ಉಸಿರಾಟಕ್ಕೆ ಪರದಾಟ, ಹಣೆಯಿಂದ ಧಾರಾಕಾರವಾದ • ಬೆವರು, ಒಡಬಡಿಸುವುದು, ಹುಚ್ಚು ಭ್ರಮೆ. ಅದಿರುವಾಯು, ದೀರ್ಘ ಸುಪ್ತಿ ಮೊದಲಾದ ಉಪದ್ರವಗಳು ಉಂಟಾಗುವವಲ್ಲದೇ ಸಾವು ಕೂಡಾ ಸಂಭವಿಸಬಹುದು.

ಚಿಕಿತ್ಸೆ ಮತ್ತು ಉಪಚಾರ :

ಕೊಕೇನ್ ವಿಷ ಸೇವಿಸಿದ ರೋಗಿಯನ್ನು ಪೊಟಾಶಿಯಂ ಪರಮಾಂಗನೇಟ್ ದ್ರಾವಕದಿಂದ ಹೊಟ್ಟೆ ತೊಳೆಯುವುದು, ಸರ್ಪವಿಷಾನ್ಯ ಪ್ರತ್ಯೌಷಧ ಕುಡಿಸುವುದು ಮೊದಲಾದ ವಿಧಾನಗಳಿಂದ ಚಿಕಿತ್ಸೆ ಮಾಡಬೇಕು. ಆಮ್ಲಜನಕ ನೀಡಿಕೆಯೂ 'ಎಮೈಲಿ ನೈಟ್ರೇಟ್' ಮೂಸುವುದೂ ಹೆಚ್ಚಿನ ಪ್ರಯೋಜನವನ್ನು ನೀಡುತ್ತದೆ. ರೋಗಿಗೆ ಹಾಲನ್ನು ಕುಡಿಯಲು ನೀಡಬೇಕು. ವಿಷ ಸ್ಪರ್ಶವಾದ ಭಾಗವನ್ನು ಉಪ್ಪು ನೀರಿನಿಂದ ತೊಳೆಯಬೇಕು.

ಕ್ಲೋರೋ ಫಾರಂ

ಪರಿಚಯ :

ಶಸ್ತ್ರಕ್ರಿಯೆ ಮಾಡುವ ಮುನ್ನ ರೋಗಿಗಳಿಗೆ ಪ್ರಜ್ಞೆ ತಪ್ಪಿಸಲು ಪ್ರಯೋಗಿಸುವ ಔಷಧಿಗಳಿಗೆ **ಅರಿವಿಳಿಕೆಯ ದ್ರವ್ಯ**ಗಳೆಂದು ಹೆಸರು. ಈಥರ್, ಕ್ಲೋರೋಫಾರಂ, ನೈಟ್ರಸ್ ಆಕ್ಸೈಡ್ ಮೊದಲಾದವುಗಳನ್ನು ಮೂಸಿ ಎಚ್ಚರ ತಪ್ಪಿಸುವುದು ಬಳಕೆಯಲ್ಲಿರುವ ಅರಿವಿಳಿಕೆಯ ಒಂದು ವಿಧಾನವಾಗಿದೆ. ಅರಿವಿಳಿಕೆಯ ಔಷಧವನ್ನು ರೋಗಿಯ ಮೇಲೆ ಪ್ರಯೋಗಿಸಲು ತಜ್ಞವೈದ್ಯನ ಸಹಾಯಬೇಕು. ಕ್ರಮ ತಪ್ಪಿ, ಅಳತೆ ತಪ್ಪಿ, ಕಾಲ ತಪ್ಪಿ ಅಥವಾ ನಿಯಮಿತ ಸಾಂದ್ರತೆ ತಪ್ಪಿ, ಅರಿವಿಳಿಕೆಯ ದ್ರವ್ಯಗಳನ್ನು ಬಳಸಿದರೆ ರೋಗಿಗೆ ಪ್ರಾಣಾಪಾಯ ಸಂಭವಿಸಬಹುದು. ಉಪಾಯದಿಂದ ಕ್ಲೋರೋಫಾರಂ ಮೂಸಿ, ಪ್ರಜ್ಞೆತಪ್ಪಿಸಿ ಹಣ ಆಭರಣಾದಿಗಳನ್ನು ದೋಚಲಿಕ್ಕೂ, ಸ್ತ್ರೀಯರ ಮಾನಭಂಗ ಮಾಡಲಿಕ್ಕೂ ದುಷ್ಟರು ಪ್ರಯತ್ನಿಸುವ ಪ್ರಸಂಗಗಳು ಅಪರೂಪವೇನಲ್ಲ. ನಿದ್ರೆಯಲ್ಲಿರುವ ಮಕ್ಕಳಿಗೆ ಅರಿವಿಳಿಕೆಯ ದ್ರವ್ಯಗಳನ್ನು ಸರಳವಾಗಿ ನೀಡಬಹುದಾದರೂ ಇತರರಿಗೆ ಬಲಾತ್ಕಾರದಿಂದಲ್ಲದೆ ಅಷ್ಟು ಸುಲಭವಾಗಿ ಪ್ರಯೋಗಿಸುವುದು ಸಾಧ್ಯವಿಲ್ಲ.

ಅರಿವಿಳಿಕೆಗೆ ಬಳಸುವ ಕ್ಲೋರೋಫಾರಂ ಮಧುರ ವಾಸನೆ, ವಿಶಿಷ್ಟ ಗಾಜು ಮತ್ತು ನುಸು ಹುಳ್ಳಗಿನ ರುಚಿ ಇರುವ, ತುಸು ಭಾರವಾದ ಬಣ್ಣವಿಲ್ಲದ ದ್ರವ. ಬೆಳಕಿನಲ್ಲಿ ಬಹು ಹೊತ್ತು ಇರಿಸಿದರೆ (ಬಾಟಲಿಯಲ್ಲಿ ಇರಿಸಿದರೂ ಕೂಡಾ) ಕ್ರಮೇಣ ಗುಣ, ವರ್ಣ ಭೇದವುಂಟಾಗುತ್ತದೆ; ಮಾತ್ರವಲ್ಲದೆ ತೀಕ್ಷ್ಣ ವಿಷರೂಪಕ್ಕೆ ತಿರುಗುತ್ತದೆ. ಈ ಅರಿವಿಳಿಕೆಯ ದ್ರವ್ಯದ ದುರುಪಯೋಗದಿಂದ ಪ್ರತಿವರ್ಷ ಕನಿಷ್ಠ 100 ಮರಣಗಳು ಸಂಭವಿಸುತ್ತವೆ.

ಪ್ರಾಣಾಪಾಯದ ಪ್ರಮಾಣ (ಸೇವನೆ) : 10 ಮಿಲಿ ಲೀಟರ್.

ವಿಷ ಪ್ರಯೋಗದ ಲಕ್ಷಣಗಳು (ಆಘ್ರಾಣ) :

ಕ್ಲೋರೋಫಾರಂ ಆಘ್ರಾಣಿಸಿದ ರೋಗಿಯಲ್ಲಿ ಮೊದಲು ಉದ್ರೇಕ ಸ್ಥಿತಿ ಉಂಟಾಗುತ್ತದೆ. ಅವನ ಗಂಟಲು, ಮೂಗು ಮತ್ತು ಕಣ್ಣು ತುಸು ಉರಿಯಲು ತೊಡಗುವುದಲ್ಲದೆ ಮೋರೆ ಕೆಂಪಗಾಗುತ್ತದೆ; ಮೈ ಕೈಗಳು ಸ್ವಲ್ಪ ಬೆಚ್ಚಗಾಗುತ್ತವೆ. ಅವನ ಚರ್ಮದಲ್ಲಿ ಇರುವೆ ಹರಿದಂತೆ ಮುಜುಗರವಾಗುತ್ತದೆ. ಕಿವಿ ಕಣ್ಣುಗಳು ಸರಿಯಾಗಿ ಕೆಲಸ ಮಾಡುತ್ತಿದ್ದರೂ ಸ್ಪರ್ಶ–ಆಘ್ರಾಣ ಶಕ್ತಿಗಳು ಕುಂದುತ್ತವೆ. ಮನಸ್ಸಿನಲ್ಲಿ ಗಲಿಬಿಲಿ ಉಂಟಾಗುವುದಲ್ಲದೇ ಬಡಬಡಿಸುವುದು, ಹಾಡುವುದು, ಕೆಲವೊಮ್ಮೆ ದುರ್ಭಾಷೆಯಿಂದ ಬೈಯ್ಯುವುದು, ಅಳುವುದು, ನಗುವುದು ಮುಂತಾಗಿ ಪರಸ್ಪರ ಹೊಂದಿಕೆ ಇಲ್ಲದ ಅಸ್ತವ್ಯಸ್ತ ಚಟುವಟಿಕೆಗಳು ಉಂಟಾಗುತ್ತವೆ. ಕೆಲವೊಮ್ಮೆ ರೋಗಿಯು ಎದ್ದು ಓಡಿ ಹೋಗುವ ಪ್ರಯತ್ನವನ್ನೂ ಸಹ ನಡೆಸಬಹುದು. ಅವನ ಕಣ್ಣು ಬೊಂಬೆ ಮೊದಲು ಅರಳಿದ್ದು, ಕ್ರಮೇಣ ಕಿರಿದಾಗುತ್ತದೆ. ನಾಡಿಯೂ ಉಸಿರಾಟವೂ ತ್ವರಿತವಾಗುವವು. ಸುಮಾರು ನಾಲ್ಕು ನಿಮಿಷಗಳ ಕಾಲ ಈ ಸ್ಥಿತಿ ಇರುತ್ತದೆ.

ಅನಂತರ ರೋಗಿಯು ಸಂಪೂರ್ಣ ಪ್ರಜ್ಞಾಹೀನ ಸ್ಥಿತಿಗೆ ತಲುಪುತ್ತಾನೆ. ಅವನ ಕಣ್ಣು ಮತ್ತಿತರ ಅಂಗಾಂಗಗಳ ಪ್ರತಿಕ್ರಿಯೆಯು ಸಂಪೂರ್ಣಲೋಪವಾಗುತ್ತವೆ. ಉಸಿರಾಟವೂ ನಾಡಿಯ ಗತಿಯೂ ತೀರಾ ದುರ್ಬಲವಾಗುತ್ತವೆ. ಈಗ ಕಣ್ಣುಬೊಂಬೆಯು ಅತ್ಯಂತ ಕಿರಿದಾಗುತ್ತದೆ. ಮೈಯ ಶಾಖವು ಇಳಿದಿರುವುದಲ್ಲದೆ ಚರ್ಮವು ತಣ್ಣಗೆ ಒದ್ದೆ ಮುದ್ದೆಯಾಗಿರುತ್ತದೆ. (ಈ ಸ್ಥಿತಿಯಲ್ಲಿ ರೋಗಿಯ ಅಂಗಾಗಗಳು ಸಂಪೂರ್ಣ ಸಡಿಲವಾಗಿದ್ದು ಶಸ್ತ್ರಕ್ರಿಯೆ ನಡೆಸುವುದಕ್ಕೆ ಅರ್ಹವಾಗಿರುತ್ತವೆ).

ವಿಷ ಪ್ರಮಾಣದಲ್ಲಿ ಕ್ಲೋರೋಫಾರಂ ಸೇವಿಸಿದ ರೋಗಿ ಮುಂದಿನ ಹಂತಕ್ಕೆ ನಿಸ್ಸಂಜ್ಞಾಸ್ಥಿತಿಗೆ ತಲುಪಿ, ಪ್ರಾಣಾಪಾಯಕ್ಕೆ ತುತ್ತಾಗುವನು.

ವಿಷ ಪ್ರಯೋಗದ (ಪ್ರಾಣಾಪಾಯ ಸ್ಥಿತಿಯ) ಲಕ್ಷಣಗಳು :

ನಿಸ್ಸಂಜ್ಞಾಸ್ಥಿತಿಯನ್ನು ತಲುಪಿದ ರೋಗಿಯಲ್ಲಿ ಮಾಂಸ ಖಂಡಗಳು ಸಂಪೂರ್ಣ ಚೈತನ್ಯ ಶೂನ್ಯವಾಗಿರುತ್ತವೆ; ಕೆಲವೊಮ್ಮೆ ಪಕ್ಷಾಘಾತವುಂಟಾಗುತ್ತದೆ. ಅಂತಹ ರೋಗಿಯಲ್ಲಿ ಅನೈಚ್ಛಿಕವಾಗಿ ಮಲ ಮೂತ್ರ ವಿಸರ್ಜನೆಯಾಗಬಹುದು. ಅವನ ತುಟಿ ಮತ್ತು ಮೋರೆ ನೀಲಿವರ್ಣಕ್ಕೆ ತಿರುಗುತ್ತದೆ. ಮೈಯಿಂದ ಅತಿಶಯ ಬೆವರು ಸುರಿಯುವುದಲ್ಲದೆ ಇಡಿಯ ದೇಹವು ನೀಲಿ ಛಾಯೆಯಿಂದ ಆವರಿಸಲ್ಪಡು ವುದು. ಈ ಸ್ಥಿತಿಯಲ್ಲಿ ಅವನ ಕಣ್ಣುಬೊಂಬೆ ದೊಡ್ಡದಾಗಿ ಅರಳುತ್ತದೆ. ಉಸಿರಾಟವು ಅತ್ಯಂತ ಮಂದಗತಿಗೆ ಮುಟ್ಟುವದಲ್ಲದೆ ನಾಡಿಯು ಮೃದುವಾಗಿ, ವಕ್ರವಾಗಿ ಇರುತ್ತದೆ. ಮುಂದೆ ರೋಗಿಯು ಸಾವನ್ನು ಅಪ್ಪಬಹುದು.

ಕ್ಲೋರೋಫಾರಂ ಆಘ್ರಾಣಿಸಿ ಸುಸ್ಥಿತಿಗೆ ಬಂದು 6–8 ತಾಸುಗಳು ಕಳೆದ ಮೇಲೆ ಕೂಡಾ ಒಮ್ಮೊಮ್ಮೆ ಅನಿರೀಕ್ಷಿತವಾಗಿ ದುಷ್ಪರಿಣಾಮ ವುಂಟಾಗುವುದುಂಟು. ಅಂತಹ ರೋಗಿಯಲ್ಲಿ ಗಲಿಬಿಲಿ, ವಾಂತಿ, ತೀವ್ರನಾಡಿ, ಮೂತ್ರವಿಕಾರ, ಬಡಬಡಿಸು ವುದು, ಕಾಮಿಲಾ ರೋಗದ ಲಕ್ಷಣಗಳು ಮತ್ತು ದೀರ್ಘ ಸುಪ್ತಿಯುಂಟಾಗಿ ಮರಣ ಸಂಭವಿಸಬಹುದು.

ಚಿಕಿತ್ಸೆ ಮತ್ತು ಉಪಚಾರ :

ಅರಿವಳಿಕೆಗಾಗಿ ಕ್ಲೋರೋಫಾರಂ ನೀಡುತ್ತಿದ್ದಾಗ ಅಪಾಯ ಸೂಚಕ ಲಕ್ಷಣಗಳು ಕಾಣಿಸಿಕೊಳ್ಳತೊಡಗಿದರೆ ತಕ್ಷಣ ಪ್ರಯೋಗಿಸುವವನ್ನು ನಿಲ್ಲಿಸಿಬಿಡ ಬೇಕು. ರೋಗಿಯ ತಲೆಯನ್ನು ತುಸು ಕೆಳಮಟ್ಟಕ್ಕೆ ತಗ್ಗಿಸಿ ಅವನ ನಾಲಗೆಯನ್ನು ಹೊರಗೆಳೆದು, ಗಂಟಲು ಶ್ವಾಸನಾಳದಲ್ಲಿ ಉಸಿರಾಟಕ್ಕೆ ತಡೆಯಾಗಿ ನಿಂತಿರಬಹುದಾದ ಬುರುಗು ಶ್ಲೇಷ್ಮವನ್ನು ಸ್ವಚ್ಛಮಾಡಿ ಶ್ವಾಸಮಾರ್ಗವನ್ನು ಸುಗಮ ಗೊಳಿಸಬೇಕು. ಕೃತಕ ಉಸಿರಾಟ, ಆಮ್ಲಜನಕ ನೀಡಿಕೆ, ಹೃದಯ ಮರ್ದನ ಮೊದಲಾದ ಚಿಕಿತ್ಸೆ ಗಳನ್ನು ವಿಳಂಬವಿಲ್ಲದೆ ನಡೆಸಬೇಕು. ಎಫಿನೆಫ್ರಿನ್ ಸೂಜಿಮದ್ದನ್ನು ಹೃದಯಕ್ಕೆ ನೇರವಾಗಿ ಕೊಡಬೇಕು. ಡೆಕಡ್ರಾನ್, ಕೊರಾಮಿನ್ ಮೊದಲಾದ ಉತ್ತೇಜಕ ಸೂಜಿ ಮದ್ದು, ಉಪ್ಪುನೀರು, ಗ್ಲೂಕೋಸ್ ರಕ್ತನಾಳದ ಮೂಲಕ ನೀಡಬೇಕು. ಮತ್ತು ಕ್ಯಾಲ್ಸಿಯಂ ಗ್ಲೂಕೋನೇಟ್ ಸೂಜಿಮದ್ದುಗಳು ಉಪಯುಕ್ತವಾಗಿದೆ.

ವಿಷಪ್ರಯೋಗದ ಲಕ್ಷಣಗಳು (ಸೇವನೆ) ಮತ್ತು ಚಿಕಿತ್ಸೆ :

ಆಕಸ್ಮಿಕವಾಗಿ ಕ್ಲೋರೋಫಾರಂ ಕುಡಿದರೆ ರೋಗಿಯ ಗಂಟಲು, ಬಾಯಿ ಮತ್ತು ಹೊಟ್ಟೆಯಲ್ಲಿ ಉರಿವೇದನೆಗಳು ಕಾಣಿಸಿಕೊಳ್ಳುತ್ತವೆ; ಮತ್ತು ವಾಂತಿ

ಭೇದಿಗಳಾಗುತ್ತವೆ (ಹಾಗೆ ಕಾರಿಕೊಂಡ ವಸ್ತುವಿನಲ್ಲಿಯೂ ಮಲದಲ್ಲಿಯೂ ಕ್ಲೋರೋಫಾರಂ ವಾಸನೆ ಬೆರೆತಿರುತ್ತದೆ). ಹತ್ತು ನಿಮಿಷಗಳೊಳಗಾಗಿ ರೋಗಿಯು ಸ್ಮೃತಿ ತಪ್ಪಿ ದೀರ್ಘ ಸುಪ್ತಿಗೊಳಗಾಗುತ್ತಾನೆ. ಅವನ ಮೋರೆಯ ಮೇಲೆ ನೀಲಿ ಛಾಯೆ ಕಾಣಿಸುತ್ತದೆ. ಅಸ್ತವ್ಯಸ್ತವಾಗಿ ಮಿಡಿಯುವ ನಾಡಿಯು ದುರ್ಬಲ ವಾಗಿರುತ್ತದೆ; ಮತ್ತು ಉಸಿರಾಟವು ಅಶಕ್ತವಾಗಿಯೂ ಮಂದವಾಗಿಯೂ ಇರುತ್ತದೆ. ಈ ಸ್ಥಿತಿಯಲ್ಲಿ ತಕ್ಷಣ ಸಾವು ಸಂಭವಿಸಬಹುದು. ಕೆಲವರು ನಾಲ್ಕಾರು ತಾಸುಗಳ ಅಂತರದಲ್ಲಿ ಪ್ರಾಣಾಪಾಯಕ್ಕೆ ತುತ್ತಾಗಬಹುದು,

ಕ್ಲೋರೋಫಾರಂ ಕುಡಿದು ವಿಷಪ್ರಯೋಗಕ್ಕೆ ತುತ್ತಾದ ರೋಗಿಯನ್ನು ಬಿಸಿನೀರು ಬೆರೆಸಿದ ಹಾಲಿನಿಂದ ಹೊಟ್ಟೆ ತೊಳೆಯುವುದು, ತತ್ತಿಯ ಲೋಳೆ ಕುಡಿಸುವುದು ಮೊದಲಾದ ಸಾಂಪ್ರದಾಯಿಕ ವಿಧಾನಗಳಿಂದ ಚಿಕಿತ್ಸೆ ಮಾಡಬೇಕು. ಎಡ್ರಿನಾಲಿನ್ ಸೂಜಿ ಮದ್ದು, ಎಟ್ರೋಪಿನ್, ಕೆಫೀನ್ ಅಥವಾ ಡಿಜಿಟಾಲಿಸ್ ಔಷಧಿಗಳು ಮತ್ತು ಬ್ರಾಂಡಿ ಸೇವನೆ ಉಪಯುಕ್ತವಾಗಿವೆ. ರಕ್ತನಾಳದ ಮೂಲಕ ಕ್ಯಾಲ್ಸಿಯಂ ಗ್ಲೂಕೋನೇಟ್, ಗ್ಲೂಕೋಸ್ ಮತ್ತು ಉಪ್ಪುನೀರು ನೀಡಿಕೆಗಳ ಉಪಯುಕ್ತವಾಗಿವೆ. ರೋಗಿಯ ಮೈ ಶಾಖವನ್ನು ಸಂರಕ್ಷಿಸಲು ಬಿಸಿ ನೀರು ತುಂಬಿದ ಸೀಸೆಗಳನ್ನು ಪಕ್ಕದಲ್ಲಿರಿಸಿ ಕಂಬಳಿ ಹೊದಿಸುವುದು, ರೋಗಿಯ ಮೈಗೆ ಸಾಸಿವೆ ಕಾಳನ್ನು ಅರೆದು ಪಟ್ಟಿ ಹಾಕುವುದು ಮೊದಲಾದ ವಿಧಾನಗಳು ಉಪ ಯುಕ್ತವಾಗಿವೆ. ಅಗತ್ಯ ಬಿದ್ದರೆ ಕೃತಕ ಉಸಿರಾಟ ಆಮ್ಲಜನಕ ನೀಡಿಕೆಗಳನ್ನೂ ಒದಗಿಸಬೇಕು.

ಈಥರ್

ಪರಿಚಯ :

ಶುದ್ಧ ಮಧ್ಯದೊಂದಿಗೆ ಗಂಧಕಾಮ್ಲವನ್ನು ಬೆರೆಸಿ ಸಿದ್ಧಗೊಳಿಸುತ್ತಾರೆ. ಅನೇಕ ಕೈಗಾರಿಕೆಗಳಲ್ಲಿಯೂ ಶಸ್ತ್ರ ಕ್ರಿಯೆಯ ಅರಿವಳಿಕೆಗಾಗಿಯೂ ಈಥರನ್ನು ಉಪ ಯೋಗಿಸುತ್ತಾರೆ. ಮದ್ಯಪಾನದ ಚಟವುಳ್ಳವರು ಹೆಚ್ಚಿನ ಅಮಲೇರಿಸುವುದಕ್ಕಾಗಿ ಈಥರನ್ನು ಮದ್ಯದೊಂದಿಗೆ ಬೆರೆಸಿ ಕುಡಿಯುವುದುಂಟು. ಈಥರ್ ಬಣ್ಣವಿಲ್ಲದ ದ್ರವವಾಗಿದ್ದು, ಮಧುರವಾದ ಒಗರು ರುಚಿಯೂ, ಮೂಗಿಗೆ ಬಡಿಯುವ ಗಾಟು ವಾಸನೆಯೂ ಉಳ್ಳದ್ರವ.

ಪ್ರಾಣಾಪಾಯದ ಪ್ರಮಾಣ (ಸೇವನೆ :) 30 ಮಿಲಿ ಲೀಟರ್,

ವಿಷಪ್ರಯೋಗದ ಲಕ್ಷಣಗಳು (ಸೇವನೆ) :

ಈಥರನ್ನು ಕುಡಿದ ರೋಗಿಯ ಗಂಟಲು, ಬಾಯಿ ಉರಿಯುತ್ತದೆ; ಮತ್ತು ವಾಂತಿ ಪ್ರಾರಂಭಿಸುತ್ತದೆ. ಅವನ ಕಣ್ಣುಬೊಂಬೆ ಅರಳುತ್ತದೆ. ಮೂತ್ರ

ವಿಕಾರವು ಕಾಣಿಸಿಕೊಳ್ಳುತ್ತದೆ. ದೀರ್ಘಕಾಲ ವಿಷಪ್ರಾಶನಕ್ಕೆ ತುತ್ತಾದ ರೋಗಿಯಲ್ಲಿ ಅನೇಕ ಬಗೆಯ ಉದರವ್ಯಾಧಿಗಳು ಉಂಟಾಗುವುದಲ್ಲದೆ ಕೈಕಾಲು ಕಂಪನ, ಚಳಕು, ತಲೆತಿರುಗುವುದು, ಕಿವಿ ಗಡಚಿಕ್ಕುವುದು, ದೇಹ ದೌರ್ಬಲ್ಯ ಮೊದಲಾದ ಉಪದ್ರವಗಳು ಸಹ ಕಾಣಿಸಿಕೊಳ್ಳುತ್ತವೆ. ಅವನ ಹೃದಯದ ಬಡಿತವು ಮಿತಿ ಮೀರಿ ಹೆಚ್ಚುತ್ತದೆ.

ಈಥರನ್ನು ವಿಷ ಪ್ರಮಾಣದಲ್ಲಿ ಅಘ್ರಾಣಿಸಿದ ರೋಗಿಯಲ್ಲಿ ಮೊದಲು ಉದ್ರೇಕವೂ ಅನಂತರ ಅರಿವಿಳಿಕೆಯೂ ಉಂಟಾಗುತ್ತದೆ. ಅವನ ಗಂಟಲು, ಮೂಗು, ಮತ್ತು ಕಣ್ಣು, ಉರಿಯ ತೊಡಗುವುವು. ಮೈ ಕೈ ಬೆಚ್ಚಗಾಗುವುದು, ಮೋರೆ ಕೆಂಪಡರುವುದು, ಮೈಮೇಲೆ ಇರುವೆ ಹರಿದಂತಾಗುವುದು, ಗಲಿಬಿಲಿ ಮೊದಲಾದ ಉಪದ್ರವಗಳಿಂದ ರೋಗಿಯು ನರಳುತ್ತಾನೆ. ಕ್ರಮೇಣ ಉಸಿರಾಟವೂ ನಾಡಿಯೂ ಮಂದವಾಗುತ್ತವೆ. ಮುಂದೆ ಪ್ರಜ್ಞಾಹೀನ ಸ್ಥಿತಿಯಲ್ಲಿ ಉಸಿರಾಟವು ತೀರ ಮೃದುವಾಗುತ್ತದೆ; ಹಾಗೂ ನಾಡಿಯು ಅತ್ಯಂತ ದುರ್ಬಲವಾಗುತ್ತದೆ. ಇದೇ ಸ್ಥಿತಿಯು ಮುಂದುವರಿದು, ರೋಗಿಯು ಸಾವಿಗೆ ತುತ್ತಾಗಬಹುದು.

ಚಿಕಿತ್ಸೆ ಮತ್ತು ಉಪಚಾರ :

ವಿಷಪ್ರಯೋಗಕ್ಕೆ ತುತ್ತಾದ ರೋಗಿಯನ್ನು ತಕ್ಷಣ ವಿಷ ಸಂಪರ್ಕದಿಂದ ತಪ್ಪಿಸಬೇಕು. ಅವನ ತಲೆಯನ್ನು ತಗ್ಗಿಸಿ ಶ್ವಾಸ ಮಾರ್ಗದಲ್ಲಿರಬಹುದಾದ ತಡೆಗಳನ್ನೆಲ್ಲ ಸ್ವಚ್ಛಗೊಳಿಸಿ, ಉಸಿರಾಟದ ದಾರಿಯನ್ನು ಸುಗಮಗೊಳಿಸಬೇಕು. ಬಿಸಿ ನೀರು ಬೆರಸಿದ ಹಾಲಿನಿಂದ ಹೊಟ್ಟೆ ತೊಳೆಯುವುದು, ತತ್ತಿಯ ಲೋಳೆ ಕುಡಿಸುವುದು ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆಗಳನ್ನು ನಡೆಸುವದಲ್ಲದೆ ಎಡ್ರಿನಾಲಿನ್, ಕೊರಾಮಿನ್, ಡೆಕೆಡ್ರಾನ್ ಮೊದಲಾದ ಔಷಧಿಗಳನ್ನು ಸೂಜಿಮದ್ದಿನ ಮೂಲಕ ನೀಡಬೇಕು. ಎಟ್ರೊಪೀನ್, ಡಿಜಿಟಾಲಿಸ್ ಮತ್ತು ಕೆಫೀನ್ ಔಷಧಿಗಳೂ, ಬ್ರಾಂಡಿಯೂ ಉಪಯುಕ್ತವಾಗಿವೆ. ರೋಗಿಗೆ ರಕ್ತನಾಳದ ಮೂಲಕ ಗ್ಲೂಕೋಸ್ ಉಪ್ಪುನೀರು ಮತ್ತು ಕ್ಯಾಲ್ಸಿಯಂ ಗ್ಲೂಕೋನೇಟ್ ನೀಡುವುದೂ ಹಿತಕರವಾಗಿದೆ. ದೇಹದ ಶಾಖ ರಕ್ಷಣೆಯ ಪ್ರಯತ್ನಗಳನ್ನು ನಡೆಸುವುದಲ್ಲದೆ ಉತ್ತೇಜಕ ಅನುಪಾನಗಳನ್ನೂ ನೀಡಬೇಕು. ಅಗತ್ಯಬಿದ್ದಲ್ಲಿ ಕೃತಕ ಉಸಿರಾಟ ಹಾಗೂ ಆಮ್ಲಜನಕ ನೀಡಿಕೆಗಳನ್ನು ಪೂರೈಸಬೇಕು.

ಅಧ್ಯಾಯ—7

ನಿದ್ರಾಪ್ರದ-ಶಾಮಕ ಔಷಧಿಗಳು ಮತ್ತು ಆಹಾರ ವಿಷ ಇತ್ಯಾದಿ

ಬ್ರೋಮೈಡುಗಳು ಮತ್ತು ಬಾರ್ಬಿಟರೇಟುಗಳು

ಪರಿಚಯ :

ಅಂಜುಬುರುಕರು, ದುರ್ಬಲ ಮನಸ್ಸಿನ ಭಯ 'ಭ್ರಾಂತರು, ಚಿಂತಾಕ್ರಾಂತರು ಮೊದಲಾದವರು ಮನಸ್ಸಿನ ನೆಮ್ಮದಿ ಕಳೆದುಕೊಂಡು ರಾತ್ರಿಯೆಲ್ಲಾ ಹಾಸಿಗೆಯಮೇಲೆ ಹೊರಳಾಡಿದರೂ ರೆಪ್ಪೆ ಮುಚ್ಚುವುದು ಅಸಾಧ್ಯವಾದಾಗ ನಿದ್ರಾಪ್ರದ ಔಷಧಿಗಳು (ನಿದ್ದೆಗೋಲಿಗಳು) ಒಂದು ವರಪ್ರಸಾದವೇ ಸರಿ. ಸಹಿಸಲಸಾಧ್ಯವಾದ ನೋವಿನಿಂದಲೂ ಇತರ ದೈಹಿಕ–ಮಾನಸಿಕ ವೇದನೆಗಳಿಂದಲೂ ನರಳುವವರಿಗೆ ಉಪಶಾಮಕ ದ್ರವ್ಯಗಳು ದುಃಖ ಪರಿಹಾರದಲ್ಲಿ ಅಪಾರ ನೆರವು ನೀಡುತ್ತವೆ. ಸೋಡಿಯಂ ಬ್ರೊಮೈಡ್, ಪೊಟ್ಯಾಸಿಯಂ ಬ್ರೊಮೈಡ್, ಅಮೋನಿಯಂ ಬ್ರೊಮೈಡುಗಳು; ಗಾರ್ಡಿನಲ್, ಲ್ಯುಮಿನಲ್, ಡಯಲ್. ಲ್ಯುಟಿಸಾಲ, ವೆರ್ನಾಲ್ ಅಮೈಟಲ್, ನೆಬುಸಾಲ್ ಮೊದಲಾದ ಛಾಪಿನ ಬಾರ್ಬಿಟರೇಟ್ ನಿದ್ದೆಯ ಔಷಧಿಗಳು–ಗೋಲಿ, ಪಾನಕ ಸೂಜಿಮದ್ದು [ಮೊದಲಾದ ರೂಪದಲ್ಲಿ ದೊರೆಯುತ್ತವೆ.

ವೈದ್ಯರ ನಿರ್ದಿಷ್ಟವಾದ ಸಲಹೆ ಇಲ್ಲದೆ ನಿದ್ದೆಗೋಲಿಯನ್ನು ಸರ್ವಥಾ ಸೇವಿಸಬಾರದು. ದೀರ್ಘಕಾಲ ನಿದ್ದೆಗೋಲಿ ಸೇವಿಸುವವರಿಗೆ ಇದೊಂದು ಚಟವಾಗಿಬಿಡುತ್ತದೆ. (ಅಪಸ್ಮಾರದಂತಹ ಕಾಯಿಲೆಗೆ ಚಿಕಿತ್ಸೆ ಮಾಡುವಾಗ ವರ್ಷಾನುಗಟ್ಟಲೆ ಗಾರ್ಡಿನಲ್ ಸೋಡಿಯಂ ನಿದ್ದೆಗೋಲಿಯನ್ನು ನುಂಗಬೇಕಾದಾಗ ವೈದ್ಯರ ಸಲಹೆಯನ್ನು ಚಾಚೂ ತಪ್ಪದೆ ಪಾಲಿಸಬೇಕಾದ್ದು ಅತ್ಯಗತ್ಯ.)

ಪ್ರಾಣಾಪಾಯದ ಪ್ರಮಾಣ (ಸೇವನೆ) : ಫೆನೋಬಾರ್ಬಿಟೋನ್ 4 ರಿಂದ 10.6 ಗ್ರಾಂ, ಲ್ಯುಮಿನಾಲ್ 2–2.6 ಗ್ರಾಂ., ಅಮೈಟಲ್ (1.3–2 ಗ್ರಾಂ) ನೆಬುಟಾಲ್ (1–1.6 ಗ್ರಾಂ.), ಡಯಲ್ (2 ಗ್ರಾಂ), ಪೆಂಟೊಥಾಲ್ ಸೋಡಿಯಂ 1 ಗ್ರಾಂ.ವೆರ್ನಾಲಿ 2 ಗ್ರಾಂ.

ದೀರ್ಘಕಾಲದ ವಿಷಪ್ರಯೋಗ–ಲಕ್ಷಣ ಮತ್ತು ಚಿಕಿತ್ಸೆ :

ಪುಡಿ, ಗೋಲಿ, ಪಾನಕ ಅಥವಾ ಸೂಜಿಮದ್ದು ಮೊದಲಾದ ಯಾವ ರೂಪ ದಿಂದಲಾದರೂ ನಿದ್ರೆಯ ಔಷಧಿಯನ್ನು ದೀರ್ಘಕಾಲದ ವರೆಗೆ ಸೇವಿಸಿದ ರೋಗಿಯು ಮುಂಗೋಪ, ಗಲಿಬಿಲಿ, ದೇಹವ್ಯಾಪಾರದಲ್ಲಿ ಏರುಪೇರಾಗುವುದು, ತೂಕಡಿಕೆ ಮೊದಲಾದ ಉಪದ್ರವಗಳಿಂದ ನರಳುತ್ತಾನೆ. ದೇಹಾರೋಗ್ಯ, ಶುಚಿತ್ವ, ವೇಷ ಭೂಷಣ ಹಾಗೂ ನಡೆನುಡಿಗಳ ಸಭ್ಯತೆಯ ಕಡೆಗೆ ಅವನ ಗಮನವು ಇರುವುದಿಲ್ಲ; ಮತ್ತು ಅವನ ನಡತೆಯು ಹತೋಟಿ ತಪ್ಪಿದಂತೆ ಇದ್ದು ಕ್ರಮೇಣ ವಿವೇಚನೆ, ಕರ್ತವ್ಯ ಜ್ಞಾನ ಮತ್ತು ಬುದ್ಧಿ ಶಕ್ತಿಗಳು ಕುಂದುತ್ತ ಬಂದು ಶತಮೂರ್ಖನೂ ಸಮಾಜ ಕಂಟಕನೂ ಆಗಿ ಪರಿಣಮಿಸಬಹುದು.

ನಿದ್ದೆಗೋಲಿಯ ಚಟಕ್ಕೆ ಬಿದ್ದವರು ಅದರಿಂದ ಪಾರಾಗಲು ದೃಢ ನಿರ್ಧಾರ ಮಾಡಿದರೂ ಒಂದೇ ದಿವಸದಲ್ಲಿ ಅಥವಾ ಒಮ್ಮೆಲೇ ಅದನ್ನು ಸಾಧಿಸಲು ಸಾಧ್ಯ ವಿಲ್ಲ. ಇದ್ದಕ್ಕಿದ್ದಂತೆಯೇ ನಿದ್ದೆಗೋಲಿ ಸೇವನೆಯನ್ನು ನಿಲ್ಲಿಸಿಬಿಟ್ಟರೆ ಅನಿರೀಕ್ಷಿತ ವಾದ ದೈಹಿಕ ದುಷ್ಪರಿಣಾಮಗಳು ಉಂಟಾಗುತ್ತವೆ. ವೈದ್ಯರ ಸಲಹೆಯಂತೆ ದೃಢ ಮನಸ್ಸಿನಿಂದ ಕ್ರಮೇಣ ಈ ಅಭ್ಯಾಸವನ್ನು ಬಿಡಲು ಪ್ರಯತ್ನಿಸಿದಲ್ಲಿ ರೋಗಿಯು ನಿದ್ದೆಗೋಲಿ ಚಟದಿಂದ ಪಾರಾಗಿ ಸಂತೋಷದಿಂದ ಬದುಕುವುದು ಸಾಧ್ಯವಿದೆ.

ಎಚ್ಚರಿಕೆ : ನಿದ್ದೆಗೋಲಿ ಚಟಕ್ಕೆ ಬಿದ್ದವರು ವೈದ್ಯರ ಅಪ್ಪಣೆ ಚೀಟಿ ಇಲ್ಲದೆ ಔಷಧ ಅಂಗಡಿಗಳಿಂದ ಅಥವಾ ದವಾಖಾನೆಗಳಿಂದ ಕಳ್ಳತನದಲ್ಲಿ ಇಲ್ಲವೇ ಮೋಸದಿಂದ ಸಂಗ್ರಹಿಸಿ ತಿನ್ನುವ ಪ್ರಸಂಗಗಳು ಇಲ್ಲದಿಲ್ಲ. ಇಂತಹ ಚಟಗಳ ಬಗ್ಗೆ ಸೂಕ್ತ ಮುನ್ನೆಚ್ಚರಿಕೆ ವಹಿಸುವುದು ಅಗತ್ಯ.

ವಿಷಪ್ರಾಶನದ ಲಕ್ಷಣ (ಸೇವನೆ) :

ಪ್ರಾಣಾಪಾಯದ ಪ್ರಮಾಣದಲ್ಲಿ ನಿದ್ದೆಗೋಲಿಗಳನ್ನು ಸೇವಿಸಿದರೆ ಅಥವಾ ಸೂಜಿಮದ್ದು ತೆಗೆದುಕೊಂಡರೆ ಅಂತಹ ರೋಗಿಯ ಮನಸ್ಸಿನಲ್ಲಿ ತಕ್ಷಣ ಗಲಿಬಿಲಿ ಉಂಟಾಗುತ್ತದೆ. ತೂಕಡಿಕೆ ಪ್ರಾರಂಭಿಸಿ ರೋಗಿಯು ಸರಿಯಾಗಿ ನಿಂತುಕೊಳ್ಳಲು

ಸಾಧ್ಯವಿಲ್ಲದಾಗುತ್ತದೆ. ತುಸುಹೊತ್ತಿನಲ್ಲಿ ನಿದ್ರೆಯು ಆವರಿಸಿ ಉಸಿರಾಟವು ಮಂದವಾಗತೊಡಗಿ ದೀರ್ಘ ಸುಷ್ಪ್ತಿಯುಂಟಾಗುತ್ತದೆ. ಅವನ ಮಾಂಸ ಖಂಡಗಳು ಅಶಕ್ತವಾಗುತ್ತವೆ. ಶ್ವಾಸಕೋಶದ ಊತ, ಕಫವಿಕಾರ, ಪುಪ್ಪುಸವಿಕಾರ ಮೊದಲಾದ ಉಪದ್ರವಗಳು ಉಂಟಾಗುತ್ತವೆ. ಅವನ ಕಣ್ಣು ಗೊಂಬೆಗಳು ಬೆಳಕಿಗೆ ಪ್ರತಿಸ್ಪಂದಿಸುವುದಿಲ್ಲ. ತುಟಿ ಮತ್ತು ಮೋರೆಯ ಮೇಲೆ ನೀಲಿ ಛಾಯೆಯು ಕಾಣಿಸುತ್ತದೆ. ಅವನ ಚರ್ಮವು ಒದ್ದೆಯಾಗಿ, ತಣ್ಣಗೆ ಇರುತ್ತದೆ. ಮಂದವಾದ ಕ್ಷೀಣನಾಡಿ, ರಕ್ತದ ಒತ್ತಡ ಇಳಿಮುಖ, ಬಾಯಿಯಲ್ಲಿ ಶ್ಲೇಷ್ಮ ಸಂಚಯ (ಬುರುಗಾದ ನೊರೆ) ಕಾಣಿಸುತ್ತದೆ. ದೇಹದ ಉಷ್ಣಾಂಶವು ತೀರಾ ಕೆಳಮಟ್ಟಕ್ಕೆ ಇಳಿದರೂ ಕೈಕಾಲು ಬೆಚ್ಚಗಿರುತ್ತವೆ. ಮೂತ್ರ ಲೋಪವೂ ಉಸಿರಾಟದ ತೊಂದರೆಯೂ ಉಂಟಾಗುವುದು ಅಪಾಯದ ಲಕ್ಷಣಗಳಾಗಿವೆ. ಒಮ್ಮೊಮ್ಮೆ ರೋಗಿಯ ನಾಡಿಯು ಅಧಿಕವಾಗಿಯೂ ವೇಗವಾಗಿಯೂ ಬಡಿಯುತ್ತಿರಬಹುದು; ಮುಂದೆ ಸಾವು ಸಂಭವಿಸಬಹುದು.

ಚಿಕಿತ್ಸೆ ಮತ್ತು ಉಪಚಾರ :

ನಿದ್ದೆಗೋಲಿ ವಿಷ ಸೇವಿಸಿದ ರೋಗಿಯ ಬಾಯಿ, ಗಂಟಲು ಮತ್ತು ಶ್ವಾಸ ನಾಳಗಳು ತುಂಬಿಕೊಂಡು ಬುರುಗು ಶ್ಲೇಷ್ಮವು ಉಸಿರಾಟಕ್ಕೆ ಅಡ್ಡಿ ಮಾಡುವುದರಿಂದ ನಿರಾಳವಾಗಿ ಉಸಿರಾಡಲು ಇರುವ ತೊಂದರೆಗಳನ್ನು ನಿವಾರಿಸಬೇಕು. ಇದಕ್ಕಾಗಿ ರಬ್ಬರು ಕೊಳವೆಯನ್ನು ಗಂಟಲಿಗೆ ತೂರಿ ಶ್ಲೇಷ್ಮವನ್ನು ಹೊರ ತೆಗೆಯಬಹುದು; ಅಥವಾ ಕೈಯಿಂದಲೇ ಶುದ್ಧ ಮಾಡಬಹುದು. (ಕೆಲವು ಸಂದರ್ಭಗಳಲ್ಲಿ ಶಸ್ತ್ರಕ್ರಿಯೆ ನಡೆಸಿ, ಜರೂರು ಉಸಿರಾಟಕ್ಕಾಗಿ ತಾತ್ಕಾಲಿಕ ನಲಿಕೆಯನ್ನು ಸಹ ಶ್ವಾಸನಾಳಕ್ಕೆ ಜೋಡಿಸಬೇಕಾದ ಸಂಭವ ಬರಬಹುದು). ರೋಗಿಯನ್ನು ಪಲ್ಲಂಗದ ಮೇಲೆ ಮಲಗಿಸಿ ಅವನ ಕಾಲುಗಳ ಪಾರ್ಶ್ವದಲ್ಲಿ ಪಲ್ಲಂಗವನ್ನು ತುಸು ಎತ್ತರಿಸುವುದು ಸ್ವಲ್ಪ ಮಟ್ಟಿಗೆ ಪ್ರಯೋಜನ ನೀಡುತ್ತದೆ.

ವಮನ, ಹೊಟ್ಟೆತೊಳೆಯುವುದು ಮೊದಲಾದ ವಿಧಾನಗಳಿಂದ ವಿಷವನ್ನು ಹೊರಕ್ಕೆ ಹಾಕುವುದಲ್ಲದೆ ಕೃತಕ ಉಸಿರಾಟ, ಆಮ್ಲಜನಕ ನೀಡಿಕೆಗಳನ್ನೂ ಒದಗಿಸಬೇಕು; ಆಘಾತವನ್ನು ತಡೆಯಲು ಸೂಕ್ತ ಚಿಕಿತ್ಸೆ ನಡೆಸಬೇಕು. ಭೇದಿ ಉಪ್ಪಿನಿಂದ ವಿರೇಚನ ಮಾಡಿಸಬೇಕು. ಕೋರಾಮಿನ್, ಮೆಗಿಪೈಂಡ್ ಸೂಜಿಮದ್ದು, ರಕ್ತನಾಳದ ಮೂಲಕ ಗ್ಲೂಕೋಸ್ ನೀಡಿಕೆ, ಕಾಫಿ. ಚಹ ಮೊದಲಾದ ಉತ್ತೇಜಕಗಳ ಸೇವನೆಗಳು ಉಪಯುಕ್ತ. ಡೆಪ್ಟೋಸೋಲ್, ಪಿಕ್ರಿಟಾಕ್ಸಿನ್ ಸೂಜಿಮದ್ದುಗಳೂ

ಉಪಯುಕ್ತವಾಗಿವೆ. ಹಾಲು ಕುಡಿಸುವುದೂ ಸಹ ರೋಗಿಯಲ್ಲಿ ಉಪಯುಕ್ತ ಪರಿಣಾಮ ಬೀರುತ್ತದೆ.

ನಿದ್ದೆಗೋಲಿ ವಿಷವು ತೀರ ಹೆಚ್ಚಿನ ಪ್ರಮಾಣದಲ್ಲಿ ಮೂತ್ರದ ಮೂಲಕ ಹೊರತಳ್ಳಲ್ಪಡುವುದರಿಂದ ರೋಗಿಗೆ ಧಾರಾಳ ನೀರು ಕುಡಿಸಬೇಕು. ಬಾರ್ಲಿನೀರು, ಎಳನೀರು, ಗ್ಲೂಕೋಸ್ ಸೇವನೆ ಹೆಚ್ಚಿನ ಪ್ರಮಾಣದಲ್ಲಿ ಅಗತ್ಯ. ಕ್ಷಾರ ಮಿಶ್ರಣ ವನ್ನೂ ಮೂತ್ರಲ ಔಷಧಿಗಳನ್ನೂ ಕುಡಿಸುವದಲ್ಲದೆ ರಬ್ಬರ ನಳಿಕೆ ಹಾಕಿ ಮೂತ್ರ ತೆಗೆಯುವದು ಸಹ ಕೆಲವೊಮ್ಮೆ ಅಗತ್ಯ ಬೀಳಬಹುದು.

ನಿದ್ದೆ ಔಷಧಿಯು ಸೂಜಿಮದ್ದಿನ ಮೂಲಕ ಪ್ರಯೋಗವಾಗಿದ್ದರೆ ಸೂಜಿ ಚುಚ್ಚಿದ ಅಂಗಕ್ಕೂ ಹೃದಯಕ್ಕೂ ನಡುವೆ ಬಿಗಿಯಾದ ಬಂಧನವನ್ನು ಹಾಕಿ ವಿಷ ಪ್ರಸಾರವನ್ನು ತಡೆಗಟ್ಟಲು ಪ್ರಯತ್ನಿಸಬೇಕು; ಮತ್ತು ಸೂಜಿ ಚುಚ್ಚಿದ ಭಾಗಕ್ಕೆ ಮಂಜುಗಡ್ಡೆ (ಬರ್ಫ್) ಹಚ್ಚಬೇಕು. ರೋಗಿಯ ದೇಹದ ಉಷ್ಣತೆಯನ್ನು ಕಾಪಾ ಡಲು ಬೆಚ್ಚಗಿನ ಹೊದಿಕೆ ಹೊದಿಸಬೇಕು. ಆದರೆ ಬಿಸಿ ನೀರು ತುಂಬಿದ ಬಾಟಲಿ ಗಳನ್ನು ಪಕ್ಕದಲ್ಲಿ ಇಟ್ಟು ಶಾಖ ಮಾಡುವುದಾಗಲಿ, ಬೆಂಕಿ ಕಾಯಿಸುವುದಾಗಲಿ ವರ್ಜ್ಯ.

ರೋಗಿಯು ಮೂತ್ರ ಲೋಪ, ಮೂತ್ರದ ಇಳುವರಿ, ಮೂತ್ರ ಪಿಂಡಗಳ ವಿಕಾರ, ಹೃದಯ ಸೋಲುವುದು ಮೊದಲಾದ ನಾನಾ ಉಪದ್ರವಗಳಿಂದ ನರಳ ಬಹುದಾದುದರಿಂದ ಅವುಗಳಿಗೆ ಸೂಕ್ತ ಚಿಕಿತ್ಸೆ ನಡೆಸಬೇಕು.

ಟಿಪ್ಪಣಿ :

ವೈದ್ಯರ ಅಪ್ಪಣೆ ಚೀಟಿ ಇಲ್ಲದೆ ನಿದ್ದೆಗೋಲಿಗಳನ್ನು ಮಾರಾಟ ಮಾಡು ವುದಾಗಲಿ ಕೊಂಡುಕೊಳ್ಳುವದಾಗಲಿ ನಿಷೇಧ. ಮಕ್ಕಳು, ಮೂರ್ಖರು ಮತ್ತು ರೋಗಿಗಳ ಕೈಗೆ ಸಿಗುವಂತೆ ನಿದ್ದೆಗೋಲಿಗಳನ್ನು ಇರಿಸಬಾರದು. ಅವುಗಳನ್ನು ಬೀಗದೊಳಗೆ ಇರಿಸುವುದು ಉತ್ತಮ ಮುನ್ನೆಚ್ಚರಿಕೆಯ ಉಪಕ್ರಮವಾಗಿದೆ. ಪ್ರಾಣಹತ್ಯೆಗೂ, ಆತ್ಮಹತ್ಯೆಗೂ ಸುಲಭವಲ್ಲಿ ನಿದ್ದೆಗೋಲಿಯನ್ನು ನಾನಾ ಉಪಾಯ ಗಳಿಂದ ಬಳಸುವುದು ಸಾಧ್ಯವಿರುವುದರಿಂದ ಈ ಔಷಧಿಗಳ ಬಗ್ಗೆ ಎಷ್ಟು ಹೆಚ್ಚು ಎಚ್ಚರಿಕೆ ವಹಿಸಿದ್ದರೆ ಅಷ್ಟು ಒಳ್ಳೆಯದು. ಮದ್ಯದಲ್ಲಿ ಬೆರೆಸಿದ ನಿದ್ರಾಪ್ರದ ಔಷಧಿ ಗಳು ಬಲು ತೀಕ್ಷ್ಣ ವಿಷವಾಗಿ ಪರಿಣಮಿಸುತ್ತವೆ ಎಂಬುದನ್ನು ಮರೆಯಬಾರದು.

ಕ್ಲೋರಲ್ ಹೈಡ್ರೇಟ್

ಪರಿಚಯ :

ಬಣ್ಣವಿಲ್ಲದ ಗಾಟುವಾಸನೆಯ ಹರಳುಹರಳಾಗಿರುವ ಕ್ಲೋರಲ್ ಹೈಡ್ರೇಟ್ ನೀರಿನಲ್ಲಿಯೂ ಮದ್ಯದಲ್ಲಿಯೂ ಚೆನ್ನಾಗಿ ಕರಗುವ ಜನಪ್ರಿಯವಾದ ಇನ್ನೊಂದು ನಿದ್ರಾಪ್ರದ ಔಷಧಿ. 'ಸುಕ್ಕಾ ಶರಾಬ' ಎಂಬ ಒಂದು ಬಗೆಯ ಪ್ರಿಯವಾದ ಮಧುರ ಮಾದಕ ಪೇಯವನ್ನು ಕ್ಲೋರಲ್ ಹೈಡ್ರೇಟ್ ಮಿಶ್ರ ಮಾಡಿ ತಯಾರಿಸುತ್ತಾರೆ. ಹುಳಿಹೆಂಡದಲ್ಲಿ ಮತ್ತೇರಿಸಲು ಕ್ಲೋರಲ್ ಹೈಡ್ರೇಟ್‌ನ್ನು ಕಲಬೆರಕೆ ಮಾಡುವುದು ಈಗ ಸರ್ವೇಸಾಧಾರಣವಾಗಿದೆ. ಶರಬತ್ತು ಮತ್ತು ಬೀರ್ ನಂತಹ ಪಾನೀಯಗಳಲ್ಲಿ ಬೆರೆಸಿ ಕುಡಿಸಿ ಹಣ ದೋಚಲಿಕ್ಕೂ ಸ್ತ್ರೀಯರ ಮಾನಭಂಗ ಮಾಡಲಿಕ್ಕೂ ದುಷ್ಟರು ಈ ಔಷಧಿಯನ್ನು ಬಳಸಿದ ಉದಾಹರಣೆಗಳಿವೆ.

ಪ್ರಾಣಾಪಾಯದ ಪ್ರಮಾಣ(ಸೇವನೆ) : 3.2 ರಿಂದ 5 ಗ್ರಾಂ. ಪ್ರಾಣಾಪಾಯದ ಕಾಲಾವಧಿ 8-12 ತಾಸು. (ಆದರೆ ಕೆಲವೊಮ್ಮೆ 2-3 ದಿವಸಗಳಷ್ಟು ವಿಳಂಬವಾಗಿ ದುಷ್ಪರಿಣಾಮವು ಕಾಣಿಸುವುದೂ ಉಂಟು).

ವಿಷಪ್ರಾಶನದ ಲಕ್ಷಣ :

ಕ್ಲೋರಲ್ ಹೈಡ್ರೇಟ್ ವಿಷ ಸೇವಿಸಿದ ರೋಗಿಯ ಬಾಯಿ ಮತ್ತು ಗಂಟಲಿನಲ್ಲಿ ಉರಿ. ನೋವುಗಳು ಕಾಣಿಸುತ್ತವೆ. (ಆದರೆ ಶರಾಬಿನಂತಹ ಪೇಯಗಳಲ್ಲಿ ಮಿಶ್ರಣವಾದಾಗ ಈ ಲಕ್ಷಣಗಳು ಅಷ್ಟಾಗಿ ಕಾಣಿಸದೆ ಇರಬಹುದು; ಹಾಗೂ ಗಾಟು ವಾಸನೆಯೂ ಸಹ ಗೋಚರಿಸದೇ ಇರಬಹುದು). ರೋಗಿಗೆ ಕ್ಲೋರಲ್ ಹೈಡ್ರೇಟ್ ಸೇವಿಸಿದ ತುಸು ಹೊತ್ತಿನಲ್ಲಿ ತೂಕಡಿಕೆ ಪ್ರಾರಂಭಿಸಿ; ಕ್ರಮೇಣ ನಿದ್ರೆ, ಗಾಢ ನಿದ್ರೆ, ದೀರ್ಘಸುಪ್ತಿಯ ಅವಸ್ಥೆಗಳಿಗೆ ಒಳಗಾಗುತ್ತಾನೆ. ಅವನ ಮುಖವು ನೀಲಿಛಾಯೆಗೆ ತಿರುಗುವುದಲ್ಲದೆ ಕಣ್ಣುಬೊಂಬೆ ಕಿರಿದಾಗುತ್ತದೆ. ಮಂದವಾದ ವಕ್ರನಾಡಿ, ಅಸ್ತವ್ಯಸ್ತಗೊಂಡ ಉಸಿರಾಟ, ತಣ್ಣಗಿನ ಚರ್ಮ, ಇಳಿದ ಮೈಶಾಖ ಮೊದಲಾದ ಲಕ್ಷಣಗಳು ಗೋಚರಿಸುತ್ತವೆ. ಕೆಲವೊಮ್ಮೆ ಮೇಲೆ ಹೈತಿಕೆಯಂ ಗಂದೆಗಳೂ ಏಳಬಹುದು.

ಕ್ಲೋರಲ್ ಹೈಡ್ರೇಟ್ ವಿಷಪ್ರಯೋಗದ ದೀರ್ಘಕಾಲಾವಧಿ ದುಷ್ಪರಿಣಾಮಗಳಿಗೆ ತುತ್ತಾದ ರೋಗಿಯು ದೇಹಾಯಾಸ, ಮೈನಡುಕ, ಮನೋವಿಕಾರ, ಯಕೃತ್ ಪೀಡೆ, ಉಸಿರಾಟದ ತೊಂದರೆ ಮೊದಲಾದ ಉಪದ್ರವಗಳಿಂದ ನರಳುತ್ತಾನೆ.

ಚಿಕಿತ್ಸೆ ಮತ್ತು ಉಪಚಾರ :

ವಿಷ ಪ್ರಾಶನವಾದ ರೋಗಿಗೆ ಬಿಸಿ ನೀರಿನಿಂದ ಹೊಟ್ಟೆ ತೊಳೆಯುವುದು, ವಾಂತಿ ಮಾಡಿಸುವುದು, ಲವಣ ವಿರೇಚನ ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆಗಳನ್ನು ನಡೆಸಬೇಕು. ಕೊರಾಮಿನ್, ಸ್ಟ್ರಿಕ್‌ನೀನ್. ಕೆಫೀನ್ ಮೊದಲಾದ ಉತ್ತೇಜಕ ಔಷಧಿಗಳ ಸೂಜಿ ಮದ್ದನ್ನೂ, ಕೃತಕ ಉಸಿರಾಟ ಆಮ್ಲಜನಕ ನೀಡಿಕೆಗಳನ್ನೂ, ರಕ್ತನಾಳದ ಮೂಲಕ ಗ್ಲೂಕೋಸ್ ಪೂರಣವನ್ನೂ ಕೈಗೊಳ್ಳಬೇಕು. ದೇಹದ ಶಾಖ ರಕ್ಷಣೆಗೆ ಪ್ರಯತ್ನ ಮಾಡಬೇಕು. ಕ್ಷಾರ ಮಿಶ್ರಣ, ಬಾರ್ಲಿನೀರು, ಗ್ಲೂಕೋಸ್ ಮೊದಲಾದ ದ್ರವಗಳನ್ನು ಸಾಕಷ್ಟು ಪ್ರಮಾಣದಲ್ಲಿ ನೀಡಬೇಕು.

(ಹತ್ತನೆಯ ಅಧ್ಯಾಯದಲ್ಲಿ ಉಳಿದ ಶಾಮಕ–ನಿದ್ರಾಪ್ರದ ದ್ರವ್ಯಗಳ ವಿಷ ಚಿಕಿತ್ಸೆಯನ್ನು ಉಲ್ಲೇಖಿಸಲಾಗಿದೆ.)

ಆಹಾರ ವಿಷ

ಪರಿಚಯ :

ಹಳಸಿದ ಅನ್ನವನ್ನು ಉಂಡರೆ ವಾಂತಿ–ಭೇದಿಗಳಾಗುವ ಸಂಗತಿ ಎಲ್ಲರಿಗೂ ತಿಳಿದಿದೆ. ಆದರೆ ಕೆಲವು ಸಲ ಕೆಟ್ಟು ಹೋದ ಯಾವ ಸೂಚನೆಯೂ ಹೊರ ನೋಟಕ್ಕೆ ಕಾಣಸದೇ ದುರ್ವಾಸನೆಯಾಗಲಿ ರುಚಿ ಕೆಟ್ಟ ಲಕ್ಷಣವಾಗಲಿ ಗೋಚರಿಸದೆ ಇರುವ ಕೆಲವೊಂದು ಆಹಾರ ಪದಾರ್ಥಗಳನ್ನು–ತಿಂಡಿ ತಿನಿಸುಗಳನ್ನೂ ಸೇವಿಸಿ, ಪ್ರಾಣಾಂತಿಕ ಅಪಾಯಕ್ಕೆ ತುತ್ತಾಗುವುದುಂಟು. ಇದನ್ನು **ವಿಷಮು ಆಹಾರ ಅಥವಾ ವಿಷ ಅಹಾರ** (**ಆಹಾರ ವಿಷ**) ಎನ್ನುತ್ತಾರೆ.

ಹಿಮೋಲೈಟಿಕ್ ಸ್ಟ್ರೆಪ್ಟೋಕೋಕೈ ಮತ್ತು ಸ್ಟೆಪಿಲೋ ಕೋಕೈ ಎಂಬ ಸೂಕ್ಷ್ಮ ಅಣುರೂಪದ ಅಗೋಚರ ಶತ್ರುಗಳು ಆಹಾರದಲ್ಲಿ ಉದ್ಭವಿಸಿದಾಗ ಆ ಆಹಾರವು ವಿಷವಾಗಿ ಪರಿಣಮಿಸಿ ಸೇವಿಸಿದ ಇಡೀ ಮನೆಯವರು ಅಥವಾ ಭೋಜನ ಕೂಟಕ್ಕೆ ಬಂದ ಅತಿಥಿ ವೃಂದದವರು ಸಾರಾಸಗಟು ನರಳುತ್ತಾರೆ. ಕೆಲವು ಸಲ ಆಹಾರವನ್ನು ಎಷ್ಟೇ ಸರಿಯಾಗಿ ಬೇಯಿಸಿ ಸಿದ್ಧ ಪಡಿಸಿದರೂ ಸಹ ಈ ಚುರುಕಾದ ಸೂಕ್ಷ್ಮ ವಿಷ ಜೀವಿಗಳು ಚಟುವಟಿಕೆಯಿಂದ ಉಳಿದು ಬಿಡುತ್ತವೆ ! ಮುಖ್ಯವಾಗಿ ತತ್ತಿ, ಹಾಲು. ಹಣ್ಣು ಹಂಪಲು ಅದರಲ್ಲಿಯೂ ಡಬ್ಬಿಯಲ್ಲಿ ಶೇಖರಿಸಿ ಇಟ್ಟ ಹಣ್ಣುಗಳು, ಗಿಣ್ಣು, ಆಯಿಸ್‌ಕ್ರೀಂ ಮತ್ತು ಮಾಂಸಗಳಲ್ಲಿ ಈ ಬಗೆಯ ವಿಷ ಅಣುಗಳು ಹೆಚ್ಚಾಗಿ ಕಾಣಿಸುತ್ತವೆ.

ವಿಷ ಪ್ರಯೋಗದ ಲಕ್ಷಣಗಳು :

ಈ ಬಗೆಯ ಅಗೋಚರ ವಿಷಭರಿತ ಆಹಾರವನ್ನು ಸೇವಿಸಿದ ರೋಗಿಯಲ್ಲಿ ಊಟವಾದ ಒಂದೆರಡು ತಾಸುಗಳಲ್ಲಿ (ಕೆಲವೊಮ್ಮೆ ಆರೆಂಟು ತಾಸುಗಳಷ್ಟು ವಿಳಂಬ ವಾಗಿ) ಉಪದ್ರವಗಳು ಕಾಣಿಸಿಕೊಳ್ಳುತ್ತವೆ. ತಲೆನೋವು, ತಲೆ ತಿರುಗುವುದು, ಮತ್ತು ಅಸಾಧ್ಯ ನೀರಡಿಕೆ ರೋಗಿಯಲ್ಲಿ ಕಾಣಿಸುವ ಪ್ರಾರಂಭಿಕ ಲಕ್ಷಣಗಳು. ಹೊಟ್ಟೆ ನುಲಿತ, ವಾಂತಿ ಭೇದಿ ಮತ್ತು ಮೈ ಚಳಕು, ಜ್ವರ, ಹಾಗೂ ಅದಿರು ವಾಯುಗಳಿಂದ ಕ್ರಮೇಣ ರೋಗಿಯು ನರಳುತ್ತಾನೆ. ಅವನ ಕಣ್ಣುಗೊಂಬೆ ಅರಳುತ್ತದೆ; ಚರ್ಮವು ತಣ್ಣಗೆ ಜಿಡ್ಡಾಗಿರುತ್ತದೆ. ನಿತ್ರಾಣ, ಕೈಕಾಲು ಸೆಳೆತ, ಆಘಾತ ಮತ್ತು ದೇಹದಲ್ಲಿನ ದ್ರವಾಂಶವು ಕಮ್ಮಿಯಾಗಿ ಮಂದವಾದ ನಾಡಿ, ಹೃದಯ ವಿಕಾರ ಮೊದಲಾದ ಉಪದ್ರವಗಳು ಕಾಣಿಸಿಕೊಳ್ಳುವವು. ಸಾವು ಕೂಡಾ ಸಂಭವಿಸಬಹುದು.

ಚಿಕಿತ್ಸೆ ಮತ್ತು ಉಪಚಾರ :

ಹೊಟ್ಟೆ ತೊಳೆಯುವುದು, ವಾಂತಿ ಮಾಡಿಸುವುದು, ಭೇದಿ ಮಾಡಿಸುವುದು ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆಗಳೂ, ಗ್ಲೂಕೋಸ್ ಉಪ್ಪು ನೀರಂಗಳ ಪೂರಣ ಹಾಗೂ ಉತ್ತೇಜಕ ಉಪಚಾರಗಳು ಹಿತಕರವಾಗಿರುತ್ತವೆ. ಕೋಡಿನ್, ಎಟ್ರೋಪಿನ್ ಔಷಧಿಗಳು ಹೆಚ್ಚಿನ ಪರಿಣಾಮ ಬೀರುತ್ತವೆ. ವಿಶ್ರಾಂತಿ, ದ್ರವ ಆಹಾರ ಮತ್ತು ಮನೋ ನೆಮ್ಮದಿಯ ವಾತಾವರಣವು ಅಗತ್ಯ.

ಟಿಪ್ಪಣಿ :

ಒಗ್ಗದ ಆಹಾರ ಸೇವನೆಯಿಂದಲೂ ಆಹಾರ ವಿಷ ಲಕ್ಷಣಗಳು ಕಾಣಿಸ ಬಹುದು. ಅಂತಹ ಸಂದರ್ಭದಲ್ಲಿ ರೋಗಿಗೆ ಒಗ್ಗದಿರುವ ಆಹಾರವನ್ನು ವರ್ಜಿಸ ಬೇಕು.

ಬೋಟ್ಯುಲಿಸಂ.

ಪರಿಚಯ :

ಹಸಿರು ತರಕಾರಿಗಳನ್ನು, ಮಾಗಿದ ಹಣ್ಣು ಹಂಪಲುಗಳನ್ನು ಅಥವಾ ಮಾಂಸ ಮೀನಿನಂತಹ ಖಾದ್ಯ ಪದಾರ್ಥಗಳನ್ನು ಕೆಡದಂತೆ ದೀರ್ಘಕಾಲ ದಾಸ್ತಾನು ಇರಿಸುವುದಕ್ಕೆ 'ಡಬ್ಬಿ ಶೇಖರಣೆ' ಮಾಡುತ್ತಾರಷ್ಟೆ? ಈ ಡಬ್ಬಿ ಶೇಖರಣೆಯ ವಿಧಾನದಲ್ಲಿ ಅಥವಾ ಸಂಸ್ಕರಣೆಯಲ್ಲಿ ತುಸು ಲೋಪ ದೋಷಗಳು ಸಂಭವಿಸಿದರೆ, ಡಬ್ಬಿಯೊಳಗಣ ಪದಾರ್ಥಗಳು ಕೆಡುವವು, ವಿಷಪೂರಿತವಾಗುವವು. ಆದರೆ ಹೊರ

ನೋಟಕ್ಕೆ ಯಾವುದೇ ಬಗೆಯ ವರ್ಣ ವ್ಯತ್ಯಾಸವಾಗಲಿ, ರುಚಿ ವಾಸನೆಯಲ್ಲಿ ಕುಂದಾಗಲಿ ಕಂಡುಬರುವುದಿಲ್ಲ. 'ಕ್ಲೊಸ್ಟ್ರೋಡಿಯಂ ಬೋಟಲಿನಂ' ಎಂಬ ವಿಷ ಅಣುಗಳು ಡಬ್ಬಿ ಶೇಖರಣೆಯ ದ್ರವ್ಯಗಳು ಕೆಡಲು ಕಾರಣ.

ಪ್ರಾಣಾಪಾಯದ ಪ್ರಮಾಣ (ಸೇವನೆ).: 5 ಮಿಲಿ ಲೀಟರ್. ಪ್ರಾಣಾಪಾಯದ ಕಾಲಾವಧಿ 24 ತಾಸುಗಳು.

ವಿಷ ಲಕ್ಷಣಗಳು ಮತ್ತು ಚಿಕಿತ್ಸೆ :

ಈ ವಿಷ ಪ್ರಯೋಗಕ್ಕೆ ತುತ್ತಾದ ರೋಗಿಯಲ್ಲಿ ಬಾಯಿ ಬತ್ತುವುದು, ವಾಕರಿಕೆ, ನಾಲಗೆ ಗಂಟಲು ಒಣಗುವುದು ಮೊದಲಾದ ಉಪದ್ರವಗಳು ಕಂಡು ಬರುವುವು. ಹೊಟ್ಟೆಯಲ್ಲಿ ತಳಮಳ, ಹೊಟ್ಟೆ ನೋವು, ನುಂಗಲು ಮಾತಾಡಲು ಕಷ್ಟವಾಗುವುದು, ಉಸಿರಾಟಕ್ಕೆ ತೊಂದರೆ, ಭೇದಿ ಮತ್ತು ವಾಂತಿ ಉಂಟಾಗುತ್ತವೆ; ಅವನ ಕಣ್ಣುಬೊಂಬೆ ಅರಳುತ್ತವೆ; ದೇಹ ದೌರ್ಬಲ್ಯ, ಮಂದವಾದ ನಾಡಿ, ಮುಖದ ಮೇಲೆ ನೀಲಿ ಛಾಯೆ, ಹೆಚ್ಚಿನ ಜ್ವರ, ಬಡಬಡಿಸುವುದು ಮತ್ತು ದೀರ್ಘ ಸುಪ್ತಿಗಳಿಂದ ರೋಗಿಯು ನರಳಿ ಸಾವಿಗೆ ತುತ್ತಾಗಬಹುದು. ಕೆಲವು ರೋಗಿಗಳಲ್ಲಿ ಒಂದುವಾರ ಈ ಉಪದ್ರಗಳು ಇದ್ದು ಅನಂತರ ಸಾವು ಸಂಭವಿಸುವುದೂ ಉಂಟು.

ಹೊಟ್ಟೆ ತೊಳೆಯುವುದು, ವಾಂತಿ ಮಾಡಿಸುವುದು ಮತ್ತು ವಿರೇಚನೆ ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆ ನಡೆಸಬೇಕು. ಎಂಟಿ ಬೊಟುಲಿನಸ್ ಸೆರೊಮ ಸೂಜಿ ಮದ್ದು. ಮಾರ್ಫಿಯಾ ಮತ್ತು ಗ್ಲೂಕೋಸ್ ಪೂರಣಗಳು ಉಪಯುಕ್ತವಾಗಿವೆ. ಅಗತ್ಯ ಬಿದ್ದರೆ ರೋಗಿಗೆ ಕೃತಕ ಉಸಿರಾಟವನ್ನೂ ಆಮ್ಲ ಜನಕ ನೀಡಿಕೆಯನ್ನೂ ಒದಗಿಸಬೇಕು. ಧಾರಾಳ ದ್ರವವೂ ಉತ್ತೇಜಕ ಆಹಾರವೂ ಉಪಯುಕ್ತ.

ಮುನ್ನೆಚ್ಚರಿಕೆ ;

ಡಬ್ಬಿ ಶೇಖರಣೆಯ ಖಾದ್ಯಗಳನ್ನು 15 ನಿಮಿಷ ಚೆನ್ನಾಗಿ ಬೇಯಿಸುವುದ ರಿಂದ ಈ ವಿಷಾಣುಗಳು ನಿರ್ನಾಮಹೊಂದುತ್ತವೆ. ವಿಷಪ್ರಯೋಗಕ್ಕೆ ತುತ್ತಾದವ ರಲ್ಲಿ ಶೇಕಡಾ 60 ಜನ ಪ್ರಾಣಾಪಾಯಕ್ಕೆ ತುತ್ತಾಗುವುದರಿಂದ ಡಬ್ಬಿಶೇಖರಣೆಯ ಆಹಾರವನ್ನು ಸೇವಿಸುವುದಕ್ಕೆ ಮುನ್ನ ಕಡ್ಡಾಯವಾಗಿ ಕುದಿಸಿ ಸೇವಿಸುವುದು ಕ್ಷೇಮ.

ಅಧ್ಯಾಯ — 7

ನಿದ್ರಾಪ್ರದ-ಶಾಮಕ ಔಷಧಿಗಳು ಮತ್ತು ಆಹಾರ ವಿಷ ಇತ್ಯಾದಿ

ಬ್ರೋಮೈಡುಗಳು ಮತ್ತು ಬಾರ್ಬಿಟರೇಟುಗಳು

ಪರಿಚಯ :

ಅಂಜುಬುರುಕರು, ದುರ್ಬಲ ಮನಸ್ಸಿನ ಭಯ' ಭ್ರಾಂತರು, ಚಿಂತಾಕ್ರಾಂತರು ಮೊದಲಾದವರು ಮನಸ್ಸಿನ ನೆಮ್ಮದಿ ಕಳೆದುಕೊಂಡು ರಾತ್ರಿಯೆಲ್ಲಾ ಹಾಸಿಗೆಯಮೇಲೆ ಹೊರಳಾಡಿದರೂ ರೆಪ್ಪೆ ಮುಚ್ಚುವುದು ಅಸಾಧ್ಯವಾದಾಗ ನಿದ್ರಾಪ್ರದ ಔಷಧಿಗಳು (ನಿದ್ದೆಗೋಲಿಗಳು) ಒಂದು ವರಪ್ರಸಾದವೇ ಸರಿ. ಸಹಿಸಲಸಾಧ್ಯವಾದ ನೋವಿನಿಂದಲೂ ಇತರ ದೈಹಿಕ–ಮಾನಸಿಕ ವೇದನೆಗಳಿಂದಲೂ ನರಳುವವರಿಗೆ ಉಪಶಾಮಕ ದ್ರವ್ಯಗಳು ದುಃಖ ಪರಿಹಾರದಲ್ಲಿ ಅಪಾರ ನೆರವು ನೀಡುತ್ತವೆ. ಸೋಡಿಯಂ ಬ್ರೋಮೈಡ್, ಪೊಟ್ಯಾಸಿಯಂ ಬ್ರೋಮೈಡ್, ಅಮೋನಿಯಂ ಬ್ರೋಮೈಡುಗಳು; ಗಾರ್ಡಿನಲ್, ಲ್ಯುಮಿನಲ್, ಡಯಲ್. ಲ್ಯುಟಿಸಾಲ, ವೆರ್ನಾಲ್ ಅಮೈಟಲ್, ನೆಬುಸಾಲ್ ಮೊದಲಾದ ಛಾಪಿನ ಬಾರ್ಬಿಟರೇಟ್ ನಿದ್ದೆಯ ಔಷಧಿಗಳು–ಗೋಲಿ, ಪಾನಕ ಸೂಜಿಮದ್ದು |ಮೊದಲಾದ ರೂಪದಲ್ಲಿ ದೊರೆಯುತ್ತವೆ.

ವೈದ್ಯರ ನಿರ್ದಿಷ್ಟವಾದ ಸಲಹೆ ಇಲ್ಲದೆ ನಿದ್ದೆಗೋಲಿಯನ್ನು ಸರ್ವಥಾ ಸೇವಿಸಬಾರದು. ದೀರ್ಘಕಾಲ ನಿದ್ದೆಗೋಲಿ ಸೇವಿಸುವವರಿಗೆ ಇದೊಂದು ಚಟವಾಗಿ ಬಿಡುತ್ತದೆ. (ಅಪಸ್ಮಾರದಂತಹ ಕಾಯಿಲೆಗೆ ಚಿಕಿತ್ಸೆ ಮಾಡುವಾಗ ವರ್ಷಾನುಗಟ್ಟಲೆ ಗಾರ್ಡಿನಲ್ ಸೋಡಿಯಂ ನಿದ್ದೆಗೋಲಿಯನ್ನು ನುಂಗಬೇಕಾದಾಗ ವೈದ್ಯರ ಸಲಹೆಯನ್ನು ಚಾಚೂ ತಪ್ಪದೆ ಪಾಲಿಸಬೇಕಾದ್ದು ಅತ್ಯಗತ್ಯ.)

ಪ್ರಾಣಾಪಾಯದ ಪ್ರಮಾಣ (ಸೇವನೆ) : ಫೆನೋಬಾರ್ಬಿಟೋನ್ 4 ರಿಂದ 10.6 ಗ್ರಾಂ, ಲ್ಯುಮಿನಾಲ್ 2–2.6 ಗ್ರಾಂ., ಅಮೈಟಲ್ (1.3–2 ಗ್ರಾಂ) ನೆಬುಟಾಲ್ (1–1.6 ಗ್ರಾಂ.), ಡಯಲ್ (2 ಗ್ರಾಂ), ಪೆಂಟಾಥಾಲ್ ಸೋಡಿಯಂ 1 ಗ್ರಾಂ.ವೆರ್ನಾಲಿ 2 ಗ್ರಾಂ.

ದೀರ್ಘಕಾಲದ ವಿಷಪ್ರಯೋಗ–ಲಕ್ಷಣ ಮತ್ತು ಚಿಕಿತ್ಸೆ :

ಪುಡಿ, ಗೋಲಿ, ಪಾನಕ ಅಥವಾ ಸೂಜಿಮದ್ದು ಮೊದಲಾದ ಯಾವ ರೂಪದಿಂದಲಾದರೂ ನಿದ್ರೆಯ ಔಷಧಿಯನ್ನು ದೀರ್ಘಕಾಲದ ವರೆಗೆ ಸೇವಿಸಿದ ರೋಗಿಯು ಮುಂಗೋಪ, ಗಲಿಬಿಲಿ, ದೇಹವ್ಯಾಪಾರದಲ್ಲಿ ಏರುಪೇರಾಗುವುದು, ತೂಕಡಿಕೆ ಮೊದಲಾದ ಉಪದ್ರವಗಳಿಂದ ನರಳುತ್ತಾನೆ. ದೇಹಾರೋಗ್ಯ, ಶುಚಿತ್ವ, ವೇಷ ಭೂಷಣ ಹಾಗೂ ನಡೆನುಡಿಗಳ ಸಭ್ಯತೆಯ ಕಡೆಗೆ ಅವನ ಗಮನವು ಇರುವುದಿಲ್ಲ; ಮತ್ತು ಅವನ ನಡತೆಯು ಹತೋಟಿ ತಪ್ಪಿದಂತೆ ಇದ್ದು ಕ್ರಮೇಣ ವಿವೇಚನೆ, ಕರ್ತವ್ಯ ಜ್ಞಾನ ಮತ್ತು ಬುದ್ಧಿ ಶಕ್ತಿಗಳು ಕುಂದುತ್ತ ಬಂದು ಶತಮೂರ್ಖನೂ ಸಮಾಜ ಕಂಟಕನೂ ಆಗಿ ಪರಿಣಮಿಸಬಹುದು.

ನಿದ್ದೆಗೋಲಿಯ ಚಟಕ್ಕೆ ಬಿದ್ದವರು ಅದರಿಂದ ಪಾರಾಗಲು ದೃಢ ನಿರ್ಧಾರ ಮಾಡಿದರೂ ಒಂದೇ ದಿವಸದಲ್ಲಿ ಅಥವಾ ಒಮ್ಮೆಲೇ ಅದನ್ನು ಸಾಧಿಸಲು ಸಾಧ್ಯವಿಲ್ಲ. ಇದ್ದಕ್ಕಿದ್ದಂತೆಯೇ ನಿದ್ದೆಗೋಲಿ ಸೇವನೆಯನ್ನು ನಿಲ್ಲಿಸಿಬಿಟ್ಟರೆ ಅನಿರೀಕ್ಷಿತವಾದ ದೈಹಿಕ ದುಷ್ಪರಿಣಾಮಗಳು ಉಂಟಾಗುತ್ತವೆ. ವೈದ್ಯರ ಸಲಹೆಯಂತೆ ದೃಢ ಮನಸ್ಸಿನಿಂದ ಕ್ರಮೇಣ ಈ ಅಭ್ಯಾಸವನ್ನು ಬಿಡಲು ಪ್ರಯತ್ನಿಸಿದಲ್ಲಿ ರೋಗಿಯು ನಿದ್ದೆಗೋಲಿ ಚಟದಿಂದ ಪಾರಾಗಿ ಸಂತೋಷದಿಂದ ಬದುಕುವುದು ಸಾಧ್ಯವಿದೆ.

ಎಚ್ಚರಿಕೆ : ನಿದ್ದೆಗೋಲಿ ಚಟಕ್ಕೆ ಬಿದ್ದವರು ವೈದ್ಯರ ಅಪ್ಪಣೆ ಚೀಟಿ ಇಲ್ಲದೆ ಔಷಧ ಅಂಗಡಿಗಳಿಂದ ಅಥವಾ ದವಾಖಾನೆಗಳಿಂದ ಕಳ್ಳತನದಲ್ಲಿ ಇಲ್ಲವೇ ಮೋಸದಿಂದ ಸಂಗ್ರಹಿಸಿ ತಿನ್ನುವ ಪ್ರಸಂಗಗಳು ಇಲ್ಲದಿಲ್ಲ. ಇಂತಹ ಚಟಗಳ ಬಗ್ಗೆ ಸೂಕ್ತ ಮುನ್ನೆಚ್ಚರಿಕೆ ವಹಿಸುವುದು ಅಗತ್ಯ.

ವಿಷಪ್ರಾಶನದ ಲಕ್ಷಣ (ಸೇವನೆ) :

ಪ್ರಾಣಾಪಾಯದ ಪ್ರಮಾಣದಲ್ಲಿ ನಿದ್ದೆಗೋಲಿಗಳನ್ನು ಸೇವಿಸಿದರೆ ಅಥವಾ ಸೂಜಿಮದ್ದು ತೆಗೆದುಕೊಂಡರೆ ಅಂತಹ ರೋಗಿಯ ಮನಸ್ಸಿನಲ್ಲಿ ತಕ್ಷಣ ಗಲಿಬಿಲಿ ಉಂಟಾಗುತ್ತದೆ. ತೂಕಡಿಕೆ ಪ್ರಾರಂಭಿಸಿ ರೋಗಿಯು ಸರಿಯಾಗಿ ನಿಂತುಕೊಳ್ಳಲು

ಸಾಧ್ಯವಿಲ್ಲದಾಗುತ್ತದೆ. ತುಸುಹೊತ್ತಿನಲ್ಲಿ ನಿದ್ರೆಯು ಆವರಿಸಿ ಉಸಿರಾಟವು ಮಂದವಾಗತೊಡಗಿ ದೀರ್ಘ ಸುಪ್ತಿಯುಂಟಾಗುತ್ತದೆ. ಅವನ ಮಾಂಸ ಖಂಡಗಳು ಅಶಕ್ತವಾಗುತ್ತವೆ. ಶ್ವಾಸಕೋಶದ ಊತ, ಕಫವಿಕಾರ, ಪುಪ್ಪುಸವಿಕಾರ ಮೊದಲಾದ ಉಪದ್ರವಗಳು ಉಂಟಾಗುತ್ತವೆ. ಅವನ ಕಣ್ಣು ಗೊಂಬೆಗಳು ಬೆಳಕಿಗೆ ಪ್ರತಿಸ್ಪಂದಿಸುವುದಿಲ್ಲ. ತುಟಿ ಮತ್ತು ಮೋರೆಯ ಮೇಲೆ ನೀಲಿ ಛಾಯೆಯು ಕಾಣಿಸುತ್ತದೆ. ಅವನ ಚರ್ಮವು ಒದ್ದೆಯಾಗಿ, ತಣ್ಣಗೆ ಇರುತ್ತದೆ. ಮಂದವಾದ ಕ್ಷೀಣನಾಡಿ, ರಕ್ತದ ಒತ್ತಡ ಇಳಿಮುಖ, ಬಾಯಿಯಲ್ಲಿ ಶ್ಲೇಷ್ಮ ಸಂಚಯ (ಬುರುಗಾದ ನೊರೆ) ಕಾಣಿಸುತ್ತದೆ. ದೇಹದ ಉಷ್ಣಾಂಶವು ತೀರಾ ಕೆಳಮಟ್ಟಕ್ಕೆ ಇಳಿದರೂ ಕೈಕಾಲು ಬೆಚ್ಚಗಿರುತ್ತವೆ. ಮೂತ್ರ ಲೋಪವೂ ಉಸಿರಾಟದ ತೊಂದರೆಯೂ ಉಂಟಾಗುವುದು ಅಪಾಯದ ಲಕ್ಷಣಗಳಾಗಿವೆ. ಒಮ್ಮೊಮ್ಮೆ ರೋಗಿಯ ನಾಡಿಯು ಅಧಿಕವಾಗಿಯೂ ವೇಗವಾಗಿಯೂ ಬಡಿಯುತ್ತಿರಬಹುದು; ಮುಂದೆ ಸಾವು ಸಂಭವಿಸಬಹುದು.

ಚಿಕಿತ್ಸೆ ಮತ್ತು ಉಪಚಾರ :

ನಿದ್ದೆಗೋಲಿ ವಿಷ ಸೇವಿಸಿದ ರೋಗಿಯ ಬಾಯಿ, ಗಂಟಲು ಮತ್ತು ಶ್ವಾಸ ನಾಳಗಳು ತುಂಬಿಕೊಂಡು ಬುರುಗು ಶ್ಲೇಷ್ಮವು ಉಸಿರಾಟಕ್ಕೆ ಅಡ್ಡಿ ಮಾಡುವುದರಿಂದ ನಿರಾಳವಾಗಿ ಉಸಿರಾಡಲು ಇರುವ ತೊಂದರೆಗಳನ್ನು ನಿವಾರಿಸಬೇಕು. ಇದಕ್ಕಾಗಿ ರಬ್ಬರು ಕೊಳವೆಯನ್ನು ಗಂಟಲಿಗೆ ತೂರಿ ಶ್ಲೇಷ್ಮವನ್ನು ಹೊರ ತೆಗೆಯಬಹುದು; ಅಥವಾ ಕೈಯಿಂದಲೇ ಶುದ್ಧ ಮಾಡಬಹುದು. (ಕೆಲವು ಸಂದರ್ಭಗಳಲ್ಲಿ ಶಸ್ತ್ರಕ್ರಿಯೆ ನಡೆಸಿ, ಜರೂರು ಉಸಿರಾಟಕ್ಕಾಗಿ ತಾತ್ಕಾಲಿಕ ನಲಿಕೆಯನ್ನು ಸಹ ಶ್ವಾಸನಾಳಕ್ಕೆ ಜೋಡಿಸಬೇಕಾದ ಸಂಭವ ಬರಬಹುದು). ರೋಗಿಯನ್ನು ಪಲ್ಲಂಗದ ಮೇಲೆ ಮಲಗಿಸಿ ಅವನ ಕಾಲುಗಳ ಪಾರ್ಶ್ವದಲ್ಲಿ ಪಲ್ಲಂಗವನ್ನು ತುಸು ಎತ್ತರಿಸುವುದು ಸ್ವಲ್ಪ ಮಟ್ಟಿಗೆ ಪ್ರಯೋಜನ ನೀಡುತ್ತದೆ.

ವಮನ, ಹೊಟ್ಟೆತೊಳೆಯುವುದು ಮೊದಲಾದ ವಿಧಾನಗಳಿಂದ ವಿಷವನ್ನು ಹೊರಕ್ಕೆ ಹಾಕುವುದಲ್ಲದೆ ಕೃತಕ ಉಸಿರಾಟ, ಆಮ್ಲಜನಕ ನೀಡಿಕೆಗಳನ್ನೂ ಒದಗಿಸಬೇಕು; ಆಘಾತವನ್ನು ತಡೆಯಲು ಸೂಕ್ತ ಚಿಕಿತ್ಸೆ ನಡೆಸಬೇಕು. ಭೇದಿ ಉಪ್ಪಿನಿಂದ ವಿರೇಚನ ಮಾಡಿಸಬೇಕು. ಕೋರಾಮಿನ್, ಮೆಗಿಮೈಡ್ ಸೂಜಿಮದ್ದು, ರಕ್ತನಾಳದ ಮೂಲಕ ಗ್ಲೂಕೋಸ್ ನೀಡಿಕೆ, ಕಾಫಿ, ಚಹ ಮೊದಲಾದ ಉತ್ತೇಜಕಗಳ ಸೇವನೆಗಳು ಉಪಯುಕ್ತ. ಡೆಪ್ಟೋಸೋಲ್, ಪಿಕ್ರೊಟಾಕ್ಸಿನ್ ಸೂಜಿಮದ್ದುಗಳೂ

ಉಪಯುಕ್ತವಾಗಿವೆ. ಹಾಲು ಕುಡಿಸುವುದೂ ಸಹ ರೋಗಿಯಲ್ಲಿ ಉಪಯುಕ್ತ ಪರಿಣಾಮ ಬೀರುತ್ತದೆ.

ನಿದ್ದೆಗೋಲಿ ವಿಷವು ತೀರ ಹೆಚ್ಚಿನ ಪ್ರಮಾಣದಲ್ಲಿ ಮೂತ್ರದ ಮೂಲಕ ಹೊರತಳ್ಳಲ್ಪಡುವುದರಿಂದ ರೋಗಿಗೆ ಧಾರಾಳ ನೀರು ಕುಡಿಸಬೇಕು. ಬಾರ್ಲಿನೀರು, ಎಳನೀರು, ಗ್ಲೂಕೋಸ್ ಸೇವನೆ ಹೆಚ್ಚಿನ ಪ್ರಮಾಣದಲ್ಲಿ ಅಗತ್ಯ. ಕ್ಷಾರ ಮಿಶ್ರಣ ವನ್ನೂ ಮೂತ್ರಲ ಔಷಧಿಗಳನ್ನೂ ಕುಡಿಸುವದಲ್ಲದೆ ರಬ್ಬರ ನಳಿಕೆ ಹಾಕಿ ಮೂತ್ರ ತೆಗೆಯುವದು ಸಹ ಕೆಲವೊಮ್ಮೆ ಅಗತ್ಯ ಬೀಳಬಹುದು.

ನಿದ್ದೆ ಔಷಧಿಯು ಸೂಜಿಮದ್ದಿನ ಮೂಲಕ ಪ್ರಯೋಗವಾಗಿದ್ದರೆ ಸೂಜಿ ಚುಚ್ಚಿದ ಅಂಗಕ್ಕೂ ಹೃದಯಕ್ಕೂ ನಡುವೆ ಬಿಗಿಯಾದ ಬಂಧನವನ್ನು ಹಾಕಿ ವಿಷ ಪ್ರಸಾರವನ್ನು ತಡೆಗಟ್ಟಲು ಪ್ರಯತ್ನಿಸಬೇಕು; ಮತ್ತು ಸೂಜಿ ಚುಚ್ಚಿದ ಭಾಗಕ್ಕೆ ಮಂಜುಗಡ್ಡೆ (ಬರ್ಫ್) ಹಚ್ಚಬೇಕು. ರೋಗಿಯ ದೇಹದ ಉಷ್ಣತೆಯನ್ನು ಕಾಪಾ ಡಲು ಬೆಚ್ಚಗಿನ ಹೊದಿಕೆ ಹೊದಿಸಬೇಕು. ಆದರೆ ಬಿಸಿ ನೀರು ತುಂಬಿದ ಬಾಟಲಿ ಗಳನ್ನು ಪಕ್ಕದಲ್ಲಿ ಇಟ್ಟು ಶಾಖ ಮಾಡುವುದಾಗಲಿ, ಬೆಂಕಿ ಕಾಯಿಸುವುದಾಗಲಿ ವರ್ಜ್ಯ.

ರೋಗಿಯು ಮೂತ್ರ ಲೋಪ, ಮೂತ್ರದ ಇಳುವರಿ, ಮೂತ್ರ ಪಿಂಡಗಳ ವಿಕಾರ, ಹೃದಯ ಸೋಲುವುದು ಮೊದಲಾದ ನಾನಾ ಉಪದ್ರವಗಳಿಂದ ನರಳ ಬಹುದಾದುದರಿಂದ ಅವುಗಳಿಗೆ ಸೂಕ್ತ ಚಿಕಿತ್ಸೆ ನಡೆಸಬೇಕು.

ಟಿಪ್ಪಣಿ :

ವೈದ್ಯರ ಅಪ್ಪಣೆ ಚೀಟಿ ಇಲ್ಲವೆ ನಿದ್ದೆಗೋಲಿಗಳನ್ನು ಮಾರಾಟ ಮಾಡು ವುದಾಗಲಿ ಕೊಂಡುಕೊಳ್ಳುವದಾಗಲಿ ನಿಷೇಧ. ಮಕ್ಕಳು, ಮೂರ್ಖರು ಮತ್ತು ರೋಗಿಗಳ ಕೈಗೆ ಸಿಗುವಂತೆ ನಿದ್ದೆಗೋಲಿಗಳನ್ನು ಇರಿಸಬಾರದು. ಅವುಗಳನ್ನು ಬೀಗದೊಳಗೆ ಇರಿಸುವುದು ಉತ್ತಮ ಮುನ್ನೆಚ್ಚರಿಕೆಯ ಉಪಕ್ರಮವಾಗಿದೆ. ಪ್ರಾಣಹತ್ಯೆಗೂ, ಆತ್ಮಹತ್ಯೆಗೂ ಸುಲಭವಲ್ಲಿ ನಿದ್ದೆಗೋಳಿಯನ್ನು ನಾನಾ ಉಪಾಯ ಗಳಿಂದ ಬಳಸುವುದು ಸಾಧ್ಯವಿರುವುದರಿಂದ ಈ ಔಷಧಿಗಳ ಬಗ್ಗೆ ಎಷ್ಟು ಹೆಚ್ಚು ಎಚ್ಚರಿಕೆ ವಹಿಸಿದ್ದರೆ ಅಷ್ಟು ಒಳ್ಳೆಯದು. ಮದ್ಯದಲ್ಲಿ ಬೆರೆಸಿದ ನಿದ್ರಾಪ್ರದ ಔಷಧಿ ಗಳು ಬಲು ತೀಕ್ಷ್ಣ ವಿಷವಾಗಿ ಪರಿಣಮಿಸುತ್ತವೆ ಎಂಬುದನ್ನು ಮರೆಯಬಾರದು.

ಕ್ಲೋರಲ್ ಹೈಡ್ರೇಟ್

ಪರಿಚಯ :

ಬಣ್ಣವಿಲ್ಲದ ಗಾಟುವಾಸನೆಯ ಹರಳುಹರಳಾಗಿರುವ ಕ್ಲೋರಲ್ ಹೈಡ್ರೇಟ್ ನೀರಿನಲ್ಲಿಯೂ ಮದ್ಯದಲ್ಲಿಯೂ ಚೆನ್ನಾಗಿ ಕರಗುವ ಜನಪ್ರಿಯವಾದ ಇನ್ನೊಂದು ನಿದ್ರಾಪ್ರದ ಔಷಧಿ. 'ಸುಕ್ಕಾ ಶರಾಬ' ಎಂಬ ಒಂದು ಬಗೆಯ ಪ್ರಿಯವಾದ ಮಧುರ ಮಾದಕ ಪೇಯವನ್ನು ಕ್ಲೋರಲ್ ಹೈಡ್ರೇಟ್ ಮಿಶ್ರ ಮಾಡಿ ತಯಾರಿಸುತ್ತಾರೆ. ಹುಳಿಹೆಂಡದಲ್ಲಿ ಮತ್ತೇರಿಸಲು ಕ್ಲೋರಲ್ ಹೈಡ್ರೇಟ್‌ನ್ನು ಕಲಬೆರಕೆ ಮಾಡುವುದು ಈಗ ಸರ್ವೇಸಾಧಾರಣವಾಗಿದೆ. ಶರಬತ್ತು ಮತ್ತು ಬೀರ್ ನಂತಹ ಪಾನೀಯಗಳಲ್ಲಿ ಬೆರೆಸಿ ಕುಡಿಸಿ ಹಣ ದೋಚಲಿಕ್ಕೂ ಸ್ತ್ರೀಯರ ಮಾನಭಂಗ ಮಾಡಲಿಕ್ಕೂ ದುಷ್ಟರು ಈ ಔಷಧಿಯನ್ನು ಬಳಸಿದ ಉದಾಹರಣೆಗಳಿವೆ.

ಪ್ರಾಣಾಪಾಯದ ಪ್ರಮಾಣ(ಸೇವನೆ) : 3.2 ರಿಂದ 5 ಗ್ರಾಂ. ಪ್ರಾಣಾಪಾಯದ ಕಾಲಾವಧಿ 8-12 ತಾಸು. (ಆದರೆ ಕೆಲವೊಮ್ಮೆ 2-3 ದಿವಸಗಳಷ್ಟು ವಿಳಂಬವಾಗಿ ದುಷ್ಪರಿಣಾಮವು ಕಾಣಿಸುವುದೂ ಉಂಟು).

ವಿಷಪ್ರಾಶನದ ಲಕ್ಷಣ :

ಕ್ಲೋರಲ್ ಹೈಡ್ರೇಟ್ ವಿಷ ಸೇವಿಸಿದ ರೋಗಿಯ ಬಾಯಿ ಮತ್ತು ಗಂಟಲಿನಲ್ಲಿ ಉರಿ. ನೋವುಗಳು ಕಾಣಿಸುತ್ತವೆ. (ಆದರೆ ಶರಾಬಿನಂತಹ ಪೇಯಗಳಲ್ಲಿ ಮಿಶ್ರಣವಾದಾಗ ಈ ಲಕ್ಷಣಗಳು ಅಷ್ಟಾಗಿ ಕಾಣಿಸದೆ ಇರಬಹುದು; ಹಾಗೂ ಗಾಟು ವಾಸನೆಯೂ ಸಹ ಗೋಚರಿಸದೇ ಇರಬಹುದು). ರೋಗಿಗೆ ಕ್ಲೋರಲ್ ಹೈಡ್ರೇಟ್ ಸೇವಿಸಿದ ತುಸು ಹೊತ್ತಿನಲ್ಲಿ ತೂಕಡಿಕೆ ಪ್ರಾರಂಭಿಸಿ; ಕ್ರಮೇಣ ನಿದ್ರೆ, ಗಾಢ ನಿದ್ರೆ, ದೀರ್ಘಸುಪ್ತಿಯ ಅವಸ್ಥೆಗಳಿಗೆ ಒಳಗಾಗುತ್ತಾನೆ. ಅವನ ಮುಖವು ನೀಲಿಛಾಯೆಗೆ ತಿರುಗುವುದಲ್ಲದೆ ಕಣ್ಣುಬೊಂಬೆ ಕಿರಿದಾಗುತ್ತದೆ. ಮಂದವಾದ ವಕ್ರ ನಾಡಿ, ಅಸ್ತವ್ಯಸ್ತಗೊಂಡ ಉಸಿರಾಟ, ತಣ್ಣಗಿನ ಚರ್ಮ, ಇಳಿದ ಮೈಶಾಖ ಮೊದಲಾದ ಲಕ್ಷಣಗಳು ಗೋಚರಿಸುತ್ತವೆ. ಕೆಲವೊಮ್ಮೆ ಮೇಲೆ ಹೈತಿಕೆಯಂ ಗಂದೆಗಳೂ ಏಳಬಹುದು.

ಕ್ಲೋರಲ್ ಹೈಡ್ರೇಟ್ ವಿಷಪ್ರಯೋಗದ ದೀರ್ಘಕಾಲಾವಧಿ ದುಷ್ಪರಿಣಾಮಗಳಿಗೆ ತುತ್ತಾದ ರೋಗಿಯು ದೇಹಾಯಾಸ, ಮೈನಡುಕ, ಮನೋವಿಕಾರ, ಯಕೃತ್ ಪೀಡೆ, ಉಸಿರಾಟದ ತೊಂದರೆ ಮೊದಲಾದ ಉಪದ್ರವಗಳಿಂದ ನರಳುತ್ತಾನೆ.

ಚಿಕಿತ್ಸೆ ಮತ್ತು ಉಪಚಾರ :

ವಿಷ ಪ್ರಾಶನವಾದ ರೋಗಿಗೆ ಬಿಸಿ ನೀರಿನಿಂದ ಹೊಟ್ಟೆ ತೊಳೆಯುವುದು, ವಾಂತಿ ಮಾಡಿಸುವುದು, ಲವಣ ವಿರೇಚನ ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆಗಳನ್ನು ನಡೆಸಬೇಕು. ಕೊರಾಮಿನ್, ಸ್ಟ್ರಿಕ್ನೀನ್. ಕೆಫೀನ್ ಮೊದಲಾದ ಉತ್ತೇಜಕ ಔಷಧಿಗಳ ಸೂಜಿ ಮದ್ದನ್ನೂ, ಕೃತಕ ಉಸಿರಾಟ ಆಮ್ಲಜನಕ ನೀಡಿಕೆಗಳನ್ನೂ, ರಕ್ತನಾಳದ ಮೂಲಕ ಗ್ಲೂಕೋಸ್ ಪೂರಣವನ್ನೂ ಕೈಗೊಳ್ಳಬೇಕು. ದೇಹದ ಶಾಖ ರಕ್ಷಣೆಗೆ ಪ್ರಯತ್ನ ಮಾಡಬೇಕು. ಕ್ಷಾರ ಮಿಶ್ರಣ, ಬಾರ್ಲಿನೀರು, ಗ್ಲೂಕೋಸ್ ಮೊದಲಾದ ದ್ರವಗಳನ್ನು ಸಾಕಷ್ಟು ಪ್ರಮಾಣದಲ್ಲಿ ನೀಡಬೇಕು.

(ಹತ್ತನೆಯ ಅಧ್ಯಾಯದಲ್ಲಿ ಉಳಿದ ಶಾಮಕ-ನಿದ್ರಾಪ್ರದ ದ್ರವ್ಯಗಳ ವಿಷ ಚಿಕಿತ್ಸೆಯನ್ನು ಉಲ್ಲೇಖಿಸಲಾಗಿದೆ.)

ಆಹಾರ ವಿಷ

ಪರಿಚಯ :

ಹಳಸಿದ ಅನ್ನವನ್ನು ಉಂಡರೆ ವಾಂತಿ-ಭೇದಿಗಳಾಗುವ ಸಂಗತಿ ಎಲ್ಲರಿಗೂ ತಿಳಿದಿದೆ. ಆದರೆ ಕೆಲವು ಸಲ ಕೆಟ್ಟು ಹೋದ ಯಾವ ಸೂಚನೆಯೂ ಹೊರ ನೋಟಕ್ಕೆ ಕಾಣಸದೇ ದುರ್ವಾಸನೆಯಾಗಲಿ ರುಚಿ ಕೆಟ್ಟ ಲಕ್ಷಣವಾಗಲಿ ಗೋಚರಿಸದೆ ಇರುವ ಕೆಲವೊಂದು ಆಹಾರ ಪದಾರ್ಥಗಳನ್ನು-ತಿಂಡಿ ತಿನಿಸುಗಳನ್ನೂ ಸೇವಿಸಿ, ಪ್ರಾಣಾಂತಿಕ ಅಪಾಯಕ್ಕೆ ತುತ್ತಾಗುವುದುಂಟು. ಇದನ್ನು **ವಿಷಮ ಆಹಾರ ಅಥವಾ ವಿಷ ಅಹಾರ** (**ಆಹಾರ ವಿಷ**) ಎನ್ನುತ್ತಾರೆ.

ಹಿಮೋಲೈಟಿಕ್ ಸ್ಟ್ರೆಪ್ಟೋಕೋಕೈ ಮತ್ತು ಸ್ಟೆಪಿಲೋ ಕೋಕೈ ಎಂಬ ಸೂಕ್ಷ್ಮ ಅಣುರೂಪದ ಅಗೋಚರ ಶತ್ರುಗಳು ಆಹಾರದಲ್ಲಿ ಉದ್ಭವಿಸಿದಾಗ ಆ ಆಹಾರವು ವಿಷವಾಗಿ ಪರಿಣಮಿಸಿ ಸೇವಿಸಿದ ಇಡೀ ಮನೆಯವರು ಅಥವಾ ಭೋಜನ ಕೂಟಕ್ಕೆ ಬಂದ ಅತಿಥಿ ವೃಂದದವರು ಸಾರಾಸಗಟು ನರಳುತ್ತಾರೆ. ಕೆಲವು ಸಲ ಆಹಾರವನ್ನು ಎಷ್ಟೇ ಸರಿಯಾಗಿ ಬೇಯಿಸಿ ಸಿದ್ಧಪಡಿಸಿದರೂ ಸಹ ಈ ಚುರುಕಾದ ಸೂಕ್ಷ್ಮ ವಿಷ ಜೀವಿಗಳು ಚಟುವಟಿಕೆಯಿಂದ ಉಳಿದು ಬಿಡುತ್ತವೆ ! ಮುಖ್ಯವಾಗಿ ತತ್ತಿ, ಹಾಲು. ಹಣ್ಣು ಹಂಪಲು ಅದರಲ್ಲಿಯೂ ಡಬ್ಬಿಯಲ್ಲಿ ಶೇಖರಿಸಿ ಇಟ್ಟ ಹಣ್ಣುಗಳು, ಗಿಣ್ಣು, ಆಯಿಸ್‌ಕ್ರೀಂ ಮತ್ತು ಮಾಂಸಗಳಲ್ಲಿ ಈ ಬಗೆಯ ವಿಷ ಅಣುಗಳು ಹೆಚ್ಚಾಗಿ ಕಾಣಸುತ್ತವೆ.

ವಿಷ ಪ್ರಯೋಗದ ಲಕ್ಷಣಗಳು :

ಈ ಬಗೆಯ ಅಗೋಚರ ವಿಷಭರಿತ ಆಹಾರವನ್ನು ಸೇವಿಸಿದ ರೋಗಿಯಲ್ಲಿ ಊಟವಾದ ಒಂದೆರಡು ತಾಸುಗಳಲ್ಲಿ (ಕೆಲವೊಮ್ಮೆ ಆರೆಂಟು ತಾಸುಗಳಷ್ಟು ವಿಳಂಬ ವಾಗಿ) ಉಪದ್ರವಗಳು ಕಾಣಿಸಿಕೊಳ್ಳುತ್ತವೆ. ತಲೆನೋವು, ತಲೆ ತಿರುಗುವುದು, ಮತ್ತು ಅಸಾಧ್ಯ ನೀರಡಿಕೆ ರೋಗಿಯಲ್ಲಿ ಕಾಣಿಸುವ ಪ್ರಾರಂಭಿಕ ಲಕ್ಷಣಗಳು. ಹೊಟ್ಟೆ ನುಲಿತ, ವಾಂತಿ ಭೇದಿ ಮತ್ತು, ಮೈಚಳಕು, ಜ್ವರ, ಹಾಗೂ ಅದಿರು ವಾಯುಗಳಿಂದ ಕ್ರಮೇಣ ರೋಗಿಯು ನರಳುತ್ತಾನೆ. ಅವನ ಕಣ್ಣುಗೊಂಬೆ ಅರಳುತ್ತದೆ; ಚರ್ಮವು ತಣ್ಣಗೆ ಜಿಡ್ಡಾಗಿರುತ್ತದೆ. ನಿತ್ರಾಣ, ಕೈಕಾಲು ಸೆಳೆತ, ಆಘಾತ ಮತ್ತು ದೇಹದಲ್ಲಿನ ದ್ರವಾಂಶವು ಕಮ್ಮಿಯಾಗಿ ಮಂದವಾದ ನಾಡಿ, ಹೃದಯ ವಿಕಾರ ಮೊದಲಾದ ಉಪದ್ರವಗಳು ಕಾಣಿಸಿಕೊಳ್ಳುವವು. ಸಾವು ಕೂಡಾ ಸಂಭವಿಸಬಹುದು.

ಚಿಕಿತ್ಸೆ ಮತ್ತು ಉಪಚಾರ :

ಹೊಟ್ಟೆ ತೊಳೆಯುವುದು, ವಾಂತಿ ಮಾಡಿಸುವುದು, ಭೇದಿ ಮಾಡಿಸುವುದು ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆಗಳೂ, ಗ್ಲೂಕೋಸ್ ಉಪ್ಪು ನೀರುಗಳ ಪೂರಣ ಹಾಗೂ ಉತ್ತೇಜಕ ಉಪಚಾರಗಳು ಹಿತಕರವಾಗಿರುತ್ತವೆ. ಕೋಡಿನ್, ಎಟ್ರೋಪಿನ್ ಔಷಧಿಗಳು ಹೆಚ್ಚಿನ ಪರಿಣಾಮ ಬೀರುತ್ತವೆ. ವಿಶ್ರಾಂತಿ, ದ್ರವ ಆಹಾರ ಮತ್ತು ಮನೋ ನೆಮ್ಮದಿಯ ವಾತಾವರಣವು ಅಗತ್ಯ.

ಟಿಪ್ಪಣಿ :

ಒಗ್ಗದ ಆಹಾರ ಸೇವನೆಯಿಂದಲೂ ಆಹಾರ ವಿಷ ಲಕ್ಷಣಗಳು ಕಾಣಿಸ ಬಹುದು. ಅಂತಹ ಸಂದರ್ಭದಲ್ಲಿ ರೋಗಿಗೆ ಒಗ್ಗದಿರುವ ಆಹಾರವನ್ನು ವರ್ಜಿಸ ಬೇಕು.

ಬೋಟ್ಯು ಲಿಸಂ.

ಪರಿಚಯ :

ಹಸಿರು ತರಕಾರಿಗಳನ್ನು, ಮಾಗಿದ ಹಣ್ಣು ಹಂಪಲುಗಳನ್ನು ಅಥವಾ ಮಾಂಸ ಮೀನಿನಂತಹ ಖಾದ್ಯ ಪದಾರ್ಥಗಳನ್ನು ಕೆಡದಂತೆ ದೀರ್ಘಕಾಲ ದಾಸ್ತಾನು ಇರಿಸುವುದಕ್ಕೆ 'ಡಬ್ಬಿ ಶೇಖರಣೆ' ಮಾಡುತ್ತಾರಷ್ಟೆ? ಈ ಡಬ್ಬಿ ಶೇಖರಣೆಯ ವಿಧಾನದಲ್ಲಿ ಅಥವಾ ಸಂಸ್ಕರಣೆಯಲ್ಲಿ ತುಸು ಲೋಪ ದೋಷಗಳು ಸಂಭವಿಸಿದರೆ, ಡಬ್ಬಿಯೊಳಗಣ ಪದಾರ್ಥಗಳು ಕೆಡುವವು, ವಿಷಪೂರಿತವಾಗುವವು. ಆದರೆ ಹೊರ

ನೋಟಕ್ಕೆ ಯಾವುದೇ ಬಗೆಯ ವರ್ಣ ವ್ಯತ್ಯಾಸವಾಗಲಿ, ರುಚಿ ವಾಸನೆಯಲ್ಲಿ ಕುಂದಾಗಲಿ ಕಂಡುಬರುವುದಿಲ್ಲ. 'ಕ್ಲೊಸ್ಟ್ರೋಡಿಯಂ ಬೋಟಲಿನಂ' ಎಂಬ ವಿಷ ಅಣುಗಳು ಡಬ್ಬಿ ಶೇಖರಣೆಯ ದ್ರವ್ಯಗಳು ಕೆಡಲು ಕಾರಣ.

ಪ್ರಾಣಾಪಾಯದ ಪ್ರಮಾಣ (ಸೇವನೆ) : 5 ಮಿಲಿ ಲೀಟರ್. ಪ್ರಾಣಾಪಾಯದ ಕಾಲಾವಧಿ 24 ತಾಸುಗಳು.

ವಿಷ ಲಕ್ಷಣಗಳು ಮತ್ತು ಚಿಕಿತ್ಸೆ :

ಈ ವಿಷ ಪ್ರಯೋಗಕ್ಕೆ ತುತ್ತಾದ ರೋಗಿಯಲ್ಲಿ ಬಾಯಿ ಬತ್ತುವುದು, ವಾಕರಿಕೆ, ನಾಲಗೆ ಗಂಟಲು ಒಣಗುವುದು ಮೊದಲಾದ ಉಪದ್ರವಗಳು ಕಂಡು ಬರುವುವು. ಹೊಟ್ಟೆಯಲ್ಲಿ ತಳಮಳ, ಹೊಟ್ಟೆ ನೋವು, ನುಂಗಲು ಮಾತಾಡಲು ಕಷ್ಟವಾಗುವುದು, ಉಸಿರಾಟಕ್ಕೆ ತೊಂದರೆ, ಭೇದಿ ಮತ್ತು ವಾಂತಿ ಉಂಟಾಗುತ್ತವೆ; ಅವನ ಕಣ್ಣುಬೊಂಬೆ ಅರಳುತ್ತವೆ; ದೇಹ ದೌರ್ಬಲ್ಯ, ಮಂದವಾದ ನಾಡಿ, ಮುಖದ ಮೇಲೆ ನೀಲಿ ಛಾಯೆ, ಹೆಚ್ಚಿನ ಜ್ವರ, ಬಡಬಡಿಸುವುದು ಮತ್ತು ದೀರ್ಘ ಸುಪ್ತಿಗಳಿಂದ ರೋಗಿಯು ನರಳಿ ಸಾವಿಗೆ ತುತ್ತಾಗಬಹುದು. ಕೆಲವು ರೋಗಿಗಳಲ್ಲಿ ಒಂದುವಾರ ಈ ಉಪದ್ರಗಳು ಇದ್ದು ಅನಂತರ ಸಾವು ಸಂಭವಿಸುವುದೂ ಉಂಟು.

ಹೊಟ್ಟೆ ತೊಳೆಯುವುದು, ವಾಂತಿ ಮಾಡಿಸುವುದು ಮತ್ತು ವಿರೇಚನೆ ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆ ನಡೆಸಬೇಕು. ಎಂಟಿ ಬೊಟುಲಿನಸ್ ಸೆರೊಮ ಸೂಜಿ ಮದ್ದು. ಮಾರ್ಫಿಯಾ ಮತ್ತು ಗ್ಲೂಕೋಸ್ ಪೂರಣಗಳು ಉಪಯುಕ್ತವಾಗಿವೆ. ಅಗತ್ಯ ಬಿದ್ದರೆ ರೋಗಿಗೆ ಕೃತಕ ಉಸಿರಾಟವನ್ನೂ ಆಮ್ಲ ಜನಕ ನೀಡಿಕೆಯನ್ನೂ ಒದಗಿಸಬೇಕು. ಧಾರಾಳ ದ್ರವವೂ ಉತ್ತೇಜಕ ಆಹಾರವೂ ಉಪಯುಕ್ತ.


ಮುನ್ನೆಚ್ಚರಿಕೆ ;

ಡಬ್ಬಿ ಶೇಖರಣೆಯ ಖಾದ್ಯಗಳನ್ನು 15 ನಿಮಿಷ ಚೆನ್ನಾಗಿ ಬೇಯಿಸುವುದ ರಿಂದ ಈ ವಿಷಾಣುಗಳು ನಿರ್ನಾಮಹೊಂದುತ್ತವೆ. ವಿಷಪ್ರಯೋಗಕ್ಕೆ ತುತ್ತಾದವ ರಲ್ಲಿ ಶೇಕಡಾ 60 ಜನ ಪ್ರಾಣಾಪಾಯಕ್ಕೆ ತುತ್ತಾಗುವುದರಿಂದ ಡಬ್ಬಿಶೇಖರಣೆಯ ಆಹಾರವನ್ನು ಸೇವಿಸುವುದಕ್ಕೆ ಮುನ್ನ ಕಡ್ಡಾಯವಾಗಿ ಕುದಿಸಿ ಸೇವಿಸುವುದು ಕ್ಷೇಮ.

ಅಣಬೆ(ನಾಯಿಕೊಡೆ)

ಪರಿಚಯ :

ಹಳ್ಳಿಗಾಡಿನ ಜನರು ಅಣಬೆಯನ್ನು ಬೇಯಿಸಿ ತಿನ್ನುತ್ತಾರೆ. ಇತ್ತೀಚೆಗೆ ರುಚಿಕರವಾದ ಖಾದ್ಯವನ್ನೂ ಸವಿಯಾದ ಮದ್ಯವನ್ನೂ ತಯಾರಿಸಲು ತೊಡಗಿದ ಮೇಲೆ ಅನೇಕರು ಅಣಬೆಯ ತೋಟಗಳನ್ನೇ ನಿರ್ಮಿಸಲು ಪ್ರಾರಂಭಿಸಿದ್ದು ಅದೊಂದು ರೊಕ್ಕದ ಬೆಳೆಯ ಉದ್ಯಮವಾಗಿ ರೂಪುಗೊಳ್ಳುತ್ತಿದೆ. ಪೊಳ್ಳಾದ ದೇಟು, ದಪ್ಪ ಕಾಂಡ, ಕೊಡೆಯ ಆಕಾರದ ರುಂಡ ಕವಚ (ಟೊಪ್ಪಿಗೆ) ಇರುವ ಈ



ಅಣಬೆ



ಅಣಬೆ: ರುಚಿಕರ ಖಾದ್ಯ



ಅಮನೀಟಾ ಮಸ್ಕಾರಿಯಾ



ಅಮನೀಟಾ ಪಲೋಡಸ್

ಪುಟ್ಟ ಸಸ್ಯವು ನೋಟಕ್ಕೆ ಅಂದವಾಗಿದೆ; ಆಕರ್ಷಕವಾಗಿದೆ. ಮಳೆ ಬಿದ್ದ ಕೂಡಲೇ ಕಸ_ಕಡ್ಡಿಗಳ ರಾಶಿಯ ಮೇಲೆ, ಗಿಡಮರಗಳ ಸಂದು ಗೊಂದಿನಲ್ಲಿ, ತೆಂಗು, ಕಂಗು,

ಗರಿ ಹೊದೆಸಿದ ಮನೆಯ ಛಾವಣಿಗಳಲ್ಲಿ, ಹಿತ್ತಲ ಮೂಲೆ ಮುಡುಕುಗಳಲ್ಲಿ–ಎಲ್ಲೆಂದರಲ್ಲಿ ಹುಟ್ಟಿ ಬೆಳೆಯುವ ಅಲ್ಪ ಕಾಲಾವಧಿಯ ಈ ಸಸ್ಯವನ್ನು ಅಣಬೆ, ನಾಯಿಕೊಡೆ, ಅಳಂಬು ಮೊದಲಾದ ಹೆಸರುಗಳಿಂದ ಕರೆಯುತ್ತಾರೆ.

ಕೆಲವು ಜಾತಿಯ ಅಣಬೆಗಳು ವಿಷ ವರ್ಗಕ್ಕೆ ಸೇರಿದ ಸಸ್ಯಗಳಾದರೆ, ಇನ್ನು ಕೆಲವು ಬಗೆಯ ಅಣಬೆಗಳು ಬೇಯಿಸಿದಾಗ ವಿಷ ಪೂರ್ಣವಾಗಿ ಮಾರ್ಪಟ್ಟು ಸೇವನೆಗೆ ಅನರ್ಹವಾಗುತ್ತವೆ. ವಿಷಯುಕ್ತವಾದ ಕೆಲವು ಬಗೆಯ ಅಣಬೆಗಳನ್ನು ಉಪ್ಪು ನೀರಿನಲ್ಲಿ ಅಥವಾ ಹುಣಸೆ ಗೊಜ್ಜಿನಲ್ಲಿ ತುಸು ಹೊತ್ತುನೆನೆಸಿಟ್ಟರೆ ತಿನ್ನಲು ಅಡ್ಡಿ ಇಲ್ಲ; ವಿಷ ರಹಿತವಾದ ಇನ್ನೂ ಕೆಲವು ಜಾತಿಯ ಅಣಬೆಯನ್ನು ಬೇಯಿಸದೇ ಹಸಿಯಾಗಿ ಸೇವಿಸಬಹುದು. ಹೀಗೆ ಅಣಬೆಯಲ್ಲಿ ವಿಷ–ನಿರ್ವಿಷ ವರ್ಗಉಂಟು.

ಅಮನೀಟಾ ಪಲೋಡಸ್ ಮತ್ತು ಅಮನೀಟಾ ಮಸ್ಕಾರಿಯಾ ಎಂಬ ಎರಡು ಬಗೆಯ ಅಣಬೆಗಳು ತೀಕ್ಷ್ಣ ವಿಷ ಭರಿತ ಸಸ್ಯಗಳು. ಇವುಗಳಲ್ಲಿ ಮಸ್ಕರಿನ್ ಎಂಬ ವಿಷ ಸತ್ವವಿದೆ. ಮಸ್ಕಾರಿಯಾ ಅಣಬೆ ಉಸುಕು ಮಣ್ಣಿನಲ್ಲಿ ಒಂಟಿಯಾಗಿ ಬೆಳೆಯುವ ದೊಡ್ಡ ಆಕೃತಿಯ ಅಣಬೆಯಾಗಿದ್ದು ಅದಕ್ಕೆ ಟೊಳ್ಳಾದ ಕಾಂಡ, ತುದಿಯಲ್ಲಿ ಅಗಲವಾದ, ಅರಸಿನ ಅಥವಾ ಕಿತ್ತಳೆ ಬಣ್ಣದ ಕೊಡೆಯಾಕಾರದ ಟೊಪ್ಪಿಗೆ, ದೇಟಿನ ಎರಡೂ ಪಕ್ಕಗಳಲ್ಲಿ ಕೊಡೆಗೆ ಸಮೀಪಿಸಿ ಬಿಳಿಯ ಪುಪ್ಪುಸಗಳಿರುತ್ತವೆ. ಪಲೋಡಸ್ ಅಣಬೆಯು ಬಿಳಿಯ ಬಣ್ಣದಿದ್ದು ಗಿಡ ಮರಗಳ ಮೇಲೆ ನಾಲ್ಕು ಆರು ಅಂಗುಲ ಎತ್ತರಕ್ಕೆ ಬೆಳೆಯುತ್ತದೆ. ಇದರ ಕಾಂಡವು ಪೊಳ್ಳಾಗಿದ್ದರೂ ಮೇಲ್ತುದಿಯಲ್ಲಿ ಬಟ್ಟಲಿನಂತೆ ಮೇಲ್ಮುಖವಾಗಿ ತೆರೆದ ಕವಚವಿರುತ್ತದೆ. ದಿನಕಳೆದಂತೆ ದುರ್ವಾಸನೆ ಬೀರುವುದೂ ಈ ವರ್ಗದ ನಾಯಿಕೊಡೆಯ ಲಕ್ಷಣ.

ಪ್ರಾಣಾಪಾಯದ ಪ್ರಮಾಣ (ಸೇವನೆ) : 0.25 ಗ್ರಾಂ.

ವಿಷ ಪ್ರಯೋಗದ ಲಕ್ಷಣಗಳು (ಸೇವನೆ) :

ಅಣಬೆ ವಿಷ ಸೇವಿಸಿದ ರೋಗಿಗೆ ಕೆಲವೊಮ್ಮೆ 6 ಗಂಟೆಗಳಲ್ಲಿ, ಕೆಲವೊಮ್ಮೆ ಎರಡು ದಿನಗಳೊಳಗಾಗಿ ವಿಷ ಲಕ್ಷಣಗಳು ಕಾಣಿಸಿಕೊಳ್ಳುವವು. ಅಂತಹ ರೋಗಿಯಲ್ಲಿ ಚರ್ಮ ಕೆರಳುವುದು, ಗಂಟಲು ಕಟ್ಟುವುದು, ಹೊಟ್ಟೆಉರಿ, ನೋವು, ನೀರಡಿಕೆ, ವಾಕರಿಕೆ ಮತ್ತು ರಕ್ತ ಮಿಶ್ರಿತ ಭೇದಿಗಳು ಉಂಟಾಗುವವು. ಕೆಲವೊಮ್ಮೆ ಮೈ ಕೈಗಳ ಮೇಲೆ ಹೈತ್ರಿಕೆಯ ಗಂಡೆಗಳೂ ಏಳಬಹುದು. ರೋಗಿಯ ಮುಖವು ನೀಲಿ ಛಾಯೆಗೆ ತಿರುಗುವುದು ಮತ್ತು ಮೂತ್ರದಲ್ಲಿ ರಕ್ತ ಹಾಗೂ ಅಲ್ಬುಮಿನ್ ಕಾಣಿಸುವುದು. ಕೆಲವರಲ್ಲಿ ಕಾಮಿಲಾ ವಿಕಾರಗಳೂ ಉಂಟಾಗಬಹುದು. ಮುಂದ

ವಾದ ನಾಡಿ, ಅಸ್ತವ್ಯಸ್ತಗೊಂಡ ಉಸಿರಾಟ ಹಾಗೂ ಹೃದಯದ ಬಡಿತ ಇವುಗಳಲ್ಲದೆ ಮೈ ಬೆವರುವುದು, ಅದಿರುವಾಯು ಮೊದಲಾದ ಉಪದ್ರವಗಳು ಉಂಟಾಗಬಹುದು; ಮತ್ತು ಸಾವು ಸಂಭವಿಸಬಹುದು. ಇನ್ನು ಕೆಲವು ರೋಗಿಗಳಲ್ಲಿ ಇಷ್ಟೆಲ್ಲ ಲಕ್ಷಣಗಳು ಕಾಣಿಸದೆ ತಲೆನೋವು, ತಲೆತಿರುಗುವುದು, ಮೈ ಕೈ ಸೆಳೆತ, ಜೊಲ್ಲು ಸುರಿಯುವುದು, ಕಣ್ಣು ಬೊಂಬೆ ಕಿರಿದಾಗುವುದು, ಬಡಬಡಿಕೆ, ಹೃದಯ ವಿಕಾರ, ದೀರ್ಘ ಸುಪ್ತಿ ಮತ್ತು ಸಾವು ಸಂಭವಿಸಬಹುದು.

ಪ್ರತ್ಯೌಷಧ ಮತ್ತು ಚಿಕಿತ್ಸೆ ;

ಎಟ್ರೋಪಿನ್ ಸೂಜಿ ಮದ್ದು ಅಣಬೆ ವಿಷಕ್ಕೆ ದಿವ್ಯ ಪ್ರತ್ಯೌಷಧ. ಹೊಟ್ಟೆ ತೊಳೆಯುವುದು, ವಾಂತಿ ಮಾಡಿಸುವುದು, ಲವಣ ವಿರೇಚನ ಮಾಡಿಸುವುದು ಮೊದಲಾದ ಸಾಂಪ್ರದಾಯಿಕ ವಿಧಾನಗಳಿಂದ ರೋಗಿಯನ್ನು ಚಿಕಿತ್ಸೆ ಮಾಡಬೇಕು. ಅವನಿಗೆ ಹಾಲು, ಹಣ್ಣಿನ ರಸ, ಗ್ಲೂಕೋಸ್ ಮೊದಲಾದ ದ್ರವಗಳನ್ನು ಸಾಕಷ್ಟು ನೀಡಬೇಕು. ಇತರ ಉಪದ್ರವಗಳಿಗೆ ಲಕ್ಷಣಾನುಸಾರ ಚಿಕಿತ್ಸೆ ಮಾಡಬೇಕು.

ಕೇಸರಿಬೇಳೆ

ಪರಿಚಯ :

ತೊಗರಿಬೇಳೆಯೊಂದಿಗೆ ಕಲಬೆರಕೆ ಮಾಡಿ ಮಾರುವ ಕೇಸರಿಬೇಳೆ ಉತ್ತರ ಪ್ರದೇಶ, ಮಧ್ಯ ಪ್ರದೇಶ ಮತ್ತು ಬಿಹಾರದ ಅನೇಕ ಭಾಗಗಳಲ್ಲಿ ಬೆಳೆಯುತ್ತದೆ. ಮೇಲುನೋಟಕ್ಕೆ ತೊಗರಿಬೇಳೆಯಂತೆಯೇ ಕಾಣಿಸುವುದರಿಂದ ಕೇಸರಿ ಬೇಳೆಯು ದುರ್ಮಿಶ್ರಣಕಾರರಿಗೆ ಸುಲಭಮಾರ್ಗವನ್ನು ತೆರೆದಿಟ್ಟು ಆಹ್ವಾನ ನೀಡಿದಂತೆ ಇದೆ. ಸಸ್ಯಶಾಸ್ತ್ರದಲ್ಲಿ ಕೇಸರಿ ಬೇಳೆಯನ್ನು **ಲ್ಯಾಥೈರಸ್ ಸಾತಿವಸ್** ಎಂದು ಕರೆಯುತ್ತಾರೆ.

ಕೇಸರಿ ಬೇಳೆ ಸ್ವಯಂ ವಿಷಭರಿತವಾದ ಧಾನ್ಯವಲ್ಲವೆಂದೂ, ಕೇಸರಿ ಬೇಳೆ ಬೆಳೆಯುವ ಹೊಲಗಳಲ್ಲಿ ಹುಟ್ಟಿಕೊಳ್ಳುವ ವಿವಿಯಸಾತಿವಾ ಎಂಬ ವಿಷಸಸ್ಯದ ಆಟ್‌ಕಾ ಎಂಬ ವಿಷಸತ್ವದೊಂದಿಗೆ ಸಂಪರ್ಕಹೊಂದುವುದರಿಂದ ದುಷ್ಪರಿಣಾಮಗಳು ಉಂಟಾಗುತ್ತವೆಯೆಂದೂ ಅನೇಕ ಪರಿಣತರ ಅಭಿಮತ. ಆದರೆ ಈ ವಿಷಸಸ್ಯದ ಸಂಪರ್ಕವಿಲ್ಲದ ಕೇಸರಿಬೇಳೆಯನ್ನು ಉಪಯೋಗಿಸುವವರಲ್ಲಿಯೂ ಕೂಡಾ ರೋಗ ಚಿನ್ಹೆಗಳು ಗೋಚರಿಸುವುದರಿಂದ ಅಗೋಚರ ವಿಷವು ಕೇಸರಿಬೇಳೆಯಲ್ಲಿಯೇ ಸೇರಿಕೊಂಡಿದೆ ಎಂಬುದಾಗಿ ಈಗ ನಂಬಲಾಗಿದೆ. ಕೇಸರಿಬೇಳೆಯನ್ನು ನಿತ್ಯಉಣ್ಣುವವರಲ್ಲಿ ಎ. ಜೀವಾತುವಿನ ಕೊರತೆಯು ಕಾಣಿಸುತ್ತದೆ. ದೇಹ ಪೋಷಣೆಗೆ ಅಗತ್ಯ





ಕೇಸರಿ ಗಿಡ ಮತ್ತು ಸೂಕ್ಷ್ಮ ದರ್ಶನಿಯಲ್ಲಿ ಕೇಸರಿ ಬೇಳೆ

ವಾದ ಟ್ರೈಪ್ಟೋಫಾನ್ ಎಂಬ ಅಮೈನೋ ಆ್ಯಸಿಡ್ ಸಂಪೂರ್ಣ ಲೋಪವಾಗಿ ಬಿಡುವುದು ಮಾತ್ರವಲ್ಲದೆ ಸಸಾರಜನಕ ಸತ್ವದ ಕೊರತೆಯೂ ಸಹ ಉಂಟಾಗುತ್ತದೆ. ಒಟ್ಟಿನ ಮೇಲೆ ರೋಗಿಯ ದೇಹದಲ್ಲಿ ಹೆಚ್ಚಿನ ದುಷ್ಪರಿಣಾಮಗಳು ಕಾಣಿಸುತ್ತವೆ. ದುರ್ದೈವವಶಾತ್ ಈ ಕೇಸರಿಬೇಳೆಯ ವಿಷ ಲಕ್ಷಣಗಳು ಸೇವಿಸಿದ ಅಲ್ಪಕಾಲದಲ್ಲಿ ಕಾಣಿಸದೇ ಕಾಲಾಂತರದಲ್ಲಿ ತಲೆದೋರುವುದರಿಂದ ಇದರ ಕಡೆಗೆ ನೇರವಾಗಿ ಗಮನ ಬೀಳುವುದಿಲ್ಲ.

ವಿಷಪ್ರಯೋಗದ ಲಕ್ಷಣಗಳು :

ದೀರ್ಘಕಾಲ ಕೇಸರಿ ಬೇಳೆಯನ್ನು ನಿತ್ಯ ಆಹಾರದಲ್ಲಿ ಬಳಸುವವರು ದೀರ್ಘ ಕಾಲದ ವಿಷಪ್ರಯೋಗದ ಉಪದ್ರವಗಳಿಗೆ ತುತ್ತಾಗುತ್ತಾರೆ. ಅಂತಹ ರೋಗಿಯಲ್ಲಿ ಬೆನ್ನುನೋವು, ಕೈಕಾಲು ನಿತ್ರಾಣ ಮೊದಲಾದ ಲಕ್ಷಣಗಳು ಇದ್ದಕ್ಕಿದಂತೆಯೇ ಹೋಲದಲ್ಲಿ ದಿಢೀರಾಗಿ ಕಾಣಿಸಿಕೊಳ್ಳಬಹುದು. ಅಥವಾ ಸುಖನಿದ್ರೆ ಮಾಡಿ ಬೆಳಗ್ಗೆ ಎದ್ದು ಕುಳಿತುಕೊಳ್ಳುವಾಗ ಗೋಚರಿಸಬಹುದು. (ರಾತ್ರಿ ಮಲಗಿ ನಿದ್ರಿಸಿದ ರೋಗಿಯು ಮುಂಜಾನೆ ಎದ್ದು ಹಾಸಿಗೆಯ ಮೇಲೆ ಕುಳಿತುಕೊಳ್ಳಲು ಪ್ರಯತ್ನಿಸಿದಾಗ ಕೈಕಾಲು ಛಳಕು ಹೊಡೆದಂತೆ ಕಾಣಿಸಿಕೊಂಡು, ರೋಗಿಯು ಚಡಪಡಿಸುತ್ತಾನೆ; ಕಷ್ಟಪಟ್ಟು ಚಕ್ಕಳಮಕ್ಕಳ ಹಾಕಿ ಕುಳಿತರೂ, ಮೇಲೇಳಲು ಪ್ರಯಾಸಪಡಬೇಕಾಗುತ್ತದೆ. ಕಷ್ಟಪಟ್ಟು ಎದ್ದರೂ ಊರು ಗೋಲಿನ ಸಹಾಯವಿಲ್ಲದೆ ಒಂದು ಹೆಜ್ಜೆ ಊರಲೂ ಸಾಧ್ಯವಾದಂತಹ ದುರವಸ್ಥೆ ಉಂಟಾಗುವುದು.) ಕೈಕಾಲುಗಳು ಬಲಹೀನವಾಗಿ ಗಡಗಡ ನಡುಗುತ್ತವೆ; ಮತ್ತು ಪಾದಗಳನ್ನು ಅಡ್ಡಡ್ಡವಾಗಿ ಇರಿಸಿ ಎಳೆದೆಳೆದು ಹೆಜ್ಜೆ ಇರಿಸಬೇಕಾಗುತ್ತದೆ; ಕ್ರಮೇಣ ಪಾರ್ಶ್ವವಾಯು ಹಿಡಿದು, ಎರಡೂ ಕಾಲುಗಳು ಶಕ್ತಿಹೀನವಾಗುತ್ತವೆ. ಆದರೆ ಮಾಂಸಖಂಡಗಳಲ್ಲಿ ಸಂಜ್ಞಾಶಕ್ತಿಯು ಉಳಿದಿದ್ದು ರೋಗಿಯು ಸಹಿಸಲಸಾಧ್ಯವಾದ ನೋವನ್ನು ಅನುಭವಿಸಬೇಕಾಗುತ್ತದೆ. ಅವನು ಸಂಪೂರ್ಣ ಹಾಸಿಗೆ ಹಿಡಿಯುತ್ತಾನೆ; ಹಾಗೂ ಅನಿಚ್ಛಿತವಾಗಿ ಮಲಮೂತ್ರ ವಿಸರ್ಜನೆಯಾಗುತ್ತದೆ.

ಚಿಕಿತ್ಸೆ ಮತ್ತು ಉಪಚಾರ :

ರೋಗಿಗೆ ಕೇಸರಿಬೇಳೆ ವರ್ಜ್ಯ ಮಾಡಿ ಎ. ಜೀವಾತು, ಕೆರೋಟಿನ್ ಸತ್ವವುಳ್ಳ ಶಕ್ತಿವರ್ಧಕ ಅನ್ನ-ಆಹಾರಗಳನ್ನು ಸಂಪೂರ್ಣ ವಿಶ್ರಾಂತಿಯನ್ನು ನೀಡಬೇಕು. ಕಾಲುಗಳಿಗೆ ವಿದ್ಯುದಾಘಾತ ಚಿಕಿತ್ಸೆಯು ಪರಿಣಾಮಕಾರಿಯಾಗಿದೆ. ಪಿಂಡತೈಲ, ಬಲಾಲಾಕ್ಷ ತೈಲ, ತ್ರಿಫಲಾ ತೈಲಗಳ ಪೈಕಿ ಒಂದನ್ನು ಅಂಗಮರ್ದನ ಮಾಡುವುದು ಹೆಚ್ಚಿನ ಫಲದಾಯಕವಾಗಿದೆ. ಚಿಕಿತ್ಸೆಗೆ ತಜ್ಞರ ನೆರವು ಅಗತ್ಯ.

ಗಾಜಿನಪುಡಿ ಮತ್ತು ವಜ್ರದಪುಡಿ

ಪರಿಚಯ :

ಹೆಚ್ಚಾಗಿ ಆತ್ಮಹತ್ಯೆಗೆ ಕೆಲವೊಮ್ಮೆ ಆಕಸ್ಮಿಕವಾಗಿ ಗಾಜಿನಪುಡಿ ಅಥವಾ ವಜ್ರದಪುಡಿ ಸೇವಿಸಲ್ಪಡುವುದುಂಟು. ಇವು ಸ್ವಭಾವದಿಂದ ಪ್ರಾಣಾಂತಿಕವಾಗಿವೆ. ನಯವಾದ ಗಾಜಿನಪುಡಿಯನ್ನು ಸೇವಿಸಿದರೆ ತಕ್ಷಣ ಗಂಟಲು, ಬಾಯಿ ಮತ್ತು ನಾಲಿ

ಗಳಲ್ಲಿ ಕೊರೆಯುವ ಉರಿ ವೇದನೆ ಕಾಣಿಸುತ್ತದೆ; ಹೊಟ್ಟೆಯಲ್ಲಿಯೂ ಕರುಳಿನಲ್ಲಿಯೂ ವೇದನೆಯುಂಟಾಗುತ್ತದೆ: ವಾಕರಿಕೆ ರಕ್ತಛಾಯೆ ಬೆರೆತ ವಾಂತಿ ಉಂಟಾಗುತ್ತದೆ. ಕೆಲವು ಸಲ ಭೇದಿಯೂ ಕೆಲವು ಸಲ ಮಲಬದ್ಧತೆಯೂ ಉಂಟಾಗುತ್ತದೆ. ಅನ್ನಕೋಶ, ಹೊಟ್ಟೆ ಕರಳು ಮೊದಲಾದ ಅಂಗಗಳಲ್ಲಿ ಗಾಯ, ಬಿರುಕು ಮತ್ತು ವ್ರಣಗಳುಂಟಾಗಿ ರಕ್ತಸ್ರಾವ ಮತ್ತು ಆಘಾತ ಸಂಭವಿಸಿ, ರೋಗಿಯು ಪ್ರಾಣಾಪಾಯಕ್ಕೆ ತುತ್ತಾಗುವನು.

ಚಿಕಿತ್ಸೆ :

ಗಾಜಿನಪುಡಿ ಅಥವಾ ವಜ್ರಪುಡಿಯನ್ನು ನುಂಗಿದ ರೋಗಿಗೆ ಮೃದುವಾದ ವಸ್ತುಗಳನ್ನು ತಿನ್ನಿಸಬೇಕು. (ಬಾಳೆಹಣ್ಣು, ಹಾಲಲ್ಲಿ ಅದ್ದಿದ ಬ್ರೆಡ್ಡು, ಮೆತ್ತಗಿನ ಅನ್ನ ಮೊದಲಾದುದನ್ನು ತಿನ್ನಿಸಬೇಕು.) ಅನಂತರ ವಾಂತಿ-ಭೇದಿಗಳ ಮೂಲಕ ವಿಷವನ್ನು ಹೊರಗೆ ಹಾಕಬೇಕು. ಕೆಲವು ವೇಳೆ ಹೊಟ್ಟೆ ತೊಳೆಯುವುದು ಸಹ ಉಪಯುಕ್ತವಾಗಿದೆ. ರೋಗಿಗೆ ಶಾಮಕ ಉಪಚಾರ, ಮಾರ್ಫಿನ್ ಸೂಜಿ ಮದ್ದು ಕೊಡಬೇಕು; ಮತ್ತು ಉಪದ್ರವಗಳಿಗೆ ಸೂಕ್ತ ಚಿಕಿತ್ಸೆ ನಡೆಸಬೇಕು.

ಅಧ್ಯಾಯ—8

ಜಂತುವಿಷ ಮತ್ತು ಕೀಟವಿಷ

ನಾಗರಹಾವು

ಪರಿಚಯ :

ಜಡೆನಾಗಣ್ಣನನ್ನು ನೋಡದವರು ವಿರಳ. ಹಾವಾಡಿಗನ ಪುಂಗಿಯ ನಾದಕ್ಕೋ ಮೈ ಕೈ ಚಲನೆಯ ಮಾಟಕ್ಕೋ—ಹೆಡೆಬಿಚ್ಚಿ ನಾದಲೋಲನಂತೆ ತಲೆ ದೂಗುವ ನಾಗರಹಾವು ಭಯಂಕರ ವಿಷಸರ್ಪ. ಒಟ್ಟು ಹತ್ತುಬಗೆಯ ನಾಗರ ಹಾವುಗಳಲ್ಲಿ **ನಾಗರಹಾವು** ಮತ್ತು **ಕಾಳಿಂಗಸರ್ಪ** ಎಂಬ ಎರಡುಬಗೆಯ ಹಾವು ಗಳು ನಮ್ಮ ದೇಶದಲ್ಲಿ ಹೆಚ್ಚಾಗಿ ಕಾಣಸುತ್ತವೆ. ಗೋಧಿನಾಗರ, ಕಾಳನಾಗರ ಮೊದಲಾದ ಹೆಸರಿನಿಂದ ಕರೆಯಲ್ಪಡುವ ನಾಗರಹಾವಿನ ಹೆಡೆಯಲ್ಲಿ ಸ್ವಸ್ತಿಕ ಆಕಾ ರದ ಮಚ್ಚೆಯಿರುತ್ತದೆ. ಅಚ್ಚ ಬಿಳಿಯ ಬಣ್ಣದ ಹಾಗೂ ಹೆಡೆಯಲ್ಲಿ ಮಚ್ಚೆ ಇಲ್ಲದ ನಾಗರಹಾವು ಕೂಡಾ ಅಪರೂಪಕ್ಕೆ ಕಾಣಸುವುದುಂಟು. (ಆದರೆ ಹೆಜ್ಜೆ ಇಲ್ಲದ ನಾಗರಹಾವು ಭಾರತದಲ್ಲಿ ಇಲ್ಲ ಬೇರೆ ದೇಶಗಳಲ್ಲಿ ಮಾತ್ರ ಕಾಣಸುತ್ತವೆ.)

ನಾಗರಹಾವಿನ ವಾಸಸ್ಥಾನ ಹೊರಬಯಲಿನಲ್ಲಿ—ಹುತ್ತದಲ್ಲಿ ಎಂದು ಪ್ರತೀತಿಯಿ ದ್ದರೂ ಗುಡ್ಡ, ಬೆಟ್ಟ, ಗೋಡಾರಣ್ಯಗಳಲ್ಲಿಯೂ, ಬಯಲಿನ ಬಿಲ–ಬಿರುಕುಗಳ ಲ್ಲಿಯೂ. ಮುರುಕು ಮನೆ ಮಣಗಳ ಸಂದುಗೊಂದುಲುಗಳಲ್ಲಿಯೂ, ಸ್ಮಶಾನ, ಹಾಳುಬಾವಿಗಳ ಬಳಿಯಲ್ಲಿಯೂ ನಾಗರಹಾವು ತನ್ನ ಠಾವನ್ನು ಹೂಡಿರುತ್ತದೆ. ಇದು ಮರವೇರಬಲ್ಲುದು: ಹಾಗೂ ಆಹಾರವಿಲ್ಲದೆ ತಿಂಗಳುಗಟ್ಟಲೇ ಉಪವಾಸ ಇರಬಲ್ಲುದು,


ಇರುಳು ಸಂಚಾರದ ಅಭ್ಯಾಸವುಳ್ಳ ನಾಗರ ಹಾವು ಬಲು ಅಂಜುಬುರುಕ ಜೀವಿ. ಅಪಾಯದ ಮುನ್ಸೂಚನೆ ಸಿಕ್ಕಿದ ಕೂಡಲೇ ಹರಿದೋಡಿ ತಲೆ ತಪ್ಪಿಸಿ ಕೊಳ್ಳಲು ಪ್ರಯತ್ನಿಸುತ್ತದೆ. ಅಪಾಯವು ತೀರಾ ಸಮೀಪಿಸಿ, ಪಲಾಯನದ ದಾರಿ ಇಲ್ಲದಾಗಿ ವಿಧಿಯಿಲ್ಲದಾಗ ಮಾತ್ರ ಕೋಪದಿಂದ ಹೆಡೆಬಿಚ್ಚಿ, ಹೆಡೆಯನ್ನು ಹಿಂದಕ್ಕೂ ಮುಂದಕ್ಕೂ ಅಲ್ಲಾಡಿಸುತ್ತ ಬುಸುಗುಟ್ಟುತ್ತದೆ. ಆಗ ಮನುಷ್ಯನು ಶಿಲೆಯಂತೆ ನಿಂತರೆ ಹಾವು ಸದ್ದಿಲ್ಲದೆ ನುಣುಚಿಕೊಂಡು ಹೋಗುತ್ತದೆ.

ಆಕಸ್ಮಾತ್ ತುಸು ಸಪ್ಪಳ ಮಾಡಿದರೆ ಅಥವಾ ಸ್ವಲ್ಪ ಅಲುಗಾಡಿದರೂ ಸಾಕು ಹಾವು ಮತ್ತೆ ಹೆಡೆಯೆತ್ತಿ ಕಡಿಯಲು ಸಜ್ಜಾಗುವುದು. ನಾಗರ ಹಾವಿನ ಮಾರಿ



ನಾಗರ ಹಾವು

ಬಹಳ ಚಂಚಲ ಜೀವಿಯಾಗಿದ್ದು ಅತಿ ಸುಲಭವಾಗಿ ಉದ್ರೇಕಗೊಂಡು ಕಡಿದು ಬಿಡುತ್ತದೆ; ಹಾಗೂ ಅದರ ವಿಷವು ತೀಕ್ಷ್ಣತೆಯಲ್ಲಿ ಕಮ್ಮಿಯೇನೂ ಅಲ್ಲ.



ಹಾವಿನ ವಿಷದಂತ

ಹಾವು ಕಡಿದ ವಿಷ ಲಕ್ಷಣಗಳು :


ಹಾವು ಕಡಿತ ಬಲು ಕ್ಷಿಪ್ರ ಕ್ರಿಯೆ. ಕ್ಷಣಾರ್ಧದಲ್ಲಿ ಹಾವಿನ ದವಡೆಯಲ್ಲಿರುವ ವಿಷ ಗ್ರಂಥಿಯಿಂದ "ಕೋರೆಹಲ್ಲು"ಗಳ ಮೂಲಕ ಗಾಯಕ್ಕೆ ವಿಷವು ಸ್ರವಿಸುವುದು. 15 ಮಿಲಿಗ್ರಾಮ್ ವಿಷವು ಪ್ರಾಣಾಪಾಯಂವನ್ನುಂಟು ಮಾಡಬಲ್ಲದು. ನಾಗರ ಹಾವು ಕಡಿದ 30 ನಿಮಿಷಗಳೊಳಗಾಗಿ ವಿಷ ಲಕ್ಷಣಗಳು ಕಾಣಿಸತೊಡಗುತ್ತವೆ. ಗಾಯವಾದ ಭಾಗದಲ್ಲಿ ಮೊದಲು ನೋವು, ಉರಿ ಮತ್ತು ಬಾವು ಕಾಣಿಸಿಕೊಂಡು ತುಸು ಹೆಪ್ಪುಗಟ್ಟಿದ ರಕ್ತಸ್ರಾವವು ಪ್ರಾರಂಭವಾಗುತ್ತದೆ. ಬಾವು ಕ್ರಮೇಣ ಇಡಿಯ ಅಂಗವನ್ನು ವ್ಯಾಪಿಸುತ್ತ ಬಂದು, ಜೋಮು ಹಿಡಿಯುವುದಲ್ಲದೆ ಗಾಯದ ಬಳಿಯ ಅಂಗಾಂಶವು ನೀಲಿ ಅಥವಾ ಗುಲಾಬಿ ವರ್ಣಕ್ಕೆ ತಿರುಗುವುದು.

ಈ ಸ್ಥಾನಿಕ ಲಕ್ಷಣಗಳ ಜೊತೆಗೆ ಕಾಣಿಸುವ ಸರ್ವಾಂಗವ್ಯಾಪಕ ಉಪದ್ರಗಳಲ್ಲಿ ಕೈಕಾಲು ಶಕ್ತಿಗುಂದುವುದು, ದೇಹಾಯಾಸ, ನಿಶ್ಶಕ್ತಿ, ಕೊರಳು ಬಲಹೀನವಾದಂತೆ ಕಾಣಿಸಿಕೊಂಡು ತಲೆಚಾಚಿ ಮಲಗಬೇಕೆನ್ನುವ ಆಸೆಯುಂಟಾಗುವುದು ಮುಖ್ಯವಾಗಿವೆ. ರೋಗಿಯ ಕಣ್ಣು ಬೊಂಬೆ ಕಿರಿದಾಗುತ್ತದೆ. ಅವನಿಗೆ ಮಾತಾಡಲಿಕ್ಕೂ ನುಂಗಲಿಕ್ಕೂ ತೊಂದರೆ ಕಾಣಿಸಿಕೊಳ್ಳುತ್ತದೆ; ಮತ್ತು ಅವನ ಕಟವಾಯಿ



ಕಟ್ಟು ಹಾಕುವ ವಿಧಾನಗಳು

ಯಿಂದ ಜೊಲ್ಲು ಸುರಿಯತೊಡಗುತ್ತದೆ. ಕ್ರಮೇಣ ಉಸಿರಾಟದ ತೊಂದರೆಯೂ, ವಾಂತಿ–ವಾಕರಿಗೆಗಳೂ, ವಿವಿಧಾಂಗಗಳಿಂದ ರಕ್ತ ಸ್ರಾವವೂ ಉಂಟಾಗಿ ಸಾವು ಸಂಭವಿಸಬಹುದು. ಪ್ರಾಣಾಪಾಯದ ಕಾಲಾವಧಿ 24–64 ತಾಸುಗಳು. (ಇದಕ್ಕೆ



ತದ್ವಿರುದ್ಧವಾಗಿ ನಿರ್ವಿಷ ಹಾವು ಕಡಿದ ಮನುಷ್ಯನು ಕ್ಷಣಕ್ಷಣಕ್ಕೂ ಗಾಬರಿ, ಹುಚ್ಚಾಟ, ಓಡಾಟಗಳನ್ನು ಹೆಚ್ಚು ಹೆಚ್ಚಾಗಿ ಪ್ರದರ್ಶಿಸುತ್ತಿದ್ದು, ಪ್ರಜ್ಞಾಬದ್ಧ ಸ್ಥಿತಿಗೆ ತಲುಪುತ್ತಾನೆ! ವಾಸ್ತವಾಗಿ ಅವನಿಗೆ ತನಗೆ ಕಡಿದುದು ವಿಷ ಸರ್ಪವೆಂಬ ಭ್ರಮೆಯೇ ಈ ಲಕ್ಷಣಗಳಿಗೆ ಕಾರಣವೇ ಹೊರತು ಸರ್ಪ ವಿಷವಲ್ಲ).

ಚಿಕಿತ್ಸೆ ಮತ್ತು ಉಪಚಾರ :

ಹಾವು ಕಡಿದ ರೋಗಿಯನ್ನು ಮೊದಲು ಹಾಸಿಗೆಯ ಮೇಲೆ ಮಲಗಿಸಬೇಕು. ಹಾವು ಕಡಿದ ಅಂಗವನ್ನು ಅಲುಗಾಡದಂತೆ ಬಂಧಿಸಬೇಕು. ಅನಂತರ ಗಾಯಕ್ಕೂ ಹೃದಯಕ್ಕೂ ನಡುವೆ ಮಾಂಸ ಪುಷ್ಟವಾದ ಭಾಗದಲ್ಲಿ (ಎಂದರೆ ಕಾಲಲ್ಲಿ ಗಾಯವಾಗಿದ್ದರೆ ತೊಡೆಯಲ್ಲಿಯೂ, ಕೈಯಲ್ಲಿ ಗಾಯವಾಗಿದ್ದರೆ ತೋಳಿನಲ್ಲಿಯೂ) ರಬ್ಬರ ಪಟ್ಟಿ ಅಥವಾ ಹುರಿಮಾಡಿದ ದಾರ, ಇಲ್ಲವೇ ಬಟ್ಟೆಯಿಂದ ಪಟ್ಟಿ ಬಿಗಿದು ಅಂಗ ಬಂಧ ಮಾಡಬೇಕು. ಈ ಕಟ್ಟನ್ನು ಪ್ರತಿ 15–20 ನಿಮಿಷಗಳಿಗೊಮ್ಮೆ 2–3 ನಿಮಿಷದಷ್ಟು ಹೊತ್ತು ತುಸು ಸಡಿಲಮಾಡಿ, ಮತ್ತೆ ಬಿಗಿಗೊಳಿಸಬೇಕು. ಪ್ರತ್ಯೌಷಧ ನೀಡಿದ ಒಂದು ತಾಸಿನ ನಂತರ ಅಂಗಬಂಧವನ್ನು ಕ್ರಮೇಣ ಸ್ವಲ್ಪ ಸ್ವಲ್ಪವಾಗಿ ಸಡಿಲಿಸುತ್ತ ಬಂದು ಅನಂತರ ಪೂರ್ಣವಾಗಿ ತೆಗೆದು ಬಿಡಬಹುದು.

ಗಾಯವನ್ನು ನಂಜುನಿರೋಧಕದ ದುರ್ಬಲ ದ್ರಾವಣದಿಂದ ತೊಳೆದು ಹರಿತವಾದ ಚಾಕು ಅಥವಾ ಬ್ಲೇಡನ್ನು ದೀಪದ ಉರಿಜ್ಯೋತಿಯಲ್ಲಿ ತುಸು ಹೊತ್ತು ಬಿಸಿ ಮಾಡಿ ಅನಂತರ ಉದ್ದವಾದ ಗಾಯಹಾಕಿ, ಹಾವು ಕಡಿದ ಗಾಯದಿಂದ ರಕ್ತವು ಹೊರಬಂದು ಹರಿಯುವಂತೆ ಮಾಡಬೇಕು. ಇದರಿಂದ ಗಾಯದ ಸುತ್ತುಮುತ್ತು ಅಂಗಾಂಶಗಳಲ್ಲಿ ಸಂಚಿತವಾದ ವಿಷವು ಹೊರಬರಲು ಸಹಾಯವಾಗುತ್ತದೆ. ಅನಂತರ ಮೊಲೆಹಾಲು ಹೀರುವ ಪಂಪು ಇದ್ದರೆ ಅದನ್ನು ಹಚ್ಚಿ ಗಾಯದಿಂದ ವಿಷಮಿಶ್ರಿತ ರಕ್ತವನ್ನು ತೆಗೆಯಬಹುದು. ಗಾಯವನ್ನು ಕ್ರಿಮಿನಾಶಕದಿಂದ ಮತ್ತೊಮ್ಮೆ ತೊಳೆದು ಮೃದುವಾದ ಪಟ್ಟಿಕಟ್ಟಬೇಕು. ಮಂಜುಗಡ್ಡೆ (ಬರ್ಫ) ಸಿಕ್ಕಿದರೆ ಗಾಯದ ಸುತ್ತ ಹಚ್ಚುವುದು ಅಥವಾ ತಣ್ಣೀರಿನಲ್ಲಿ ತೊಯ್ದ ಬಟ್ಟೆಯನ್ನು ಇರಿಸುವುದು ಒಳ್ಳೆಯದು. (ಈ ವಿಧಾನದಿಂದ ಆ ಭಾಗದಲ್ಲಿ ರಕ್ತಚಲನೆಯು ಕುಂಠಿತವಾಗಿ ನಂಜೇರುವುದೂ ನಿಧಾನಿಸಬಹುದು. ಅಲ್ಲದೆ ಉರಿ-ವೇದನೆಗಳೂ ಕಮ್ಮಿಯಾಗುತ್ತವೆ.)


ಪ್ರತ್ಯೌಷಧ ಮತ್ತು ಚಿಕಿತ್ಸೆ :

ಆ್ಯಂಟಿವಿನಂ ಅಥವಾ ಪಾಲಿವಿನಂ ಎಂಬ ಸೂಜಿಮದ್ದು ಹಾವಿನವಿಷಕ್ಕೆ ನಿರ್ದಿಷ್ಟ ಪ್ರತ್ಯೌಷಧ. ಇದನ್ನು 50 ಮಿಲಿಲೀಟರ ಪ್ರಮಾಣದಲ್ಲಿ ರಕ್ತನಾಳದ ಮೂಲಕ ನೀಡಬೇಕು. ಅಗತ್ಯವೆನಿಸಿದರೆ ಮತ್ತೆ ಕೊಡಬೇಕು. ಹೀಗೆ ಸಾಕಷ್ಟು ಪ್ರಮಾಣದಲ್ಲಿ ಮತ್ತು ವಿಳಂಬವಿಲ್ಲದೆ ಸಕಾಲದಲ್ಲಿ ಸರ್ಪವಿಷ ಪ್ರತ್ಯೌಷಧವನ್ನು ನೀಡಿದರೆ ರೋಗಿಯು ಪ್ರಾಣಾಪಾಯದಿಂದ ಪಾರಾಗುವುದರಲ್ಲಿ ಸಂದೇಹವಿಲ್ಲ. ಸೀರಂ ಪ್ರತಿಕ್ರಿಯೆ ಬಾರದಂತೆ ಸೂಕ್ತ ಮುನ್ನೆಚ್ಚರಿಕೆ ವಹಿಸಬೇಕು. ಕಾರ್ಟಿಸೋನ್, ಪೆನಿಸಿಲಿನ್ ಸೂಜಿಮದ್ದುಗಳೂ, ಗ್ಲೂಕೋಸ್—ಉಪ್ಪು ನೀರು ಪೂರಣವೂ ಉಪಯುಕ್ತವಾಗಿವೆ. ಉಸಿರಾಟದ ತೊಂದರೆ ಉಂಟಾದರೆ ಶ್ವಾಸನಾಳವನ್ನು ಛೇದಿಸಿ ನಳಿಕೆ ಹಾಕಿ ನೆರವಾಗಬೇಕು. ಹಾವುಕಡಿದ ವಿಷಕ್ಕೆ ಮಂತ್ರವಾದ, ಗಿಡಮೂಲಿಕಾ ಚಿಕಿತ್ಸೆಗಳು ಕೂಡಾ ರೂಢಿಯಲ್ಲಿವೆ.

ಮಂಡಲ ಸರ್ಪ

ಪರಿಚಯ :

ಮಂಡಲಸರ್ಪದ ಮೈಮೇಲೆ ಮೇಲಿಂದ ಕೆಳಕ್ಕೆ ಮೂರು ಸಾಲುಗಳಲ್ಲಿ ಕಪ್ಪು ಮಂಡಲಗಳು ಹೊಳೆಯುತ್ತವೆ. (ಇದರಿಂದಲೇ ಮಂಡಲಸರ್ಪವೆಂದು ಹೆಸರು ಬಂದಿದೆ.) ಮಂಡಲಸರ್ಪವು ಕಡಿದರೆ ಗಾಯವಾದ ಭಾಗವು ಕ್ರಮೇಣ ಕೊಳೆತು



ಮಂಡಲ ಸರ್ಪದ ಮೂತಿ

ಹೋಗುವುದರಿಂದ **ಕೊಳಕುಮಂಡಲ**ವೆಂದೂ ಕರೆಯುತ್ತಾರೆ. ಈಹಾವಿನ ತಲೆಯು ಚಪ್ಪಟೆ; ಬಾಲವು ಚಿಕ್ಕದಾಗಿದ್ದು ಇದು ಹುಲ್ಲುಗಾವಲು ಮತ್ತು ಹೂದೋಟಗಳಲ್ಲಿ ಜಡಜಂತುವಾಗಿ ಬಿದ್ದಿರುತ್ತದೆ. ಕಡಿಯಲು ಮುಂದಾದಾಗ ಹೆಚ್ಚು ಶಕ್ತಿಯಿಂದ

ತುಸು ನೆಗೆದು ಬಲವಾಗಿ ಕಡಿಯುತ್ತದೆ. ಇದು ಬುಸು ಗುಟ್ಟುವ ಶಬ್ದವು ತೀರ ಭಯಾನಕವಾದುದು. ಉರಗ ವರ್ಗದಲ್ಲಿ ಇದು ಮರಿಗಳನ್ನೀಡುವ ಜಾತಿಯದು. (ನಾಗರಹಾವು ಮತ್ತು ಕನ್ನಡಿಹಾವು ಮೊಟ್ಟೆಯಿರಿಸುತ್ತವೆ.)

ವಿಷವೇರಿದ ಲಕ್ಷಣಗಳು :

ಮಂಡಲಸರ್ಪವು ಕಡಿದ ಕೂಡಲೇ ಗಾಯದಲ್ಲಿ ನೋವು, ಉರಿ ಮತ್ತು ಬಾವು ಕಾಣಿಸುವದಲ್ಲದೆ ಗಾಯದ ಸುತ್ತ ಚರ್ಮ ವಿವರ್ಣವೂ ಕಾಣಿಸುತ್ತದೆ. ರಕ್ತ ವರ್ಣದ ಸ್ರಾವ ಮತ್ತು ತೀವ್ರವೇದನೆಗಳೂ ಉಂಟಾಗುತ್ತವೆ. ಪ್ರಾಣಾಪಾಯದ ಕಾಲಾವಧಿ 24 ಗಂಟೆಗಳಿಂದ 3 ದಿವಸ. ಆದರೆ ಕೆಲವು ಸಲ 2-3 ವಾರಗಳಷ್ಟು ವಿಳಂಬಿಸಿ ಪ್ರಾಣಾಪಾಯ ಸಂಭವಿಸುವುದೂ ಉಂಟು. ಮಂಡಲಸರ್ಪವು ಕಡಿದ ಭಾಗ (ಎಂದರೆ ಬೆರಳು ಇತ್ಯಾದಿ) ಅಂಗಕ್ಷಯವಾಗುವ ಸಂಭವವಿದೆ.

ಚಿಕಿತ್ಸೆ ಮತ್ತು ಉಪಚಾರ :

ಮಂಡಲಹಾವು ಕಡಿದ ರೋಗಿಯನ್ನು ಪ್ರತ್ಯೇಕವಾದ ಕೊಠಡಿಯಲ್ಲಿ ಮಲಗಿಸಿ ಗಾಯವನ್ನು ನಂಜುನಿರೋಧಕದ ದುರ್ಬಲದ್ರಾವಣದಿಂದ ತೊಳೆದು ಬ್ಲೇಡು ಅಥವಾ ಹರಿತವಾದ ಚಾಕುವನ್ನು ಬೆಂಕಿಯಲ್ಲಿ ಕಾಸಿ ಶುದ್ಧಮಾಡಿ ಉದ್ದನೆ ಗಾಯ ಹಾಕಿ ರಕ್ತಹರಿಸಿ ಅಂಗಬಂಧ ಮಾಡುವುದಲ್ಲದೆ ಗಾಯದ ಮೇಲೆ ಮಂಜುಗಡ್ಡೆಯನ್ನು ಇರಿಸಿ ವಿಷಪ್ರಸಾರವನ್ನು ತಡೆಗಟ್ಟಲು ಪ್ರಯತ್ನಿಸಬೇಕು. ಗಾಯದ ಮೇಲೆ ಈಥೈಲ್ ಕ್ಲೋರೈಡ್ ಸಿಂಪರಣೆ ಕೂಡಾ ಉಪಯುಕ್ತವಾಗಿದೆ. ಮಂಡಲಸರ್ಪ ವಿಷದ ಸಿದ್ಧಪ್ರತ್ಯೌಷಧವನ್ನು ರಕ್ತನಾಳದ ಮೂಲಕ ಸಾಕಷ್ಟು ಪ್ರಮಾಣದಲ್ಲಿ ಕೊಡಬೇಕು. ಕಾರ್ಟಿಸೋನ್ ಮತ್ತು ಪೆನಿಸಿಲಿನ್ ಸೂಜಿಮದ್ದುಗಳೂ ಗ್ಲೂಕೋಸ್, ಉಪ್ಪುನೀರು ಪೂರಣವೂ ಉಪಯುಕ್ತವಾಗಿದೆ.

ಕನ್ನಡಿಹಾವು

ಪರಿಚಯ :

ಕನ್ನಡಿಹಾವು ಮತ್ತು ಪಟ್ಟೆ ಕನ್ನಡಿ ಹಾವು (ಕಡಂಬಳ — ಪಟ್ಟೆಕಡಂಬಳ) ಎಂಬ ಎರಡು ಜಾತಿಯ ವಿಷಉರಗಗಳು ಗಾತ್ರದಲ್ಲಿ ಚಿಕ್ಕದಾಗಿದ್ದರೂ ಭಯಂಕರ ವಿಷ ಸರ್ಪಗಳಾಗಿವೆ. ಇವುಗಳ ವಿಷ ನಾಗರಹಾವಿನ ವಿಷಕ್ಕಿಂತ ಮೂರು ಪಾಲು ಅಧಿಕ ತೀಕ್ಷ್ಣತೆಯಿಂದ ಕೂಡಿದೆ. ಈ ಹಾವಿನ ಮೈಮೇಲೆ ಅಚ್ಚ ಬಿಳಿಯ ರೇಖೆಗಳು ಕಮಾನಿನಂತೆ ತಲೆಯಿಂದ ಬಾಲದ ತುದಿಯವರೆಗೂ ಅಡ್ಡಡ್ಡವಾಗಿ ಇರುತ್ತವೆ.




ಕನ್ನಡಿ ಹಾವು

ಕನ್ನಡಿಹಾವಿನ ವಾಸಸ್ಥಾನ ಜನನಿಬಿಡ ಸ್ಥಳವೇ ಆಗಿದ್ದು, ಮನೆಯ ಸೂರಲ್ಲೋ, (ಛಾವಣಿ) ಬಚ್ಚಲು—ಜಗಲಿಗಳ ಅಂಚಿನಲ್ಲೋ, ಬೀರು, ಕಪಾಟುಗಳ ಸಂದಿನಲ್ಲೋ ಅಥವಾ ತೋಟ ಬಯಲುಗಳ ನೆರಳಲ್ಲೋ ಅವಿತಿದ್ದು ಆಹಾರವನ್ನರಸುತ್ತ ರಾತ್ರಿ ಸಂಚಾರಕ್ಕೆ ಹೊರಡುತ್ತದೆ. ಕನ್ನಡಿಹಾವಿನ ವಿಶೇಷ ಅಭ್ಯಾಸವೆಂದರೆ ಗಂಡು—ಹೆಣ್ಣು ಜೊತೆಯಾಗಿ ಸಂಚರಿಸುವುದು. ಆದ್ದರಿಂದ ಒಂದು ಹಾವನ್ನು ಕೊಂದಾಗ ಸಂಗಾತಿಯನ್ನೂ ಅರಸಿಕೊಲ್ಲಬೇಕು.

ವಿಷಲಕ್ಷಣ :

ವಿಶೇಷ ರಕ್ತಸ್ರಾವವಾಗುವುದು ಈ ಹಾವುಕಡಿದ ಲಕ್ಷಣಗಳಲ್ಲಿ ಪ್ರಮುಖವಾದುದು. ಕಡಿದ ಗಾಯದಿಂದ ಮಾತ್ರವಲ್ಲದೆ ರೋಗಿಯ ಮೂಗು, ಬಾಯಿ ಮತ್ತು ಜನನೇಂದ್ರಿಯ ದ್ವಾರಗಳಿಂದಲೂ ರಕ್ತಸ್ರಾವವಾಗುವುದು. ಕೆಲವೊಮ್ಮೆ ಹೊಟ್ಟೆಯೊಳಗೆ ಕೂಡಾ ರಕ್ತಸ್ರಾವವಾಗಿ ಗಡ್ಡೆಕಟ್ಟಬಹುದು, ಅಂತಹ ರೋಗಿಯು



ಕನ್ನಡಿ ಹಾವಿನ ಮೂತಿ

ಅತಿಶಯವಾದ ಹೊಟ್ಟೆ ನೋವಿನಿಂದ ನರಳುತ್ತಾನೆ. ಪ್ರಾಣಾಪಾಯದ ಕಾಲಾವಧಿ 6–24 ತಾಸು. ಆದರೆ ಕೆಲವೊಮ್ಮೆ ಒಂದುವಾರದ ನಂತರ ಪ್ರಾಣಾಪಾಯ ಸಂಭವಿಸುವುದೂ ಉಂಟು. ಪಟ್ಟೆ ಕನ್ನಡಿ ಹಾವಿನ ವಿಷವು ಇನ್ನಷ್ಟು ಭೀಕರ ಸ್ವರೂಪದ್ದಾಗಿದ್ದು ನಾಗರ ಹಾವಿನ ವಿಷಕ್ಕಿಂತ 16 ಪಟ್ಟು ಅಧಿಕ ತೀಕ್ಷ್ಣತೆಯುಳ್ಳದ್ದಾಗಿದೆ.

ಚಿಕಿತ್ಸೆ ಮತ್ತು ಉಪಚಾರ :

ಕನ್ನಡಿ ಹಾವು ಕಡಿದ ರೋಗಿಯನ್ನು ಪ್ರತ್ಯೇಕವಾದ ಕೊಠಡಿಯಲ್ಲಿ ಮಲಗಿಸಬೇಕು. ಅನಂತರ ಗಾಯವನ್ನು ನಂಜು ನಿರೋಧಕ ದ್ರಾವಕದಿಂದ ತೊಳೆದು, ಬ್ಲೇಡು ಅಥವಾ ಹರಿತವಾದ ಚಾಕುವಿನ ಅಲಗನ್ನು ದೀಪದ ಬೆಂಕಿಗೆ ಹಿಡಿದು ತುಸು ಬಿಸಿ ಮಾಡಿ ಗಾಯಹಾಕಿ, ವಿಷಭರಿತ ದುಷ್ಟರಕ್ತವು ಹರಿಯುವಂತೆ ಮಾಡಬೇಕು. ಅಂಗಬಂಧ ಹಾಕುವುದು, ಗಾಯದ ಮೇಲೆ ಮಂಜುಗಡ್ಡೆ ಹಚ್ಚುವುದು ಮೊದಲಾದ ಉಪಾಯಗಳಿಂದ ವಿಷ ಪ್ರಸಾರವನ್ನು ಸಾಧ್ಯವಾದಷ್ಟು ಮಟ್ಟಿಗೆ ತಡೆಗಟ್ಟಬೇಕು. ಈಥೈಲ್ ಕ್ಲೋರೈಡ್ ಸಿಂಪರಣೆಯಿಂದ ವೇದನೆಯು ತುಸು ಮಟ್ಟಿಗೆ ಉಪಶಮನವಾಗುತ್ತದೆ. ಸಿದ್ಧ ಪ್ರತ್ಯೌಷಧವನ್ನು ರಕ್ತ ನಾಳದ ಮೂಲಕ ರೋಗಿಗೆ ಕೊಡುವದಲ್ಲದೆ ವಿಟಮಿನ್ ಕೆ, ಕಾರ್ಟಿಸೋನ್ ಸೂಜಿ ಮದ್ದುಗಳೂ, ಗ್ಲೂಕೋಸ್, ಉಪ್ಪು ನೀರಿನ ಪೂರಣಗಳು ಉಪಯುಕ್ತವಾಗಿವೆ.

ಕಣಜದ ಹುಳ, ಜೇನು ಹುಳ ಮತ್ತು ತುಂಬಿ – ಕೀಟ ವಿಷ

ಪರಿಚಯ :

ಕಣಜದ ಹುಳ, ಜೇನು ನೊಣ, ತುಂಬಿ ಮೊದಲಾದ ಕೀಟಗಳು ಕೊಂಡಿಯಿಂದ ಚುಚ್ಚಿದಾಗ ಸಣ್ಣಗಾಯವಾಗಿ ಉರಿ, ವೇದನೆ ಹಾಗೂ ಚಿಕ್ಕ ಗಂಡೆಗಳು ಕಾಣಿಸಿಕೊಂಡು ಹೆಚ್ಚಿನ ಉಪದ್ರವವಿಲ್ಲದೆ ವಾಸಿಹೋಗುವುದು ಸಾಮಾನ್ಯ ಸಂಗತಿಯಾದರೂ, ಕೆಲವೊಮ್ಮೆ ಪ್ರಾಣಾಪಾಯ ಸಂಭವಿಸಬಹುದಾದಷ್ಟು ತೀವ್ರ ದುಷ್ಪರಿಣಾಮಗಳು ಈ ಕೀಟವಿಷದಿಂದ ಉಂಟಾಗಬಹುದು. ಈ ಕೀಟಗಳು ಚುಚ್ಚಿದಾಗ 'ಹಿಸ್ಟಾಮಿನ್' ಜಾತಿಯ ವಿಷವು ದೇಹದಲ್ಲಿ ಪ್ರಸಾರವಾಗುತ್ತದೆ. ಜೇನು ನೊಣವು ಕುಟುಕಿದಾಗ ಅದರ ಕೊಂಡಿಯ ಸೂಜಿ ಮೊನೆಯಂತಹ ತುದಿಯು ಚರ್ಮದೊಳಗೆ ನೆಟ್ಟು ಬಿಡುತ್ತದೆ. ಇದರಿಂದಾಗಿ ಮತ್ತೆ ಆ ನೊಣವು ಕುಟುಕುವುದಿಲ್ಲ. ಆದರೆ ಇತರ ಕೀಟಗಳು ಮುಖ್ಯವಾಗಿ ಕಣಜದ ಹುಳ ಮತ್ತೆ ಮತ್ತೆ ಅನೇಕ ಸಲ ದಾಳಿ ಮಾಡಬಹುದು. ಹೈಮೆನೊಪ್ಟೆರಾ ವರ್ಗದ ಕಣಜದ ಹುಳಗಳು ಕುಟುಕಿದಾಗ ಭಯಂಕರ ವಿಷ ಲಕ್ಷಣಗಳು ಕಾಣಿಸುತ್ತವೆ.



ಹೆಜ್ಜೇನು




ಕೆಲಸಗಾರ ಜೇನುನೊಣ




ಕಣಜದ ಹುಳ



ತುಂಬಿ



ಕರಿಕಣಜ



ಕುಂಬಾರ ಕಣಜ

ವಿಷ ಲಕ್ಷಣಗಳು :

ಕೀಟ ವಿಷ ಬಾಧೆಗೆ ಗುರಿಯಾದ ರೋಗಿಯು ತಲೆ ತಿರುಗುವುದು, ಸ್ಥಾನಿಕವಾಗಿ ಉರಿ, ವೇದನೆ, ಎದೆ ಹಿಡಿದುಕೊಳ್ಳುವುದು ಮೊದಲಾದ ಉಪದ್ರವಗಳಿಂದ ನರಳುತ್ತಾನೆ. ರೋಗಿಯ ಮುಖವು ವಿವರ್ಣವಾಗುವುದು ಮತ್ತು ಮೈಮೇಲೆ

ಹೈತ್ರಿಕ ಗಂದೆಗಳು ಏಳುವವು. ಉಸಿರಾಟದ ತೊಂದರೆ ಕಾಣಿಸಿಕೊಳ್ಳುವದಲ್ಲದೆ ಚರ್ಮವು ತಣ್ಣಗೆ ಜಿಡ್ಡು ಜಿಡ್ಡಾಗುವುದು. ಹೃದಯ ವಿಕಾರ, ಮೂರ್ಛೆ ತಪ್ಪುವುದು, ಅನೈಚ್ಛಿಕವಾಗಿ ಮಲ-ಮೂತ್ರ ವಿಸರ್ಜನೆಯಾಗುವುದು ಮೊದಲಾದ ಉಪದ್ರವಗಳು ಕಾಣಿಸಿಕೊಳ್ಳುವುವಲ್ಲದೆ ಸಾವು ಕೂಡಾ ಸಂಭವಿಸಬಹುದು. ತೀವ್ರ ಪರಿಣಾಮ ಕಾಣಿಸಿಕೊಂಡ ಅನೇಕ ರೋಗಿಗಳಲ್ಲಿ ಮೋರೆ ಊದಿಕೊಳ್ಳುವುದು, ಗಾಯವಾದ ಭಾಗದಲ್ಲಿ ಹೆಚ್ಚಿನ ಬಾವು ಉರಿ ಮತ್ತು ನೋವು ಸ್ಥಾನಿಕವಾಗಿ ಉಂಟಾಗುವುವು. ಅಸಾತ್ಮ್ಯವುಳ್ಳವರಲ್ಲಿ ಕಣಜದ ಹುಳ ಕಡಿದರೆ ಅತಿ ಕ್ಷಿಪ್ರವಾಗಿ ಸಾವು ಸಂಭವಿಸಬಹುದು.

ಚಿಕಿತ್ಸೆ ಮತ್ತು ಉಪಚಾರ :

ಎಡ್ರಿನಾಲಿನ್ ಸೂಜಿಮದ್ದು ಕೀಟ ವಿಷಗಳಿಗೆ ಮುಖ್ಯವಾಗಿ ಕಣಜದ ಹುಳ ಕಡಿತಕ್ಕೆ ಪ್ರತ್ಯೌಷಧ. ಆ್ಯಂಟಿಹಿಸ್ಟಾಮಿನ್ (ಹಿಸ್ಟಾಮಿನ್ ನಿರೋಧಕ) ಔಷಧಿಗಳು ಕಾರ್ಟಿಸೋನ್ ವರ್ಗದ ದ್ರವ್ಯಗಳು ಹೆಚ್ಚಿನ ಸತ್ಪರಿಣಾಮ ಬೀರುತ್ತವೆ. ಜೇನು ನೊಣ ಚುಚ್ಚಿದ ಕೊಂಡಿಯನ್ನು ತೆಗೆಯಲು ದೀಪದ ಉರಿಯಲ್ಲಿ ಸೂಜಿಯನ್ನು ತುಸು ಹೊತ್ತು ಕಾಯಿಸಿ ಶುದ್ಧಮಾಡಿ, ಗಾಯವನ್ನು ಚುಚ್ಚಿ ತೆಗೆಯಬೇಕು. ಅಮೋನಿಯಾ ದ್ರಾವಕ ಅಥವಾ ವಿನೆಗರ್ (ಹುಣಸೆ ಗೊಜ್ಜು) ದುರ್ಬಲ ದ್ರಾವಣ ಲೇಪನದಿಂದ ಉರಿ-ವೇದನೆ ಶಮನವಾಗುತ್ತದೆ. ಅನಿಷ್ಟ ಲಕ್ಷಣಗಳು ಕಾಣಿಸಿದರೆ ವೈದ್ಯರ ಸಹಾಯಕ್ಕೆ ಧಾವಿಸಬೇಕು. ಕುಟುಕಿದುದು ಕ್ಷುದ್ರ ಕೀಟವೆಂದು ಕಡೆಗಣಿಸ ಬಾರದು.

ಚೇಳು

ಪರಿಚಯ :

ಚೇಳು ಕುಟುಕಿದಾಗ ಅದರ ಕೊಂಡಿಯಿಂದ ಹೊರಸೂಸುವ ವಿಷವು ಭಯಂಕರ ವೇದನೆಯನ್ನೂ ಕೆಲವೊಮ್ಮೆ ಪ್ರಾಣಾಂತಿಕ ಅಪಾಯವನ್ನೂ ಉಂಟುಮಾಡ ಬಲ್ಲದು. ಮಕ್ಕಳ ಪಾಲಿಗಂತೂ ಚೇಳಿನ ವಿಷ ತೀರ ಅಪಾಯಕಾರಿ. ಪ್ರತಿ ವರ್ಷ 150 ಸಾವುಗಳು ಚೇಳಿನ ಕಡಿತದಿಂದ ಸಂಭವಿಸುತ್ತಿದ್ದು ಈ ಪೈಕಿ ಹೆಚ್ಚಿನವು ಬಾಲಕರ ಮರಣ ಎಂಬ ಸಂಗತಿಯು ತುಂಬಾ ಆತಂಕಕಾರಿಯೇ ಸರಿ.

ಕಸಕಡ್ಡಿಗಳ ತಿಪ್ಪೆಯಲ್ಲಿ, ಮರಮಟ್ಟುಗಳ ಸಂದಿನಲ್ಲಿ, ಕತ್ತಲು ಕೋಣೆಯ ಮೂಲೆಯಲ್ಲಿ, ಛಾವಣಿಯ ಸಂದುಗೊಂದುಗಳಲ್ಲಿ ಅವಿತಿದ್ದು ಮನುಷ್ಯ ಸಂಪರ್ಕ ಬಂದಾಗ ತಟಕ್ಕನೆ ಕುಟುಕಿ ಬಿಡುವ ಚೇಳಿನ ಬಾಲದ ತುದಿಯ ಕೊಂಡಿಯು ಪೊಳ್ಳಾ

ಗಿದ್ದು ವಿಷ ಗ್ರಂಥಿಯಿಂದ ಸರಬರಾಜಾಗುವ ವಿಷವು ಕ್ಷಣಾರ್ಧದಲ್ಲಿ ಗಾಯುವನ್ನು ಸೇರಿ ಬಿಡುತ್ತದೆ. ವಾಸ್ತವವಾಗಿ ಚೇಳಿನ ವಿಷವು ಹಾವಿನ ವಿಷಕ್ಕಿಂತಲೂ ಹೆಚ್ಚು ಘಾತಕವಾದುದಾದರೂ ಒಮ್ಮೆ ಕುಟುಕಿದಾಗ ಪ್ರಸಾರವಾಗುವ ವಿಷದ ಪ್ರಮಾಣವು ಅತ್ಯಲ್ಪವಾದುದರಿಂದ ರೋಗಿಯಲ್ಲಿ ಉಂಟಾಗುವ ಅಪಾಯದ ತೀವ್ರತೆ ಅಷ್ಟು ಭೀಕರವಾಗಿ ಕಾಣಿಸುವುದಿಲ್ಲ. ಆದರೂ ಕೂಡಾ ಚೇಳಿನ ವಿಷವು ಪ್ರಾಣಾಪಾಯು ವನ್ನು ತರಬಲ್ಲದು ಎಂಬುದನ್ನು ಮರೆಯಬಾರದು.

ವಿಷ ಲಕ್ಷಣಗಳು :

ಚೇಳು ಕುಟುಕಿದ ರೋಗಿಗೆ ತಕ್ಷಣ ನೋವು, (ಸ್ಥಳೀಯ ನೋವು) ತಲೆ ತಿರುಗುವುದು, ಕಣ್ಣು ಕತ್ತಲೆ ಬರುವುದು, ಸಂಕಟ, ಆಯಾಸ, ವಾಂತಿ–ಭೇದಿ ಮೊದಲಾದ ಉಪದ್ರವಗಳು ಉಂಟಾಗುತ್ತವೆ. ಕೆಲವೊಮ್ಮೆ ಅದಿರುವಾಯು ಬುದ್ಧಿಭ್ರಮೆ ಸಹ ಉಂಟಾಗಬಹುದು. ರೋಗಿಯಲ್ಲಿ ಬಾಯಿ ಒಣಗುವುದು, ನಾಲಗೆ ದಪ್ಪವಾಗುವುದು, ಹೊಟ್ಟೆಚಳಕು, ಉಸಿರಾಟದ ತೊಂದರೆ ಮೊದಲಾದ ಉಪದ್ರವಗಳು ಕಾಣಿಸಿಕೊಂಡು, ಚಡಪಡಿಕೆ ಹೆಚ್ಚಾಗುತ್ತದೆ. ಕೆಲವೊಮ್ಮೆ ಚೇಳು ಕುಟುಕಿದ ಅಂಗವು ಬೆರಳು ಇತ್ಯಾದಿ ಒಣಗಿ ನಿರುಪಯುಕ್ತವಾಗಬಹುದು. ಪ್ರಾಣಾ ಪಾಯದ ಕಾಲಾವಧಿ 24 ತಾಸು.

ಚಿಕಿತ್ಸೆ :

ಚೇಳು ಕುಟುಕಿದ ರೋಗಿಯನ್ನು ಹಾಸಿಗೆಯ ಮೇಲೆ ಮಲಗಿಸಿ, ಗಾಯವನ್ನು ಪೊಟಾಸಿಯಂ ಪರಮಾಂಗನೇಟ್ ದುರ್ಬಲ ದ್ರಾವಣದಿಂದ ತೊಳೆಯಬೇಕು. ಗಾಯದ ಮೇಲೆ ಮಂಜು ಗಡ್ಡೆ ಹಚ್ಚುವುದು, ಅಂಗಬಂಧ ಹಾಕುವುದು, ಮೊದ ಲಾದ ವಿಧಾನಗಳಿಂದ ವಿಷ ಪ್ರಸಾರವನ್ನು ನಿಧಾನಗೊಳಿಸಬಹುದು. ಗಾಯದ ಸುತ್ತ ಕೊಕೇನ್ ಅಥವಾ ಜೈಲೋಕೇನ್ ಸೂಜಿ ಮದ್ದನ್ನು ಚುಚ್ಚುವುದು ಅಥವಾ ಈಥರ್ ಕ್ಲೋರೈಡ್ ಸಿಂಪಡಿಸುವುದು ನೋವಿನ ಉಪಶಮನಕ್ಕೆ ಸಹಾಯಕವಾಗು ತ್ತದೆ. ಆ್ಯಂಟಿ ಹಿಸ್ಟಾಮಿನ್ ದ್ರವ್ಯಗಳು, ಹೈಡ್ರೋಕಾರ್ಟಿಸೋನ್, ಕ್ಯಾಲ್ಸಿಯಂ ಗ್ಲೂಕೋನೇಟ್ ಮೊದಲಾದ ಔಷಧಿಗಳು ಉಪಯುಕ್ತವಾಗಿವೆ. ಶಾಮಕ ಔಷಧಿ ಗಳನ್ನೂ, ಉಪ್ಪು ನೀರಿನ ಪೂರಣವನ್ನೂ ಅಗತ್ಯನೋಡಿ ಒದಗಿಸಬೇಕು.

ಆಯುರ್ವೇದ ವೈದ್ಯರು ಚೇಳು ಕುಟುಕಿದ ಗಾಯಕ್ಕೆ ಬಿಸಿ ತುಪ್ಪದ ಧಾರೆ ಹಿಡಿಯುವುದು, ತುಳಸಿ ತೆನೆ, ಮಾತುಲುಂಗ ರಸ ಮತ್ತು ಗೋಮೂತ್ರ ಮಿಶ್ರಿತ ಕಲ್ಕವನ್ನು ಲೇಪಿಸುವುದು ಮೊದಲಾದ ಬಾಹ್ಯ ಚಿಕಿತ್ಸೆಯನ್ನೂ ಸಕ್ಕರೆ–ತುಪ್ಪ ಬೆರೆಸಿದ ಹಾಲು ಸೇವನೆಯನ್ನೂ ಉಪದೇಶಿಸುತ್ತಾರೆ.

ಜೇಡ (ಲೂತ)

ಪರಿಚಯು :

ಮನೆಯ ಕತ್ತಲು ಕೋಣೆಯ ಮೂಲೆಗಳಲ್ಲಿ, ಮಹಡಿಯ ಸಂದುಗೊಂದು ಗಳಲ್ಲಿ, ತೋಟದ ಗಿಡ ಮರಗಳಲ್ಲಿ ಮತ್ತು ಬಯಲಿನ ಹುಲ್ಲು ಹಾಸುಗಳೆಡೆಯಲ್ಲಿ ನವಿರಾದ ಎಳೆಗಳಿಂದ ರಂಜಿಸುವ ಪುಟ್ಟ ಬಲೆಗಳನ್ನು ನೇಯ್ದು ಹುಳ ಹುಪ್ಪಟೆ ಗಳನ್ನು ಆಹ್ವಾನಿಸಿ ಕೊಳ್ಳೆಯು ಬಲೆಗೆ ಅಂಟಿಕೊಂಡಾಗ ಸಂತೋಷದಿಂದ ಭಕ್ಷಿಸುವ ಜೇಡವು ಕೀಟ ವರ್ಗದಲ್ಲೇ ತುಂಬಾ ವಿಚಿತ್ರವಾದ ಜಂತು. ಪಕ್ಷಿಜೇಡ, ಏಡಿಜೇಡ, ತೋಟಜೇಡ, ಜೋನು ಬಾಗಿದಜೇಡ, ತರಂತಲ ಜೇಡ ಮೊದಲಾದ ಅನೇಕ ಜಾತಿ ಭೇದಗಳುಳ್ಳ ವಿಸ್ತಾರವಾದ ಜೇಡ ಸಂತಾನ ಬಹು ಮಟ್ಟಿಗೆ ನಿರುಪದ್ರವಿ ಜೀವಿ ಗಳು. ಆದರೆ ತೋಳ ಜೇಡ ಮತ್ತು ಕರಿ ವಿಧವೆ ಜೇಡ ಎಂಬ ವರ್ಗದ ಜೇಡ ಗಳು ಮಾತ್ರ ಅತ್ಯಂತ ಅಪಾಯಕಾರಿ ವಿಷ ಜಂತುಗಳು. ಉಳಿದ ಜೇಡುಗಳಲ್ಲಿಯೂ ವಿಷ ಗ್ರಂಥಿಗಳಿದ್ದರೂ ಅವು ಕೊಳ್ಳೆಯನ್ನು ಸಾಯಿಸಲು ಮಾತ್ರ ನೆರವಾಗುತ್ತವೆ (ಆದರೂ ಕೆಲವೊಮ್ಮೆ ಈ ಜೇಡಗಳು ಕಡಿದು ಹೆಚ್ಚಿನ ಪ್ರಮಾಣದಲ್ಲಿ ವಿಷವನ್ನು ಹರಿಸಿದಾಗ ತುಸಂ ಮಟ್ಟಿಗೆ ಉಪದ್ರವಗಳು ಕಾಣಿಸಿಕೊಳ್ಳುವುದೂ ಇಲ್ಲವೆಂದಿಲ್ಲ.)



ಜೇಡನ ಬಲೆ



ಕರಿ ವಿಧವೆ ಜೇಡ

ವಿಷ ಲಕ್ಷಣಗಳು :

ಜೇಡ ಕಡಿದ ಗಾಯವು ಮೊದಲಿಗೆ ಅಷ್ಟೇನೂ ಗಾಬರಿ ಹುಟ್ಟಿಸುವುದಿಲ್ಲ ವಾದರೂ ಕ್ರಮೇಣ ನೋವು, ಉರಿ, ಊತಗಳು ಕಾಣಿಸಿಕೊಂಡು ಸ್ಥಳೀಯವಾಗಿ ವರ್ಣ ವ್ಯತ್ಯಾಸವುಂಟಾಗುವುದಲ್ಲದೆ ಕ್ರಮೇಣ ವೇದನೆ ಹೆಚ್ಚುತ್ತ ಹೋಗುತ್ತದೆ. ರೋಗಿಯ ಬಾಯಲ್ಲಿ ಜೊಲ್ಲು ಸುರಿಯ ತೊಡಗುವುದು, ಮೈ ಬೆವರುವುದು, ವಾಕರಿಕೆ, ಹೊಟ್ಟೆ ನುಲಿತ, ಮೈ ಕೈ ತೊಂದರೆ ಮೊದಲಾದ ಉಪದ್ರವಗಳು ಕಾಣಿಸಿಕೊಂಡು ರೋಗಿಯು ಚಡಪಡಿಸುತ್ತಾನೆ.

ಚಿಕಿತ್ಸೆ :

ಇಂತಹ ರೋಗಿಯನ್ನು ತಕ್ಷಣ ಹಾಸಿಗೆಯ ಮೇಲೆ ಮಲಗಿಸಿ ಗಾಯವನ್ನು ನಂಜು ನಿರೋಧಕದಿಂದ ತೊಳೆದು, ಅದರ ಮೇಲೆ ಮಂಜುಗಡ್ಡೆ ಹಚ್ಚಿ ವಿಷ ಪ್ರಸಾರವನ್ನು ತಡೆಗಟ್ಟಲು ಪ್ರಯತ್ನಿಸಬೇಕು. ಅಂಗಬಂಧದಿಂದಲೂ ಹೆಚ್ಚಿನ ಪ್ರಯೋಜನ ದೊರಕುತ್ತದೆ. ಮಾರ್ಫಿನ್ ಸಲ್ಫೇಟ್, ಕ್ಯಾಲ್ಸಿಯಂ ಗ್ಲೂಕೋ

ನೇಟ್ ಸೂಜಿ ಮದ್ದುಗಳೂ ಆ್ಯಂಟಿ ಹಿಸ್ಟಾಮಿನ್ ವರ್ಗದ ಔಷಧಿಗಳೂ ಹೈಡ್ರೋಕಾರ್ಟಿಸೋನ್‌ಗಳೂ ಉಪಯುಕ್ತವಾಗಿವೆ.

ಆಯುರ್ವೇದ ಶಾಸ್ತ್ರದಲ್ಲಿ ಜೇಡರ ಹುಳಕಡಿತದ ವಿಷಕ್ಕೆ, ಹುಳ ಕಡಿದ ಭಾಗವನ್ನು ಚಾಕುವಿನಿಂದ ಸಿಗಿದು (ಸೀಳಿ) ಅಗ್ನಿ ಕರ್ಮದ ಮೂಲಕ ಉರಿಸಬೇಕೆಂದು ಹೇಳಿದೆ. ಅನಂತರ ವಿವಿಧ ಔಷಧಿಯುಕ್ತ ಕಷಾಯದಿಂದ ಗಾಯವನ್ನು ತೊಳೆದು ಘೃತ ಲೇಪನವನ್ನೂ, ಸರ್ಪ ಗಂಧದ ಬೇರು, ಚಕ್ರಾಣಿಕೆಯ ಬೇರು, ಚಳ್ಳೆಗಿಡದ ತೊಗಟೆಗಳನ್ನು ಲಿಂಬೆ ರಸದಲ್ಲಿ ಅರೆದು ಲೇಪ ಹಾಕುವ ಪರಿಪಾಠ ಹಳ್ಳಿಗಳಲ್ಲಿ ರೂಢಿಯಲ್ಲಿದೆ.

ಅಧ್ಯಾಯ — 9

ಸಸ್ಯವಿಷ

ದತ್ತೂರ (ಮದುಗುಣಿಕೆ)

[ಇಂಗ್ಲಿಷ್ : Thorn Apple, Stramony. ಸಸ್ಯ ಶಾಸ್ತ್ರದ ಹೆಸರು : Datura Stramonium (Datura Fastosa). ಕನ್ನಡ : ದತ್ತೂರ, ಮದುಗುಣಿಕೆ, ಮದ್ದುಗುಣಿಕೆ, ಉಮ್ಮತ್ತಿ, ಉಮ್ಮತ್ತಿ. ಸಂಸ್ಕೃತ : ಧತ್ತೂರ, ಕನಕ, ಮಾತುಲಾ. ತುಳು : ಉಂಬೆ. ತಮಿಳು : ಉಮ್ಮತ್ತೈ. ತೆಲುಗು : ದತ್ತೂರಮು. ಕೊಂಕಣಿ: ದತ್ತೂರೊ. ಹಿಂದಿ : ಧತೂರಾ.]

ಪರಿಚಯ :

ವರ್ಷವಿಡೀ ಹೂ ಬಿಡುವ ದತ್ತೂರವು ಒಂದು ಸಣ್ಣ ಗಿಡಮೂಲಿಕೆಯಾಗಿದೆ. ಮಳೆಗಾಲದಲ್ಲಿ ಬಯಲು ಪ್ರದೇಶದಲ್ಲಿ ದತ್ತೂರವು ಹುಲುಸಾಗಿ ಬೆಳೆಯುತ್ತದೆ. ಇದರ ಹೂ ಗಂಟೆಯಾಕಾರಕ್ಕಿದ್ದು ತುಸು ಉದ್ದವಾಗಿರುತ್ತದೆ. ಕಾಯಿಯು ಚಿಕ್ಕದಾಗಿದ್ದು, ಒರಟು ಕವಚದಲ್ಲಿ ಚೂಪಾದ ಮುಳ್ಳುಕಣೆಗಳಿಂದ ಆವೃತವಾಗಿದ್ದು, ಕಾಯಿಯೊಳಕ್ಕೆ ನಸು ಹಳದಿ ಬಣ್ಣದ ಚಿಕ್ಕ ಚಿಕ್ಕ ಬೀಜಗಳಿರುತ್ತವೆ. ನಸು ಕಂದು ಬಣ್ಣದ ಹೂ ಬಿಡುವ **ಕರಿ ದತ್ತೂರ** ಮತ್ತು ಅಚ್ಚ ಬಿಳಿ ಹೂ ಬಿಡುವ **ಬಿಳಿ ದತ್ತೂರ** ಎಂಬ ಎರಡು ಪ್ರಭೇದಗಳಿದ್ದು ಈ ಪೈಕಿ ಕರಿ ದತ್ತೂರವು ಹೆಚ್ಚು ವಿಷ ಪೂರಿತ ಸಸ್ಯವಾಗಿದೆ. ದತ್ತೂರ ಬೀಜವು ತೀರ ಕಹಿಯಾಗಿರುತ್ತವೆ.

ದತ್ತೂರ ಗಿಡವು ಸರ್ವಾಂಗ ವಿಷ; ಇದರ ಬೀಜವು ತೀಕ್ಷ್ಣ ವಿಷ. ಬೀಜದಲ್ಲಿ ಹಯೋಸಿನ್ ಮತ್ತು ಹಯೋಸಿಯಾಮೈನ್ ಎಂಬ ಎರಡು ಪ್ರಬಲ ವಿಷ ಸತ್ವಗಳೂ, ತುಸು ಪ್ರಮಾಣದಲ್ಲಿ ಎಟ್ರೋಪಿನ್ ಸತ್ವವೂ ಇದೆ. ಪ್ರಾಣಾಪಾಯದ ಕಾಲಾವಧಿ ಸುಮಾರು 24 ತಾಸು. ದತ್ತೂರ ಬೀಜದ ವಿಷ ಸೇವನೆಯಿಂದ ಪ್ರತಿ ವರ್ಷ ಕನಿಷ್ಟ 10 ಸಾವುಗಳು ಸಂಭವಿಸುತ್ತವೆ. ವಿಷ ಪ್ರಾಶನವಾದ ಮರುಗಳಿಗೆಯಲ್ಲಿಯೇ (ಕೆಲವೊಮ್ಮೆ 4–6 ತಾಸುಗಳ ನಂತರ) ಉಪದ್ರವಗಳು ಕಾಣಿಸಿಕೊಳ್ಳ



ದತ್ತೂರಿಗಿಡ

ತ್ತವೆ. ದತ್ತೂರವನ್ನು ಹಳ್ಳಿಯ ಜನರು ನಂಜು, ನೋವು ಮತ್ತು ಬಾವುಗಳ ಚಿಕಿತ್ಸೆಗೆ ಉಪಯೋಗಿಸುತ್ತಾರೆ. ಕರಿ ಉಮ್ಮತ್ತದ ಎಲೆಯ ರಸವನ್ನು ವಿವಿಧ ಅನುಪಾನಗಳೊಂದಿಗೆ ಹುಚ್ಚು ನಾಯಿ ಕಡಿದ ಚಿಕಿತ್ಸೆಗಾಗಿ ಹಳ್ಳಿಗರು ಇಂದಿಗೂ ಬಳಸುತ್ತಾರೆ. ಆಯುರ್ವೇದ ವೈದ್ಯರು ದತ್ತೂರ ಬೀಜವನ್ನು ಶುದ್ಧ ಮಾಡಿ ನಾನಾ ರೋಗ ಚಿಕಿತ್ಸೆಗಾಗಿ ಬಳಸುತ್ತಾರೆ.

ಪ್ರಾಣಾಪಾಯದ ಪ್ರಮಾಣ (ಸೇವನೆ) : 10 ಮಿಲಿ ಗ್ರಾಮ.

ವಿಷಪ್ರಾಶನದ ಲಕ್ಷಣಗಳು :

ದತ್ತೂರ ಬೀಜವನ್ನು ನುಣ್ಣನೆ ಪುಡಿ ಮಾಡಿ ಪಾನಕದಲ್ಲಿ ಬೆರಸಿ ಕುಡಿಸಿದರೆ ತಕ್ಷಣ ವಾಂತಿಯಾಗಲು ಪ್ರಾರಂಭವಾಗುತ್ತದೆ; ಮತ್ತು ನಾಲಗೆ ಒಣಗುವುದು, ಗಂಟಲು ಬಿಗಿಯುವುದು, ಜೊಲ್ಲು ಬತ್ತಿದಂತಾಗುವುದು ಹಾಗೂ ಹೊಟ್ಟೆ ಉರಿ ಮೊದಲಾದ ಉಪದ್ರವಗಳು ಕಾಣಿಸುತ್ತವೆ. ಮೈಮೇಲೆ ಪಿತ್ತಗಂದೆಗಳು ಸಹ ಏಳಬಹದು. ಕ್ರಮೇಣ ಗಂಟಲು ನೋವಿನಿಂದಾಗಿ ರೋಗಿಗೆ ನುಂಗಲು ಮತ್ತು ಮಾತನಾಡಲು ಕಷ್ಟವಾಗುತ್ತದೆ. ತಲೆ ತಿರುಗುವುದು, ಮೈ ಜೋಲಿ ಹೋಗುವುದು, ಸ್ನಾಯುಗಳು ತೂಕ ತಪ್ಪುವುದು, ಮುಖ ಒಣಗುವುದು, ಕಣ್ಣು ಕೆಂಪಾಗುವುದು, ಕಣ್ಣು ಬೊಂಬೆ ಅರಳುವುದು, ತಾತ್ಕಾಲಿಕ ಕುರುಡು, ಚರ್ಮ ಒಣಗಿದಂತಾಗುವುದು ಬೆಚ್ಚಗಾಗುವುದು ಮೊದಲಾದ ತೊಂದರೆಗಳು ಕಾಣಿಸಿಕೊಳ್ಳುವವು. ರೋಗಿಗೆ ಜ್ವರವು ಏರಬಹುದು. ರೋಗಿಯು ಗಾಬರಿಗೊಂಡು ಬಡಬಡಿಸುವುದು, ಅಸ್ಪಷ್ಟ ಒದರಾಟ, ಜಗಿದಾಟ, ಸಿಕ್ಕಿ ಸಿಕ್ಕಿದಲ್ಲಿ ಒಡಲೆಳಸುವುದು, ಕೆಟ್ಟದಾಗಿ ಚೀರುವುದು ಮುಂತಾದ ಮತಿಭ್ರಮೆಯ ಚಿನ್ಹೆಗಳು ಕಾಣಿಸುತ್ತವೆ. ಅವನ ನಾಡಿಯು ತೀವ್ರವಾಗುವುದಲ್ಲದೆ ಪ್ರಜ್ಞೆ ತಪ್ಪುವುದು, ಅದಿರುವಾಯು, ಉಸಿರಾಟಕ್ಕೆ ತೊಂದರೆ ಮೊದಲಾದ ಉಪದ್ರವಗಳು ಉಂಟಾಗಿ ಸಾವು ಸಂಭವಿಸಬಹುದು.

ರೋಗ ಮುಕ್ತರಾದರೂ ಕೂಡಾ ಕೆಲವರು ಆಗಾಗ ಬಡಬಡಿಸುವುದುಂಟು. ಅಲ್ಲದೆ ರೋಗಿಗೆ ಸಂಪೂರ್ಣ ಎಚ್ಚರ ಬಂದ ಮೇಲೆ, ತಾನು ಅನುಭವಿಸಿದ್ದ ಸಂಕಟಗಳ ಜ್ಞಾಪಕವೇ ಇರುವುದಿಲ್ಲ; ಮಾತ್ರವಲ್ಲದೆ ತನ್ನನ್ನು ಆಸ್ಪತ್ರೆಗೆ ಏಕೆ ಸೇರಿಸಿದ್ದು ಎಂದು ಅಚ್ಚರಿ ಪಡುತ್ತಾನೆ.

ಶರಬತ್ತಿನಲ್ಲಿ ಅಥವಾ ಮಧ್ಯದಲ್ಲಿ ದತ್ತೂರ ಬೀಜವನ್ನು ಅರೆದು ಕುಡಿಸಿದಾಗ ಕ್ಷಣಾರ್ಧದಲ್ಲಿ ಸ್ಮೃತಿ ತಪ್ಪಿದ ದಾಖಲೆಯಿದೆ.

ಚಿಕಿತ್ಸೆ ಮತ್ತು ಉಪಚಾರ :

ದತ್ತೂರ ವಿಷ ಸೇವಿಸಿದ ರೋಗಿಯನ್ನು ಪೊಟ್ಯಾಸಿಯಂ ಪರಮಾಂಗನೇಟ್ ದುರ್ಬಲ ದ್ರಾವಣದಿಂದ ಹೊಟ್ಟೆ ತೊಳೆಯಬೇಕು. ಕ್ಲೋರಲ್ ಹೈಡ್ರೇಟ್, ಪೆರಲ್‌ಡಿಹೈಡ್ ಅಥವಾ ಬ್ರೊಮೈಡ್ ವರ್ಗದ ಶಾಮಕ ಔಷಧವನ್ನು ನೀಡಿ ಉನ್ಮಾದಕ್ಕೆ ಉಪಚಾರ ನಡೆಸಬೇಕು. (ಮಾರ್ಫಿಯಾ ವರ್ಜ್ಯ.) ಕೇಫಿನ್ ಕೃತಕ

ಉಸಿರಾಟ, ಆಮ್ಲಜನಕ ನೀಡಿಕೆಗಳನ್ನು ಅಗತ್ಯ ನೋಡಿಕೊಂಡು ನೀಡಬೇಕು. ಪಿಚಕಾರಿಯ ಮೂಲಕ ವಸ್ತಿ (ಎನಿಮಾ) ಕೊಟ್ಟು ಮಲ ಶೋಧನೆ ಮಾಡಿಸಬೇಕು.

ದತ್ತೂರ ವಿಷಕ್ಕೆ ಪ್ರತ್ಯೌಷಧ ಪೈಲೊಕಾರ್ಪಿನ್ ಸೂಜಿ ಮದ್ದು.


ಆಯುರ್ವೇದ ವೈದ್ಯರು ದತ್ತೂರ ವಿಷ ಪ್ರಾಶನವಾದ ರೋಗಿಗೆ ಈ ಕೆಳಗಿನ ಚಿಕಿತ್ಸೆಗಳನ್ನು ನಡೆಸುತ್ತಾರೆ. (1) ಸಮುದ್ರ ಫಲವನ್ನು ಗೋಮೂತ್ರ ದಲ್ಲಿ ಅರೆದು ಕುಡಿಸುವುದು (2) ಬಜೆಯ ಚೂರ್ಣವನ್ನು ಮೊಸರಿನಲ್ಲಿ ಕಲೆಸಿ ಸೇವಿಸುವುದು (3) ಆಕಳ ಹಾಲಿಗೆ ಸಕ್ಕರೆ ಬೆರೆಸಿ ಕುಡಿಸುವುದು (4) ಮಜ್ಜಿಗೆ ನಿಂಬೆ ಹಣ್ಣಿನ ರಸ, ಕಮಲದ ನಾಳ, ತಿಂತ್ರಿಣಿ ಪರಳು ಬೇರು, ಅತ್ತಿಬೇರು, (ಅಥವಾ ಅತ್ತಿ ಗಿಡದ ಹಾಲು) ಇವುಗಳ ಪೈಕಿ ಒಂದನ್ನು ನೀರಿನಲ್ಲಿ ಅರೆದು ಕುಡಿಸುವುದು.(ಈ ಚಿಕಿತ್ಸೆಗಳ ಪೈಕಿ ಒಂದು ಮಾತ್ರ).

ಟಿಪ್ಪಣಿ :


ಮುಗ್ಧ ಜನರನ್ನು ವಂಚಿಸಿ ಲಾಭ ಪಡೆಯಲು ಸಮಾಜ ಘಾತುಕ ವ್ಯಕ್ತಿಗಳು ಬಳಸುವ ನಾನಾ ವಿಧಾನಗಳಲ್ಲಿ ದತ್ತೂರ ಬೀಜವನ್ನು ತಿಂಡಿ ತೀರ್ಥಗಳಲ್ಲಿ, ಪ್ರಸಾದಿ ಪರಿವಾರಗಳಲ್ಲಿ, ಪಾನ್–ಬೀಡಗಳಲ್ಲಿ, ನಾನಾ ಪೇಯ ಪಾನೀಯಗಳಲ್ಲಿ, ಚಹ, ಕಾಫಿ, ಚಪಾತಿ, ಅನ್ನ–ತರಕಾರಿ ಮೊದಲಾದ ಉಣಿಸು ತಿನಿಸುಗಳಲ್ಲಿ ತಿನ್ನಿಸಿ ಎಚ್ಚರ ತಪ್ಪಿಸುವುದು ಪ್ರಮುಖವಾದ ವಿಧಾನವಾಗಿದೆ. ಗಾಂಜಾ ಅಥವಾ ಮದ್ಯ ದೊಂದಿಗೆ ಬೆರೆಸಿ ನೀಡಿದಾಗ ದತ್ತೂರವು ತೀರ ಉಲ್ಬಣ ವಿಷವಾಗಿ ಪರಿಣಮಿಸು ತ್ತದೆ. ದತ್ತೂರ ಬೀಜವು ಗೋದಿ, ಜೋಳ, ಬಾಜರಾ. ಮುಂತಾದ ಧಾನ್ಯ ಗಳೊಂದಿಗೆ ಕಲಬೆರಕೆಯಾಗಿ ತಿಳಿಯದೆ ಬಳಸಲ್ಪಟ್ಟು ಅನಾಹುತ ಸಂಭವಿಸಿಹ ಘಟನೆ ಗಳಿಗೆ ಲೆಕ್ಕವಿಲ್ಲ. ಕೆಲವೊಮ್ಮೆ ಒಣ ದತ್ತೂರ ಬೀಜವನ್ನು ಬೇರೆ ಯಾವುದೋ ಬೀಜವೆಂದು ತಪ್ಪಾಗಿ ಗುರುತಿಸಿ ಹಳ್ಳಿ ವೈದ್ಯರೂ ಜನಗಳೂ ಬಳಸಿ ಅಪಾಯ ಉಂಟಾದ ನಿದರ್ಶನಗಳಿವೆ. ಆತ್ಮಹತ್ಯೆ, ಕೊಲೆ ಮತ್ತು ವಂಚನೆಗಳ ದುರುದ್ದೇಶ ದಿಂದ ದತ್ತೂರ ಬೀಜವು ದುರುಪಯೋಗವಾಗುವ ಸಂಭವ ಹೆಚ್ಚಾಗಿದೆ.

ಗುಲಗಂಜಿ

[ಇಂಗ್ಲಿಷ್ :Wild Liquorice—Indian Liquorice. ಸಸ್ಯ ಶಾಸ್ತ್ರದ ಹೆಸರು **Abrus Precatorius.** ಕನ್ನಡ : ಗುಲಗಂಜಿ, ಗುಲುಗುಂಜಿ, ಗುರುಗುಂಜಿ, : ಗುಂಜಿ, ಗುಲಗಂಜಿ. ಸಂಸ್ಕೃತ : ಗುಂಜಾ, ರಕ್ತಿಕಾ. ತುಳು : ಗುರುಗೊಂಜಿ. ತಮಿಳು : ಖುನ್ರಿ, ಗಂಡುಮಣಿ. ತೆಲಗು : ಗುರಿಗಿಂಜಾ, ಕುಕ್ಕುಟಮು, ಮಲಯಾಳಂ : ಕುನ್ನಿ, ಕೊಂಕಣಿ : ಗುರಗುಂಜಿ. ಹಿಂದಿ : ಗುಂಚಾ, ರತಿ



ಗುಲಗಂಜಿ ಬಳ್ಳಿ



ಗುಲಗಂಜಿ ಬೀಜ

ಪರಿಚಯ :

ಕರಾವಳಿಗಳಲ್ಲಿಯೂ ಒಳನಾಡಿನ ಕಾಡುಗಳಲ್ಲಿಯೂ ಬೆಳೆಯುವ ಹತ್ತು ಹನ್ನೆರಡು ಅಡಿ ಎತ್ತರಕ್ಕೆ ಹಬ್ಬುವ ಚಿಕ್ಕ ಲತೆ ಗುಲುಗಂಜಿ. ಈ ಬಳ್ಳಿಯು ಚೈತ್ರದಿಂದ ಆಶ್ವೀಜ ಮಾಸದ ವರೆಗೆ ಹೂ ಬಿಡುತ್ತದೆ; ಮತ್ತು ಸಣ್ಣ ಸಣ್ಣ

ಕೋಡುಗಳಲ್ಲಿ, ಕೋಳಿ ಮೊಟ್ಟೆಯ ಆಕಾರದ ಚಿಕ್ಕ ಚಿಕ್ಕ ಬೀಜಗಳಿರುತ್ತವೆ. ಬೀಜವು ಕೆಂಪು ಅಥವಾ ಗುಲಾಬಿ ವರ್ಣಕ್ಕಿದ್ದು, ಒಂದು ತುದಿಯಲ್ಲಿ ಕಪ್ಪು ಬೊಟ್ಟನ್ನು ಹೊತ್ತಿರುತ್ತದೆ. ಪೂರ್ಣ ಬಿಳಿ ಅಥವಾ ಪೂರ್ಣ ಕಪ್ಪು ವರ್ಣಕ್ಕೇ ಇರುವ ಹಾಗೂ ಬೊಟ್ಟಿಲ್ಲದ ಗುಲಗಂಜಿ ಬೀಜಗಳು ಸಹ ಕ್ವಚಿತ್ತಾಗಿ ಕಾಣಸಿಗುತ್ತವೆ. ಒಂದು ಗುಲಗಂಜಿ ಬೀಜದ ತೂಕ 1.75 ಗ್ರೇನ್. ಹಳ್ಳಿಯ ಅಕ್ಕಸಾಲಿಗರು ಇಂದಿಗೂ ಚಿನ್ನದ ತೂಕಕ್ಕೆ ಇದನ್ನೇ ಮಾಪನವಾಗಿ ಇರಿಸುತ್ತಾರೆ.

ಗುರುಗಂಜಿಯಲ್ಲಿ ಎಬ್ರಿನ್ ಎಂಬ ವಿಷ ಸತ್ವವಿದೆ. ಆಯುರ್ವೇದ ವೈದ್ಯರು ಗುಲುಗಂಜಿ ಬೀಜವನ್ನು ಹಾಲಿನಲ್ಲಿ ಬೇಯಿಸಿ ಶುದ್ಧಮಾಡಿ ಅನೇಕ ರೋಗಗಳ ಚಿಕಿತ್ಸೆಗೂ, ಕಾಮೋತ್ತೇಜಕ ದ್ರವ್ಯವಾಗಿಯೂ ಬಳಸುತ್ತಾರೆ. ಗುಲಗಂಜಿಯು ಪ್ರಾಣಿಗಳಿಗೂ ಸಹ ವಿಷವಾಗಿದೆ.

ಪ್ರಾಣಾಪಾಯದ ಪ್ರಮಾಣ (ಸೇವನೆ) : 0.1 ರಿಂದ 0.12 ಗ್ರಾಂ.

ಪ್ರಾಣಾಪಾಯದ ಕಾಲಾವಧಿ 24–28 ತಾಸು. ಗುಲಗಂಜಿ ಬೀಜದ ರಸವು ಕಣ್ಣಿಗೆ ಸ್ಪರ್ಶವಾದರೆ ಕಣ್ಣು ನೋವು, ಬಾವು ಮೊದಲಾದ ಉಪದ್ರವಗಳು ಉಂಟಾಗುವವಲ್ಲದೆ ಕಣ್ಣಿನಿಂದ ಹೀರಲ್ಪಟ್ಟು ರಕ್ತಗತವಾಗಿ ಪ್ರಾಣಾಪಾಯವನ್ನು ಸಹ ಉಂಟು ಮಾಡಬಹುದು.

ವಿಷಪ್ರಯೋಗದ ಲಕ್ಷಣಗಳು :

ಗುಲಗಂಜಿ ವಿಷವನ್ನು ಸೇವಿಸಿದ ತುಸು ಹೊತ್ತಿನಲ್ಲಿ (ಕೆಲವೊಮ್ಮೆ 48 ತಾಸುಗಳ ನಂತರ) ತೀವ್ರವಾದ ವಾಂತಿ–ಭೇದಿ ಉಂಟಾಗುವುವಲ್ಲದೆ ರೋಗಿಯು ಕಣ್ಣು ಕತ್ತಲೆ ಬರುವುದು, ತಲೆ ತಿರುಗುವುದು ಮೊದಲಾದ ಉಪದ್ರವಗಳಿಂದ ನರಳುತ್ತಾನೆ; ಹಾಗೂ ಅವನಿಗೆ ಉಸಿರಾಟದ ತೊಂದರೆ ಪ್ರಾರಂಭವಾಗುತ್ತದೆ. ಅವನ ಚರ್ಮವು ತಣ್ಣಗೆ ಜಿಡ್ಡಾಗಿರುವುದು; ನಾಡಿಯು ವಕ್ರಗತಿಯಿಂದಲೂ ಮಂದವಾಗಿಯೂ ಕಾಣಿಸುತ್ತದೆ. ಒಟ್ಟಿನಲ್ಲಿ ರೋಗಿಯು ತೀರಾ ಕಂಗೆಡುವನು. ಅದಿರುವಾಯು, ಮೂತ್ರ ವಿಕಾರ, ಹೃದಯ ವಿಕಾರ ಮೊದಲಾದ ಉಪದ್ರವಗಳು ಉಂಟಾಗುವುವಲ್ಲದೆ ರೋಗಿಯು ಸಾವಿಗೆ ತುತ್ತಾಗುವ ಸಂಭವವೂ ಇದೆ.

ಚಿಕಿತ್ಸೆ ಮತ್ತು ಉಪಚಾರ :

ಹೊಟ್ಟೆ ತೊಳೆಯುವುದು, ವಿರೇಚನ, ವಮನ ಮಾಡಿಸುವುದು ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆಗಳನ್ನು ಮಾಡುವುದಲ್ಲದೆ ಹಾಲು, ಸೋಡಿಯಂ ಬೈ

ಕಾರ್ಬೋನೇಟ್ ಮಿಶ್ರಣ, ಹೈಡ್ರೋಕ್ಲೋರಿಕ್ ಆಮ್ಲ, ಪೆಪ್ಸಿನ್ ಮಿಶ್ರಣ, ಗ್ಲೂಕೋಸ್, ಬಾರ್ಲಿ ನೀರು ಮೊದಲಾದವುಗಳನ್ನು ಕುಡಿಸಬೇಕು. ಗುಲಗಂಜಿ ವಿಷಕ್ಕೆ ದಿವ್ಯ ಪ್ರತ್ಯೌಷಧಿ ಆ್ಯಂಟಿ ಎಬ್ರಿನ್ ಸೂಜಿ ಮದ್ದು ಅದಿರುವಾಯು ಮೊದಲಾದ ಉಪದ್ರವಗಳಿಗೆ ಸೂಕ್ತ ಚಿಕಿತ್ಸೆ ನಡೆಸಬೇಕು.

ಆಯುರ್ವೇದ ವೈದರು ಈ ಕೆಳಗಿನ ಚಿಕಿತ್ಸೆಗಳನ್ನು ಸೂಚಿಸುತ್ತಾರೆ.

(1) ಕದಳೀ ಕಂದದ (ಬಾಳೆ ಗಿಡದ ಗಡ್ಡೆಯ) ರಸ; ಕಿರಕಸಾಲೆ ಗಿಡದ ಬೇರು ಮತ್ತು ಎಲೆ, ಹೂ, ಚಿಗುರುಗಳನ್ನು ಕುಟ್ಟಿ ತೆಗೆದ ರಸವನ್ನು ಅಥವಾ ನೇರಲೆ ಎಲೆಯ ರಸವನ್ನು ಕುಡಿಸಬೇಕು. (2) ಜೇಷ್ಟಮಧು ಅಥವಾ ಶ್ರೀಗಂಧ ವನ್ನು ತಣ್ಣೀರಿನಲ್ಲಿ ತೇದು ಕುಡಿಸಬೇಕು. (3) ಭದ್ರ ಮುಷ್ಟಿಯ ಕಷಾಯ ಅಥವಾ ಶ್ರೀಗಂಧ ಮತ್ತು ಜೇಷ್ಟಮಧುಗಳ ಕಷಾಯ ಮಾಡಿ ಕುಡಿಸಬೇಕು. (4) ಕಿರಕಸಾಲೆ ರಸಕ್ಕೆ ಸಕ್ಕರೆ ಬೆರಸಿ ಕುಡಿಸಬೇಕು. (5) ಆಕಳ ತುಪ್ಪ ಕುಡಿಸ ಬೇಕು. (ಈ ಪೈಕಿ ಯಾವುದಾದರೂ ಒಂದು).

ಟಿಪ್ಪಣಿ :

ಮಕ್ಕಳು ಕೈಗೆ ಸಿಕ್ಕಿದ ಗುಲಗಂಜಿಯನ್ನು ಒಮ್ಮೊಮ್ಮೆ ಇಡಿಯಾಗಿ ನುಂಗಿ ಬಿಡುವುದುಂಟು. ಜಗಿಯದೆ ನುಂಗಿದರೆ ಅಪಾಯ ರಹಿತವಾದುದರಿಂದ ಗಾಬರಿ ಪಡಬೇಕಾಗಿಲ್ಲ ಆದರೆ ಶುದ್ಧಿ ಗೊಳಿಸದ ಗುಲಗಂಜಿ ಬೀಜದ ತಿರುಳನ್ನು ಸೇವಿಸು ವುದು ಅಪಾಯಕರ.

ಔಡಲು ಬೀಜ (ಹರಳು ಬೀಜ)

[ಇಂಗ್ಲಿಷ್ : Castor oil Seed. ಸಸ್ಯ ಶಾಸ್ತ್ರದ ಹೆಸರು : Ricinus Communis. ಕನ್ನಡ : ಔಡಲ ಬೀಜ, ಔಡಲು ಬೀಜ, ಹರಳು ಬೀಜ. ಸಂಸ್ಕೃತ : ಏರಂಡಮು, ಗಂಧರ್ವ ಹಸ್ತಕ, ವಾತಾರಿ. ತುಳು : ಆಲಂಬುಡ. ತಮಿಳಂ: ಅಮಡಕ್ಕು, ಅಂದಗಂ. ತೆಲಗು: ಆಮುದಾಲಚೆಟ್ಟು. ಮಲಯಾಳಂ : ಚಿಟ್ಟಾ ಮಣಕ್ಕು. ಕೊಂಕಣಿ: ಏರಂಡಿ. ಹಿಂದಿ ; ಏರಂಡಿ.]

ಪರಿಚಯ :

ಮನೆಯ ಹಿತ್ತಲಲ್ಲಿ, ಕೈ ತೋಟದಲ್ಲಿ ಹಾಗೂ ಹೊಲ ಗದ್ದೆ ಬಯಲುಗಳಲ್ಲಿ ನೆಟ್ಟು ಬೆಳೆಸುವ ಎಣ್ಣೆ ಕಾಳಿನ ಗಿಡ ಔಡಲ. ಗಿಡಕ್ಕೆ ಅಗಲವಾದ ಎಲೆಗಳಿದ್ದು



ಔಡಲ ಬೀಜ

ಗೊಂಚಲು ಹೂ ಮತ್ತು 6 ಭಾಗಗಳು ಅಂಟಿಕೊಂಡ ಮುಳ್ಳು ಮುಳ್ಳಾದ ಕವಚವುಳ್ಳ ಗಟ್ಟಿಯಾದ ಕಾಯಿಗಳಿದ್ದು, ಕಾಯಿಯೊಳಕ್ಕೆ ಚಿಕ್ಕ ಚಿಕ್ಕ ಬೀಜಗಳಿರುತ್ತವೆ. ಬೀಜದಿಂದ ತಯಾರಿಸಲ್ಪಡುವುದೇ ಸುಖ ಬೇಧಿಗೆ ನಾವು ಸೇವಿಸುವ ಔಡಲ ಎಣ್ಣೆ.

ಔಡಲ ಬೀಜದಲ್ಲಿ 'ರಿಸಿನ್' ಎಂಬ ವಿಷ ಸತ್ವವಿದೆ. ಬೀಜವನ್ನು ಶುದ್ಧ ಮಾಡಿದ ನಂತರ ತೆಗೆದ ಎಣ್ಣೆ ನಿರ್ವಿಷವಾಗಿರುತ್ತದೆ. ಆದರೆ ಔಡಲ ಹಿಂಡಿಯಲ್ಲಿ ವಿಷದ ಅಂಶ ವಿರುವುದರಿಂದ ಅದನ್ನು ಸೇವಿಸಬಾರದು; ಹಾಗೂ ಪ್ರಾಣಿಗಳಿಗೆ ಕೂಡಾ ನೀಡಬಾರದು. ಇಡಿಯ ಔಡಲ ಬೀಜವನ್ನು ನುಂಗಿದರೂ ಸಹ ಪರಿಣಾಮವುಂಟಾಗುತ್ತದೆ.

ಪ್ರಾಣಾಪಾಯದ ಪ್ರಮಾಣ (ಸೇವನೆ) : 6 ಮಿಲಿ ಗ್ರಾಮ. (ವಿಷ ಸತ್ವ) ಸುಮಾರು 10 ಬೀಜಗಳನ್ನು ತಿಂದರೆ ಪ್ರಾಣಾಪಾಯ ಸಂಭವಿಸುತ್ತದೆ. (ಕೇವಲ ಒಂದೆರಡು ಬೀಜಗಳನ್ನು ಸೇವಿಸಿದರೂ ತೀವ್ರ ದುಷ್ಪರಿಣಾಮಗಳು ಉಂಟಾಗಬಹುದು.)

ವಿಷಪ್ರಯೋಗದ ಲಕ್ಷಣಗಳು :

ಔಡಲ ವಿಷ ಸೇವಿಸಿದ ರೋಗಿಗೆ ಗಂಟಲು ನೋವು, ಉರಿ, ವಾಕರಿಕೆ, ನೀರಡಿಕೆ, ವಾಂತಿ ಮೊದಲಾದ ಉಪದ್ರವಗಳು ಉಂಟಾಗುತ್ತವೆ. ತಲೆ ತಿರುಗುವುದು, ಹೊಟ್ಟೆನುಲಿತ, ಚರ್ಮ ಮಾರಗಟ್ಟುವುದು, ಮೈ ತಣ್ಣಗಾಗುವುದು,

ಮೊದಲಾದ ತೊಂದರೆಗಳು ಕಾಣಿಸಿಕೊಂಡು ಅವನ ದೇಹದ ದ್ರವಾಂಶವು ಬತ್ತಿ ಹೋಗುವುದು. ಕ್ಷೀಣ ನಾಡಿ, ಮೂತ್ರವಿಕಾರ, ಕುಸಿತ ಮತ್ತು ಸಾವು ಸಂಭವಿಸಬಹುದು.

ಚಿಕಿತ್ಸೆ ಮತ್ತು ಉಪಚಾರ :

ಔಡಲ ವಿಷ ಸೇವಿಸಿದ ರೋಗಿಯನ್ನು ಹೊಟ್ಟೆ ತೊಳೆಯುವುದು, ವಾಂತಿ ಮಾಡಿಸುವುದು ಮೊದಲಾದ ಸಾಂಪ್ರದಾಯಿಕ ವಿಧಾನಗಳಿಂದ ಚಿಕಿತ್ಸೆ ನಡೆಸಬೇಕು. ಅವನಿಗೆ ಸೋಡಿಯಂ ಬೈ ಕಾರ್ಬೊನೇಟ್ ಮಿಶ್ರಣ ಕುಡಿಸುವುದು, ರಕ್ತನಾಳದ ಮೂಲಕ ಗ್ಲೂಕೋಸ್, ಉಪ್ಪು ನೀರು ಪೂರಣ ಮತ್ತು ಇತರ ಉಪದ್ರವಗಳಿಗೆ ಲಕ್ಷಣಾನುಸಾರ ಚಿಕಿತ್ಸೆ ನಡೆಸಬೇಕು. ತುಳಸಿ ಎಲೆಯ ರಸ, ಬೆಲ್ಲ ಮತ್ತು ಸಕ್ಕರೆಗಳನ್ನು ಸೇವಿಸುವುದು ಸೂಕ್ತವೆಂದು ಆಯುರ್ವೇದ ವೈದ್ಯರ ಅಭಿಮತ.


ಹರಳು ಬೀಜದ ಧೂಳು ಕಣ್ಣಿಗೆ ಸ್ಪರ್ಶ ವಿಷ. ಧೂಳನ್ನು ಆಘ್ರಾಣಿಸಿದರೆ ಮೂಗು, ಗಂಟಲು ಕೆರೆತ ತುರಿಕೆ ಮೊದಲಾದ ಒಗ್ಗದಿರುವಿಕೆಯ ಲಕ್ಷಣಗಳೂ, ಉಬ್ಬಸವೂ ಕಾಣಿಸಬಹುದು. ಅಂತಹ ರೋಗಿಯ ಕಣ್ಣು, ಮೂಗು, ಬಾಯಿಯನ್ನು ತಣ್ಣೀರಿನಿಂದ ಚೆನ್ನಾಗಿ ತೊಳೆಯಬೇಕು. ಮತ್ತು ರೋಗಿಯನ್ನು ಔಡಲ ಬೀಜದ ಸಂಪರ್ಕದಿಂದ ಖಾಯಂ ಆಗಿ ದೂರ ಇರಿಸಬೇಕು.

ಟಿಪ್ಪಣಿ :

ಹರಳು ಗಿಡದ ಎಲೆ, ಬೇರು ಮತ್ತು ಎಣ್ಣೆಗಳನ್ನು ಹಳ್ಳಿಯ ಜನರು ನಾನಾ ರೋಗಗಳ ಚಿಕಿತ್ಸೆಗಾಗಿ ಬಳಸುತ್ತಾರೆ. ಆಯುರ್ವೇದ ಹಾಗೂ ಆಧುನಿಕ ವೈದ್ಯ ಪದ್ಧತಿಗಳಲ್ಲಿ ಹರಳೆಣ್ಣೆ (ಔಡಲ ಎಣ್ಣೆಯು) ಉತ್ತಮ ವಿರೇಚಕ ದ್ರವ್ಯವಾಗಿ ಬಳಸಲ್ಪಡುತ್ತದೆ. ಆದರೆ ಹರಳು ಬೀಜವು ಮಾತ್ರ ತೀವ್ರ ವಿಷವಾಗಿರುವುದರಿಂದ ಅದನ್ನು ಶುದ್ಧ ಮಾಡದೆ ಸೇವಿಸಬಾರದು. ಹಿತ್ತಲು ಮನೆಗಳಲ್ಲಿ ಹರಳು ಗಿಡ ಬೆಳೆಸುವವರು ಮತ್ತು ಹರಳು ಬೀಜದ ವ್ಯವಸಾಯದಲ್ಲಿ ನಿರತರಾದ ಮನೆಯವರು ಮಕ್ಕಳಿಗೆ ಸೂಕ್ತ ಮುನ್ನೆಚ್ಚರಿಕೆ ನೀಡುವದಲ್ಲದೆ ಅವರ ಕೈಗೆ ಹರಳು ಬೀಜ ಸಿಗದಂತೆ ಜಾಗ್ರತೆ ವಹಿಸಬೇಕು.

ಕಾಸರಕ

[ಇಂಗ್ಲಿಷ್ : Nux Vomica; ಸಸ್ಯ ಶಾಸ್ತ್ರದ ಹೆಸರು : Strychnos Nuxvomica. ಕನ್ನಡ : ಕಾಸರಕ, ಹೆಮ್ಮುಷ್ಟಿ ಮರ, ನಂಜಿನ ಕೊರಡಿನ ಮರ; ಸಂಸ್ಕೃತ : ಕಾರಸ್ಕತ ವೃಕ್ಷ, ವಿಷ ಮುಷ್ಟಿ ವೃಕ್ಷ. ತುಳು : ಕಾಯೆರ್ : ತಮಿಳು ಕಾಕುಡಿ. ತೆಲಗು : ಮುಸುಡಿ, ಮಲಯಾಳಂ : ಕಾಞಿರಮ್. ಕೊಂಕಣಿ : ಕಾರ್ಯ-ರೂಕು. ಹಿಂದಿ : ಕುಚಿಲ ಗೋಗರಿ ಲಕಡಿ.]



ಕಾಸರಕ ಟೊಂಗೆ, ಫಲ ಹಾಗೂ ಬೀಜ

ಪರಿಚಯ :

ಅರಣ್ಯಗಳಲ್ಲಿಯೂ ಬಯಲು ಪ್ರದೇಶಗಳಲ್ಲಿಯೂ ಹೇರಳವಾಗಿ ಬೆಳೆಯುವ ಕಾಸರಕ ಮರವು ವಿಶಾಲವಾದ ವೃಕ್ಷವಾಗಿದ್ದು ಕೊಂಬೆ, ರೆಂಬೆ, ಹಸುರೆಲೆ ಹಾಗೂ ದೊಡ್ಡದಾದ ನಂಜು ಮುಳ್ಳುಗಳಿಂದ ಕೂಡಿರುತ್ತದೆ. ಇದರ ಹಸುರೆಲೆ ತೆಂಗಿನ ಕೃಷಿಗೆ ಉತ್ತಮ ಹಸಿರು ಗೊಬ್ಬರ; ಮರಮಟ್ಟು ಗಟ್ಟಿಯಾದ ಬಳಕೆಯ ಕಟ್ಟಿಗೆ ಕಾಸರಕ ವೃಕ್ಷವು ಮಾರ್ಗಶಿರ, ಪುಷ್ಯಮಾಸದಲ್ಲಿ ಹೂ ಬಿಟ್ಟು ಚೇಸಿಗೆಯಲ್ಲಿ ಫಲ ಬಿಡುತ್ತದೆ.

ಕಾಸರಕ ಮರದ ಎಲೆ, ತೊಗಟೆ, ಬೇರು ಮುಂತಾದ ಪ್ರತಿಯೊಂದು ಭಾಗವೂ ವಿಷ ಪೂರಿತವಾಗಿರುತ್ತದೆ. ಕಾಸರಕ ಬೀಜ ತೀಕ್ಷ್ಣ ವಿಷ. ಇದರ ರುಚಿಯು ತೀರ ಕಹಿ. ಉರುಟಾದ ಕಾಯಿಗಳ ಹೊರ ಮೈ ತುಸುಂಬಿರುಸಾಗಿದ್ದು, ಅವು ಬಲಿತಾಗ ಸಣ್ಣ ಕಿತ್ತಳೆ ಹಣ್ಣುಗಳಂತೆ ಕಂಗೊಳಿಸುತ್ತವೆ. ಬೀಜವು ಅರ್ಧ ರೂಪಾಯಿ ನಾಣ್ಯದಂತೆ ದುಂಡಗೆ ಬಿಳಿಯ ಹೊಳಪಿನಿಂದ ಕೂಡಿದ್ದು 3 ಸೆಂಟಿ ಮೀಟರ್ ಅಗಲ, 4–6 ಮಿಲಿಮೀಟರ್ ದಪ್ಪವಾಗಿದ್ದು ಹೊರ ಮೈಯಲ್ಲಿ ಕಿರು ರೋಮಗಳ ಪದರು ಇರುತ್ತದೆ.

ಕಾಸರಕ ಬೀಜದಲ್ಲಿ ಸ್ಟ್ರಿಕ್‌ನಿನ್ ಮತ್ತು ಬ್ರೂಸೀನ್ ಎಂಬ ವಿಷ ಸತ್ವಗಳಿವೆ. ಗಿಡದ ಬೇರು ತೊಗಟೆಗಳಲ್ಲೂ ಬ್ರೂಸಿನ್ ಸತ್ವವಿದೆ. ಉಸಿರಾಟದ ಉತ್ತೇಜನಕ್ಕೂ ಕೃತಕವಾಗಿ ವಾಂತಿ ಮಾಡಿಸಲಿಕ್ಕೂ ಸ್ಟ್ರಿಕ್‌ನಿನ್ ಔಷಧಿಯನ್ನು ಆಧುನಿಕ ವೈದ್ಯರು ಬಳಸುತ್ತಾರೆ. ಸ್ಟ್ರಿಕ್‌ನಿನ್ ಸತ್ವವು ಅನೇಕ ಬಗೆಯ ತ್ರಾಣಕಗಳಲ್ಲಿ ಹಾಸು ಹೊಕ್ಕಾಗಿರುತ್ತದೆ. ಹಳ್ಳಿಯ ಜನಗಳೂ ಆಯುರ್ವೇದ ವೈದ್ಯರೂ ನಾನಾ ಬಗೆಯ ಜ್ವರ, ಸಂಧಿ ವಾತ, ಕುಷ್ಟ ರೋಗ ಹಾಗೂ ಪಕ್ಷಾಘಾತ ಚಿಕಿತ್ಸೆಗಳಲ್ಲಿ ಕಾಸರಕ ಬೀಜವನ್ನೂ ಎಲೆಯನ್ನೂ ಉಪಯೋಗಿಸುತ್ತಾರೆ.

ಪ್ರಾಣಾಪಾಯದ ಪ್ರಮಾಣ (ಸೇವನೆ) : 15–30 ಮಿಲಿಗ್ರಾಂ. ಪ್ರಾಣಾಪಾಯದ ಕಾಲಾವಧಿ 6 ತಾಸು. (ವಿಷ ಪ್ರಾಶನವಾದ 5 ನಿಮಿಷಗಳಲ್ಲಿ ಮರಣ ಸಂಭವಿಸಿದ ದಾಖಲೆ ಇದೆ.) ಇದು ಪಶುವಿಷ.

ವಿಷ ಪ್ರಯೋಗದ ಲಕ್ಷಣಗಳು :

ಕಾಸರಕ ವಿಷ ಸೇವಿಸಿದ ರೋಗಿಯ ಬಾಯಲ್ಲಿ ಕಹಿ ರುಚಿ ಕಾಣಿಸುವುದಲ್ಲದೆ ನಾಲಗೆಯು ಒರಟಾಗುವುದು. ಕ್ರಮೇಣ ಗಂಟಲು ಬಿಗಿಯ ತೊಡಗಿ ಕೊರಳು ಮತ್ತು ಮೋರೆಯ ಮಾಂಸ ಖಂಡಗಳು ಸೆಟೆದುಕೊಳ್ಳುವವು. ಉಸಿರಾಟದ ತೊಂದರೆಯುಂಟಾಗಿ ಮೇಲುಸಿರು ಪ್ರಾರಂಭವಾಗುವುದು. ರೋಗಿಯು ಭಯಂಕರ ಚಿಂತೆ ಹಾಗೂ ಮನೋವ್ಯಾಕುಲ ಪೀಡಿತನಾಗಿ ಕಂಗೆಡುತ್ತಾನೆ. ಅವನ ಕೈಕಾಲುಗಳು ಕೊಕ್ಕೆ ಕಟ್ಟುವವು; ಮುಷ್ಟಿಗಳು ಬಿಗಿದುಕೊಳ್ಳುವವು. ಆದಿರುವಾಯುವು ಪ್ರಾರಂಭವಾಗಿ ಆಕ್ಷೇಪಕ ತರಂಗಗಳೆದ್ದು ಕ್ರಮೇಣ ಇಡೀ ದೇಹವನ್ನು ಆಕ್ರಮಿಸುತ್ತದೆ; ಹಾಗೂ ಪೂರ್ಣಕಾಲ ಇದೇ ಸ್ಥಿತಿಯಲ್ಲಿ ಉಳಿದು ಬಿಡುತ್ತದೆ. ಕ್ರಮೇಣ ಅತ್ಯಲ್ಪ ಉದ್ರೇಕದಿಂದಲೂ, ಬೆಳಕು ಶಬ್ದಗಳಿಂದಲೂ ಸಹ ಸೆಟೆಗಳು ಉಂಟಾಗ ಬಹುದು. ರೋಗಿಯ ಕಣ್ಣು ಬೊಂಬೆ ಅರಳಿರುತ್ತದೆ. (ಕಾಸರಕ ವಿಷ ಚಿಕಿತ್ಸೆ

ಮಾಡುವ ಮುನ್ನ ವಿಷ ಲಕ್ಷಣಗಳನ್ನು ಟಿಟನಸ್, ಹಿಸ್ಟೀರಿಯಾ, ಭ್ರಮೆ, ಉನ್ಮಾದ ಮೊದಲಾದ ರೋಗ ಲಕ್ಷಣಗಳಿಂದ ಪ್ರತ್ಯೇಕಿಸಿ ಗುರುತಿಸುವುದು ಅಗತ್ಯ).

ಚಿಕಿತ್ಸೆ ಮತ್ತು ಉಪಚಾರ :


ಕಾಸರಕ ವಿಷ ಪ್ರಯೋಗಕ್ಕೆ ತುತ್ತಾದ ರೋಗಿಯನ್ನು ಮೊದಲು ನಿಶ್ಯಬ್ದವಾದ ಕತ್ತಲು ಕೋಣೆಯೊಳಕ್ಕೆ ಸಾಗಿಸಿ ಪ್ರತ್ಯೇಕವಾಗಿ ಮಲಗಿಸಿ, ಸಂಪೂರ್ಣ ವಿಶ್ರಾಂತಿ ನೀಡಬೇಕು. ಅದಿರುವಾಯು ಏಳುತ್ತಿದ್ದರೆ ಕ್ಲೋರೋ ಫಾರಂ ಮೂಸಲು ಕೊಡಬೇಕು; ಅಥವಾ ಇತರ ನಿದ್ರಾಪ್ರದ-ಶಾಮಕ ಔಷಧಿಗಳನ್ನು ನೀಡಬೇಕು. ಉಸಿರಾಟದ ತೊಂದರೆ ಕಾಣಿಸಿದರೆ, ಆಮ್ಲಜನಕ ನೀಡಿಕೆ, ಕೃತಕ ಉಸಿರಾಟಗಳನ್ನು ಒದಗಿಸಬೇಕು. ಹೊಟ್ಟೆ ತೊಳೆಯುವುದು, ವಮನ-ವಿರೇಚನ ಮಾಡಿಸುವುದು ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆಗಳನ್ನು ನಡೆಸಬೇಕು. ಕಾಸರಕ ವಿಷ ಪ್ರಯೋಗವಾದ ರೋಗಿಗಳಿಗೆ ವೀಳ್ಯದೆಲೆ ರಸ, ನೇರಳೆ ರಸ ಅಥವಾ ಆಕಳ ತುಪ್ಪ ಸೇವನೆ ಹಿತಕರವೆಂದು ಆಯುರ್ವೇದ ವೈದ್ಯರ ಅಭಿಮತ.

ಕರವೀರ (ಕಣಗಿಲೆ)

[ಇಂಗ್ಲಿಷ : Gleander. ಸಸ್ಯ ಶಾಸ್ತ್ರದ ಹೆಸರು : (i) Neriom Odorom (White) Cerbera Thevetia (Thevetia Nerifolia). ಕನ್ನಡ : ಕಣಗಿಲ, ಕಣಗಿಲೆ, ಕಣಗಲೆ, ಕಣಗಿಲು, ಕರವೀರ (ಉಪಭೇದ : ಕಾಡು ಸಂಪಿಗೆ, ದೇವರ ಕಣಗಿಲು, ಗೋಸಂಪಿಗೆ). ಸಂಸ್ಕೃತ: ಕರವೀರ, ಹಯಮಾರಕ. ತಮಿಳು : ಕರವೀರಂ. ತೆಲಗು : ಗನ್ನೇರು; ಕಸ್ತೂರಿ ಪಟ್ಟೆ. ಮಲಯಾಳಂ : ಕರವೀರಂ; ಚುವನ್ನ ಅರಳಿ. ಮರಾಠಿ: ಕನೇರಾ. ಹಿಂದಿ : ಕನೆಲ್, ಕನೇರ್.

ಪರಿಚಯ :

ದೇವರಪೂಜೆಗೆ ಪ್ರಿಯವಾದ ಪುಷ್ಪ ಕಣಗಿಲ. ನದಿತೀರಗಳಲ್ಲಿಯೂ, ಗದ್ದೆ ತೋಟಗಳ ಅಂಚಿನಲ್ಲಿಯೂ ಹುಟ್ಟಿ ಎತ್ತರಕ್ಕೆ ಬೆಳೆಯುವ ಕರವೀರ ವೃಕ್ಷಗಳಲ್ಲಿ ಕೆಲವು ಕೆಂಪು ಹೂ ಬಿಡುವ, ಇನ್ನು ಕೆಲವು ಬಿಳಿ ಹೂಬಿಡುವ ಜಾತಿಗೆ ಸೇರಿವೆ. ಅರಸಿಣ ಬಣ್ಣದ ಹೂಬಿಡುವ ಜಾತಿಗೆ ಸೇರಿರುವ ಮರಗಳು ಇವೆ. ಈ ವೃಕ್ಷದಲ್ಲಿ ಗೋಸಂಪಿಗೆ, ಕಾಡುಸಂಪಿಗೆ ಎಂಬ ಕಾಡು ಪುಷ್ಪ ಜಾತಿಯ ಉಪಭೇದವೂ ಇದೆ. ಅರಸಿಣ ಬಣ್ಣದ ಹೂ ಘಮಘಮಿಸುತ್ತದೆ. ಬೀಜಗಳಿಗೆ ಬಿರುಸಾದ ಚಿಪ್ಪಿನಂತಹ ಹೊರ ಕವಚ ವಿರುತ್ತದೆ. ಗಿಡದ ತೊಗಟೆ, ಎಲೆ ಹಾಗೂ ಪುಷ್ಪದ ದೇಟನ್ನು ಗಾಯ ಮಾಡಿದಾಗ



ಕರವೀರ ಟೊಂಗೆ ಹೂ, ಎಲೆ, ಮತ್ತು ಬೀಜ

ಬಿಳಿಹಾಲು ಜಿನುಗುತ್ತದೆ. ಕರವೀರದ ಎಲೆ, ಬೇರು, ಹೂ ಮತ್ತು ಬೀಜ ಎಲ್ಲವೂ ಸೇವನಾ ವಿಷ, ಹಾಲು ಸ್ಪರ್ಶ ವಿಷ. ಕರವೀರದಲ್ಲಿ ನೆರಿನ್, ಥೆವೆಟಿನ್ ಮತ್ತು ಸೆರೆಬ್ರಿನ್ ಎಂಬ ವಿಷ ಸತ್ವಗಳಿವೆ.

ಪ್ರಾಣಾಪಾಯದ ಪ್ರಮಾಣ (ಸೇವನೆ) : ಬಿಳಿ ಕರವೀರ ಬೇರಿನ ಚೂರ್ಣ ಸುಮಾರು 16 ಗ್ರಾಮ ಅರಸಿನಕಣಗಿಲದ ಬೀಜ 8. ಪ್ರಾಣಾಪಾಯದ ಕಾಲಾವಧಿ 3-4 ತಾಸು. (ಆದರೆ ಕೆಲವೊಮ್ಮೆ ಎರಡು, ಮೂರು ದಿನಗಳ ನಂತರ ಸಾವು ಸಂಭವಿಸಿದ್ದೂ ಉಂಟು.)

ವಿಷ ಪ್ರಾಶನದ ಲಕ್ಷಣಗಳು :

ಬಿಳಿ ಕರವೀರ ವಿಷ ಸೇವಿಸಿದ ರೋಗಿಗೆ ಗಂಟಲು, ನಾಲಗೆ ಮತ್ತು ಬಾಯಿಯಲ್ಲಿ ನೋವು ಕಾಣಿಸುತ್ತದೆ. ಮತ್ತು ಅವನಿಗೆ ನುಂಗಲು ಕಷ್ಟವಾಗುತ್ತದೆ. ಹೊಟ್ಟೆ ನೋವು, ವಾಂತಿ, ಭೇದಿ ಮತ್ತು ಬುರುಗು ಮಿಶ್ರಿತ ಜೊಲ್ಲು ಸುರಿಯಲು ಪ್ರಾರಂಭವಾಗುತ್ತದೆ. ರೋಗಿಯ ನಾಡಿಯು ಮೊದಲು ನಿಧಾನವಾಗಿ ಬಡಿಯುತ್ತಿದ್ದು



ಕರವೀರ (ಇನ್ನೊಂದು ಜಾತಿ)

ಕ್ರಮೇಣ ತೀವ್ರಗತಿಗೆ ತಿರುಗುತ್ತದೆ. ಉಸಿರಾಟವು ಜೋರಾಗುತ್ತದೆ. ತೂಕಡಿಕೆ, ನಿದ್ರೆ, ಅದಿರುವಾಯು, ದೀರ್ಘಸುಪ್ತಿ ಮೊದಲಾದ ಉಪದ್ರವಗಳು ಸಂಭವಿಸುವವು; ಮತ್ತು ಸಾವು ಉಂಟಾಬಹುದು.

ಅರಸಿಣ ಕರವೀರ ಸೇವಿಸಿದ ರೋಗಿಯ ಬಾಯಿ, ನಾಲಗೆ ಮತ್ತು ಗಂಟಲಲ್ಲಿ ನೋವು, ಉರಿ ಕಾಣಿಸಿಕೊಂಡು ಗಂಟಲು ಬತ್ತುವುದು, ನಾಲಗೆ ನಿಶ್ಚೇತನವಾಗುವುದು ತಲೆನೋವು, ತಲೆತಿರುಗುವದು, ವಾಕರಿಕೆ, ವಾಂತಿ ಮೊದಲಾದ ಉಪದ್ರವಗಳು ಉಂಟಾಗುವವು. ಅವನ ಕಣ್ಣುಬೊಂಬೆ ಅರಳುತ್ತದೆ. ನಾಡಿಯು ಮೊದಲ

ನಿಧಾನವಾಗಿದ್ದು ಕ್ರಮೇಣ ತೀವ್ರ-ವಕ್ರಗತಿಗೆ ತಿರುಗುತ್ತದೆ. ರೋಗಿಯು ಮೂರ್ಛೆ ತಪ್ಪುವನು; ಹೃದಯವಿಕಾರ, ಕುಸಿತ, ಅದಿರುವಾಯು ಮೊದಲಾದ ಉಪದ್ರವ-ಗಳಿಂದ ನರಳುವುದಲ್ಲದೆ ಸಾವಿಗೂ ತುತ್ತಾಗಬಹುದು.

ಚಿಕಿತ್ಸೆ ಮತ್ತು ಉಪಚಾರ


ವಾಂತಿಮಾಡಿಸುವುದು, ಹೊಟ್ಟೆತೊಳೆಯುವುದು ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆ ಮಾಡುವುದಲ್ಲದೆ ಇತರ ಉಪದ್ರವಗಳಿಗೆ ಸೂಕ್ತ ಚಿಕಿತ್ಸೆ ನಡೆಸಬೇಕು. ಆಯುರ್ವೇದ ವೈದ್ಯರು ನಿಂಬೆಹಣ್ಣಿನರಸ, ಹತ್ತಿಕಾಯಿಯರಸ ಅಥವಾ ನೇರಳೆ ರಸವನ್ನು ಕುಡಿಸಬೇಕು ಎಂದು ಸೂಚಿಸುತ್ತಾರೆ.

ಕೇರು ಮತ್ತು ಗೇರು

[ಇಂಗ್ಲಿಷ್ : Marking Nut. ಇಂಗ್ಲಿಷ್ : (ಗೇರು) Cashew Nut. ಸಸ್ಯ ಶಾಸ್ತ್ರದ ಹೆಸರು : (ಕೇರು) Semecarpus Anacardium. ಸಸ್ಯ ಶಾಸ್ತ್ರದ ಹೆಸರು : (ಗೇರು) Anacardium Ocel Dentale. ಕನ್ನಡ : (ಕೇರು) ಗೇರ್ಕಾಯಿ, ಕೇರು, ಕೇರರಳು, ಚೇರಾ. ಕನ್ನಡ : (ಗೇರು) ಕಾಜು, ಗೇರು, ಬೀಜ, ಗೇರುಬೀಜ. ಸಂಸ್ಕೃತ : (ಕೇರು) ಭಲ್ಲಾತಕ, ಅಗ್ನಿ ಮುಖಿ, (ಗೇರು) ಶೋಫಹರ. ತುಳು : (ಕೇರು) ತೇರೆ, ಚೇರೆ. (ಗೇರು) ಗೋಂಕು. ತಮಿಳು : (ಕೇರು) ಶೇಗೋಟ್ಟೈ. (ಗೇರು) : ಮುಂದರಿಕ್ಕೈ. ತೆಲಗು : (ಕೇರು) ಜೇಡಿ ಚೆಟ್ಟು, ಭಲ್ಲಾತಕಮು. (ಗೇರು) : ಜೇಡಿ ಮಾಮಿಡಿ. ಮಲಯಾಳಂ : (ಕೇರು) ಚೇರು. (ಗೇರು) : ಕಪ್ಪ ಮಾವು. ಹಿಂದಿ : (ಗೇರು) ಭಾಲವಾನ್, ಕಾಜೂ.]

ಪರಿಚಯ :

ಸಮುದ್ರ ತೀರದ ಬಯಲು ಗುಡ್ಡಗಳಲ್ಲಿಯೂ ಒಳನಾಡಿನ ಕಾಡುಗಳಲ್ಲಿಯೂ ಬೆಳೆಯುವ ಗೇರು ಮರಗಳನ್ನು ಈಚೆಗೆ ತೋಟಗಳಲ್ಲಿ ನೆಟ್ಟು ರೊಕ್ಕದ ಬೆಳೆಯಾಗಿ ಬೆಳೆಸುವುದಕ್ಕೆ ತೊಡಗಿದ್ದಾರೆ. ಪುಷ್ಯ–ಮಾಘ ಮಾಸಗಳಲ್ಲಿ ಗೇರು ಹೂ ಬಿಡುತ್ತದೆ. ಫಲದ ಒಂದು ತುದಿಯಲ್ಲಿ ಬೀಜವು ಅಂಟಿಕೊಂಡಿರುತ್ತದೆ. ಗೇರು ಹಣ್ಣು ತಿನ್ನಲು ಸವಿಯಾಗಿರುತ್ತದೆ. ಗೇರು ಬೀಜದ ಹೊರ ಮೈ ಗಟ್ಟಿಯಾದ ಚಿಪ್ಪಿನಿಂದ ನಿರ್ಮಿತ ವಾಗಿದ್ದು, ಒಳಗೆ ರುಚಿಕರವಾದ ದ್ವಿದಳ ತಿರುಳು ಇರುತ್ತದೆ. ಇದೇ ಬೆಲೆಯುಳ್ಳ ಸುಪ್ರಸಿದ್ಧ ಗೇರು ಪಪ್ಪು. (ಗೋಡಂಬಿ, ಕಾಜು). ವಿಶ್ವ ವಿಖ್ಯಾತವಾದ ಗೋವಾ ಮದ್ಯ–ಫೇನಿಯನ್ನು ಗೇರು ಹಣ್ಣಿನಿಂದ ತಯಾರಿಸುತ್ತಾರೆ. ಗೇರು ಮರ



ಕೇರು

ದಿಂದ ಸ್ರವಿಸುವ ಅಂಟು ತುಸು ಮಟ್ಟಿಗೆ ಸ್ಪರ್ಶವಿಷವಾಗಿದ್ದರೂ ಉತ್ತಮವಾದ ಗೋಂದು. ಗೇರು ಬೀಜದ ಸಿಪ್ಪೆಯ ಎಣ್ಣೆಯನ್ನು ನಾನಾ ಉದ್ಯಮಗಳಲ್ಲಿ ಉಪಯೋಗಿಸುತ್ತಾರೆ; ಮತ್ತು ಮರಮುಟ್ಟುಗಳ ಬಾಳಿಕೆ ಹೆಚ್ಚಿಸಲು ವಾರ್ನಿಷ್‌ನಂತೆ ಬಳಿಯುವುದುಂಟು. ಈ ಎಣ್ಣೆಯು ಸ್ಪರ್ಶ ಹಾಗೂ ಸೇವನಾ ವಿಷ.

ಕೇರು ಮರ ಕಾಡುಗಳಲ್ಲಿಯೂ ಬೆಳೆಯುವ ದೊಡ್ಡ ವೃಕ್ಷ. ಇದರ ತೊಗಟೆಯನ್ನು ಗಾಯ ಮಾಡಿದಾಗ ಒಸರುವ ದ್ರವವು ತೀಕ್ಷ್ಣವಾದ ಸ್ಪರ್ಶ ವಿಷ. ಕೇರು ಬೀಜದ ತಿರುಳನ್ನು ಗಾಳಿಗೊಡ್ಡಿದಾಗ ಕಪ್ಪಾಗುತ್ತದೆ. ತೈಲ ಭರಿತವಾದ ಈ ಬೀಜಗಳನ್ನು ಬಟ್ಟೆಗೆ ಗುರುತು ಹಾಕಲು ಅಗಸರು ತಲೆ ತಲಾಂತರದಿಂದ ಉಪಯೋಗಿಸುತ್ತಾರೆ. ಹಳ್ಳಿಗಳಲ್ಲಿ ಅನೇಕ ರೋಗ ಚಿಕಿತ್ಸಾ ವಿಧಾನಗಳೆಂದು ಹೊಟ್ಟೆ, ಎದೆ, ದವಡೆ, ಭುಜ, ತೊಡೆ ಮೊದಲಾದ ನಾನಾ ಅವಯವಗಳ ಮೇಲೆ ಬರೆ ಎಳೆಯಲು (ಸುಡಿಸುವುದು ಎಂದು ಹೇಳುತ್ತಾರೆ.) ಕೇರು ಬೀಜವನ್ನು ಉಪಯೋಗಿಸುತ್ತಾರೆ. ಆಯುರ್ವೇದ ವೈದ್ಯರು ಕೇರುಬೀಜವನ್ನು ಶುದ್ಧ ಮಾಡಿ ನಾನಾ ರೋಗಗಳ ಚಿಕಿತ್ಸೆಗಳಿಗಾಗಿ ಬಳಸುತ್ತಾರೆ. ಕೇರು ಸ್ಪರ್ಶ ಹಾಗೂ ಸೇವನಾ ವಿಷ.

ಪ್ರಾಣಾಪಾಯದ ಪ್ರಮಾಣ (ಸೇವನೆ) : 1.50 ಮಿಲಿ ಗ್ರಾಂ. (ಅಶುದ್ಧ.)



ಗೇರು

ವಿಷ ಪ್ರಯೋಗದ ಲಕ್ಷಣಗಳು :

ಕೇರುವಿಷವನ್ನು ಸೇವಿಸಿದ ರೋಗಿಯು ಗಂಟಲಿನಲ್ಲಿ ತುರಿಕೆ, ನವೆ ಕಾಣಿಸಿಕೊಂಡು ಗುಳ್ಳೆಗಳು ಏಳುವವು. ಅವನ ನಾಲಗೆ, ಬಾಯಿ, ದವಡೆ ಮತ್ತು ಹಲ್ಲಿನ ಸಂದಿಗಳಲ್ಲಿಯೂ, ವಸಡಿನಲ್ಲಿಯೂ ಉರಿ, ನೋವು ಮತ್ತು ಹುಣ್ಣುಗಳು ಉಂಟಾಗುವವು. ಮೈ ಕೈ ನವೆ, ತುರಿಕೆ, ಕರಳುಉರಿ ಮೊದಲಾದ ಉಪದ್ರವಗಳು ಉಂಟಾಗುವವಲ್ಲದೆ ಉಸಿರಾಡಲು ತೊಂದರೆ ಉಂಟಾಗುತ್ತದೆ. ರೋಗಿಯು ಮನಸ್ಸಿನಲ್ಲಿ ಸಾವಿನಭಯ ಕಾಣಿಸಿಕೊಂಡು ಹೆಚ್ಚಿನ ಮಾನಸಿಕ ವೇದನೆಯಿಂದ ಅವನು ನರಳುತ್ತಾನೆ. ಅವನ ಕಣ್ಣುಬೊಂಬೆ ಅರಳುವದು; ಮುಖವು ನೀಲೀ ಛಾಯೆಗೆ ತಿರುಗುವುದು;

ರಕ್ತದ ಒತ್ತಡ ಇಳಿಯುವುದು. ಕ್ರಮೇಣ ಬಡಬಡಿಕೆ, ದೀರ್ಘಸುಪ್ತಿ ಮೊದಲಾದ ತೊಂದರೆಗಳು ಕಾಣಿಸಿಕೊಂಡು ಸಾವು ಸಂಭವಿಸಬಹುದು.

ಗೇರುಬೀಜದ ಕವಚದಿಂದ ಹೊರಡುವ ಎಣ್ಣೆಯೂ ಗಿಡದ ಮೇಣವು ಸ್ಪರ್ಷ ವಿಷವಾಗಿರುವುದರಿಂದ ಮೈ ಕೈಗಳಿಗೆ ಸ್ಪರ್ಶವಾದರೆ ಗಂದೆ, ನೀರು ಸೋರುವ ಸುಟ್ಟ ವ್ರಣ ಮೊದಲಾದ ಉಪದ್ರವಗಳು ಕಾಣಿಸುತ್ತವೆ. ಕೇರುಬೀಜದಿಂದ ತರಡಿಗೆ ಬರೆಹಾಕಿದರೆ ರೋಗಿಯು ಕ್ಷಿಪ್ರ ಮರಣಕ್ಕೆ ತುತ್ತಾಗುವ ಸಂಭವವಿದೆ. ಈ ಬಗೆಯ ವಿಷಪ್ರಯೋಗಕ್ಕೆ ತುತ್ತಾದ ರೋಗಿಯಲ್ಲಿ ಜ್ವರ, ಮೂತ್ರ ವಿಸರ್ಜನೆಯ ಕಾಲದಲ್ಲಿ ವೇದನೆ ಮೊದಲಾದ ಉಪದ್ರವಗಳು ಕಾಣಿಸುವವು.

ಚಿಕಿತ್ಸೆ ಮತ್ತು ಉಪಚಾರ

ಕೇರು- ವಿಷ ಪ್ರಾಶನವಾದ ರೋಗಿಗೆ ಬೆಣ್ಣೆ, ತೈಲ, ಅಥವಾ ತುಪ್ಪ ಇವುಗಳಲ್ಲಿ ಒಂದನ್ನು ಕುಡಿಸಬೇಕು; ಹಾಗೂ ವೇದನಾಶಾಮಕ ಚಿಕಿತ್ಸೆ ಮಾಡಬೇಕು. ಹೊಟ್ಟೆ ತೊಳೆಯುವುದೂ, ವಾಂತಿಮಾಡಿಸುವುದೂ ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆಗಳನ್ನು ನಡೆಸಬೇಕು.

ಆಯುರ್ವೇದ ಗ್ರಂಥಗಳಲ್ಲಿ ಈ ಕೆಳಗಿನ ಚಿಕಿತ್ಸೆ ಉಲ್ಲೇಖಿತವಾಗಿದೆ. (1) ಬೆಣ್ಣೆ ಮತ್ತು ಎಳ್ಳು ಅರೆದು ಸೇವಿಸುವುದು (2) ವಿಭೀತಕಿ ವೃಕ್ಷದ ಬೇರಿನ ಪುಡಿಯನ್ನು ಬೆಣ್ಣೆಯಲ್ಲಿ ಕಲಸಿ ಸೇವಿಸುವುದು (3) ಯಾಲಕ್ಕಿಯನ್ನು ಮಜ್ಜಿಗೆಯಲ್ಲಿ ಅರೆದು ಕುಡಿಸುವುದು (4) ಹಿಪ್ಪಲಿ ಚೂರ್ಣವನ್ನು ಕಲಗಜ್ಜಿನಲ್ಲಿ ಕಲಸಿ ಸೇವಿಸುವುದು (ಇವುಗಳ ಪೈಕಿ ಯಾವುದಾದರೂ ಒಂದು). ಮೈಉರಿಯ ಶಮನಕ್ಕಾಗಿ ತಾರೆ ಕಾಯಿಯ ತಿರುಳನ್ನು ಅಥವಾ ಒಣ ಕೊಬ್ಬರಿಯನ್ನು ನೀರಿನಲ್ಲಿ ಅರೆದು ಲೇಪಿಸಬೇಕು. ಸ್ಪರ್ಶವಿಷಕ್ಕೆ ಕೊಬ್ಬರಿ ಎಣ್ಣೆ ಸವರುವುದು, ತೆಂಗಿನಕಾಯಿಯ ತುರಿಯನ್ನು ರಸ ತೆಗೆದು ಲೇಪಿಸುವುದೂ, ಆಕಳ ಹಾಲು ಇಲ್ಲವೆ ಹುಣಸೆ ಎಲೆ ರಸ ಕುಡಿಸುವುದೂ ಉಪಯುಕ್ತ ಚಿಕಿತ್ಸೆಗಳಾಗಿವೆ.

ಜಾಪಾಳ (ಜಯಪಾಲ)

[ಇಂಗ್ಲಿಷ : Croton. ಸಸ್ಯ ಶಾಸ್ತ್ರದ ಹೆಸರು : Crotontiglium. ಕನ್ನಡ: ಜಾಪಾಳೆ, ಜಯಪಾಲ, ನೇರ್ವಾಳ. ಸಂಸ್ಕೃತ : ಜಯಫಲ, ತಿತ್ತಿರೀ ಫಲ, ನೇಪಾಳ. ತುಳು: ಬ್ಯಾರಿಬಿತ್ತು; ತಮಿಳು : ಚೆಂದಿ, ಚಿದುರಂ. ತೆಲಗು : ನೇಪಾಳ-ಮು. ಮಲಯಾಳಂ: ನಿರ್ವಾಳಂ. ಕೊಂಕಣಿ: ಜಾಫಲ, ಹಿಂದಿ: ಜಮಾಲಗೋಟ್.]

ಪರಿಚಯ

ಜಾಪಾಳ ಗಿಡದಷ್ಟು ಕೆಟ್ಟಹೆಸರು ಹೊತ್ತ ವನೌಷಧಿ ಬೇರೊಂದಿಲ್ಲ. ಜಾಪಾಳ ಮಾತ್ರೆ ವೈಕುಂಠ ಯಾತ್ರೆ ಎಂಬ ಗಾದೆಯೇ ಇದೆ! ಜಾಪಾಳ ಬೀಜದ ತೈಲ ಹಾಗೂ ಬೇರಿನ ಪುಡಿ ಉತ್ತಮ ವಿರೇಚಕ ದ್ರವ್ಯಗಳು; ಆದರೆ ಶುದ್ಧ ಮಾಡದೆ ಉಪ-ಯೋಗಿಸಿದರೆ ಮಾರಕವಿಷ. ಆಯುರ್ವೇದ ವೈದ್ಯರು ಜಾಪಾಳವನ್ನು ಪಂಚಗವ್ಯದಲ್ಲಿ ಬೇಯಿಸಿ ಶುದ್ಧಮಾಡುತ್ತಾರೆ. ಜಾಪಾಳ ಬೀಜದಲ್ಲಿ ಕ್ರೋಟಿನ್ ಎಂಬ ವಿಷ ಸತ್ವವಿದೆ. ಜಾಪಾಳ ತೈಲವು ಕೆಟ್ಟ ವಾಸನೆಯುಳ್ಳದ್ದಾಗಿದ್ದು ಸ್ಪರ್ಶ ಹಾಗೂ ಸೇವನಾ ವಿಷ.

ಪ್ರಾಣಾಪಾಯದ ಪ್ರಮಾಣ (ಸೇವನೆ) : ಬೀಜದ ತೈಲ 20-30 ಬಿಂದು. ಕೇವಲ ಒಂದು ಜಾಪಾಳ ಬೀಜವನ್ನು ತಿಂದು ಸಾವು ಸಂಭವಿಸಿದ ದಾಖಲೆಯಿದೆ. ಪ್ರಾಣಾಪಾಯದ ಕಾಲಾವಧಿ 4–6 ತಾಸು (ಆದರೆ ಕೆಲವು ಸಂಧರ್ಭದಲ್ಲಿ 3–4 ದಿವಸಗಳಷ್ಟು ವಿಳಂಬವಾಗಿಯೂ ಮರಣ ಸಂಬವಿಸಬಹುದು.)

ವಿಷಪ್ರಾಶನದ ಲಕ್ಷಣಗಳು :

ಜಾಪಾಳ ವಿಷ ಪ್ರಯೋಗಕ್ಕೆ ತುತ್ತಾದ ರೋಗಿಯ ನಾಲಗೆ, ಗಂಟಲು ಮತ್ತು ಬಾಯಿ ಉರಿಯುವುದು, ಜೊಲ್ಲು ಸುರಿಯುವದು, ವಾಕರಿಕೆ, ವಾಂತಿ ಮೊದಲಾದ ಉಪದ್ರವಗಳಿಂದ ನರಳುತ್ತಾನೆ. ಅವನ ಹೊಟ್ಟೆಯು ಹಿಚುಗಿದಂತಾಗಿ ತ್ರೀವ್ರವಾದ ಹೊಟ್ಟೆಶೂಲೆ, ಭೇದಿ, ತಲೆತಿರುಗುವುದು, ಸಂಕಟ ಮತ್ತು ವೇದನೆಗಳು ಉಂಟಾಗುತ್ತವೆ; ಕುಸಿತ ಮತ್ತು ಸಾವು ಸಂಭವಿಸಬಹುದು.

ಚಿಕಿತ್ಸೆ ಮತ್ತು ಉಪಚಾರ :

ಹೊಟ್ಟೆತೊಳೆಯುವುದು, ವಾಂತಿಮಾಡಿಸುವದು ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆಯನ್ನು ನಡೆಸಬೇಕು. ತತ್ತಿಯ ಲೋಳೆ ಕುಡಿಸುವುದು ಹೆಚ್ಚು ಉಪಯುಕ್ತವಾಗಿದೆ. ಗ್ಲೂಕೋಸ್ ನೀಡಿಕೆ ಮತ್ತು ಉತ್ತೇಜಕ ಔಷಧ ಪಾನೀಯಗಳು ಹೆಚ್ಚಿನ ಪರಿಣಾಮ ನೀಡುತ್ತವೆ.


ಆಯುರ್ವೇದ ವೈದ್ಯರು ಈ ಕೆಳಗಿನ ಚಿಕಿತ್ಸೆಗಳನ್ನು ಸೂಚಿಸುತ್ತಾರೆ: 1. ಯಾಲಕ್ಕಿ ಪುಡಿಯನ್ನು ಮೊಸರಿನಲ್ಲಿ ಕಲಸಿ ಸೇವಿಸುವುದು. 2. ಹವೀಜ ಕೊತ್ತಂಬರಿ ಬೀಜದ ಪುಡಿಯನ್ನು ಕಲ್ಲುಸಕ್ಕರೆ ಬೆರಸಿ ತಿನ್ನಿಸುವುದು 3. ದಾಳಿಂಬದ ಚಿಗುರಿನ ರಸ

ಹಿಂಡಿ ಕುಡಿಸುವುದು. 4. ನಿಂಬೆಹಣ್ಣಿನ ರಸ ಅಥವಾ ಮಜ್ಜಿಗೆ ಸೇವನೆ ಇವುಗಳಲ್ಲಿ ಯಾವುದಾದರೂ ಒಂದು.

ಜಾಪಾಳ ಸ್ಪರ್ಶ ವಿಷಕ್ಕೆ ತುತ್ತಾದ ರೋಗಿಯ ಚರ್ಮವು ಕೆಂಪಾಗಿ ಉರಿಯು ತೊಡಗುವದಲ್ಲದೆ ಸಣ್ಣ ಸಣ್ಣ ಗುಳ್ಳೆಗಳು ಏಳುತ್ತವೆ. ಹುಣ್ಣುಗಳು ಮಾಯ ವಾದರೂ ಕಲೆಯು ಶಾಶ್ವತವಾಗಿ ಉಳಿಯುತ್ತದೆ. ಇದಕ್ಕೆ ಸೂಕ್ತ ವ್ರಣರೋಪಣ ಚಿಕಿತ್ಸೆಯನ್ನು ನಡೆಸಬೇಕು.

ಎಕ್ಕೆಗಿಡ

[ಇಂಗ್ಲಿಷ್ : Gigantic swallow wort. akdu. ಸಸ್ಯ ಶಾಸ್ತ್ರದ ಹೆಸರು : Calotropis Gigantea.ಕನ್ನಡ: ಎಕ್ಕೆಗಿಡ, ಎಕ್ಕಮಾಲೆ. ಸಂಸ್ಕೃತ: ಅರ್ಕಾ,ಅರ್ಕ ಪರ್ಣಾ. ತುಳು: ಎಕ್ಕವಾಲೆ. ತಮಿಳು:ಎರುಕ್ಕು, ಬಡಾಬಡಂ. ತೆಲಗು: ಅರ್ಕವಮು, ಮಂದಾರವಮು, ಜಿಲ್ಲೇಡು. ಮಲಯಾಳಂ: ಎರಿಕ್ಕು, ಎರಿ. ಹಿಂದಿ: ಮದಾರ್.]



ಎಕ್ಕೆ ಗಿಡದ ಟೊಂಗೆ

ಪರಿಚಯ :

ಬಿಯಲು ಪ್ರದೇಶದಲ್ಲಿ ತಾನೇ ತಾನಾಗಿ ಬೆಳೆಯುವ ಹೆಚ್ಚು ಎತ್ತರವಲ್ಲದ ಪುಟ್ಟ ಎಕ್ಕೆಗಿಡದಲ್ಲಿ ನೇರಳೆ ಹಾಗೂ ಬಿಳಿಬಣ್ಣದ ಹೂಬಿಡುವ ಉಪಭೇಧವಿದ್ದರೂ

ಇತರ ಲಕ್ಷಣಗಳೆಲ್ಲ ಸಾಮಾನ್ಯವಾಗಿವೆ. ಗಿಡದ ತೊಗಟೆ, ಎಲೆ, ಅಥವಾ ಹೂವಿನ ದೇಟನ್ನು ಗಾಯ ಮಾಡಿದರೆ ಬಿಳಿಯ ಹಾಲಿನಂತಹ ದ್ರವವು ತೊಟ್ಟಿಕ್ಕುತ್ತದೆ. ಇದು ಸ್ಪರ್ಶ ಹಾಗೂ ಸೇವನಾ ವಿಷ.

ಎಕ್ಕೆ ಹಾಲಿನಲ್ಲಿ ವಿಷ್‌ರಿನ್, ಕಾಲೋಟಾಕ್ಸಿನ್ ಮತ್ತು ಕಾಲಾಕ್ಟಿನ್ ಎಂಬ ಮೂರು ವಿಷ ಸತ್ವಗಳಿವೆ. ಹಾಲು ಗಟ್ಟಿಯಾಗಿ ಮೇಣವಾದರೂ ಕೂಡಾ ವಿಷದ ತೀಕ್ಷ್ಣತೆ ಅಷ್ಟಾಗಿ ತಗ್ಗುವುದಿಲ್ಲ. ಹಳ್ಳಿಯ ಜನರು ಎಕ್ಕೆಗಿಡದ ಹೂ ಎಲೆ, ತೊಗಟೆ ಮತ್ತು ಬೇರನ್ನು ಔಷಧಕ್ಕಾಗಿ ಬಳಸುತ್ತಾರೆ. ಕೃತಕವಾಗಿ ವಾಂತಿಮಾಡಿಸಲು 2 ರಿಂದ 4 ಗ್ರಾಂ ಉಪಯೋಗಿಸುವುದುಂಟು. ಆದರೆ ಹೆಚ್ಚಿನ ಪ್ರಮಾಣದಲ್ಲಿ ಇದು ಮಾರಕ ವಿಷ.

ಸ್ಪರ್ಶ ವಿಷ ಲಕ್ಷಣ–ಚಿಕಿತ್ಸೆ :

ಎಕ್ಕೆ ಹಾಲು ಸ್ಪರ್ಶವಾದರೆ ಚರ್ಮವು ಕೆಂಪಾಗಿ ಊದಿಕೊಳ್ಳುತ್ತದೆ; ಮತ್ತು ನವೆ, ತುರಿಕೆ ಹಾಗೂ ಚಿಕ್ಕ ಚಿಕ್ಕ ಗುಳ್ಳೆಗಳು ಏಳುತ್ತವೆ. ಕೆಲವೊಮ್ಮೆ ಅಲ್ಲಿ ಹುಣ್ಣು ಸಹ ಉಂಟಾಗಬಹುದು. ಎಕ್ಕೆ ಹಾಲು ಕಣ್ಣಿಗೆ ಸ್ಪರ್ಶವಾದರೆ ಕಣ್ಣು ಉರಿ ಮತ್ತು ಬಾವು ಕಾಣಿಸಿಕೊಂಡು ಧಾರಾಕಾರವಾಗಿ ಕಣ್ಣೀರು ಸುರಿಯತೊಡಗುವುದಲ್ಲದೆ ಕೆಲವೊಮ್ಮೆ ದೃಷ್ಟಿ ಮಾಂದ್ಯವೂ ಉಂಟಾಗಬಹುದು.

ಎಕ್ಕೆಯ ಸ್ಪರ್ಶವಿಷವನ್ನು ತಣ್ಣೀರಿನಿಂದ ತೊಳೆಯಬೇಕು. ಚರ್ಮದಲ್ಲಿ ಗುಳ್ಳೆಗಳೆದ್ದ ಭಾಗಕ್ಕೆ ಹುಣಸೆ ಎಲೆಯನ್ನಾಗಲಿ, ನೇರಳೆಗಿಡದ ತೊಗಟೆಯನ್ನಾಗಲಿ ಅರೆದು ಲೇಪಿಸಬೇಕು. ಜೇಷ್ಟಮಧುವನ್ನು ಆಕಳ ಹಾಲಿನಲ್ಲಿ ಅರೆದು ಲೇಪಿಸಬೇಕು; ಹಾಗೂ ಇದನ್ನು ರೋಗಿಗೆ ಕುಡಿಯಲು ಕೂಡಾ ಕೊಡಬೇಕು. ಅನುಪಾನವಾಗಿ ಧಾರಾಳ ಮಜ್ಜಿಗೆ ಕುಡಿಸಬೇಕು. ಕಣ್ಣಿಗೆ ಎಕ್ಕೆವಿಷವು ಸ್ಪರ್ಶವಾದರೆ ಹುಣಸೆ ಹಣ್ಣನ್ನು ತಣ್ಣೀರಿನಲ್ಲಿ ಕಿವುಚಿ ಅಥವಾ ಹುಣಸೆ ಎಲೆಯನ್ನು ತಣ್ಣೀರಿನಲ್ಲಿ ಅರೆದು ಲೇಪಿಸಬೇಕೆಂದು ಆಯುರ್ವೇದ ವೈದ್ಯರು ಸೂಚಿಸುತ್ತಾರೆ.

ವಿಷಪ್ರಾಶನದ ಲಕ್ಷಣಗಳು

ಎಕ್ಕೆವಿಷ ಸೇವಿಸಿದ ರೋಗಿಯ ಬಾಯಲ್ಲಿ ಮೊದಲು ಕಹಿರುಚಿಯು ಕಾಣಿಸುವುದು. ಆನಂತರ ಗಂಟಲು ನೋವು ನಾಲಗೆ. ಬಾಯಿ, ಎದೆ ಮತ್ತು ಹೊಟ್ಟೆಯಲ್ಲಿ ಉರಿ–ವೇದನೆ ನೋವು ಮತ್ತು ಬಾವು ಉಂಟಾಗುತ್ತವೆ. ಅವನ ಬಾಯಿಯಿಂದ ಜೊಲ್ಲು ಸುರಿಯತೊಡಗುವುದು. ಬಾಯಿ ಮತ್ತು ನಾಲಗೆಯಲ್ಲಿ ವ್ರಣಗಳು

ಉಂಟಾಗುತ್ತವೆ. ರೋಗಿಯು ಕಣ್ಣುಬೊಂಬೆ ಅರಳುವುದು, ವಾಂತಿ, ಭೇದಿ ಬಡಬಡಿಸುವುದು, ಅದಿರುವಾಯು ಮೊದಲಾದ ಉಪದ್ರವಗಳು ಉಂಟಾಗುತ್ತವೆ. ಪ್ರಾಣಾಪಾಯದ ಕಾಲಾವಧಿ 30 ನಿಮಿಷದಿಂದ 8 ತಾಸುಗಳು.

ಚಿಕಿತ್ಸೆ ಮತ್ತು ಉಪಚಾರ

ಎಕ್ಕೆ ವಿಷ ಸೇವಿಸಿದ ರೋಗಿಗೆ ಹೊಟ್ಟೆತೊಳೆಯುವದು, ವಾಂತಿಮಾಡಿಸುವದು ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆಗಳನ್ನು ನಡೆಸಬೇಕು. ತತ್ತಿಯ ಲೋಳೆ ಹಾಲು ಅಥವಾ ಬೆಣ್ಣೆ ಸೇವನೆ ಹೆಚ್ಚು ಉಪಯುಕ್ತವಾಗಿದೆ. ಅದಿರುವಾಯು-ನಿರೋಧಕ ಹಾಗೂ ವೇದನಾ ಶಾಮಕ ಚಿಕಿತ್ಸೆಯನ್ನು ನಡೆಸಬೇಕು. ಆಯುರ್ವೇದ ವೈದ್ಯರು ಈ ಕೆಳಗಿನ ಚಿಕ್ಸಿತೆಗಳನ್ನು ಸೂಚಿಸುತ್ತಾರೆ.

1) ಎಳ್ಳು ಮತ್ತು ಬೆಲ್ಲವನ್ನು ಅರೆದು ಪ್ರತಿ ನಾಲ್ಕು ತಾಸಿಗೊಮ್ಮೆ ತಿನ್ನಿಸುವುದು. 2) ಮರದ ಅರಿಶಿಣ, ನೀಲಿ ಗಿಡದ ರಸ, ಬಿಲ್ವ ಪತ್ರೆ ಕಾಯಿಯ ತಿರುಳು, ಚಳ್ಳೆ ಮರದ ತೊಗಟೆ ಇವುಗಳಲ್ಲಿ ಒಂದನ್ನು ನೀರಿನಲ್ಲಿ ಅರೆದು ಕುಡಿಸುವುದು. ಆಕಳ ತುಪ್ಪ, ಕೊಬ್ಬರಿ ಎಣ್ಣೆ ಅಥವಾ ಹರಳೆಣ್ಣೆ ಸೇವನೆಯು ವೇದನಾಯುಕ್ತವಾದ ಭೇದಿಯನ್ನು ನಿಲ್ಲಿಸುತ್ತದೆ.

ಟಿಪ್ಪಣಿ :

ಎಕ್ಕೆ ತೀಕ್ಷ್ಣವಾದ ಪಶುವಿಷ. ಕಿಡಿಗೇಡಿಗಳು ಎಕ್ಕೆಯ ಚೂರ್ಣವನ್ನು ಪಶುಗಳ ಮೇವಿನಲ್ಲಿ ಬೆರೆಸುವುದುಂಟು ಅಥವಾ ಎಕ್ಕೆಹಾಲಿನಲ್ಲಿ ತೋಯಿಸಿ ಅರಳೆ ಮುದ್ದೆಯನ್ನು ಪ್ರಾಣಿಗಳ ಮೂಲದ್ವಾರದಲ್ಲಿ ಇರುಸುತ್ತಾರೆ. ಇದಕ್ಕೆ ಪಶುವೈದ್ಯರಿಂದ ಸೂಕ್ತ ಚಿಕಿತ್ಸೆ ನಡೆಸಬೇಕು.

ನಸುಗುನ್ನಿ. (ನಾಯಿ ಸೊಣಗು)

[ಇಂಗ್ಲೀಷ್: Cowhage, Cowitch. ಸಸ್ಯ ಶಾಸ್ತ್ರದ ಹೆಸರು: Maeunapruriens ಕನ್ನಡ : ನಸುಗುನ್ನಿ, ಕಾಡವರೆ, ತುರುಡೆ, ನಾಯಿ ಸೊಣಗು. ಸಂಸ್ಕೃತ : ಕಪಿಕಚ್ಚು ತುಳು : ನಾಯಿ ಸೊನಂಗ್. ತಮಿಳು : ಮೊನೈಕ್ಕಾಲಿ. ತೆಲಗು : ಪಿಲಿಯಡಗು ಮಲಯಾಳಂ : ನಾಯಿ ಕರುಣ, ಚೊರಿವಳ್ಳಿ.]

ಪರಿಚಯ :

ನಸುಗುನ್ನಿ ಎಲೆಗಳಲ್ಲೂ ಗಿಡದಲ್ಲಿಯೂ ಸೂಕ್ಷ್ಮ ರೋಮಗಳಂತಹ ಕಿರು ಮುಳ್ಳುಗಳಿರುತ್ತವೆ. ಸ್ಪರ್ಶವಾದೊಡನೆಯೇ ಈ ರೋಮಗಳ ಬುಡಗಲ್ಲಿರುವ ಪುಟ್ಟ ಕೋಶ ಒಡೆದು ಒಳಗೆ ಸಂಚಿತವಾದ ವಿಷದ್ರವ್ಯವು ಹೊರಕ್ಕೆ ಚೆಲ್ಲಿಬಿಡುತ್ತದೆ. ಇದು ಅತಿಶಯವಾಗಿ ನವೆ, ವೇದನೆ ಮತ್ತು ತುರಿಕೆಯನ್ನು ಉಂಟುಮಾಡುವ ತೀಕ್ಷ್ಣವಾದ ಸ್ಪರ್ಶವಿಷ. ನಸುಗುನ್ನಿಯ ಬೀಜವನ್ನು ಶುದ್ಧಮಾಡಿ ಕಾಫಿಯಂತೆ ಬಳಸುವುದೂ ಉಂಟು. ಇದು ನಿರುಪಾಯಕಾರಿ.

ವಿಷ ಪ್ರಯೋಗದ ಲಕ್ಷಣಗಳು :

ನಸುಗುನ್ನಿ ವಿಷವು ಸ್ಪರ್ಶವಾದರೆ ಅತಿಶಯವಾದ ನೋವು, ಉರಿ, ಸಹಿಸಲು ಅಸಾಧ್ಯವಾದ ತುರಿಕೆ ಆರಂಭವಾಗುತ್ತದೆ; ಮತ್ತು ಆ ಭಾಗದಲ್ಲಿ ಚರ್ಮವು ಕೆಂಪಾಗುತ್ತದೆ. ಕೆಂಪಾದ ತದ್ದು–ಗಂದೆಗಳು ಹಾಗೂ ಬಾವುಗಳು ಕಾಣಿಸಿಕೊಂಡು ಕ್ರಮೇಣ ಅವು ವ್ರಣವಾಗಿ ಪರಿಣಮಿಸಬಹುದು.

ನಸುಗುನ್ನಿಯನ್ನು ನೀರಲ್ಲಿ ಬೆರಸಿ ಸೇವಿಸಿದರೆ ರೋಗಿಯ ಗಂಟಲು, ನಾಲಗೆ ಮತ್ತು ಬಾಯಿ ತುರಿಸಲು ಪ್ರಾರಂಭವಾಗುತ್ತದೆ. ಇದರ ಚೂರ್ಣವನ್ನು ಆಘ್ರಾಣಿಸಿದರೆ ಮೂಗುಸೋರುವುದು, ಶ್ವಾಸಕೋಶದ ಕೆರೆತ, ಊತಗಳು ಕಾಣಿಸಿಕೊಂಡು ಉಸಿರಾಟಕ್ಕೆ ತೊಂದರೆ ಉಂಟಾಗುತ್ತದೆ.

ಚಿಕಿತ್ಸೆ ಮತ್ತು ಉಪಚಾರ:

ಸೇವನಾ ವಿಷಕ್ಕೆ ಹೊಟ್ಟೆತೊಳೆಯುವುದು, ವಾಂತಿಮಾಡಿಸುವುದು ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆ ನಡೆಸಬೇಕು. ಲಿಕ್ವಿಡ್ ಪ್ಯಾರಾಫಿನ್ ಅಥವಾ ಇಪ್ಪೆಎಣ್ಣೆಯನ್ನು ರೋಗಿಗೆ ಕುಡಿಸಬೇಕು. 'ಎಫಿಡ್ರಿನ್ ಹೈಡ್ರೋಕ್ಲೋರೈಡ್', ಲ್ಯೂಮಿನಾಲ್ ಔಷಧಿಗಳೂ, ಆ್ಯಂಟಿಹಿಸ್ಟಾಮಿನ್ ವರ್ಗದ ಔಷಧಿಗಳೂ ಉಪಯುಕ್ತವಾಗಿವೆ. ವಿಷ ಸ್ಪರ್ಶವಾದ ಭಾಗದಲ್ಲಿ ನವೆ ಮೊದಲಾದ ಉಪದ್ರವಗಳು ಉಂಟಾದಾಗ ಸೋಡಿಯಂ ಬೈ ಕಾರ್ಬೋನೇಟ್ ಮಿಶ್ರಣದಿಂದ ತೊಳೆಯಬೇಕು. ಅನಂತರ ಆ್ಯಂಟಿಹಿಸ್ಟಾಮಿನ್ ವರ್ಗದ ಔಷಧಿಗಳನ್ನು ನೀಡಿ ಚಿಕಿತ್ಸೆ ಮಾಡಬೇಕು.

ಆಯುರ್ವೇದ ವೈದ್ಯರು ನಸುಗುನ್ನಿ ಸ್ಪರ್ಶ ವಿಷಕ್ಕೆ ಶ್ರೀಗಂಧದ ಲೇಪ ಅಥವಾ ಮೊಸರು ಲೇಪ ಉಪಯುಕ್ತವೆಂದು ಹೇಳುತ್ತಾರೆ. ಸೇವನಾ ವಿಷಕ್ಕೆ ರೋಗಿಯು ಬಾಳೆಹಣ್ಣು, ಅತ್ತಿಯ ಎಲೆಯ ರಸ ಅಥವಾ ಆಕಳ ತುಪ್ಪ ಸೇವನೆ ಮಾಡಬೇಕೆಂದು ಹೇಳುತ್ತಾರೆ,

ಲಾಂಗಲಿ (ಕೋಳಿಕುಟುಮ)

[ಇಂಗ್ಲಿಷ್ : Gloriosa. ಸಸ್ಯ ಶಾಸ್ತ್ರದ ಹೆಸರು : Gloriosa superba. ಕನ್ನಡ :ಗೋಳಿ ಕುಟುಮ, ಲಾಂಗಲಿ, ಲಾಂಗುಲಿ, ಗೌರಿ ಹೂವಿನ ಗಿಡ. ಸಂಸ್ಕೃತ ಲಾಂಗುಲಿಕಾ, ಅಗ್ನಿಶಿಖಾ ಅಗ್ನಿಜಿಹ್ವಾ, ಗರ್ಭಪಾತಿನಿ. ತುಳು ಬಲಿಪಮಾ, ಕೆಂಕೇಣ್ಣಿ ದಪೂ. ತಮಿಳು ಕಾಂದಳ್, ಕಾರ್ತಿಕೈ ಪೂ, ತೊಂದಿ . ತೆಲಗು : ಲಾಂಗಲಿ.]

ಪರಿಚಯ

ಕೋಳಿಕುಟುಮವು ಗಿಡಮರಗಳನ್ನು ಆಶ್ರಯಿಸಿ ಹಬ್ಬುವ ಬಳ್ಳಿ ವರ್ಗದ ಸಸ್ಯ. ಇದು ದೇಶದ ಎಲ್ಲಾ ಭಾಗಗಳಲ್ಲಿಯೂ ಬೆಳೆಯುತ್ತದೆ. ಬಳ್ಳಿಯಲ್ಲಿ ವಿಚಿತ್ರ ಆಕಾರದ ಸುಂದರವಾದ ಕೆಂಪು ಅರಿಶಿನ ಮಿಶ್ರ ಬಣ್ಣದ ಹೂಗಳು ಶ್ರಾವಣದಿಂದ ಅಶ್ವೀಜದ ವರೆಗೆ ಅರಳುತ್ತವೆ. ಇದರ ಗಡ್ಡೆ ತೀಕ್ಷ್ಣ ವಿಷ. ಕುರುಗಳಿಗೆ ಗಡ್ಡೆಯ ಲೇಪ ಹಚ್ಚುತ್ತಾರೆ. ಗಡ್ಡೆಗೆ ಗರ್ಭಪಾತಿನೀ ಎಂಬ ಅಡ್ಡ ಹೆಸರೇ ಇದೆ. ಗಡ್ಡೆಯು ರಸಭರಿತವಾಗಿದ್ದು 'ಸುಪರಬೈನ್' ಎಂಬ ವಿಷಸತ್ವದಂತೆ ಕೂಡಿದೆ. ಗಡ್ಡೆಯ ಚೂರ್ಣವನ್ನು 0.5 ಗ್ರಾಂ. ನಷ್ಟು ಸೇವಿಸಿದರೆ ಪ್ರಾಣಾಪಾಯ ಉಂಟಾಗಬಹುದು.

ವಿಷ ಪ್ರಯೋಗದ ಲಕ್ಷಣಗಳು :


ಕೋಳಿಕುಟುಮಿನಗಡ್ಡೆ ವಿಷ ಸೇವಿಸಿದ ರೋಗಿಯಲ್ಲಿ ಬಾಯಿ ಬತ್ತುವದು, ವಾಕರಿಕೆ, ತೀವ್ರ ವಾಂತಿ, ಮೈ ಬೆವರುವುದು, ಸಂಕಟ ಮೊದಲಾದ ಉಪದ್ರವಗಳು ಕಾಣಿಸಿಕೊಳ್ಳುತ್ತವೆ. ಕ್ರಮೇಣ ನಡುಕ, ಅದಿರುವಾಯು, ಕುಸಿತ ಮತ್ತು ಸಾವು ಸಂಭವಿಸಬಹುದು.

ಚಿಕಿತ್ಸೆ ಮತ್ತು ಉಪಚಾರ :

ಹೊಟ್ಟೆತೊಳೆಯುವುದು, ವಾಂತಿಮಾಡಿಸುವುದು ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆ ಮಾಡಬೇಕು. ಹಾಲು, ತುಪ್ಪ, ಕೋಳಿಯುತತ್ತಿ ಸೇವನೆ ರೋಗಿಗೆ ಹಿತಕರವಾಗಿದೆ. ಇತರ ಉಪದ್ರವಗಳಿಗೆ ಲಕ್ಷಣಾನುಸಾರ ಚಿಕಿತ್ಸೆ ನಡೆಸಬೇಕು.

ಟಿಪ್ಪಣಿ

ಕೋಳಿಕುಟುಮುನ ಗಡ್ಡೆಯನ್ನು ಅರೆದು ಗರ್ಭದ್ವಾರಕ್ಕೆ ಲೇಪಿಸಿ ಗರ್ಭಪಾತ ಮಾಡಲು ಹಳ್ಳಿಗಳಲ್ಲಿ ಪ್ರಯತ್ನಿಸುತ್ತಾರೆ. ಇದು ತೀರಾ ಅಪಾಯಕಾರಿಯಾಗಿದೆ. ಅಂತಹ ರೋಗಿಗಳಲ್ಲಿ ಜನನೇಂದ್ರಿಯ ಹಾಗೂ ಗರ್ಭಕೋಶಗಳಲ್ಲಿ ಹುಣ್ಣು, ಬಾವು



ಲಾಂಗಲಿ ಗಿಡದ ಹೂ

ಸೋವು ಮೊದಲಾದ ಉಪದ್ರವಗಳು ಕಾಣಿಸಿಕೊಂಡು ಅವರು ತೀವ್ರ ಅಪಾಯಕ್ಕೆ ಗುರಿಯಾಗಬಹುದು. ಇದರ ಗಡ್ಡೆಯ ಚೂರ್ಣವನ್ನು ಸೇವಿಸುವುದರಿಂದ ಮಾಸು ಹೆರಿಗೆಯಾದ ನಂತರ ಬೀಳುವುದಕ್ಕೆ ಸುಲಭವೆಂದು ಅನೇಕರ ಭಾವನೆ ಇರುತ್ತದೆ. ಅದಕ್ಕಾಗಿ ಔಷಧಿಯೆಂದು ಇದನ್ನು ಸೇವಿಸಿದಾಗ ಕೆಲವೊಮ್ಮೆ ವಿಷ ಅಪಘಾತ ಸಂಭವಿಸುವುದುಂಟು.

ಚಿತ್ರಮೂಲ (ಚಿತ್ರಕ)

[ಇಂಗ್ಲೀಷ್ - Lead wort. ಸಸ್ಯ ಶಾಸ್ತ್ರದ ಹೆಸರು ; Plumbago rosea - Plumbago zeylanica. ಕನ್ನಡ : ಚಿತ್ರ ಮೂಲ; ಚಿತ್ರಕ. ಸಂಸ್ಕೃತ : ಚಿತ್ರಕ, ಚಿತ್ರಮೂಲ. ತುಳು : ಚಿತ್ರಮೂಲ. ತಮಿಳು : ಚಿತ್ತರಮೂಲಂ, ಆದಿಕನಾರಿ. ತೆಲಗು : ಚಿತ್ರ ಮೂಲಮು. ಹಿಂದಿ : ಲಾಲ್ ಚಿತ್ರಾ.]

ಪರಿಚಯ :

ವಿಷಪೂರ್ಣವಾದ ಬೇರುಗಳಿರುವ ಚಿತ್ರಮೂಲವು ಸಣ್ಣ ಗಿಡಮೂಲಿಕೆಯಾಗಿದ್ದು ಇದರಲ್ಲಿ ಕೆಂಪು ಹೂ ಬಿಡುವ ಚಿತ್ರ ಮೂಲ ಮತ್ತು ಬಿಳಿ ಹೂ ಬಿಡುವ ಚಿತ್ರ ಮೂಲ ಎಂಬ ಎರಡು ಉಪಜಾತಿಗಳಿವೆ. ಇವುಗಳಲ್ಲಿ ಕೆಂಪು ಚಿತ್ರಮೂಲವು ಹೆಚ್ಚು ತೀಕ್ಷ್ಣ ವಿಷಯುಕ್ತವಾಗಿದೆ. ಚಿತ್ರಮೂಲದ ಬೇರಿನಲ್ಲಿ ಪ್ಲಂಬಾಗಿನ್ ಎಂಬ ವಿಷ ಸತ್ವವಿದೆ. ಹಳ್ಳಿಯ ಜನರು ಇವುಗಳನ್ನು ವಿವಿಧ ರೋಗಗಳ ಚಿಕಿತ್ಸೆಗಾಗಿ ಬಳಸುತ್ತಾರೆ. ಆಯುರ್ವೇದ ಶಾಸ್ತ್ರದಲ್ಲಿ ಗರ್ಭಪಾತ ಮಾಡಿಸುವ ಗುಣವಿದೆ ಎಂದು ಚಿತ್ರಮೂಲವು ವರ್ಣಿತವಾಗಿದೆ. ಚಿತ್ರಕವು ಸ್ಪರ್ಶ ಹಾಗೂ ಸೇವನಾ ವಿಷ.

ವಿಷ ಪ್ರಯೋಗದ ಲಕ್ಷಣಗಳು ಮತ್ತು ಚಿಕಿತ್ಸೆ :

ಚಿತ್ರಕದ ಬೇರನ್ನು ಸೇವಿಸಿದ ರೋಗಿಯಲ್ಲಿ ಬಾಯಾರಿಕೆ, ಹೊಟ್ಟೆ ನೋವು, ವಾಕರಿಕೆ, ವಾಂತಿ ಮೊದಲಾದ ಉಪದ್ರವಗಳು ಉಂಟಾಗುತ್ತವೆ. ವಾಂತಿ ಮಾಡಿಸುವುದು, ಹೊಟ್ಟೆ ತೊಳೆಯುವುದು ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆಗಳನ್ನು ನಡೆಸುವುದಲ್ಲದೆ ತತ್ತಿಯ ಲೋಳೆ ಮತ್ತು ಹಾಲು ಕುಡಿಸಬೇಕು. ಇತರ ಉಪದ್ರವಗಳಿಗೆ ಸೂಕ್ತ ಚಿಕಿತ್ಸೆ ನಡೆಸಬೇಕು. ಇಂತಹ ರೋಗಗಳಿಗೆ ಎಳ್ಳು ಮತ್ತು ಬೆಲ್ಲ ಅರೆದು ತಿನ್ನಿಸಬೇಕು ಎಂಬುದಾಗಿ ಆಯುರ್ವೇದ ವೈದ್ಯರು ಹೇಳುತ್ತಾರೆ.

ಚಿತ್ರಕ ವಿಷ ಸ್ಪರ್ಶವಾದ ರೋಗಿಗೆ ತುರಿಕೆ, ನವೆ, ಮೊದಲಾದ ಉಪದ್ರವಗಳು ಉಂಟಾಗುತ್ತವೆ. ಆ ಭಾಗದ ಚರ್ಮವು ಕೆಂಪಾಗುತ್ತದೆ; ಮತ್ತು ಗಂದೆಗಳು ಏಳುತ್ತವೆ. ತಕ್ಷಣ ತಣ್ಣೀರಿನಿಂದ ಆ ಭಾಗವನ್ನು ತೊಳೆದು ತುಪ್ಪ ಸವರಬೇಕು. ಚಿತ್ರ ಮೂಲದ ಚೂರ್ಣವನ್ನು ಅರಳೆಯ ಬತ್ತಿಯಲ್ಲಿ ಸೇರಿಸಿ ಗರ್ಭಕೋಶದ ಬಾಯಿಗೆ ಇರಿಸಿ ಗರ್ಭಪಾತ ಮಾಡಲು ಯತ್ನಿಸುವ ಕ್ರಮವಿರುತ್ತದೆ. ಇದು ತೀರ ಅಪಾಯಕಾರಿಯಾಗಿದ್ದು, ರೋಗಿಯ ಜನನೇಂದ್ರಿಯ ಹಾಗೂ ಗರ್ಭ

ಕೋಶದ ವ್ರಣ, ವೇದನೆ, ರಕ್ತಸ್ರಾವ ಮೊದಲಾದ ಉಪದ್ರವಗಳಿಂದ ನರಳಿ ಪ್ರಾಣಾಪಾಯಕ್ಕೆ ತುತ್ತಾಗಬಹುದು.

ಸರ್ಪಗಂಧಿ (ಪಾತಾಳ ಗರುಡ)


[ಇಂಗ್ಲೀಷ : Rauvolfia. ಸಸ್ಯಶಾಸ್ತ್ರದ ಹೆಸರು : Rauvol Fiaserpentina. ಕನ್ನಡ : ಗರುಡಪಾತಾಳೆ, ಪಾತಾಳಗರುಡ, ಸರ್ಪಗಂಧಿ. ಸಂಸ್ಕೃತ: ಸರ್ಪಗಂಧಾ, ಚಂದ್ರಿಕಾ, ಸರ್ಪಾರೀ, ಪಾತಾಳಭೇದಿ. ತಮಿಳು : ಕೀರಿಪ್ಪೂಣ್ಡು. ತೆಲಗು : ಸರ್ಪಾರಿ ಚೆಟ್ಟು, ಮಲಯಾಳು : ಅವಿಲ್‌ಪುರಿ. ಹಿಂದಿ : ಚೋಟಾಚಾಂದ್.]

ಪರಿಚಯ :

ಬಹು ಪ್ರಾಚೀನ ಕಾಲದಿಂದಲೂ ಹಾವು ಕಡಿದ ವಿಷ ಚಿಕಿತ್ಸೆಗೂ, ಉನ್ಮಾದ, ಕುಷ್ಟ ಮೊದಲಾದ ರೋಗೋಪಚಾರಕ್ಕೂ ಬಳಸುತ್ತಿದ್ದ ಸರ್ಪಗಂಧಿ ಬೇರನ್ನು ಆಧುನಿಕ ಸಂಶೋಧನೆಯ ಮೂಲಕ ಆಧುನಿಕ ವೈದ್ಯರು ರಕ್ತದ ಅಧಿಕ ಒತ್ತಡದ ಚಿಕಿತ್ಸೆಗೆ ದಿವ್ಯೌಷಧಿ ಎಂದು ತೀರ್ಮಾನಿಸಿ ಈ ವನೌಷಧಿಗೆ ಪುನರ್ಜನ್ಮ ನೀಡಿದಂತಾಗಿದೆ. ಹಿಮಾಲಯದ ತಪ್ಪಲಿನಲ್ಲಿಯೂ ಸಹ್ಯಾದ್ರಿ ಶ್ರೇಣಿಗಳಲ್ಲಿಯೂ ಹೆಚ್ಚಾಗಿ ಬೆಳೆಯುವ ಈ ಗಿಡಮೂಲಿಕೆಯನ್ನು ಈಗ ವೈದ್ಯಕೀಯ ಬಳಕೆಗಾಗಿಯೂ ಪರದೇಶಕ್ಕೆ ರಫ್ತು ಮಾಡುವುದಕ್ಕಾಗಿಯೂ ವಿಶಾಲವಾದ ತೋಟಗಳಲ್ಲಿ ನೆಟ್ಟು ಬೆಳೆಸುವ ಕೃಷಿ ಪ್ರಾರಂಭವಾಗಿದೆ. 30–75 ಸೆಂ. ಮಿ. ಎತ್ತರಕ್ಕೆ ಬೆಳೆಯುವ ಈ ಗಿಡದಲ್ಲಿ ಬಿಳಿ ಅಥವಾ ನಸು ಕೆಂಬಣ್ಣದ ಹೂಗಳೂ ನೇರಳೆ–ಕಪ್ಪು ಬಣ್ಣದ ಫಲಗಳೂ ಇರುತ್ತವೆ. ಗಿಡದ ಬೇರು ಮತ್ತು ತೊಗಟೆಯನ್ನು ಹೆಚ್ಚಾಗಿ ಔಷಧಕ್ಕೆ ಉಪಯೋಗಿಸುತ್ತಾರೆ. ಪ್ರಮಾಣತಪ್ಪಿ ಸೇವಿಸಿದರೆ ತೀವ್ರ ದುಷ್ಪರಿಣಾಮಗಳು ಉಂಟಾಗಬಹುದು.

ವಿಷ ಪ್ರಯೋಗದ ಲಕ್ಷಣ ಮತ್ತು ಚಿಕಿತ್ಸೆ :

ಅಪಾಯದ ಪ್ರಮಾಣದಲ್ಲಿ ಸರ್ಪಗಂಧಿ ಔಷಧಿಯನ್ನು ಸೇವಿಸಿದ ರೋಗಿಯ ರಕ್ತದ ಒತ್ತಡವು ತೀರ ಕೆಳಮಟ್ಟಕ್ಕೆ ಇಳಿಯುವುದು; ಅವನಲ್ಲಿ ದೇಹಾಯಾಸ, ಸಂಕಟ, ತೂಕಡಿಕೆ, ಅಶಾಂತಿ ಮೊದಲಾದ ಉಪದ್ರವಗಳು ಕಾಣಿಸುವವಲ್ಲದೆ ಅಂತಹ ರೋಗಿಗೆ ನಿದ್ರೆಯಲ್ಲಿ ಕೆಟ್ಟ ಕನಸುಗಳು ಬೀಳುತ್ತವೆ. ನೀರಡಿಕೆ, ಭೇದಿ, ನಡುಕ ಮಾಂಸಖಂಡಗಳ ಸೆಳೆತ ಮತ್ತು ಉಸಿರಾಟಕ್ಕೆ ತೊಂದರೆ ಕಾಣಿಸುತ್ತವೆ. ಇಂತಹ ರೋಗಿಯನ್ನು ತಕ್ಷಣ ವಿಷ ಸೇವನೆಯಿಂದ ಬಿಡಿಸಬೇಕು. ಹೊಟ್ಟೆತೊಳ



ಸರ್ಪಗಂಧಿ ಗಿಡ; ಹೂ; ಕಾಯಿ

ಯುವುದು, ವಾಂತಿಮಾಡಿಸುವುದು ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆಗಳನ್ನು ನಡಸಬೇಕು; ಮತ್ತು ಉತ್ತೇಜಕ ಔಷಧ—ಪಾನೀಯಂಗಳನ್ನು ನೀಡಬೇಕು.

ತಂಬಾಕು (ಹೊಗೆಸೊಪ್ಪು)

[ಇಂಗ್ಲೀಷ್ : Tobacco. ಸಸ್ಯ ಶಾಸ್ತ್ರದ ಹೆಸರು : Nicotiana Tobacum. ಕನ್ನಡ: ತಂಬಾಕು, ಹೊಗೆಸೊಪ್ಪು. ಸಂಸ್ಕೃತ: ತಾಮ್ರಕೂಟ, ತುಳು: ಪುಗರೆ. ತಮಿಳು : ಪುಗೈಯಿರೈ, ತೆಲಗು : ಪೊಗಾಕು : ಮಲಯಾಳಂ : ಪುಕಯಿಲ. ಹಿಂದಿ :ತಂಬಾಕು.]

ಪರಿಚಯ :

ಮೂಲತಃ ಅಮೇರಿಕದಿಂದ ಬಂದು ಬೇರೂರಿದರೂ ಈಗ ತಂಬಾಕನ್ನು ನಮ್ಮ ದೇಶದಲ್ಲಿ ರೊಕ್ಕದ ಬೆಳೆಯಾಗಿ ಬೆಳೆಸುತ್ತಾರೆ. ತಂಬಾಕಿನ ಎಲೆಯಿಂದ ಬೀಡಿ, ಸಿಗರೇಟು ಮುಂತಾದ ಹೊಗೆಬತ್ತಿಗಳನ್ನು ಸಿದ್ಧಪಡಿಸುತ್ತಾರೆ. ತಂಬಾಕಿನ ಎಲೆಯನ್ನು ಹುರಿದು ಪುಡಿಮಾಡಿ, ನಾಸೀಚೂರ್ಣ ತಯಾರಿಸಿ ಆಘ್ರಾಣಿಸುತ್ತಾರೆ. ತಂಬಾಕು ಎಲೆಯನ್ನು ಚಿಕ್ಕದಾಗಿ ಕತ್ತರಿಸಿ ಪಾನ್ ಬೀಡಾದಲ್ಲಿ ಸೇವಿಸಿ ಮೆಲ್ಲುತ್ತಾರೆ. ಕಡ್ಡಿಪುಡಿ, ಜರದಾ ಮೊದಲಾದ ರೂಪದಲ್ಲಿಯೂ ಕೂಡಾ ತಂಬಾಕನ್ನು ಬಳಸುತ್ತಾರೆ. ಹಳ್ಳಿಯ ಜನರು ವಾತದ ಉಪದ್ರವಗಳಿಗೂ ಹಲ್ಲುನೋವು, ನಂಜು ಚಿಕಿತ್ಸೆಗಳಿಗೆ ಇದನ್ನು ಬಳಸುತ್ತಾರೆ. ತಂಬಾಕು ಸತ್ವವನ್ನು ಕ್ರಿಮಿನಾಶಕಗಳ ತಯಾರಿಕೆಗಾಗಿಯೂ ಉಪಯೋಗಿಸುತ್ತಾರೆ.

ತಂಬಾಕಿನಲ್ಲಿ ನಿಕೋಟಿನ್ ನಿಕೋಟಿಯಾನೀನ್ ಎಂಬ ವಿಷಸತ್ವಗಳಿವೆ. ಗಿಡದ ಎಲ್ಲಾ ಭಾಗಗಳು ವಿಷಯುಕ್ತವಾಗಿದ್ದರೂ ಎಲೆಗಳು ಹೆಚ್ಚು ಪ್ರಮಾಣದಲ್ಲಿ ವಿಷಯುಕ್ತವಾಗಿವೆ. ಹೊಗೆಸೊಪ್ಪು ಎಲೆಯನ್ನು ಒಣಗಿಸಿದಾಗ ವಿಶಿಷ್ಟವಾದ ಗಾಟುವಾಸನೆ ಕಾಣಿಸುತ್ತದೆ. ಇದಕ್ಕೆ ಒಗರು ರುಚಿಯಿದೆ. ತಂಬಾಕು ಸೇವಿಸುವ ಚಟಕ್ಕೆ ಬಿದ್ದವರು ಕಾಲಾನುಕ್ರಮದಲ್ಲಿ ಶ್ವಾಸಕೋಶದ ಉಪದ್ರವ, ಹೃದ್ರೋಗ ಹಾಗೂ ಏಡಿಗಂತಿ (ಕ್ಯಾನ್ಸರ್) ರೋಗಗಳಿಗೆ ಬಲಿಯಾಗುವ ಸಂಭವ ಹೆಚ್ಚಾಗಿದೆ ಎಂದು ಕಂಡು ಬಂದಿದೆ.

ಪ್ರಾಣಾಪಾಯದ ಪ್ರಮಾಣ : ಸೇವನೆ : 40–60 ಮಿಲಿಗ್ರಾಮ್. ಎರಡು ಸಿಗರೇಟಿನಲ್ಲಿ ಅಥವಾ ಒಂದು ಹನಿ ಶುದ್ಧ ನಿಕೋಟಿನ್ ಸತ್ವದಲ್ಲಿ ಇಷ್ಟು ವಿಷ ಅಡಕವಾಗಿರುತ್ತದೆ. (ಆದರೆ ಸಿಗರೇಟನ್ನು ಉರಿಸುವಾಗ ಈ ವಿಷದ ಹೆಚ್ಚಿನ ಪಾಲು ಭಸ್ಮವಾಗುತ್ತದೆ.)

ತಂಬಾಕು ವಿಷ ಪ್ರಯೋಗಕ್ಕೆ ನೇರವಾಗಿ ತುತ್ತಾಗಿ ಪ್ರತಿವರ್ಷ ಕನಿಷ್ಟಪಕ್ಷ ನೂರು ಸಾವುಗಳು ಸಂಭವಿಸುತ್ತವೆ.ತಂಬಾಕು ಸಂಗ್ರಹಿಸುವ,ಶುದ್ಧ ಮಾಡುವ ಕಸನ



ತಂಬಾಕು

ಗೊಳಿಸುವ, ಸಾಗಿಸುವ ಕೆಲಸಗಳಲ್ಲಿ ನಿರತರಾದ ಕಾರ್ಮಿಕರು ತಂಬಾಕಿನ ದೀರ್ಘ ಕಾಲ ವಿಷಕ್ಕೆ ತುತ್ತಾಗುವ ಸಂಭವವಿರುತ್ತದೆ. ಹೊಗೆಬತ್ತಿಯ ಚಟವಿದ್ದವರಂತೂ

ಒಂದಲ್ಲ ಒಂದು ದಿನ ದೃಷ್ಟಿದೋಷ, ಎದೆನೋವು, ಕೆಮ್ಮು, ದಮ್ಮು, ಮೈ ಚಳಕು, ಮರೆವು, ದೇಹಾಲಸ್ಯ, ಮೈ ಕೈ ನಡುಕ ಮೊದಲಾದ ಉಪದ್ರವಗಳಿಗೆ ತುತ್ತಾಗುವುದು ಖಚಿತ.

ವಿಷಪ್ರಯೋಗದ ಲಕ್ಷಣಗಳು :

ಹೊಗೆಸೊಪ್ಪು ವಿಷವನ್ನು ಸ್ಪರ್ಶಿಸಿದರೆ, ಆಘ್ರಾಣಿಸಿದರೆ ಅಥವಾ ಸೇವಿಸಿದರೆ ರೋಗಿಯ ಗಂಟಲು, ಬಾಯಿ ಮತ್ತು ಎದೆ ಉರಿಯುತ್ತದೆ. ಹಾಗೂ ಜೊಲ್ಲು ಸುರಿಯುವುದು, ಮೈ ಬೆವರುವುದು, ತಲೆ ತಿರುಗುವುದು, ಕಣ್ಣು ಕತ್ತಲೆ ಬರುವುದು ಮೊದಲಾದ ಉಪದ್ರವಗಳು ಕಾಣಸುತ್ತವಲ್ಲದೆ ದೇಹಾಲಸ್ಯವು ನಡುಕವು ಉಂಟಾಗಬಹುದು. ಅವನ ಮೈ ತಣ್ಣಗಾಗುತ್ತದೆ; ದೃಷ್ಟಿ ಹಾಗೂ ಶ್ರವಣ ಶಕ್ತಿ ಕುಂದುವುದು. ಅವನ ಕಣ್ಣು ಬೊಂಬೆ ಮೊದಲಿಗೆ ಕಿರಿದಾಗಿದ್ದು ಆನಂತರ ಅರಳುತ್ತದೆ. ಪ್ರಾರಂಭದಲ್ಲಿ ನಾಡಿ ನಿಧಾನವಾಗಿದ್ದು ಕ್ರಮೇಣ ತೀವ್ರಗತಿಗೆ ತಿರುಗುತ್ತದೆ. ಉಸಿರಾಟವು ಮೊದಲು ಉದ್ವೇಗಪೂರ್ಣವಾಗಿದ್ದು ಕ್ರಮೇಣ ಮಂದವಾಗುತ್ತದೆ. ರೋಗಿಯು ಬಡಬಡಿಸುವನು ಹಾಗೂ ಸ್ಮೃತಿ ತಪ್ಪುವುದು; ಸಾವು ಕೂಡಾ ಸಂಭವಿಸಬಹುದು. ವಿಷ ಪ್ರಾಶನವಾದ 10 ನಿಮಿಷಗಳೊಳಗಾಗಿ ಪ್ರಾಣಾಪಾಯ ಸಂಭವಿಸಿದ ದಾಖಲೆ ಇದೆ. ಸಾಮಾನ್ಯವಾಗಿ ಪ್ರಾಣಾಪಾಯದ ಕಾಲಾವಧಿ 4–6 ತಾಸು

ಚಿಕಿತ್ಸೆ ಮತ್ತು ಉಪಚಾರ :

ತಂಬಾಕು ವಿಷ ಪ್ರಾಶನವಾದ ರೋಗಿಯನ್ನು ವಿಷ ಸಂಪರ್ಕ ಮತ್ತು ಸೇವನೆಗಳಿಂದ ಪ್ರತ್ಯೇಕಿಸಿ, ಪೊಟಾಸಿಯಂ ಪರಮಾಂಗನೇಟನ್ನು ಬಿಸಿನೀರಿನಲ್ಲಿ ಕರಗಿಸಿ ಹೊಟ್ಟೆತೊಳೆಯುವುದು, ವಾಂತಿಮಾಡಿಸುವುದು, ಭೇದಿ ಉಪ್ಪಿನಿಂದ ವಿರೇಚನ ಮಾಡಿಸುವುದು ಮೊದಲಾದ ಚಿಕಿತ್ಸೆ ನಡೆಸಬೇಕು. ತಂಬಾಕು ವಿಷಕ್ಕೆ ಉಪಯುಕ್ತ ಪ್ರತ್ಯೌಷಧಿ. ರೋಗಿಗೆ ಆಮ್ಲಜನಕ ನೀಡಿಕೆ ಅಥವಾ ಕೃತಕ ಉಸಿರಾಟ ಪೂರೈಸಬೇಕು. ಇತರ ಉಪದ್ರವಗಳಿಗೆ ಲಕ್ಷಣಾನುಸಾರ ಚಿಕಿತ್ಸೆ ಮಾಡಬೇಕು.

ಡಿಜಿಟಾಲಿಸ್.

[ಇಂಗ್ಲಿಷ್ : Digitalis. ಸಸ್ಯ ಶಾಸ್ತ್ರದ ಹೆಸರು : Digitalis purpurea.

ಪರಿಚಯ :

ಡಿಜಿಟಾಲಿಸ್ ಸಸ್ಯವನ್ನು ಔಷಧಿ ತಯಾರಿಕೆಗಾಗಿ ನೆಟ್ಟು ಬೆಳೆಸುತ್ತಾರೆ. ಗಿಡದ ಎಲೆ, ಬೇರು, ಮತ್ತು ಬೀಜ ವಿಷಯುಕ್ತವಾಗಿದ್ದು ಡಿಜಿಟಾಕ್ಸಿನ್, ಡಿಜಿಟಾಲಿಯನ್

ಮತ್ತು ಡಿಜಿಟೋನಿನ್ ಎಂಬ ಮೂರು ವಿಷಸತ್ವಗಳಿಂದ ಕೂಡಿದೆ. ಗಿಡದ ಎಲೆ ಸುಮಾರು 40 ಗ್ರೇನ್ಸ್ ಪ್ರಮಾಣದಲ್ಲಿಯೂ, ಡಿಜಿಟಾಕ್ಸಿನ್ 4 ಮಿಲಿಗ್ರಾಂ ಪ್ರಮಾಣದಲ್ಲಿಯೂ, ಡಿಜಿಟಾನಿಸ್ 30 ಮಿಲಿಗ್ರಾಂ ಪ್ರಮಾಣದಲ್ಲಿಯೂ ಪ್ರಾಣಾಪಾಯವನ್ನು ಉಂಟುಮಾಡುತ್ತದೆ.

ವಿಷ ಪ್ರಯೋಗದ ಲಕ್ಷಣ :

ಡಿಜಿಟಾಲಿಸ್ ವಿಷ ಪ್ರಯೋಗಕ್ಕೆ ತುತ್ತಾದ ರೋಗಿಯು ನೀರಡಿಕೆ, ವಾಕರಿಕೆ, ವಾಂತಿ,ಹೊಟ್ಟೆನೋವು, ನೀರಾದ ಭೇದಿ, ತಲೆತಿರುಗುವುದು, ತಲೆನೋವು,ಆಯಾಸ,



ಡಿಜಿಟಾಲಿಸ್

ಕಣ್ಣುಕತ್ತಲು ಮೊದಲಾದ ಉಪದ್ರವಗಳಿಂದ ನರಳುತ್ತಾನೆ. ರೋಗಿಯ ನಾಡಿ ಮೊದಲು ತೀವ್ರವಾಗಿದ್ದು ಕ್ರಮೇಣ ಮಂದಗತಿಗೆ ತಿರುಗುತ್ತದೆ. ಹೃದಯ ವಿಕಾರ, ಮಂದ ಉಸಿರಾಟ, ಅರಳಿದ ಕಣ್ಣುಬೊಂಬೆ, ತೂಕಡಿಕೆ, ದೃಷ್ಟಿದೋಷ, ನಿದ್ರೆ, ದೀರ್ಘಸುಪ್ತಿ ಮೊದಲಾದ ಉಪದ್ರವಗಳು ಕಾಣಿಸುವುದಲ್ಲದೆ ಒದರಾಟ, ಬಡಬಡಿಸುವಿಕೆ, ಮತಿಭ್ರಮೆ, ಅದಿರುವಾಯು ಮೊದಲಾದ ತೊಂದರೆಗಳೂ ಉಂಟಾಗಬಹುದು.

ಚಿಕಿತ್ಸೆ ಮತ್ತು ಉಪಚಾರ: ಹೊಟ್ಟೆತೊಳೆಯುವುದು, ವಾಂತಿಮಾಡಿಸುವುದು, ಭೇದಿಮಾಡಿಸುವುದು, ಕಾಫಿ ಅಥವಾ ಚಹ ಕುಡಿಸುವುದು ಮತ್ತು ಉತ್ತೇಜಕ ಚಿಕಿತ್ಸೆ ನೀಡುವುದು ವಿಶ್ರಾಂತಿಯನ್ನು, ಬೆಚ್ಚನೆ ಹೊದಿಕೆಗಳನ್ನು ಒದಗಿಸಬೇಕು.

ಬೆಲಡೋನ

[ಇಂಗ್ಲಿಷ್ : Belladonna. ಸಸ್ಯ ಶಾಸ್ತ್ರದ ಹೆಸರು: Atropa Belladonra.]

ಪರಿಚಯ :

ಹಿಮಾಲಯದ ತಪ್ಪಲಿನಲ್ಲಿ ಸ್ವಾಭಾವಿಕವಾಗಿ ಬೆಳೆಯುವ ಬೆಲಡೋನ ಗಿಡ ಮೂಲಿಕೆಯನ್ನು ಈಗ ಔಷಧಿ ತಯಾರಿಕೆಗಾಗಿ ತೋಟಗಳಲ್ಲಿ ನೆಟ್ಟು ಬೆಳೆಸುತ್ತಾರೆ. ಗಿಡದ ಎಲೆ, ಹೂವು ಮತ್ತು ಬೇರು ವಿಷಭರಿತವಾಗಿವೆ. ಎಟ್ರೋಪಿನ್, ಹಯೋಸಿಮೈನ್ ಮತ್ತು ಬೆಲಡೋಮೈನ್ ಎಂಬ ವಿಷ ಸತ್ವಗಳು ಇರುತ್ತವೆ. ಈ ವನಸ್ಪತಿಯ ರುಚಿಯು ತೀರ ಕಹಿಯಾಗಿದ್ದು ಪ್ರಾಣಾಪಾಯಕಾರಿಯಾಗಿದೆ. (ಪ್ರಮಾಣ 80 ಗ್ರೇನ್ಸ್.) ಎಟ್ರೋಪಿನ್ ಸತ್ವ 0.1 ಗ್ರಾಂ. ನಿಂದ 0.12 ಗ್ರಾಂ. ಪ್ರಮಾಣದಲ್ಲಿ ಅಪಾಯಕಾರಿ. (ಸೂಜಿ ಮದ್ದಿನ ರೂಪದಲ್ಲಿ 60 ಮಿಲಿಗ್ರಾಂ ಪ್ರಮಾಣ).

ವಿಷ ಪ್ರಯೋಗದ ಲಕ್ಷಣಗಳು :

ಬೆಲಡೋನ ವಿಷ ಪ್ರಯೋಗಕ್ಕೆ ತುತ್ತಾದ ರೋಗಿಯ ನಾಲಗೆ ಒಣಗುವುದು, ಗಂಟಲು ಬಿಗಿಯುವುದು, ಜೊಲ್ಲು ಬತ್ತಿದಂತಾಗುವುದು, ತಲೆ ತಿರುಗುವುದು, ಮಾತನಾಡಲು ಮತ್ತು ನುಂಗಲು ಕಷ್ಟವಾಗುವುದು ಮೊದಲಾದ ಉಪದ್ರವಗಳಿಂದ ನರಳುತ್ತಾನೆ. ಅವನ ಕಣ್ಣು ಬೊಂಬೆಯು ಅರಳುವುದು ಹಾಗೂ ಕಣ್ಣು ಕೆಂಪಾಗುವುದು ಮತ್ತು ಕುರುಡತನವು ಕೂಡಾ ಉಂಟಾಗಬಹುದು. ಕೆಲವೊಮ್ಮೆ ಮೈ

ಜೋಲಿ ಹೋಗುವುದೂ ಉಂಟು; ವಿಪರೀತ ಜ್ವರ ಕಾಣಿಸಿಕೊಳ್ಳುವದಲ್ಲದೆ ಬಡ ಬಡಿಕೆ, ಗಾಬರಿ, ಪ್ರಜ್ಞೆ ತಪ್ಪುವುದು, ಮತಿ ಭ್ರಮಣೆಯಾಗುವುದು ಸಹ ಉಂಟು.

ಚಿಕಿತ್ಸೆ ಮತ್ತು ಉಪಚಾರ :

ಬೆಲಡೋನ ವಿಷ ಪ್ರಾಶನವಾದ ರೋಗಿಗೆ ಹೊಟ್ಟೆ ತೊಳೆಯುವುದು, ವಾಂತಿ ಮಾಡಿಸುವುದು ಮೊದಲಾದ ಸಾಂಪ್ರದಾಯಿಕ ವಿಧಾನಗಳಿಂದ ಚಿಕಿತ್ಸೆ ನಡೆಸಬೇಕು. ಕ್ಲೋರಲ್ ಹೈಡ್ರೇಟ್, ಪೆರಲ್‌ಡಿಹೈಡ್ ಮೊದಲಾದ ಶಾಮಕ ಔಷಧಿಗಳಿಂದ ಉಪ ಚಾರ ನಡೆಸಬೇಕು. (ಆದರೆ ಮಾರ್ಫಿಯಾ ವರ್ಜ್ಯ). ಕೃತಕ ಉಸಿರಾಟ ಮತ್ತು ಆಮ್ಲಜನಕ ನೀಡಿಕೆಯನ್ನು ಅಗತ್ಯಬಿದ್ದರೆ ಒದಗಿಸಬೇಕು. ಕೆಫಿನ್ ಮೊದ ಲಾದ ಉತ್ತೇಜಕ ದ್ರವ್ಯಗಳು ಉಪಯುಕ್ತವಾಗಿವೆ.

ಕೇಸರಿ

ಪರಿಚಯ :

ಕೇಸರಿಯು ಕಾಶ್ಮೀರದಲ್ಲಿ ಬೆಳೆಯುವ ಸಸ್ಯ. ಇದರ ಕೇಸರವನ್ನು ಶೇಖರಿಸಿ ಬಣ್ಣಕ್ಕೂ ಔಷಧಕ್ಕೂ ಬಳಸುತ್ತಾರೆ. ಗಿಡದ ಎಲ್ಲಾ ಭಾಗಗಳು ವಿಷಯುಕ್ತವಾಗಿವೆ. ಪ್ರಾಣಾ ಪಾಯದ ಪ್ರಮಾಣ 6 ಮಿಲಿಗ್ರಾಂ. ಪ್ರಾಣಾಪಾಯದ ಕಾಲಾವಧಿ 24–32 ತಾಸು.

ಕೇಸರಿ ವಿಷವನ್ನು ಸೇವಿಸಿದ ರೋಗಿಯು ಗಂಟಲು ಉರಿ, ನೋವು, ಬಾಯಿ ಬತ್ತುವುದು ಮೊದಲಾದ ಉಪದ್ರವಗಳಿಂದ ನರುಳುತ್ತಾನೆ. ಅವನು ಮಾತನಾಡಲು ಮತ್ತು ನುಂಗಲು ಕಷ್ಟಪಡುತ್ತಾನೆ. ವಾಂತಿ, ಭೇದಿ, ಸಂಕಟ ಮೊದಲಾದ ಉಪ ದ್ರವಗಳು ಕಾಣಿಸಿಕೊಳ್ಳುವುದಲ್ಲದೆ ಕುಸಿತ ಮತ್ತು ಸಾವು ಕೂಡ ಸಂಭವಿಸಬಹುದು. ಕೇಸರಿ ವಿಷ ಸೇವಿಸಿದ ರೋಗಿಯನ್ನು ಚಹ ದ್ರಾವಣದಿಂದ ಹೊಟ್ಟೆತೊಳೆ ಯುವುದು, ವಾಂತಿ ಮಾಡಿಸುವುದು ಮತ್ತು ಭೇದಿಮಾಡಿಸುವುದು ಮೊದಲಾದ ಸಾಂಪ್ರದಾಯಿಕ ವಿಧಾನಗಳಿಂದ ಚಿಕಿತ್ಸೆ ಮಾಡಿಸಬೇಕು. ಹಾಲು ಅಥವಾ ತತ್ತಿಯ ಲೋಳೆ ಕುಡಿಸುವುದು, ಮಾರ್ಫಿನ್, ಎಟ್ರೋಪಿನ್ ಸೂಚಿಮುದ್ದುಗಳು ಉಪ ಯುಕ್ತವಾಗಿವೆ. ಅಗತ್ಯಬಿದ್ದಲ್ಲಿ ಕೃತಕ ಉಸಿರಾಟ ನೀಡಬೇಕು.

ಎರ್‌ಗಟ್

ಪರಿಚಯ :

ಎರ್‌ಗಟ್, ಸಸ್ಯಕ್ಕೆ ಅಂಟುವ ಒಂದು ಬಗೆಯು ಫಂಗೈವಿಷ (ಸೂಕ್ಷ್ಮಾಣು ಜೀವಿ). ಇದನ್ನು ಔಷದಕ್ಕಾಗಿಯೂ ಬಳಸುತ್ತಾರೆ. ಪ್ರಾಣಾಪಾಯದ ಪ್ರಮಾಣ ಸೇವನೆ : 1 ಗ್ರಾಂ. ಪ್ರಾಣಾಪಾಯದ ಕಾಲಾವಧಿ 24 ತಾಸು.

ವಿಷಸೇವಿಸಿದ ರೋಗಿಯಬಾಯಿಬತ್ತುವುದು, ನೀರಡಿಕೆ, ಗಂಟಲುಕೆರೆತ, ವಾಕರಿಕೆ, ವಾಂತಿ, ಹೊಟ್ಟೆಉರಿ, ಹೊಟ್ಟೆನುಲಿತ, ಭೇದಿ ತಲೆತಿರುಗುವುದು, ದೃಷ್ಟಿದೋಷ, ಬಡಬಡಿಸುವುದು, ಮೈ ಚಳಕು, ಅದಿರುವಾಯು, ಉಸಿರಾಟ ಮತ್ತು ನಾಲಗೆ ಅಸ್ತವ್ಯಸ್ತವಾಗುವುದು ಮೊದಲಾದ ಉಪದ್ರವಗಳು ಉಂಟಾಗುತ್ತವೆ.

ಹೊಟ್ಟೆತೊಳೆಯುವುದು, ವಾಂತಿಮಾಡಿಸುವುದು, ವಿರೇಚನಮಾಡಿಸುವುದು ಮೊದಲಾದ ಸಾಂಪ್ರದಾಯಿಕ ಚಿಕಿತ್ಸೆ ನಡೆಸುವುದಲ್ಲದೆ ಸೋಡಿಯಂ ಗ್ಲೂಕೋಟಿನೇಟ್ ಸೂಜಿಮದ್ದು ಹಾಗೂ ಗ್ಲೂಕೋಸ್ ಪೂರಣಗಳು ಉಪಯುಕ್ತ ವಾಗಿವೆ.

ದೀರ್ಘಕಾಲದ ಎರ್‌ಗಟ್ ವಿಷ ಸೇವನೆಗೆ ತುತ್ತಾದ ರೋಗಿಯು ಮೈ ಕೈಗಳಲ್ಲಿ ತುರಿಕೆ, ನವೆ ಮೊದಲಾದ ಉಪದ್ರವಗಳು ಕಾಣಿಸಿಕೊಳ್ಳುವವು; ಅವನ ಕೈ ಕಾಲು ಗಳು ಸೆಟೆದುಕೊಳ್ಳುವವು. ತಲೆತಿರುಗುವುದು ದೃಷ್ಟಿದೋಷ, ಬುದ್ಧಿವಿಕಲ್ಪ ಮೊದಲಾದ ಉಪದ್ರವಗಳಿಂದ ಅವನು ನರಳುವನು. ಕೈಕಾಲುಗಳಲ್ಲಿ ವಿಚಿತ್ರ ವೇದನೆ ಉಂಟಾಗುವುದು ಹಾಗೂ ಕೈಕಾಲುಗಳ ಬೆರಳುತುದಿಗಳು ಒಣಗಿ ಹೋಗು ವವು. ಅವನ ಮೈಮೇಲೆ ಕೆಂಪು ಮಚ್ಚೆಗಳು ಹಾಗೂ ಬೊಬ್ಬೆಗಳು ಏಳಬಹುದು.

ಇಂತಹ ಉಪದ್ರವಗಳು ಕಂಡು ಬಂದರೆ ಔಷಧ ಪ್ರಯೋಗವನ್ನು ತಕ್ಷಣ ನಿಲ್ಲಿಸಿ ಲಕ್ಷಣಾನುಸಾರ ಉಪಚಾರ ನಡೆಸಬೇಕು.

ಟಿಪ್ಪಣಿ :

ಎರ್‌ಗಟ್ ಔಷಧಿಯು ಗರ್ಭಕೋಶದ ಮೇಲೆ ಪರಿಣಾಮ ಬೀರುವ ದ್ರವ್ಯ ವಾದುದರಿಂದ ಬಾಣಂತಿಯರಿಗೆ ಕೊಡುವುದುಂಟು. ಗರ್ಭಸ್ರಾವ ಮಾಡಿಸಲಿಕ್ಕೂ ಕೂಡಾ ಬಳಸುತ್ತಾರೆ. ಪ್ರಮಾಣತಪ್ಪಿ ಉಪಯೋಗಿಸಿದಲ್ಲಿ ತೀರಾ ಅಪಾಯಕಾರಿ ದುಷ್ಪರಿಣಾಮಗಳು ಉಂಟಾಗುತ್ತವೆ.

ಇಂದ್ರವಾರುಣಿ. (ಹಾವುಮೆಕ್ಕೆ)


ಪರಿಚಯ :

ಇಂದ್ರವಾರುಣಿ ಹಣ್ಣಿನ ತಿರುಳು ತೀರಾ ಕಹಿಯಾಗಿದ್ದು ವಿಷಮಯವಾಗಿರು ತ್ತದೆ. ಇದನ್ನು ಸೇವಿಸಿದ ರೋಗಿಯು ಹೊಟ್ಟೆನೋವು, ಅರಿಸಿನ ಬಣ್ಣದ ವಾಂತಿ, ಭೇದಿ ಮೊದಲಾದ ಉಪದ್ರವಗಳಿಂದ ನರಳುತ್ತಾನೆ. ಪ್ರಾಣಾಪಾಯದ ಪ್ರಮಾಣ


(ಸೇವನೆ) 0.25 ರಿಂದ 0.5 ಗ್ರಾಂ. ಚಿಕಿತ್ಸೆ: ವಮನ, ವಿರೇಚನ ಮತ್ತು ಹೊಟ್ಟೆ ತೊಳೆಯುವುದು ಇತ್ಯಾದಿ.

ಸೂರಣ ಮತ್ತು ಕೇಸವು

ಇದನ್ನು ರುಚಿಕರ ವ್ಯಂಜನವಾಗಿ ಉಪಯೋಗಿಸುತ್ತಾರೆ. ಕೆಸುವಿನ ಎಲೆ ಹಾಗೂ ಸುವರ್ಣ ಗಡ್ಡೆಯಿಂದ ಪಲ್ಯ, ಹುಳಿ ಇತ್ಯಾದಿ ಅಡಿಗೆ ತಯಾರಿಸುತ್ತಾರೆ. ಬೇಯಿಸುವುದರಲ್ಲಿ ಹೆಚ್ಚು ಕಡಿಮೆಯಾದರೆ ಅಥವಾ ಒಗ್ಗದಿರುವವರಲ್ಲಿ ಮೈ ಕೈ ತುರಿಕೆ, ಗಂಟಲು ಕೆರೆತ, ನಾಲಗೆ ದಪ್ಪವಾಗುವುದು, ಮೈಮೇಲೆ ಗಂದೆಗಳು ಏಳುವುದು ಮೊದಲಾದ ಉಪದ್ರವಗಳು ಕಾಣಿಸುತ್ತವೆ. ಇಂತಹ ರೋಗಿಗೆ ಹುಣಸೆ ಹಣ್ಣನ್ನಾಗಲೀ ಕೊಬ್ಬರಿ ಎಣ್ಣೆಯನ್ನಾಗಲೀ ಕುಡಿಸಬೇಕು.



ಸೂರಣಗಡ್ಡೆ



ಕೇಸವು

ಅಧ್ಯಾಯ—10

ಔಷಧ ವಿಷ

1) **ಹೃದ್ರೋಗ ಚಿಕಿತ್ಸೆಯ ಔಷಧಿಗಳು :**(ಡಿಜಿಟಾಲಿಸ್ ತಯಾರಿಕೆಗಳು—ಡಿಗಾಕ್ಸಿನ್, ಡಿಗಿಟಾಕ್ಸಿನ್ ಉರ್‌ಗಾನಿನ್ ಇತ್ಯಾದಿ:) ಪ್ರಾಣಾಪಾಯದ ಪ್ರಮಾಣ: ಡಿಜಿಟಾಲಿಸ್ ಅರ್ಧ ಗ್ರೇನ್. ಡಿಜಿಟಾಕ್ಸಿನ್ $\frac{1}{6}$ ಗ್ರೇನ್. ವಿಷ ಪ್ರಾಶನದ ಲಕ್ಷಣಗಳು: ತಲೆ ನೋವು, ವಾಕರಿಕೆ, ವಾಂತಿ, ಭೇದಿ, ಹಳದೀಕಣ್ಣು, ಮಂದವಾದ ಅಕ್ರಮ ನಾಡಿ, ರಕ್ತದ ಒತ್ತಡ ಇಳಿಮುಖ, ಹೃದಯ ವಿಕಾರ-ಸಾವು. ಪ್ರಾಣಾಪಾಯದ ಕಾಲಾವಧಿ 24 ತಾಸು. ಚಿಕಿತ್ಸೆ ಮತ್ತು ಉಪಚಾರ : ರೋಗಿಗೆ ಹಾಲು, ತತ್ತಿಯ ಲೋಳೆ ಅಥವಾ ನೀರು ಕುಡಿಸುವುದು ಸರ್ವಮಾನ್ಯ ಪ್ರತ್ಯೌಷಧ ನೀಡಿಕೆ. ವಮನ, ಹೊಟ್ಟೆತೊಳೆಯುವುದು ಮತ್ತು ವಿರೇಚನ ತಡೆಗಟ್ಟಲು ಮುನ್ನೆಚ್ಚರಿಕೆ : ಪ್ರಾರಂಭದ ಸೂಚನೆಯಲ್ಲಿಯೇ ಔಷಧಿ ಸೇವನೆ ವರ್ಜಿಸುವದು. ಅಲ್ಪ ವಿಷ ಲಕ್ಷಣಗಳು ಕಾಣಿಸಿಕೊಂಡಲ್ಲಿ ಸೇವನೆ ಪ್ರಮಾಣವನ್ನು ಕಮ್ಮಿ ಮಾಡುವುದು.

2. **ಕ್ವಿನಿಡಿನ್:** ಪ್ರಾಣಾಪಾಯದ ಪ್ರಮಾಣ 3 ಗ್ರೇನ್ಸ್. ವಿಷ ಪ್ರಾಶನದ ಲಕ್ಷಣಗಳು: ತಲೆ ನೋವು, ವಾಕರಿಕೆ, ವಾಂತಿ, ತಲೆ ತಿರುಗುವುದು. ರಕ್ತದ ಒತ್ತಡ, ತೀವ್ರ ಇಳಿಮುಖವಾಗುವುದು, ಸ್ಥಬ್ದ ನಾಡಿ, ಉಸಿರಾಟದ ನಿಲುಗಡೆ—ಸಾವು. ಕೆಲವೊಮ್ಮೆ ಜ್ವರ ಹಾಗೂ ಹೈತ್ತಿಕದ ಲಕ್ಷಣಗಳು ಕಾಣಿಸಿಕೊಳ್ಳಬಹದು. ಚಿಕ್ಸಿತೆ ಮತ್ತು ಉಪಚಾರ : ಹಾಲು, ತತ್ತಿಯ ಲೋಳೆ ಮತ್ತು ನೀರು ಸೇವನೆ—ಸರ್ವಮಾನ್ಯ ಪ್ರತ್ಯೌಷಧ ನೀಡಿಕೆ—ವಮನ, ವಿರೇಚನ ಮತ್ತು ಹೊಟ್ಟೆ ತೊಳೆಯುವುದು ಇತ್ಯಾದಿ. ಎಫಿನೆಫ್ರಿನ್ ಸೂಜಿಮದ್ದು—ಉಪ್ಪು ನೀರು ಪೂರಣ. ತಡೆಗಟ್ಟಲು ಮುನ್ನೆಚ್ಚರಿಕೆ: ವಿಷದ ಸೂಚನೆ ಕಾಣಿಸಿಕೊಂಡ ಕೂಡಲೇ (ಪ್ರಾರಂಭ ಸೂಚನೆಯಲ್ಲಿಯೇ) ಔಷಧಿಯನ್ನು ವರ್ಜಿಸುವುದು.

3. **ಪ್ರೋಕೇನಾಮೈಡ್ ಹೈಡ್ರೋಕ್ಲೋರೈಡ್ :** ಪ್ರಾಣಾಪಾಯದ ಪ್ರಮಾಣ 200 ಮಿಲಿ ಗ್ರಾಂ. (ರಕ್ತನಾಳದ ಮೂಲಕ ಸೂಜಿ ಮದ್ದು ರೂಪದಲ್ಲಿ). ವಿಷ ಪ್ರಾಶನದ ಲಕ್ಷಣಗಳು: ಧಿಡೀರಾಗಿ ನಾಡಿ ಅಸ್ತವ್ಯಸ್ತಗೊಳ್ಳುವುದು, ಸ್ಥಬ್ದ

ವಾಗುವುದು. ರಕ್ತದ ಒತ್ತಡ ಇಳಿಮುಖ, ಅದಿರುವಾಯು – ಮರಣ (ಎಲ್ಲವೂ ಕ್ಷಿಪ್ರವಾಗಿ). ಚಿಕಿತ್ಸೆ, ಉಪಚಾರ ಇತ್ಯಾದಿ: ಸೂಜಿಮದ್ದು ನೀಡುತ್ತಿರುವುದನ್ನು ತಕ್ಷಣ ನಿಲ್ಲಿಸುವುದು: ಹೃದಯ ಮರ್ದನ (ಉತ್ತೇಜಕಗಳು ವರ್ಜ್ಯ) ತಡೆಗಟ್ಟಲು ಮುನ್ನೆಚರಿಕೆ. ನಿಧಾನವಾಗಿ ಸೂಜಿಮದ್ದು ನೀಡುವುದು.

4. **ರಕ್ತದ ಒತ್ತಡ ಕಡಿಮೆ ಮಾಡುವ ಔಷಧಿಗಳು** : ವಿಷ ಪ್ರಾಶನದ ಲಕ್ಷಣಗಳು: ತಲೆನೋವು, ಮೂತ್ರದೋಷ, ಜ್ವರ, ಚರ್ಮರೋಗ, ಪ್ಲೀಹವಿಕಾರ, ಸಂದುನೋವು, ಬಾವು, ಸಂದುಗಳು ಕೆಂಪಾಗುವುದು, ರಕ್ತದ ಒತ್ತಡ ತೀರ ಕಮ್ಮಿಯಾಗುವುದು, ಮೂತ್ರದಲ್ಲಿ ಅಲ್ಬುಮಿನ್ ಮತ್ತು ಕೆಂಪುಕಣ ಕಾಣಿಸುವುದು. ಚಿಕಿತ್ಸೆ ಮತ್ತು ಉಪಚಾರ : ಹೊಟ್ಟೆತೊಳೆಯುವುದು, ವಮನ, ವಿರೇಚನ, ಇತ್ಯಾದಿ– ಉತ್ತೇಜಕ ಔಷಧಿ– ಉಪಚಾರ. ತಡೆಗಟ್ಟಲು ಮುನ್ನೆಚ್ಚರಿಕೆ : ಔಷಧಿಗಳನ್ನು ಪ್ರಮಾಣ ಮೀರಿ ಎಂದೂ ಸೇವಿಸಬಾರದು. ಅಲ್ಪ ವಿಷಲಕ್ಷಣ ಕಾಣಿಸಿದಲ್ಲಿ ಔಷಧಿ ವರ್ಜ್ಯ ಮಾಡುವುದು.

5. **ಸಲ್ಫನಮೈಡುಗಳು** : (ಸಲ್ಫಾಡೈಯೋಸಿನ್ – ಸಲ್ಫಾಮಿರಾಸಿನ್– ಸಲ್ಫಾಮಿಥಾಸಿನ್ – ಸಲ್ಫಾಥಯೋಸಾಲ್ – ಸಲ್ಫೆಕ್ಟಾಮೈಡ್ ಇತ್ಯಾದಿ) : ವಿಷ ಲಕ್ಷಣಗಳು: ಚರ್ಮದಲ್ಲಿ ಹೈತ್ತಿಕ ಗಂದೆಗಳು ಕಾಣಿಸುವುದು–ಜ್ವರ, ಮೂತ್ರಸೇವನೆ, ಮೂತ್ರದಲ್ಲಿ ರಕ್ತ, ಮೂತ್ರ ಇಳುವರಿ, ಅರಿಶಿನ ಮುಂಡಿಗೆ ಲಕ್ಷಣ, ರಕ್ತಹೀನತೆ, ಮೂತ್ರದಲ್ಲಿ ಅಲ್ಬುಮಿನ್ ಮತ್ತು ಕೆಂಪುಕಣ–ಮನೋಭ್ರಮಣೆ ಸಹ ಉಂಟಾಗಬಹುದು. ಚಿಕಿತ್ಸೆ ಮತ್ತು ಉಪಚಾರ : ಹೊಟ್ಟೆ ತೊಳೆಯುವುದು, ವಮನ, ವಿರೇಚನ, ಧಾರಾಳ ದ್ರವ ಸೇವನೆ. ತಡೆಗಟ್ಟುವ ಮುನ್ನೆಚ್ಚರಿಕೆ: ಪ್ರಮಾಣ ಮೀರಿ ಸೇವಿಸಬಾರದು. ಒಗ್ಗದಿರುವಿಕೆ ಕಾಣಿಸಿಕೊಂಡ ತಕ್ಷಣ ಔಷಧಿ ಬಳಕೆ ನಿಲ್ಲಿಸಬೇಕು.

6. **ಜೀವ ನಿರೋಧಕಗಳು** (ಆ್ಯಂಟಿ ಬಾಯೋಟಿಕ್ಸ್) : **ಪೆನ್ಸಿಲಿನ್:** ವಿಷ ಲಕ್ಷಣಗಳು : ಮುಖ ವಿವರ್ಣವಾಗುವುದು, ಮೋರೆ ಕೈಕಾಲು ಊತ, ಉಬ್ಬಸ, ಕುಸಿತ–ಉಸಿರಾಟ ನಿರೋಧದಿಂದ ಮರಣ. ದೀರ್ಘಕಾಲ ವಿಷ ಲಕ್ಷಣ: ಜ್ವರ, ಹೈತ್ತಿಕ ಗಂದೆಗಳು, ಗಂಟಲು ಊತ, ಚರ್ಮ ನವೆ, ಊತ, ರಕ್ತದ ಒತ್ತಡ ಇಳಿಮುಖವಾಗುವುದು ಇತ್ಯಾದಿ. ಚಿಕಿತ್ಸೆ ಮತ್ತು ಉಪಚಾರ : ಸೈನಾಪಿನ್, ಎಡ್ರಿನಾಲಿನ್ ಅಥವಾ ಡೆಕಡ್ರಾನ್ ಸೂಜಿ ಮದ್ದು. ಹಾಲು ಸೇವನೆ, ಬಿಸ್ಮತ್ ಕಾರ್ಬನೇಟ್ ಮಿಶ್ರಣ (1 ಗ್ರಾಂ). ಪ್ರತಿ ಮೂರು ತಾಸಿಗೊಮ್ಮೆ ಸೇವನೆ– ಗ್ಲೂಕೋಸ್, ಕ್ಯಾಲ್ಸಿಯಂ ಗ್ಲೂಕೋನೇಟ್ ಸೂಜಿ ಮದ್ದು–ಮೂತ್ರವು ಸರಿ

ಯಾಗಿ ಆಗುವಂತೆ ಉಪಚಾರ. ದುಷ್ಪರಿಣಾಮವು ಕಾಣಿಸಿಕೊಂಡ ತಕ್ಷಣ ಔಷಧಿ ಪ್ರಯೋಗ ನಿಲ್ಲಿಸುವುದು. ತಡೆಗಟ್ಟಲು ವಿಶೇಷ ಮುನ್ನೆಚ್ಚರಿಕೆ : ಸಾತ್ಮ್ಯ ಪರೀಕ್ಷೆ-ಪರೀಕ್ಷಾಪ್ರಮಾಣ ವಿಧಾನದಿಂದ ನಿರ್ಧರಿಸಬೇಕು. ಅಗತ್ಯವಿದ್ದಲ್ಲಿ ಆ್ಯಂಟಿ ಹಿಸ್ಟಾಮಿನ್ ಔಷಧಿಯನ್ನು ಮುಂಚಿತವಾಗಿ ನೀಡುವುದು.

7. **ಸ್ಟ್ರೆಪ್ಟೋಮೈಸಿನ್** ; ವಿಷ ಲಕ್ಷಣಗಳು : ತಲೆ ತಿರುಗುವುದು–ತಲೆ ನೋವು–ಕಿವಿ ಗಡಚಿಕ್ಕಿದಂತಾಗುವುದು, ಜ್ವರ, ದೃಷ್ಟಿದೋಷ ಇತ್ಯಾದಿ. ಚಿಕಿತ್ಸೆ ಪೆನ್‌ಸಿಲಿನ್ ವಿಷದಂತೆಯೇ. ತಡೆಗಟ್ಟಲು ಮುನ್ನೆಚ್ಚರಿಕೆ: ಮೇಲಿನಂತೆಯೇ

8. **ಕ್ಲೋರಂಫೆನಿಕಾಲ್** : (ಕ್ಲೋರೊಮೈಸಿಟಿನ್): ವಿಷ ಲಕ್ಷಣಗಳು: ವಾಕರಿಕೆ, ವಾಂತಿ, ಭೇದಿ, ಕುಸಿತ ಇತ್ಯಾದಿ. ಚಿಕಿತ್ಸೆ ಮತ್ತು ಮುನ್ನೆಚ್ಚರಿಕೆ ಮೇಲಿನಂತೆಯೇ.

9. **ಟೆಟ್ರಾಸೈಕ್ಲಿನ್ ಮತ್ತು ಆಕ್ಸಿಟೆಟ್ರಾಸೈಕ್ಲಿನ್** : ವಿಷಲಕ್ಷಣ : ವಾಕರಿಕೆ.ಭೇದಿ, ಚರ್ಮದ ಊತ, ನವೆ, ಜ್ವರ, ಬಾಯಿ ರುಚಿಯಿಲ್ಲದಾಗುವುದು ಇತ್ಯಾದಿ. ಚಿಕಿತ್ಸೆ ಮತ್ತು ಮುನ್ನೆಚ್ಚರಿಕೆ: ಮೇಲಿನಂತೆಯೆ.

10. **ಉತ್ತೇಜಕಗಳು** : (ಥಿಯೋಫೈಲಿನ್ : ಬ್ರೋಮೈನ್) : ಪ್ರಾಣಾಪಾಯದ ಪ್ರಮಾಣ : 1.5ಗ್ರೇನ್ಸ್ (ರಕ್ತ ನಾಳದ ಮೂಲಕ ಸೂಜಿಮದ್ದು ರೂಪದಲ್ಲಿ). ವಿಷ ಲಕ್ಷಣಗಳು : ಸೂಚಿ ಮದ್ದು ನೀಡುತ್ತಿರುವಾಗಲೇ ಅಥವಾ ಒಂದೆರಡು ನಿಮಿಷಗಳಲ್ಲೇ ಕುಸಿತ, ಅದಿರುವಾಯು ಮತ್ತು ಸಾವು ಸಂಭವಿಸಬಹುದು. ಚಿಕ್ಸಿತೆ : ಆಮ್ಲಜನಕ ನೀಡಿಕೆ ಅದಿರುವಾಯು ನಿರೋಧಕ ಚಿಕಿತ್ಸೆ. ಮುನ್ನೆಚ್ಚರಿಕೆ: ಸಾತ್ಮ್ಯ ಪರೀಕ್ಷೆಮಾಡಿ ನಿಧಾನವಾಗಿ ಸೂಜಿ ಮದ್ದು ನೀಡುವುದು.

11. **ಕಫೀನ್** : 10 ಗ್ರಾಂ. ಸ್ಟ್ರಿಕ್‌ನೀನ್ ಮತ್ತು ಪಿಕ್ರಿಟಾಕ್ಸಿನ್—ನಿಕೆಥಾಮೈಡ್ (20 ಮಿಲಿ ಗ್ರಾಂ.) ವಿಷ ಲಕ್ಷಣಗಳು : ವಾಂತಿ, ವಾಕರಿಕೆ, ಅದಿರುವಾಯು, ಉಸಿರಾಟದ ಏರುಪೇರು, ಸ್ಮೃತಿ ತಪ್ಪುವುದು ಇತ್ಯಾದಿ. ಚಿಕಿತ್ಸೆ ಮತ್ತು ಉಪಚಾರ : ಲಂಬನ ಚಿಕಿತ್ಸೆ, ಸರ್ವಮಾನ್ಯ ಪ್ರತ್ಯೌಷಧ ನೀಡಿಕೆ–ಹೊಟ್ಟೆ ತೊಳೆಯುವುದು, ವಮನ ಇತ್ಯಾದಿ. ಸೂಜಿಮದ್ದು ಮಾಡಿದ ಭಾಗದಲ್ಲಿ ಮಂಜುಗಡ್ಡೆ ಹಚ್ಚುವುದು.

12. **ಕರುಳಿನ ಜಂತುನಾಶಕ ದ್ರವ್ಯ : ಚಿನಾಕೋಡಿಯಂ ಎಣ್ಣೆ :** ಪ್ರಾಣಾಪಾಯದ ಪ್ರಮಾಣ : 3 ಗ್ರಾಂ, ವಿಷ ಲಕ್ಷಣ : ಹೊಟ್ಟೆ ಉರಿ, ವಾಂತಿ, ಭೇದಿ, ಗಂಟಲುನೋವು, ಅದಿರುವಾಯು, ಕುಸಿತ ಮತ್ತು ಸ್ಮೃತಿ ತಪ್ಪುವುದು, ಮೂತ್ರದಲ್ಲಿ ಕೆಂಪುಕಣ, ಮತ್ತು ಆಲ್ಬುಮಿನ್, ಚಿಕಿತ್ಸೆ ಮತ್ತು ಉಪಚಾರ : ಹೊಟ್ಟೆ ತೊಳೆಯುವುದು. ವಮನ, ವಿರೇಚನ ಮತ್ತು ಅದಿರುವಾಯು ನಿರೋಧಕ ಚಿಕಿತ್ಸೆ.

13. **ಸೆಂಟೋನಿನ್ :** ವಿಷ ಲಕ್ಷಣ : ತಲೆ ತಿರುಗುವುದು, ವಾಕರಿಕೆ, ವಾಂತಿ, ಹಳದೀಕಣ್ಣು, ಭೇದಿ, ಸಂಕಟ, ನಿಶ್ಯಕ್ತಿ, ಭ್ರಮೆ, ಮುಂತಾದ ಮನೋ ವಿಕಾರ, ಅದಿರುವಾಯು–ಮರಣ. ಚಿಕಿತ್ಸೆ ಮತ್ತು ಉಪಚಾರ : ಮೇಲಿನಂತೆಯೇ.

14. **ಮಲೇರಿಯಾಹರ ಔಷಧಿ :** ಕ್ವಿನಾಯಿನ್ ; ಪ್ರಾಣಾಪಾಯದ ಪ್ರಮಾಣ : 0.5 ಗ್ರಾಂ. ವಿಷ ಲಕ್ಷಣ : ದೃಷ್ಟಿಮಾಂದ್ಯ, ನಿಶ್ಯಕ್ತಿ–ರಕ್ತದ ಒತ್ತಡ ಇಳಿಮುಖವಾಗುವುದು, ಮೂತ್ರವಿಕಾರ, ಹೃದಯವಿಕಾರ, ದೃಷ್ಟಿದೋಷ-ಕೆಲವರಿಗೆ ಪೂರ್ಣ ಅಂಧತ್ವ, ಅದಿರುವಾಯು, ಪ್ರಾಣಾಪಾಯದ ಕಾಲಾವಧಿ : 24–48 ತಾಸು. ಚಿಕಿತ್ಸೆ ಮತ್ತು ಉಪಚಾರ : ಹೊಟ್ಟೆತೊಳೆಯುವುದು, ವಮನ, ವಿರೇಚನ 2 ರಿಂದ 4 ಲೀಟರ ದ್ರವ ಸೇವನೆ ; ಮೂತ್ರ ವಿಕಾರಕ್ಕೆ ಸೂಕ್ತ ಚಿಕಿತ್ಸೆ.

15. **ಇತರ ಔಷಧಿಗಳು :** ಇಪೆಕಾಕಿನಾ ಮತ್ತು ಎಮಿಟಿನ್ : ಎಮಿಟಿನ್ ಪ್ರಾಣಾಪಾಯದ ಪ್ರಮಾಣ : 1 ಗ್ರಾಂ. ವಿಷಲಕ್ಷಣ : ವಾಕರಿಕೆ, ವಾಂತಿ, ಉಸಿರು ಸಂಕಟ, ಹೃದಯವಿಕಾರ, ರಕ್ತದ ಒತ್ತಡ ಇಳಿಯುವುದು, ಕುಸಿತ, ಮೂರ್ಛೆ ತಪ್ಪುವುದು–ಹೃದಯ ಕ್ರಿಯೆ ನಿಂತು ಸಾವು ಸಂಭವ. ಚಿಕಿತ್ಸೆ ಮತ್ತು ಉಪಚಾರ: ಹಾಲು, ಕೋಳಿತತ್ತಿ. ಸೇವನೆ–ಸರ್ವಮಾನ್ಯ ಪ್ರತೌಷಧ ನೀಡಿಕೆ–ಹೊಟ್ಟೆ ತೊಳೆಯುವುದು, ವಮನ ಮತ್ತು ವಿರೇಚನ ಚಿಕಿತ್ಸೆ.

16. **ಬಿಸ್ಮತ್ ಕಾಂಪೌಂಡ್ :** ವಿಷಲಕ್ಷಣ : ತಲೆನೋವು, ಸಂಕಟ, ವಾಂತಿ, ಭೇದಿ,–ಯಕೃತ್ ವಿಕಾರ, ಮೂತ್ರ ವಿಕಾರ, ಆಘಾತ. ದೀರ್ಘಕಾಲ ವಿಷಲಕ್ಷಣ : ನಾಲಗೆ ವ್ರಣ, ಒಸಡಿನಲ್ಲಿ ನೀಲಿರೇಖೆ, ಹೈತ್ತಿಕ ಗಂದೆಗಳು–ತೂಕ ಕಮ್ಮಿಯಾಗುವುದು, ಅರಿಷಿನ ಮುಂಡಿಗೆ ರೋಗ ಇತ್ಯಾದಿ, ಚಿಕಿತ್ಸೆ, ಬಿ. ಎ. ಎಲ್.

ಸೂಜಿ ಮದ್ದು; ಸೂಕ್ತ ಪ್ರತ್ಯೌಷದ. ಒಂದು ಮಿಲಿಗ್ರಾಂ. ಎಟ್ರೋಪಿನ್ ಸೂಜಿ ಮದ್ದು, 60 ಮಿಲಿಗ್ರಾಂ ಕೋಡೀನ್ ಔಷಧಿ, ಧಾರಾಳ ದ್ರವ ಸೇವನೆ.

17. ನೆರಲ್ ಡಿಹೈಡ್ : ಪ್ರಾಣಾಪಾಯದ ಪ್ರಮಾಣ : 2–3 ಔನ್ಸ್ ವಿಷಲಕ್ಷಣ: ತಲೆ ನೋವು, ತಲೆತಿರುಗುವುದು, ವಾಕರಿಕೆ, ವಾಂತಿ, ಕಣ್ಣಿಗೊಂಬೆ ಅರಳುವುದು, ವೇಗನಾಡಿ,–ಸ್ಮೃತಿ ತಪ್ಪುವುದು, ದೀರ್ಘ ಸುಪ್ತಿ, ಉಸಿರಾಟದ ಏರುಪೇರು ಇತ್ಯಾದಿ. ಚಿಕಿತ್ಸೆ ಮತ್ತು ಉಪಚಾರ : ಸೋಡಿಯಂ ಬೈ ಕಾರ್ಬೋನೇಟ್ ಮಿಶ್ರಣದಿಂದ ಹೊಟ್ಟೆತೊಳೆಯುವುದು, ವಮನ, ಮತ್ತು ವಿರೇಚನ, ಉತ್ತೇಜಕ ಔಷಧ, ಪಾನೀಯ ನೀಡಿಕೆ. ಕೊರಾಮಿನ್ ಸೂಜಿಮದ್ದು — ಗ್ಲೂಕೋಸ್ ಪೂರಣ.

BIBLIOGRAPHY

1. Hand Book of Poisons : Rober- H. Dreisbach.

2. Modi's Text Book of Medical Jurisprudence & Toxicology Edited by-N.J. Modi.

3. Poisoning-A Guide to Clinical Diagnosis & Treatement W. F. Von Ortfinger

4. Hand Book of Forensic Medicine. M. K. R. Krishnan

5. A Hand Book of Medical Jurisprudence & Toxicology C. C. Mallik

6. Pharmacogoical Principles of Medical Practice John C. Kruntzor & C. Jebbffcor

7. Medicinal Plants —Dr. S. K Jain

8. Useful Plants of India & Pakistan —J. F Dastur

9. Snakes of India & Pakistan —K. G. Gharpure

10. Current Theraphy —Howard F. Conn

11. A Text Book of Medical Treatment : Ed: D.M. Dunlop, L. S. P. Davidson & Sir Jhon Mencee

12. A Class Book of Botany – A. C. Datta

13. ಖಂಗೇದ್ರಮಣಿ ದರ್ಪಣ ಕಾವ್ಯ (ವಿಷ ಶಾಸ್ತ್ರಂ)–ಮಂಗರಸ ಕವಿ.

14. ಸಹಸ್ರಾರ್ಥ ವೃಕ್ಷಾದಿಗಳ ವರ್ಣನೆ ಬಾಸೆಲ್ ಮಿಷನರಿ ಸೊಸಾಯಿಟಿ ಪ್ರಕಟಣೆ ಮುದ್ರಣ 1881 (ಸಿ. ಸ್ಟೋಲ್ಸೆ ಮತ್ತು ಜಿ. ಪ್ಲಾಜೆಸ್ಟ ಅವರಿಂದ ಸಂಪಾದಿತ)

15. ವಿಷ ವಿಜ್ಞಾನ —ಡಾ. ವಿಜಯೇಂದ್ರ ಮೂರ್ತಿ.

16. ವಿಷತಂತ್ರ —ವೈದ್ಯ ರಾ. ಕೃ. ಕುಲಕರ್ಣಿ ಜಿನರಾಳಿಕರ.

17. ಆರೋಗ್ಯ ಸಾಧನೆ —ಪಂಡಿತ ಶಂಕರನಾರಾಣ ಭಟ್ಟ.

18. ಚಿಕಿತ್ಸಾ ತತ್ವ ದೀಪಿಕಾ —ಡಾ. ಎಂ. ಮಹಾದೇವಶಾಸ್ತ್ರಿ.

19. ವೈದ್ಯಸಾರ ಸಂಗ್ರಹ—ನರಸಿಂಹಶಾಸ್ತ್ರಿ

ಸಂಸ್ಕೃತ :

20. ಚರಕ ಸಂಹಿತಾ (ಪೂರ್ವಾರ್ಧ ಮತ್ತು ಉತ್ತರಾರ್ಧ).

21. ಸುಶ್ರುತ ಸಂಹಿತಾ (ಪೂರ್ವಾರ್ಧ ಮತ್ತು ಉತ್ತರಾರ್ಧ)

22. ವಾಗ್ಭಟ ಅಷ್ಟಾಂಗ ಹೃದಯ

ಒಪ್ಪೋಲೆ

ಪುಟ	ಪಂಕ್ತಿ	ತಪ್ಪು	ತಿದ್ದುಪಡಿ
6	13	ವಿಪ ಸ್ತಂಭೇನ	ವಿಷ ಸ್ತಂಭನ
18	23	ಕಹಿನೋರೆ	ಕಹಿಸೋರೆ
14	9	ಔಷಧ	ಉಪ್ಪು
15	8	ತೀವ್ರ	ಸ್ವರೂಪಕ್ಕೆ ತಿರುಗಿ (ಎಂಬುದನ್ನು ಸೇರಿಸಬೇಕು.)
24	9	ಮೆಗ್ನೇಶಿಯಂ ಸಲ್ಫೆಕೆಟ	ಮೆಗ್ನೇಶಿಯಂ ಸಲ್ಫೇಟ್
29	20	ಮಿಲ್ಲಿ ಮಿಟರ್	ಮಿಲಿ ಲೀಟರ್
37	12	1–2 ಗ್ರಾಂ	1–2 ಡ್ರಾಂ
57	2	ಪುಪ್ಪುಸ ಶೋಧ,	ಪುಪ್ಪುಸ ಶೋಥ
58	21	ಆಚ್ಚುಮೂಳೆ	ಅಚ್ಚು ಮೊಳೆ
68	24	ವಿನೆಗಲ್	ವಿನಿಗರ್
70	16	ಗ್ರಹ	ಗೃಹ
81	6	ಹೆಕ್ಟಾಕ್ಲೋರ್	ಹೆಪ್ಟಾಕ್ಲೋರ್
84	1	(2 ಮಿಲಿ ಲೀಟರ್)	1 ಲೀಟರ್
90	12	ಎಲ್	ಏಲ್
105	3	ಚಿತ್ರ	(ಚಿತ್ರದ ಕೆಳಗೆ) ಕೋ ಕೋ ಗಿಡ ಮತ್ತು ಕಾಯಿ (ಎಂದು ಓದಿಕೊಳ್ಳಬೇಕು)
111	21	ಶುದ್ಧ ಮಧ್ಯ	ಶುದ್ಧ ಮದ್ಯ
114	3	ವೆಂಟಥಾಲ್	ಪೆಂಟಥಾಲ್

ಪುಟ	ಪಂಕ್ತಿ	ತಪ್ಪು	ತಿದ್ದುಪಡಿ
128	12	ಹೆಚ್ಚೆ ಇಲ್ಲದ	ಹೆಡೆ ಇಲ್ಲದ
128	16	ಮನೆಮಣಿ	ಮನೆ ಮಳ
147	22	ಮಧ್ಯ	ಮದ್ಯ
159	10	.,.,..	ಇಂಗ್ಲಿಷ : ಎಂಬ ಪದದ ನಂತರ (ಕೀರು) ಎಂಬ ಶಬ್ದ ಸೇರಿಸಬೇಕು.
171	4	Rauvol Fiasar-pentina	Rauvolfia serpentina
180	3	ಕೇಸವು	ಕೆಸವು
184	2	ಸಾಕ್ಷ್ಯ ಪರೀಕ್ಷೆ	ಸಾತ್ಮ್ಯ ಪರೀಕ್ಷೆ
185	1	ಚಿನಕೋಡಿಯಾಂ	ಚಿನಪ್ಪೋಡಿಯಾಂ
186	3	ಪರಲ್‌ಡಿ ಸೈಡ್	ಪೆರಲ್‌ಡಿ ಷೈಡ್
ಪಾರಿಭಾಷಿಕ ಕೋಶ		ಕೋರೆಹುಣ್ಣು	ಕೋರೆ ಹಲ್ಲು

ಪಾರಿಭಾಷಿಕ ಕೋಶ


ಅರುಚಿ	Lack of Appetite
ಅನಿಲ	Gas
ಅಣಬೆ, ಅಳಂಬು	Mushroom
ಅಸಾತ್ಮ್ಯ	Allergy
ಅನ್ನನಾಳ	Desophagus
ಅನ್ನಕೋಶ, ಅನ್ನಾಶಯ	Stomach
ಅಂಗಾಂಶ	Tissue
ಅಂಗಮರ್ದನ	Massage
ಅಂಗವಿಕಲತೆ	Deformity
ಅಂಗಾರಾಮ್ಲ	Carbondioxide
ಅಗ್ನಿಮಾಂದ್ಯ	Dyspepsia
ಅರಶಿಣಮುಂಡಿಗೆ ರೋಗ	Jaundice
ಅರ್ಧಾಂಗವಾಯು	Paraylysis
ಅಶುದ್ಧ ಮದ್ಯ	Methy Alcohol
ಆಮ್ಲ	Acid
ಆತಂಕ, ಆತಂಕಾವಸ್ಥೆ	Anxiety
ಆಘಾತ	Shock
ಆಹಾರ ವಿಷ	Food Posioning
ಆಕ್ಷೇಪಕ ತರಂಗ	Spasm
ಇಲಿಪಾಷಾಣ	Rodendicide
ಇಂಗಾಲ	Carbon
ಇಂಗಾಲಾಮ್ಲ	Carbon Dioxide
ಉಸಿರಾಟ	Respiration
ಉಸಿರಾಟದ ಸೋಲು	Respiratoy Failure
ಉಪಶಾಮಕ	Sedetive

ರಂತುಸ್ರಾವ	Menstruation
ಎದೆಉರಿ	Heart Burn
ಏಡಿಗಂತಿ	Cancer
ಒಗ್ಗದಿರುವಿಕೆ	Allergy
ಔಡಲಎಣ್ಣೆ	Castoroil
ಕಣ್ಣುಬೊಂಬೆ	Pupil
ಕರುಳು	Intestine
ಕಣ್ಣುಕತ್ತಲುಬರುವುದು	Faint
ಕ್ಷಯ, ಕ್ಷಯರೋಗ	Teburculosis
ಕೃತಕ ಉಸಿರಾಟ	Artificial Respiration
ಕೃಷಿವಿಷ	Pesticide
ಕಡಂಬಳ	Krait
ಕಾಳಿಂಗ ಸರ್ಪ	King Cobra
ಕಾಮಿಲಾರೋಗ, ಕಾಮಿಣಿ, ಕಾವಮಾಲೆ	Jaundice
ಕಾಮೋಚ್ಛೆ	Libido
ಕೋರೆ, ಕೋರೆಹಣ್ಣು	Fang
ಕೀಟೌಷಧಿ	Pesticide
ಗರ್ಭಪಾತ	Abortion
ಗರ್ಭಕೋಶ	Uterus
ಗಿಡಮೂಲಿಕೆ	Herb
ಗುದ	Anus
ಗೌರಿಪಾಷಾಣ	Arsenic
ಜೀವಾತು	Vitamin
ಜೀವನಿರೋಧಕ	Antibiotic
ಜೇಡ	Spider
ಡಬ್ಬಿ ಶೇಖರಣೆ	Canning
ತರಡು	Testicle
ತಲೆತಿರುಗು	Geddiness
ತಂಬಾಕು	Tobacco
ತ್ರಾಣಕ	Tonic

ದ್ರಾವಣ	Solution
ದುರ್ಬಲ ದ್ರಾವಣ	Weak Solution
ಧಾನ್ಯಮದ್ಯ	Ethyl Alcohol
ನಂಜುನಿರೋಧಕ	Antiseptic
ನಾಗರಹಾವು	Cobra
ನಿದ್ರಾಪ್ರದ ಔಷಧ	Hypnotic
ಪಟ್ಟೆಕಡಂಬಳ	Branded Krait
ಪುಪ್ಪುಸ	Lung
ಪ್ಲೀಹ	Liver
ಪಿತ್ತಗಂದೆ	Allergicrash
ಪ್ರತಿಬಂಧಕೋಪಾಯ	Prevention
ಪ್ರಥಮ ಚಿಕಿತ್ಸೆ, ಪ್ರಥಮೋಪಚಾರ	First Aid
ಪ್ರತ್ಯೌಷಧ	Antidote
ಪ್ರಜ್ಞಾಹೀನ ಸ್ಥಿತಿ	Unconscious
ಪರೀಕ್ಷಾ ಪ್ರಮಾಣ	Test Done
ಪಕ್ಷಾಘಾತ	Peralysis
ಪಿಚ್ಛಿಲ	Lubricous
ಬಡಬಡಿಸುವುದು	Delirium
ಬಿಕ್ಕಳಿಕೆ	Hiceup
ಮದ್ಯ	Alcohol
ಮಲಬದ್ಧತೆ	Constipation
ಮೈಲುತುತ್ತ	Copper Sulphate
ಮೊದಲ ನೆರವು	First Aid
ಮೃತಗರ್ಭ ಶಿಶುಜನನ	Still Birth
ಮೇಲುಬ್ಬಸ	Gasping
ಮುಖ ನೀಲಿವರ್ಣವಾಗುವುದು	Cyanosis
ಮಂಡಲ ಸರ್ಪ	Viper
ರಕ್ತಾಮ್ಲತೆ	Acidosis
ವಸ್ತಿ	Enema

ವಾಂತಿಕಾರಕ, ವಮನೌಷಧ	Emitic
ವಿಷವೈದ್ಯ ಶಾಸ್ತ್ರ	Toxicology
ವಿಶ್ವವಿಷ ಪ್ರತೌಷಧ	Universal Antidote
ವಿರೇಚಕ	Purgetive
ಶಾಮಕ	Sedetive
ಶುದ್ಧ ಮದ್ಯ	Ethyl Alcohol
ಸಸಾರಜನಕ	Protin
ಸಂಧಿವಾತ	Rhumatism
ಸ್ನಾಯು	Muscle
ಸಸ್ಯಮದ್ಯ	Methyl Alcohol
ಸಿದ್ಧಪ್ರತೌಷಧ	Specific Antidote
ಸ್ತ್ರೀ ಜನನೇಂದ್ರಿಯ	Vegina
ಸುಷುಪ್ತಿ	Coma
ಹೃದಯದ ಸೋಲು	Heart Failure

Published by the Text-Book Directorate of the Institute of Kannada Studies, Karnatak University, Dharwad, Karnataka State, under the centrally sponsored Scheme for the production of Books and Literature in Regional Languages at the University Level, Government of India, Ministry of Education and Social Welfare (Department of Culture) New Delhi (1977).



cover printed at Modern Press, Javalipeth, Dharwar